ಶನಿವಾರ, ನವೆಂಬರ್ 18, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 318 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕರ್ನಾಟಕ 30 25 ವರ್ಷಗಳ ಮುನ್ನೋಟ 9

ಹೊಟ್ಟೆಕಿಚ್ಚು, ದ್ವೇಷದಿಂದ ಸುಳ್ಳು ಆರೋಪ: ಸಿ.ಎಂ 6

ಬರ: ರೈತರಿಗೆ ₹16 ಸಾವಿರ ಕೋಟಿ ನಷ್ಟ 5B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,794 ▼	19,732 ▼	₹62,950 (ಬೆಂಗಳೂರು) ▲	₹75,200 (ಬೆಂಗಳೂರು) ▲	83.26 ▼

ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆ • ಬಿಜೆಪಿಯಲ್ಲಿ ಹೆಚ್ಚಿದ ಬೇಗುದಿ

ಅತೃಪ್ತಿ ಮಧ್ಯೆ ಅಶೋಕ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ಅವರನ್ನು 'ಹೇರಿದ' ಬೆನ್ನಲ್ಲೇ ವಿರೋಧ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಆರ್. ಅಶೋಕ ಅವರನ್ನು 'ಆಯ್ಕೆ' ಮಾಡಿರುವುದು ಪಕ್ಷದ ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ. ಇದಕ್ಕೆ ಪೂರಕವೆಂಬಂತೆ ಇಡೀ ದಿನ ಹಲವು ನಾಟಕೀಯ ಬೆಳವಣಿಗೆಗಳೂ ನಡೆದವು.

ಐಟಿಸಿ ಗಾರ್ಡೇನಿಯಾ ಹೋಟೇಲಿನಲ್ಲಿ ಶುಕ್ರವಾರ ಸಂಜೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಶೋಕ ಅವರ ಹೆಸರನ್ನು ಸೂಚಿಸಿದರೆ, ಶಾಸಕ ವಿ.ಸುನಿಲ್ ಕುಮಾರ್ ಅನುಮೋದಿಸಿದರು.

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ ಅವರು ಸಭೆಯ ಆರಂಭಕ್ಕೂ ಮೊದಲೇ ಬಂದು ತಮ್ಮ 'ಭಿನ್ನ' ಅಭಿಪ್ರಾಯವನ್ನು ತಿಳಿಸಿ ಹೊರ ನಡೆದರು. ಪಕ್ಷದ ಚಟುವಟಿಕೆಯಿಂದ ಅಂತರ ಕಾಯ್ದುಕೊಂಡಿರುವ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರು ಗೈರಾಗಿದ್ದರು.

ಸಭೆಯ ಆರಂಭಕ್ಕೂ ಮೊದಲೇ ವೀಕ್ಷಕರು ಸುಮಾರು 10 ಹಿರಿಯ ಶಾಸಕರಿಂದ ವೈಯಕ್ತಿಕವಾಗಿ ಅಭಿಪ್ರಾಯ ಪಡೆದರು. ಸುರೇಶ್‌ಕುಮಾರ್, ಎಸ್.ಆರ್.ವಿಶ್ವನಾಥ್, ವಿ.ಸುನಿಲ್ ಕುಮಾರ್, ಬಸನಗೌಡ ಪಾಟೀಲ ಯತ್ನಾಳ ಅಭಿಪ್ರಾಯ ನೀಡಿದ ಪ್ರಮುಖರು.

ಬೆಳಿಗ್ಗಿನಿಂದಲೇ ಬೃಹನ್ನಾಟಕ: ವಿರೋಧ ಪಕ್ಷದ ನಾಯಕ ಸ್ಥಾನದ ಆಯ್ಕೆ ಪ್ರಕ್ರಿಯೆ ಸುಸೂತ್ರವಾಗಿ ನಡೆಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ದುಷ್ಯಂತ್ ಕುಮಾರ್ ಗೌತಮ್ ವೀಕ್ಷಕರಾಗಿ ಶುಕ್ರವಾರ ಬೆಳಿಗ್ಗೆ ದೆಹಲಿಯಿಂದ ಬಂದಿಳಿದರು. ಬೆಂಗಳೂರಿಗೆ ಕಾಲಿಡುತ್ತಿದ್ದಂತೆ ಶಾಸಕರ ಅತೃಪ್ತಿಯ ಕುದಿ ಅವರನ್ನು ತಟ್ಟಿತು.

6ನೇ ಪುಟ ನೋಡಿ



ಆರ್. ಅಶೋಕ ಅವರಿಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದುಷ್ಯಂತ್ ಕುಮಾರ್ ಗೌತಮ್ ಹೂಗುಚ್ಛ ನೀಡಿ ಅಭಿನಂದಿಸಿದರು. ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌ಯಡಿಯೂರಪ್ಪ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ – ಪ್ರಜಾವಾಣಿ ಚಿತ್ರ

ಸಭೆ ಬಹಿಷ್ಕರಿಸಿದ ಯತ್ನಾಳ, ರಮೇಶ

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ ಅವರು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯ ಆರಂಭಕ್ಕೂ ಮೊದಲೇ ಐಟಿಸಿ ಗಾರ್ಡೇನಿಯಾದಿಂದ ಹೊರ ನಡೆದರು.

'ಏಕೆ ಹೋಗ್ತಾ ಇದ್ದೀರಿ, ಬೇಸರ ಆಗಿದೆಯಾ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಇಲ್ರಿ ಚಹಾ ಕುಡಿಯಲು ಹೊಂಟಿದ್ದೀವಿ. 'ಇಲ್ಲಿ ನಮ್ಮಂತ ಬಡವರು ಕುಡಿಯುವ ಚಹಾ ಇಲ್ಲರೀ' ಎಂದು ಹೇಳಿದ ಯತ್ನಾಳ, ಕಾರು ಏರಿ ಹೊರಟವರು ಸಭೆಗೆ ಮತ್ತೆ ಬರಲೇ ಇಲ್ಲ.

ಇದಾದ ಕೆಲವೇ ಹೊತ್ತಿನಲ್ಲಿ 'ಎಕ್ಸ್' ಮೂಲಕ, 'ನ ದೈನ್ಯಂ, ನ ಪಲಾಯನಂ– ಒಬ್ಬ ಯೋಧ ಯಾವುದಕ್ಕೂ ದೂರುವುದಿಲ್ಲ ಮತ್ತು ವ್ಯಥೆ ಪಡುವುದಿಲ್ಲ. ಆತನ ಜೀವನ ಕೊನೆಯಿಲ್ಲದ ಸವಾಲುಗಳಿಂದ ಕೂಡಿರುತ್ತದೆ. ಆ ಸವಾಲುಗಳು ಒಳ್ಳೆಯದೂ ಆಗಿರುತ್ತವೆ ಮತ್ತು ಕೆಟ್ಟವೂ ಆಗಿರುತ್ತವೆ. ಸವಾಲುಗಳು ಕೇವಲ ಸವಾಲುಗಳೇ ಆಗಿರುತ್ತವೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಬೆಳಿಗ್ಗೆ ಮಾತನಾಡಿದ ಯತ್ನಾಳ, 'ಬಿಜೆಪಿ ಒಂದೇ ಕುಟುಂಬದ ಪಕ್ಷ ಆಗಬಾರದು. ಇದನ್ನು ಬಿಜೆಪಿ ಮತ್ತು ಹಿಂದೂ ಕಾರ್ಯಕರ್ತರು ಒಪ್ಪುವುದಿಲ್ಲ' ಎಂದು ಕಿಡಿಕಾರಿದರು.

'ಭಾರತ ದೇಶ ಮತ್ತು ಹಿಂದೂಗಳು ಉಳಿಯಬೇಕೆಂದರೆ 2024ರಲ್ಲಿ ಮೋದಿಯವರು ಮತ್ತೊಮ್ಮೆ ಪ್ರಧಾನಮಂತ್ರಿ ಆಗಬೇಕು. ಆ ಕಾರಣಕ್ಕಾಗಿ ನಾನು ಪ್ರಾಣ ಕೊಡಲು ಸಿದ್ಧನಿದ್ದೇನೆ. ಆದರೆ, ಕುಟುಂಬ ರಾಜಕಾರಣದ ವಿರುದ್ಧದ ನನ್ನ ಗಟ್ಟಿತನದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ' ಎಂದರು.'ಯಾರ ಬಾಲ ಹಿಡಿದುಕೊಂಡು ಸರ್ ಸರ್ ಎಂದು ಹಿಂದೆ ಹೋಗುವ ಆಸಾಮಿ ನಾನಲ್ಲ. ಕೈಕಟ್ಟಿಕೊಂಡು ಕೂರುವವ ನಾನಲ್ಲ. ನನ್ನನ್ನು ಖರೀದಿ ಮಾಡಲು ಆಗಲ್ಲ. ಇಂತಹ ಹಲ್ಕಾ ದಂಧೆ ನಡೆಯುತ್ತಲೇ ಇದೆ. ನಾನು ದುಡ್ಡು ಮಾಡಿದ್ದರೆ, ಇಂತಹ ಸ್ಲಂನಲ್ಲಿ ವಾಸವಿರಬೇಕಿತ್ತಾ' ಎಂದೂ ಯತ್ನಾಳ ಪ್ರಶ್ನಿಸಿದ್ದಾರೆ.

ಗೈರಾದ ಶಾಸಕರು

ಬಸನಗೌಡ ಯತ್ನಾಳ
ರಮೇಶ ಜಾರಕಿಹೊಳಿ
ಎಸ್.ಟಿ.ಸೋಮಶೇಖರ್
ಶಿವರಾಮ ಹೆಬ್ಬಾರ್

ಮತದಾನದ ವೇಳೆ ಘರ್ಷಣೆ: 2 ಸಾವು

ಮಧ್ಯಪ್ರದೇಶ, ಛತ್ತೀಸಗಢ ವಿಧಾನಸಭೆ ಚುನಾವಣೆ

ಭೋಪಾಲ್, ಗರಿಯಾಬಂದ್ (ಪಿಟಿಐ): ಮಧ್ಯಪ್ರದೇಶ ಹಾಗೂ ಛತ್ತೀಸಗಢ ವಿಧಾನಸಭೆಗೆ ಶುಕ್ರವಾರ ನಡೆದ ಮತದಾನದ ವೇಳೆ ಪ್ರತ್ಯೇಕ ಘರ್ಷಣೆಗಳಲ್ಲಿ ಇಬ್ಬರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಛತ್ತೀಸಗಢದ ಗರಿಯಾಬಂದ್ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ಸ್ಫೋಟದಲ್ಲಿ ಇಂಡೊ–ಟಿಬೆಟನ್ ಗಡಿ ಪೊಲೀಸ್ ಪಡೆ (ಐಟಿಬಿಪಿ) ಹೆಡ್ ಕಾನ್‌ಸ್ಟೆಬಲ್ ಜೋಗಿಂದರ್ ಸಿಂಗ್ ಮೃತಪಟ್ಟಿದ್ದಾರೆ. ಬಡೇ ಗೋಬ್ರಾ ಗ್ರಾಮದ ಬಳಿ ಈ ಘಟನೆ ನಡೆದಿದೆ. ಮತಗಟ್ಟೆ ಸಿಬ್ಬಂದಿ ಕರ್ತವ್ಯ ಮುಗಿಸಿ ಭದ್ರತಾ ಸಿಬ್ಬಂದಿಯ ಬೆಂಗಾವಲಿನಲ್ಲಿ ಹಿಂದಿರುಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಧ್ಯಪ್ರದೇಶದ ರಾಜ್‌ನಗರ ಕ್ಷೇತ್ರದಲ್ಲಿ ಎರಡು ಗುಂಪುಗಳ ನಡುವಣ ಘರ್ಷಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸಹಾಯಕ ಸಲ್ಮಾನ್ ಎಂಬುವರನ್ನು ಹತ್ಯೆ ಮಾಡಲಾಗಿದೆ. ಛತರ್‌ಪುರ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಸಂಗಿ ಪ್ರಕಾರ, ಶುಕ್ರವಾರ ಮುಂಜಾನೆ ರಾಜ್‌ನಗರ ಕ್ಷೇತ್ರದಲ್ಲಿ ಇಬ್ಬರು ರಾಜಕೀಯ ನಾಯಕರ ಬೆಂಬಲಿಗರು ಘರ್ಷಣೆಗಿಳಿದಾಗ, ಸಲ್ಮಾನ್ ಎಂಬುವರು ಮೃತಪಟ್ಟಿದ್ದಾರೆ.

ಇಂದೋರ್ ಜಿಲ್ಲೆಯ ಮಹೂ ಪ್ರದೇಶದಲ್ಲಿ ಎರಡು ಗುಂಪುಗಳ ನಡುವೆ ಹೊಡೆದಾಟವಾಗಿದ್ದು ಐದು ಮಂದಿ ಗಾಯಗೊಂಡಿದ್ದರೆ, ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಪ್ರತಿನಿಧಿಸುವ ದಿಮಾನಿ ಕ್ಷೇತ್ರದ ಮೊರೆನಾ ಜಿಲ್ಲೆಯಲ್ಲಿ ಘರ್ಷಣೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ.

ಮೊರೆನಾ ಪೊಲೀಸ್ ವರಿಷ್ಠಾಧಿಕಾರಿ ಶೈಲೇಂದ್ರ ಸಿಂಗ್, 'ಮತದಾರರು ಮತ ಚಲಾಯಿಸದಂತೆ ತಡೆಯಲು ಪ್ರಯತ್ನಿಸಿದ ಆರೋಪದ ಮೇಲೆ ಮಿರ್ಘನ್ ಗ್ರಾಮದಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಗ್ರಾಮದಲ್ಲಿ ಗುಂಡಿನ ದಾಳಿ ನಡೆದಿದೆ ಎಂದು ಕೆಲ ವಾಹಿನಿಗಳು ತಪ್ಪಾಗಿ ವರದಿ ಮಾಡಿವೆ. ಆದರೆ ಗುಂಡಿನ ದಾಳಿ ನಡೆದಿಲ್ಲ' ಎಂದು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಚಂಬಲ್ ಪ್ರದೇಶದ ಭಾಗವಾಗಿರುವ ಮೊರೆನಾ, ಒಂದು ಕಾಲದಲ್ಲಿ ಡಕಾಯಿತರಿಂದ ಕುಖ್ಯಾತವಾಗಿತ್ತು.

ಇನ್ನಷ್ಟು ಸುದ್ದಿಗಳು 10

ಛತ್ತೀಸಗಢ ಶೇ 70.59, ಮಧ್ಯಪ್ರದೇಶ ಶೇ 76

ಪ್ರಾಥಮಿಕ ಮಾಹಿತಿಗಳ ಪ್ರಕಾರ ಛತ್ತೀಸಗಢದಲ್ಲಿ ಶೇ 70.59 ಹಾಗೂ ಮಧ್ಯಪ್ರದೇಶದಲ್ಲಿ ಶೇ 76ರಷ್ಟು ಮತದಾನವಾಗಿದೆ. ಎರಡೂ ರಾಜ್ಯಗಳಲ್ಲಿ ಎಲ್ಲಾ ಮತಗಟ್ಟೆಗಳಿಂದ ವರದಿ ಬಂದ ಬಳಿಕ ಮತದಾನದ ನಿಖರ ಪ್ರಮಾಣ ಗೊತ್ತಾಗಲಿದೆ ಎಂದು ಕೇಂದ್ರ ಚುನಾವಣಾ ಆಯೋಗವು ತಿಳಿಸಿದೆ.

ಛತ್ತೀಸಗಢದಲ್ಲಿ ಎರಡನೇ ಹಂತದಲ್ಲಿ ವಿಧಾನಸಭೆಯ 70 ಸ್ಥಾನಗಳು (958 ಅಭ್ಯರ್ಥಿಗಳು) ಹಾಗೂ ಮಧ್ಯಪ್ರದೇಶದಲ್ಲಿ ಒಂದೇ ಹಂತದಲ್ಲಿ 230 ಸ್ಥಾನಗಳಿಗೆ (2,533 ಅಭ್ಯರ್ಥಿಗಳು) ಮತದಾನ ನಡೆಯಿತು.

₹68,526 ದಂಡ ಕಟ್ಟಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಒತ್ತಡದಿಂದ ಬೆಸ್ಕಾಂ ವಿಚಕ್ಷಣಾ ದಳ ನನಗೆ ವಿಧಿಸಿದ್ದ ₹68,526 ದಂಡ ಶುಲ್ಕ ಪಾವತಿಸಿದ್ದೇನೆ. ಅವರು ವಿಧಿಸಿದ ದಂಡವೇ ಅಕ್ರಮ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ಯಾರೋ ಮಾಡಿದ ತಪ್ಪಿಗೆ ವಿದ್ಯುತ್ ಕಳ್ಳತನದ ಹಣೆಪಟ್ಟಿ ಕಟ್ಟಿದ್ದಾರೆ. ಜೆ.ಪಿ. ನಗರದ ನಮ್ಮ ಮನೆಯ ದೀಪಾವಳಿ ವಿದ್ಯುತ್ ಅಲಂಕಾರಕ್ಕೆ 1 ಕೆ.ವಿ ವಿದ್ಯುತ್ ಬಳಕೆ ಮಾಡಲಾಗಿದೆ. ಬೆಸ್ಕಾಂ 2.5 ಕೆ.ವಿ ಎಂದು ಸುಳ್ಳು ಲೆಕ್ಕ ತೋರಿಸಿದೆ. ಮನೆಯ ನಿತ್ಯದ ಬಳಕೆಗೆ 33 ಕೆ.ವಿ ಅನುಮತಿ ಪಡೆದಿದ್ದೇನೆ. ಬಳಕೆ ಮಾಡಿರುವುದು 71 ಯೂನಿಟ್. ಅದಕ್ಕೆ ಮೂರು ಪಟ್ಟು ದಂಡವಿಧಿಸಿದರೂ ₹2,526 ಆಗುತ್ತದೆ. ಅನುಮತಿ ಪಡೆದ 33 ಕೆ.ವಿಗೂ ₹66 ಸಾವಿರ ದಂಡ ಸೇರಿಸಿ ₹68,526 ದಂಡ ಹಾಕಲಾಗಿದೆ. ಮಾಜಿ ಮುಖ್ಯಮಂತ್ರಿ ಕಥೆಯೇ ಹೀಗಾದರೆ ಸಾಮಾನ್ಯರ ಪಾಡೇನು' ಎಂದರು.

ಉಪ ಮುಖ್ಯಮಂತ್ರಿ ಕ್ಷೇತ್ರ ಕನಕಪುರದಲ್ಲಿ ಪ್ರತಿವರ್ಷ ನಡೆಸುವ ಕನಕೋತ್ಸವಕ್ಕೆ ಅನುಮತಿ ಪಡೆದು ವಿದ್ಯುತ್ ಸಂಪರ್ಕ ಪಡೆಯುತ್ತಿದ್ದಾರಾ? ಮೇಕೆದಾಟು ಪ್ರತಿಭಟನೆ ಸಮಯದಲ್ಲಿ ಊರುಗಳನ್ನೇ ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದರು. ಎಷ್ಟು ಹಣ ಕಟ್ಟಿದ್ದಾರೆ ಎನ್ನುವ ಕುರಿತು ತನಿಖೆ ಮಾಡುವ ಯೋಗ್ಯತೆ ಈ ಸರ್ಕಾರಕ್ಕೆ ಇದೆಯಾ ಎಂದು ಪ್ರಶ್ನಿಸಿದರು.

'ದಂಡದ ಮೊತ್ತ ಪಾವತಿಸಿದ್ದೇನೆ. ಇನ್ನಾದರೂ ಕಳ್ಳ ಎನ್ನುವ ಮಾತು ನಿಲ್ಲಿಸಿಬಿಡಿ' ಎಂದು ಆಗ್ರಹಿಸಿದರು.

ಹರಿಯಾಣ: ಖಾಸಗಿ ವಲಯ ಮೀಸಲಾತಿ ರದ್ದು

ಚಂಡೀಗಢ (ಪಿಟಿಐ): ಖಾಸಗಿ ವಲಯದ ಉದ್ಯೋಗದಲ್ಲಿ ಶೇಕಡ 75ರಷ್ಟನ್ನು ರಾಜ್ಯದ ನಿವಾಸಿಗಳಿಗೆ ಮೀಸಲಿಟ್ಟು ಹರಿಯಾಣ ಸರ್ಕಾರವು 2020ರಲ್ಲಿ ರೂಪಿಸಿದ್ದ ಕಾನೂನನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ನ್ಯಾಯಮೂರ್ತಿಗಳಾದ ಜಿ.ಎಸ್. ಸಂಧಾವಾಲಿಯಾ ಮತ್ತು ಹರ್‌ಪ್ರೀತ್ ಕೌರ್ ಜೀವನ್ ಅವರು ಇದ್ದ ನ್ಯಾಯಪೀಠವು ಈ ಆದೇಶ ನೀಡಿದೆ. ಮೀಸಲಾತಿ ಕಲ್ಪಿಸಿದ್ದ ಇಡೀ ಕಾಯ್ದೆಯನ್ನು ಕೋರ್ಟ್ ಅಸಿಂಧುಗೊಳಿಸಿದೆ ಎಂದು ಹಿರಿಯ ವಕೀಲ ಅಕ್ಷಯ್ ಭಾನ್ ತಿಳಿಸಿದ್ದಾರೆ.



'ಹರಿಯಾಣ ರಾಜ್ಯ ಉದ್ಯೋಗ ಮತ್ತು ಸ್ಥಳೀಯ ಅಭ್ಯರ್ಥಿಗಳ ಕಾಯ್ದೆ 2020' ಸಂವಿಧಾನದ 14 ಮತ್ತು 19ನೆಯ ವಿಧಿಗಳನ್ನು ಉಲ್ಲಂಘಿಸಿದೆ ಎಂದು ವಾದಿಸಲಾಗಿತ್ತು ಎಂದು ಭಾನ್ ತಿಳಿಸಿದ್ದಾರೆ. ಭಾನ್ ಅವರು ಅರ್ಜಿದಾರರ ಪರವಾಗಿ ವಾದಿಸಿದ್ದರು.

ಕಾಯ್ದೆಯನ್ನು ಪ್ರಶ್ನಿಸಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ತಿಂಗಳಿಗೆ ಒಟ್ಟು ₹30 ಸಾವಿರ-ದವರೆಗಿನ ಸಂಬಳ ಇರುವ ಉದ್ಯೋಗಗಳಿಗೆ ಈ ಮೀಸಲಾತಿ ಅನ್ವಯ ಆಗುತ್ತಿತ್ತು.

ಎಚ್‌ಎಸ್‌ಆರ್‌ಪಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸಿ-ಕೊಳ್ಳಲು ಇದ್ದ ಅವಧಿಯನ್ನು ಸಾರಿಗೆ ಇಲಾಖೆಯು ಮೂರು ತಿಂಗಳು ವಿಸ್ತರಿಸಿ ಆದೇಶ ಹೊರಡಿಸಿದೆ.

ನ.17ರವರೆಗೆ ಕಾಲಾವಕಾಶ ನೀಡಲಾಗಿತ್ತು. ಈ ಅವಧಿಯನ್ನು ಫೆ.17ರ ವರೆಗೆ ವಿಸ್ತರಿಸಿ ಶುಕ್ರವಾರ ಆದೇಶ ಹೊರಡಿಸಲಾಗಿದೆ. 2019ರ ನಂತರ ಖರೀದಿಸಿದ ವಾಹನಗಳಲ್ಲಿ ಎಚ್‌ಎಸ್‌ಆರ್‌ಪಿ ಇದೆ. ಅದಕ್ಕಿಂತ ಹಿಂದಿನ ವಾಹನಗಳು ನಿಗದಿತ ಅವಧಿಯೊಳಗೆ ಹೊಸ ಫಲಕ ಅಳವಡಿಸಿಕೊಳ್ಳಬೇಕು. ಇಲ್ಲದೇ ಇದ್ದರೆ ದಂಡ ವಿಧಿಸಲಾಗುವುದು ಎಂದು ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

ಜೆಡಿಎಸ್‌ನಿಂದ ಇಬ್ರಾಹಿಂ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಜೆಡಿಎಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ.

'ಇಬ್ರಾಹಿಂ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ಸಂಪೂರ್ಣ ನಿಷ್ಕ್ರಿಯರಾಗಿದ್ದರು. ಸಂಘಟನೆ, ಬಲವರ್ಧನೆಗೆ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳಲಿಲ್ಲ. ಸದಸ್ಯತ್ವ ನೋಂದಣಿ ಅಭಿಯಾನ ನಡೆಸಲಿಲ್ಲ. ಪಕ್ಷ ತೆಗೆದುಕೊಂಡಿದ್ದ ಬಿಜೆಪಿ ಜತೆಗಿನ ಮೈತ್ರಿ ನಿರ್ಣಯ ವಿರೋಧಿಸಿದ್ದರು. ಪಕ್ಷವಿರೋಧಿ ಹೇಳಿಕೆಗಳನ್ನು ನೀಡಿದ್ದರು. ಹಾಗಾಗಿ, ಶಿಸ್ತು ಉಲ್ಲಂಘನೆ ಆರೋಪದ ಮೇಲೆ ಪಕ್ಷದ ಸಂವಿಧಾನ ಹಾಗೂ ನಿಯಮಗಳ ಅಡಿಯಲ್ಲಿ ಅಮಾನತು ಮಾಡಲಾಗಿದೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಅಮಾನತು ಆದೇಶದಲ್ಲಿ ವಿವರಿಸಿದ್ದಾರೆ.



'ಲುಲು ಮಾಲ್‌ಗೆ 24 ಎಕರೆ ಕಬಳಿಕೆ'

ಬೆಂಗಳೂರು: 'ಮಿನರ್ವ ಮಿಲ್‌ಗೆ ಮೀಸಲಿಟ್ಟಿದ್ದ 24 ಎಕರೆ ಖರಾಬು ಭೂಮಿ ಕಬಳಿಸಿ ಐಷಾರಾಮಿ ಲುಲು ಮಾಲ್ ಕಟ್ಟಲಾಗಿದೆ. ಈ ಕುರಿತು ತನಿಖೆ ನಡೆಸಬೇಕು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರ ಸ್ವಾಮಿ ಒತ್ತಾಯಿಸಿದರು.

6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶನಿವಾರ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಮುನ್ನೋಟ: ಭಾನುವಾರ 29° 20° | ಸೋಮವಾರ 29° 20° | ಮಂಗಳವಾರ 28° 19°

ಸೂರ್ಯೋದಯ: 6.19 ಸೂರ್ಯಾಸ್ತ: 5:56 ಚಂದ್ರೋದಯ: ರಾ. 9:59 ಚಂದ್ರಾಸ್ತ: ಬೆ. 9:32 | ಶುಕ್ರವಾರ ಹವಾಮಾನ : ಗರಿಷ್ಠ 29° ಕನಿಷ್ಠ 21°

ಪ್ರಜಾವಾಣಿ

ಕರ್ನಾಟಕ ಕಲಾ ಸಂಭ್ರಮ ನಾಳೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಯುವಕ ಸಂಘವು ಕರ್ನಾಟಕ ಕಲಾ ಸಂಭ್ರಮ ಕಾರ್ಯಕ್ರಮವನ್ನು ಇದೇ ಭಾನುವಾರ ಎಂ.ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೊದಲ್ಲಿ 'ಕರ್ನಾಟಕ ಕಲಾ ಸಂಭ್ರಮ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಆಸಕ್ತರು ನೋಂದಣಿಗೆ ಮೊಬೈಲ್ ಸಂಖ್ಯೆ 63609 02574ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಆಧಾರ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಖರೀದಿಸಿ ಕೃತ್ಯ • 6 ಮಂದಿ ಬಂಧನ

ಬೇನಾಮಿ ಖಾತೆ ತೆರೆದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇನಾಮಿ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಸೈಬರ್ ವಂಚನೆಗೆ ಬಳಸುತ್ತಿದ್ದ ಜಾಲವನ್ನು ಸಿಐಡಿ ಪೊಲೀಸರು ಭೇದಿಸಿದ್ದು, ಆರು ಮಂದಿಯನ್ನು ಬಂಧಿಸಿದ್ದಾರೆ.

'ಕೇರಳದ ಸಮೀರ್, ಮಹಮ್ಮದ್ ಹಸನ್, ಅಮೀಲ್ ಬಾಬು, ಮಹಮ್ಮದ್ ಇರ್ಫಾನ್, ತಂಜೀಲ್ ಹಾಗೂ ಮಂಜುನಾಥ್ ಬಂಧಿತರು. ಜಾಲದ ಪ್ರಮುಖ ಆರೋಪಿ ದುಬೈನಲ್ಲಿದ್ದು, ಆತನ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

'ಬೇನಾಮಿ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಆರೋಪಿಗಳು ತೆರೆದಿದ್ದ 126 ಖಾತೆಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಇದೇ ಖಾತೆಗಳನ್ನು ಬಳಸಿಕೊಂಡು 75 ಸೈಬರ್ ವಂಚನೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಕಚೇರಿ ತೆರೆದಿದ್ದ ಆರೋಪಿಗಳು: 'ಮತ್ತಿಕೆರೆಯಲ್ಲಿ ಕಚೇರಿ ತೆರೆದಿದ್ದ ಆರೋಪಿಗಳು, ಹಣ ದುಪ್ಪಟ್ಟು ಮಾಡುವ ವ್ಯವಹಾರ ಮಾಡುತ್ತಿರುವುದಾಗಿ ಜನರಿಗೆ ಹೇಳುತ್ತಿದ್ದರು. ಆಧಾರ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಹಾಗೂ ಇತರೆ ದಾಖಲೆಗಳನ್ನು ನೀಡಿದರೆ ₹ 5 ಸಾವಿರದಿಂದ ₹ 10 ಸಾವಿರ ಹಣ ನೀಡುವುದಾಗಿ ತಿಳಿಸುತ್ತಿದ್ದರು' ಎಂದು ಪೊಲೀಸರು ವಿವರಿಸಿದರು.

'ಹಣದ ಆಸೆಗಾಗಿ ಹಲವರು, ಗುರುತಿನ ಚೀಟಿಗಳನ್ನು ಆರೋಪಿಗಳಿಗೆ ನೀಡಿದ್ದರು. ಇದೇ ದಾಖಲೆ ಬಳಸಿಕೊಂಡು ಆರೋಪಿಗಳು, ನಕಲಿ ಸಿಮ್‌ಕಾರ್ಡ್‌ಗಳನ್ನು ಖರೀದಿಸಿದ್ದರು. ನಂತರ, ವಿವಿಧ ಬ್ಯಾಂಕ್‌ಗಳಲ್ಲಿ ಬೇನಾಮಿ ಖಾತೆಗಳನ್ನೂ ತೆರೆದಿದ್ದರು. ಈ ಸಂಗತಿ ಜನರಿಗೆ ಗೊತ್ತಿರಲಿಲ್ಲ' ಎಂದು ಪೊಲೀಸರು ಹೇಳಿದರು.

ಹೂಡಿಕೆ ಹೆಸರಿನಲ್ಲಿ ವಂಚನೆ: 'ಷೇರು ಹಣ ಹೂಡಿಕೆ ಮಾಡಿ, ಕೆಲವೇ ದಿನಗಳಲ್ಲಿ ದುಪ್ಪಟ್ಟ ಲಾಭ ಪಡೆಯಿರಿ' ಎಂದು ಆರೋಪಿಗಳು ಜಾಹೀರಾತು ನೀಡುತ್ತಿದ್ದರು. ಅದನ್ನು ನಂಬಿ ಹಲವರು ಆರೋಪಿಗಳನ್ನು ಸಂಪರ್ಕಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಜನರಿಂದ ಬೇನಾಮಿ ಖಾತೆಗಳಿಗೆ ಹಣ ಜಮೆ ಮಾಡಿಸಿಕೊಳ್ಳುತ್ತಿದ್ದರು. ಯಾವುದೇ ಲಾಭ ನೀಡದೇ ಹಣವನ್ನು ವಾಪಸು ಕೊಡದೇ ಆರೋಪಿಗಳು ಪರಾರಿಯಾಗುತ್ತಿದ್ದರು. ಹಣ ವರ್ಗಾವಣೆ ಆಗಿದ್ದ ಖಾತೆಗಳನ್ನು ಪರಿಶೀಲಿಸಿದಾಗ, ದಾಖಲೆ ಮಾಡಿಕೊಂಡಿದ್ದ ಜನರು ಸಿಕ್ಕಿಬೀಳುತ್ತಿದ್ದರು. ಆರೋಪಿಗಳ ಸುಳಿವು ಸಿಗುತ್ತಿರಲಿಲ್ಲ' ಎಂದು ತಿಳಿಸಿದರು.

ದೂರು ನೀಡಿದ್ದ ಸ್ನೇಹಿತ: 'ಆರೋಪಿಗಳಿಗೆ ದಾಖಲೆ ಮಾಡಿಕೊಟ್ಟಿದ್ದ ವ್ಯಕ್ತಿಯೊಬ್ಬರು, ಸ್ನೇಹಿತನಿಗೂ ದಾಖಲೆ ನೀಡುವಂತೆ ಹೇಳಿದ್ದರು. ದಾಖಲೆ ಮಾರಾಟ ಏಕೆ? ಎಂಬ ಬಗ್ಗೆ ಅನುಮಾನಗೊಂಡ ಅದೇ ಸ್ನೇಹಿತ, ಸಿಐಡಿಗೆ ಮಾಹಿತಿ ನೀಡಿದ್ದ. ಅದರನ್ವಯ ಕಾರ್ಯಾಚರಣೆ ನಡೆಸಿದಾಗ, ಜಾಲ ಪತ್ತೆಯಾಯಿತು' ಎಂದು ಪೊಲೀಸರು ಹೇಳಿದರು.

'ಕರ್ನಾಟಕ ಹಾಗೂ ಹೊರ ರಾಜ್ಯಗಳ ನಿವಾಸಿಗಳನ್ನು ಆರೋಪಿಗಳು ವಂಚಿಸಿದ್ದಾರೆ. ಬೇನಾಮಿ ಖಾತೆಗಳ ಮೂಲಕ ಆರೋಪಿಗಳು ಅಕ್ರಮ ಹಣದ ವಹಿವಾಟು ನಡೆಸಿರುವ ಮಾಹಿತಿ ಇದೆ. ಪ್ರಮುಖ ಆರೋಪಿ ಬಂಧನದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಬೇಕಿದೆ' ಎಂದು ಪೊಲೀಸರು ತಿಳಿಸಿದರು.

'ಸೈಬರ್ ಅಪರಾಧ ತನಿಖೆಗೆ ವಿಶೇಷ ತಂಡ'

'ಸೈಬರ್ ಅಪರಾಧಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ಇವುಗಳ ನಿಯಂತ್ರಣ ಹಾಗೂ ಆರೋಪಿಗಳ ಬಂಧನಕ್ಕಾಗಿ ಡಿಸಿಪಿಗಳ ನೇತೃತ್ವದಲ್ಲಿ ನಾಲ್ಕು ವಿಶೇಷ ತಂಡಗಳ ರಚಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೈಬರ್ ಅಪರಾಧ ತಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ' ಎಂದರು.

'ಎಇಪಿಎಸ್ (ಆಧಾರ್ ಆಧಾರಿತ ಹಣ ಪಾವತಿ ವ್ಯವಸ್ಥೆ) ದುರುಪಯೋಗಪಡಿಸಿಕೊಂಡು ಜನರನ್ನು ವಂಚಿಸಲಾಗುತ್ತಿದೆ. ಉಡುಗೊರೆ, ಕೆಲಸ, ಹೂಡಿಕೆ ಆಮಿಷವೊಡ್ಡಿ ಜನರನ್ನು ವಂಚಿಸುವ ಜಾಲಗಳಿವೆ. ಎಲ್ಲ ಬಗೆಯ ಸೈಬರ್ ಅಪರಾಧಗಳ ಬಗ್ಗೆ ಡಿಸಿಪಿ ನೇತೃತ್ವದ ತಂಡಗಳು ಈಗಾಗಲೇ ತನಿಖೆ ಆರಂಭಿಸಿವೆ' ಎಂದು ಹೇಳಿದರು.



ಹಲಸೂರಿನ ಸೆಂಟ್ ಆನ್ಸ್ ಮಹಿಳಾ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ಕಳವು: ಕೆಲಸಗಾರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ್ತಪೇಟೆಯಲ್ಲಿರುವ ಕಾಂಚನಾ ಜ್ಯುವೆಲರ್ಸ್ ಮಳಿಗೆಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಭೇದಿಸಿರುವ ಹಲಸೂರು ಗೇಟ್ ಠಾಣೆ ಪೊಲೀಸರು, ಮಳಿಗೆಯ ಕೆಲಸಗಾರ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

'ರಾಜಸ್ಥಾನದ ಕೇತುರಾಮ್ ಹಾಗೂ ಈತನ ಸ್ನೇಹಿತ ರಾಕೇಶ್ ಬಂಧಿತರು. ಇವರಿಬ್ಬರಿಂದ ₹ 5.50 ಲಕ್ಷ ನಗದು, ₹ 1 ಕೋಟಿ ಮೌಲ್ಯದ 624 ಗ್ರಾಂ ಚಿನ್ನಾಭರಣ ಹಾಗೂ 6 ಕೆ.ಜಿ 455 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಅ. 29ರಂದು ನಡೆದಿದ್ದ ಕಳ್ಳತನ ಸಂಬಂಧ ಮಳಿಗೆ ಮಾಲೀಕ ಅರವಿಂದ್ ಕುಮಾರ್ ತಾಡೆ ಅವರು ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಕೆಲಸಗಾರ ಕೇತುರಾಮ್‌ನೇ ಆರೋಪಿ ಎಂಬುದು ತಿಳಿಯಿತು. ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ. ಸ್ನೇಹಿತನೂ ಸಿಕ್ಕಿಬಿದ್ದ. ಇನ್ನೊಬ್ಬ ಆರೋಪಿ, ತಲೆಮರೆಸಿಕೊಂಡಿದ್ದಾನೆ' ಎಂದು ಹೇಳಿದರು.

ಬೀಗದ ಕೀ ಕದ್ದು ಕೃತ್ಯ: 'ಎರಡು ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ ಕೇತುರಾಮ್, ಅರವಿಂದ್ ಕುಮಾರ್ ಅವರ ಮಳಿಗೆಯಲ್ಲಿ ಕೆಲಸಕ್ಕೆ ಸೇರಿದ್ದ. ನಂಬಿಕೆಯನ್ನೂ ಗಳಿಸಿದ್ದ. ನಿತ್ಯದ ವಹಿವಾಟು ನೋಡುತ್ತಿದ್ದ ಕೇತುರಾಮ್, ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿ ತನ್ನೂರಿಗೆ ಹೋಗಲು ಸಂಚು ರೂಪಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ದಸರಾ ಹಬ್ಬದಂದು ಮಾಲೀಕ ಅರವಿಂದ್ ಕುಮಾರ್ ಮುಂಬೈಗೆ ಹೊರಟಿದ್ದರು. ಇದೇ ಸಂದರ್ಭದಲ್ಲಿ ಅವರ ಬ್ಯಾಗ್‌ನಲ್ಲಿದ್ದ ಮಳಿಗೆಯ ಬೀಗದ ಕೀಯನ್ನು ಆರೋಪಿ ಕದ್ದಿಟ್ಟುಕೊಂಡಿದ್ದ. ರಾಜಸ್ಥಾನದ ಇಬ್ಬರು ಸ್ನೇಹಿತರನ್ನು ಬೆಂಗಳೂರಿಗೆ ಕರೆಸಿದ್ದ. ಮಳಿಗೆಯ ಬೀಗ ತೆರೆದಿದ್ದ ಕೇತುರಾಮ್, ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ನಿಷ್ಕ್ರಿಯಗೊಳಿಸಿದ್ದ. ನಂತರ, ಸ್ನೇಹಿತರನ್ನು ಮಳಿಗೆಗೆ ಕರೆಸಿಕೊಂಡಿದ್ದ. ಚಿನ್ನಾಭರಣ, ಬೆಳ್ಳಿ ದೋಚಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು' ಎಂದು ತಿಳಿಸಿದರು.

ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ಇಬ್ಬರು ವಶಕ್ಕೆ

ಬೆಂಗಳೂರು: ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಎರಡು ಗುಂಪುಗಳ ನಡುವೆ ನಡೆಯುತ್ತಿದ್ದ ಜಗಳ ಬಿಡಿಸಲು ಹೋಗಿದ್ದ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ದೊಡ್ಡಣ್ಣ ನಗರದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಎರಡು ಗುಂಪುಗಳ ನಡುವೆ ಗುರುವಾರ ರಾತ್ರಿ ಗಲಾಟೆ ಆಗಿತ್ತು. ಹೆಚ್ಚು ಜನರು ಸೇರಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಗಸ್ತಿನಲ್ಲಿದ್ದ ಕಾನ್‌ಸ್ಟೆಬಲ್ ರಮೇಶ್ ಅವರು ಸ್ಥಳಕ್ಕೆ ತೆರಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎರಡು ಗುಂಪಿನವರಿಗೂ ಬುದ್ಧಿವಾದ ಹೇಳಿದ್ದ ಕಾನ್‌ಸ್ಟೆಬಲ್, ಜಗಳ ಬಿಡಿಸಲು ಯತ್ನಿಸಿದ್ದರು. ಕಾನ್‌ಸ್ಟೆಬಲ್ ಮೇಲೆಯೇ ಮುಗಿಬಿದ್ದಿದ್ದ ಕೆಲವರು, ಹಲ್ಲೆ ಮಾಡಿದ್ದರು. ನಂತರ, ಹೆಚ್ಚುವರಿ ಸಿಬ್ಬಂದಿ ಸ್ಥಳಕ್ಕೆ ಹೋಗಿ ಜನರನ್ನು ಚದುರಿಸಿದರು' ಎಂದು ಮೂಲಗಳು ತಿಳಿಸಿವೆ.

'ಹಲ್ಲೆಯಿಂದಾಗಿ ಕಾನ್‌ಸ್ಟೆಬಲ್ ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಹಲ್ಲೆ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಹೇಳಿವೆ.

ಸುದ್ದಿ 2 ನಿಮಿಷ

ಕಾರ್ಮಿಕನ ಕೊಲೆ: ಪೊದೆಯಲ್ಲಿ ಮೃತದೇಹ ಪತ್ತೆ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಲಕ್ಷ್ಮಣ್ (22) ಎನ್ನುವವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದ್ದು, ಪೊದೆಯೊಂದರಲ್ಲಿ ಮೃತದೇಹ ಪತ್ತೆಯಾಗಿದೆ.

'ಉತ್ತರ ಭಾರತದ ಲಕ್ಷ್ಮಣ್, ಕೆಲಸ ಹುಡುಕಿಕೊಂಡು ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಾರಾಯಣ ಪಿಯು ಕಾಲೇಜ್ ಹಿಂಭಾಗದಲ್ಲಿರುವ ಭೈರತಿ ಬಸವರಾಜ್ ಅವರಿಗೆ ಸೇರಿದ್ದ ಜಮೀನಿನ ಪೊದೆಯಲ್ಲಿ ಲಕ್ಷ್ಮಣ್ ಮೃತದೇಹ ಪತ್ತೆಯಾಗಿದೆ. ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಮೃತದೇಹವನ್ನು ಬಿಸಾಕಿ ಹೋಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ತಿಳಿಸಿವೆ.

'ಮೃತದೇಹ ನೋಡಿದ್ದ ಸ್ಥಳೀಯರು ನೀಡಿದ್ದ ಮಾಹಿತಿಯಂತೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಯಿತು. ಸ್ಥಳೀಯರ ಹೇಳಿಕೆ ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಪರಿಚಯಸ್ಥರಿಂದ ಕೃತ್ಯ: 'ಲಕ್ಷ್ಮಣ್ ಅವರಿಗೆ ಪರಿಚಯವಿದ್ದವರೇ ಕೊಲೆ ಮಾಡಿರುವ ಅನುಮಾನವಿದೆ. ಆದರೆ, ಕೊಲೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ. ಆರೋಪಿ ಬಗ್ಗೆ ಕೆಲ ಸುಳಿವು ಸಿಕ್ಕಿವೆ. ಆರೋಪಿ ಬಂಧನದ ಬಳಿಕ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವರ್ತೂರು ಮುಖ್ಯರಸ್ತೆ ವಿಸ್ತರಣೆಗೆ ನಾಗರಿಕರ ಆಗ್ರಹ



ಬೆಂಗಳೂರು: ಹಲವಾರು ವರ್ಷಗಳಿಂದ ವರ್ತೂರು ಮುಖ್ಯರಸ್ತೆಯನ್ನು ವಿಸ್ತರಣೆ ಮಾಡದೇ ಇರುವುದರಿಂದ ವಾಹನದಟ್ಟಣೆ ಹೆಚ್ಚಾಗಿದೆ. ಕೂಡಲೇ ರಸ್ತೆ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸ್ವಾಭಿಮಾನಿ ಬಳಗ ಮತ್ತು ವರ್ತೂರು ನಾಗರಿಕರು ಪ್ರತಿಭಟನೆ ನಡೆಸಿದರು.

ವರ್ತೂರು ಸರ್ಕಾರಿ ಕಾಲೇಜು ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಸಿ, ಬಿಬಿಎಂಪಿಗೆ ಮನವಿ ಸಲ್ಲಿಸಿದರು.

ವರ್ತೂರು, ಗುಂಜೂರು, ಸೋರಹುಣಸೆ, ಮಧುರಾನಗರ ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಅನೇಕ ಬಡಾವಣೆಗಳು, ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗಿವೆ. ರಸ್ತೆ ಮಾತ್ರ ಹಳೇಯದ್ದೇ ಇದ್ದು, ವಾಹನ ಸಂಚಾರ ಕಷ್ಟವಾಗಿದೆ. ರಸ್ತೆಗೆ ಹೊಂದಿಕೊಂಡಿರುವ ಕಟ್ಟಡಗಳ ಮಾಲೀಕರು 100 ಅಡಿಗಳ ಸ್ಥಳ ಬಿಟ್ಟುಕೊಡಲು ಒಪ್ಪಿದ್ದರೂ ರಸ್ತೆ ವಿಸ್ತರಣೆ ಕಾಮಗಾರಿ ನಡೆಸುತ್ತಿಲ್ಲ ಎಂದು ಪ್ರತಿಭಟನಕಾರರು ಆರೋಪಿಸಿದರು.

26ರಿಂದ 72 ಗಂಟೆಗಳ ಮಹಾ ಧರಣಿ

ಚಾಮರಾಜನಗರ: 'ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಮತ್ತು ರೈತ ವಿರೋಧಿ ಕೃಷಿ ಕಾಯ್ದೆಗಳ ರದ್ದತಿ, ಪರ್ಯಾಯ ನೀತಿ ಜಾರಿಗೆ ಒತ್ತಾಯಿಸಿ ಇದೇ 26ರಿಂದ 28ರವರೆಗೆ ವಿವಿಧ ಸಂಘಟನೆಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಹಮ್ಮಿಕೊಂಡಿವೆ.

ಒಳಉಡುಪಿನಲ್ಲಿ ಚಿನ್ನ ಕಳ್ಳ ಸಾಗಣೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ₹1.26 ಕೋಟಿ ಮೌಲ್ಯದ 2 ಕೆ.ಜಿ ಚಿನ್ನವನ್ನು ಸುಂಕ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಗುರುವಾರ ಬ್ಯಾಂಕಾಕ್‌ನಿಂದ ಬಂದ ಮೂವರು ಪ್ರಯಾಣಿಕರು ಹಾಗೂ ಕೊಲಂಬೊದಿಂದ ಬಂದ ಇಬ್ಬರು ಮಹಿಳೆಯರನ್ನು ತಪಾಸಣೆಗೆ ಒಳಪಡಿಸಿದಾಗ ಚಿನ್ನದ ಸರವನ್ನು ಅಂಗಿ ಕಾಲರ್ ಹಾಗೂ ಒಳಉಡುಪಿನಲ್ಲಿ ಇಟ್ಟುಕೊಂಡಿದ್ದದ್ದು ಪತ್ತೆಯಾಗಿದೆ. 966 ಗ್ರಾಂ ಚಿನ್ನದ ಸರ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹58.39 ಲಕ್ಷ ಎಂದು ಅಂದಾಜಿಸಲಾಗಿದೆ.

ಮಸ್ಕತ್‌ನಿಂದ ಶುಕ್ರವಾರ ಬಂದ ವ್ಯಕ್ತಿಯೊಬ್ಬರ ಬೆಲ್ಟ್‌ನಲ್ಲಿ 1.113 ಗ್ರಾಂ ತೂಕದ ಚಿನ್ನದ ಬಿಸ್ಕತ್ ಪತ್ತೆಯಾಗಿದೆ. ಇದರ ಮೌಲ್ಯ ₹68.18 ಲಕ್ಷ ಎಂದು ತಿಳಿದು ಬಂದಿದೆ.

ನಗರದಲ್ಲಿ ಇಂದು


ರಸ್ತೆ ಸುರಕ್ಷತೆ ಬೈಕ್‌ಥಾನ್: ಚಾಲನೆ: ರಂದೀಪ್, ಅತಿಥಿಗಳು: ಡಾ. ಶ್ರೀನಿವಾಸ ಗೌಡ, ಡಾ. ಪ್ರಭುದೇವ್ ಗೌಡ, ಡಾ. ಪರಿಮಳಾ ಮರೂರು, ಡಾ. ಉಮಾ ಎಂ., ಡಾ.ಐ. ಸುಶೀಲ್, ಆಯೋಜನೆ: ಜೀವರಕ್ಷಾ ಟ್ರಸ್ಟ್, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 6

'ಆಧುನಿಕ ತಂತ್ರಜ್ಞಾನಗಳ ನೈತಿಕಾ–ಕಾನೂನಾತ್ಮಕ ಆಯಾಮಗಳು' ಅಂತರರಾಷ್ಟ್ರೀಯ ಸಮ್ಮೇಳನ: ಮುಖ್ಯ ಅತಿಥಿ: ನ್ಯಾ.ಟಿ.ಜಿ. ಶಿವಶಂಕರೇಗೌಡ, ಅಧ್ಯಕ್ಷತೆ: ಅಶೋಕ್ ಶೆಟ್ಟರ್, ಆಯೋಜನೆ ಹಾಗೂ ಸ್ಥಳ: ಕೆಎಲ್‌ಇ ಕಾನೂನು ಕಾಲೇಜು, ಬೆಳಿಗ್ಗೆ 9.30

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ನಿಶಿತ್ ಜೈನ್, ಎನ್.ಆರ್. ಭಾನುಮೂರ್ತಿ, ಗೌರವ ಅತಿಥಿ: ಕೆ.ಎ. ಸುಜಿತ್ ಚಂದನ್, ಅಧ್ಯಕ್ಷತೆ: ಡಿ.ಪಿ. ನಾಗರಾಜ್, ಆಯೋಜನೆ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಸ್ಥಳ: ಆರ್.ವಿ. ಡೆಂಟಲ್ ಕಾಲೇಜ್, ಜೆ.ಪಿ. ನಗರ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ಉದ್ಯಮಶೀಲತೆ ದಿನಾಚರಣೆ ಸಮಾರಂಭ: ಮುಖ್ಯ ಅತಿಥಿ: ಸಿದ್ದರಾಮಯ್ಯ, ಗೌರವ ಅತಿಥಿ: ಎಂ.ಬಿ. ಪಾಟೀಲ, ಅಧ್ಯಕ್ಷತೆ: ಕೆ. ರತ್ನಪ್ರಭಾ, ಆಯೋಜನೆ: ಉಬುಂಟು ಮಹಿಳಾ ಉದ್ಯಮಿಗಳ ಸಂಘದ ಒಕ್ಕೂಟ, ಸ್ಥಳ: ರಾಡಿಸನ್ ಬ್ಲೂ ಹೋಟೆಲ್, ಬೆಳಿಗ್ಗೆ 10

ದಶಮಾನೋತ್ಸವ ಹಾಗೂ 'ಮಣ್ಣಿನ ಹಣತೆ' ಸಂಪುಟ 4 ಹಾಗೂ ಕೃತಿಯ ಇಂಗ್ಲಿಷ್ ಅವತರಣಿಕೆ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದ ನಾಥ ಸ್ವಾಮೀಜಿ, ಪುಸ್ತಕ ಬಿಡುಗಡೆ: ಎಚ್.ಡಿ. ದೇವೇಗೌಡ, ಇಂಗ್ಲಿಷ್ ಅವತರಣಿಕೆ ಬಿಡುಗಡೆ: ನ್ಯಾ. ಗೋಪಾಲಗೌಡ, 'ಅನ್ ಬಾಕ್ಸಿಂಗ್ ಬೆಂಗಳೂರು' ಕೃತಿ ಬಿಡುಗಡೆ: ಡಿ.ಕೆ. ಶಿವಕುಮಾರ್, ಆಯೋಜನೆ: ಸಾಹಿತ್ಯ ಸಂಗಮ ಟ್ರಸ್ಟ್, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ಬೆಳಿಗ್ಗೆ 10




ನಿರ್ಮಲಾನಂದನಾಥ ಸ್ವಾಮೀಜಿ

ಮೀಟ್ ಆ್ಯಂಡ್ ಗ್ರೀಟ್ ವಿತ್ ಸೆಲಿಬ್ರಿಟಿ: ಅತಿಥಿ: ಶಂಕರ್ ಬಿದರಿ, ಉಪಸ್ಥಿತಿ: ಲಕ್ಷ್ಮೀಶ್ ಹೆಗಡೆ ಸೋಂದಾ, ಆಯೋಜನೆ ಹಾಗೂ ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 10

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಬಿ.ಎಸ್. ಮೂರ್ತಿ, ಗೌರವ ಅತಿಥಿ: ಎನ್.ಆರ್. ಶೆಟ್ಟಿ, ಉಪಸ್ಥಿತಿ: ಎನ್.ವಿ. ಹೆಗಡೆ, ಆಯೋಜನೆ ಹಾಗೂ ಸ್ಥಳ: ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿದ್ಯಾಲಯ, ಯಲಹಂಕ, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಜಿ. ಶ್ರೀಧರ್, ಮುಖ್ಯ ಅತಿಥಿಗಳು: ಎಚ್.ಎಲ್. ಪುಷ್ಪ, ಶರತ್ ಲೋಹಿತಾಶ್ವ, ಅಧ್ಯಕ್ಷತೆ: ಎಂ. ವೆಂಕಟೇಶ, ಆಯೋಜನೆ: ಭಾಷಾಂತರ ನಿರ್ದೇಶನಾಲಯ ನೌಕರರ ಸಂಘ, ಸ್ಥಳ: ಭಾಷಾಂತರ ನಿರ್ದೇಶನಾಲಯ, ವಿವಿ ಗೋಪುರ, ಮಧ್ಯಾಹ್ನ 3

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಅಂಜುಂ ಪರ್ವೇಜ್, ವಿಶೇಷ ಆಹ್ವಾನಿತರು: ಉಪೇಂದ್ರ, ಧ್ರುವ ಸರ್ಜಾ, ಆಯೋಜನೆ: ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ, ಸ್ಥಳ: ಬೈಯ್ಯಪ್ಪನಹಳ್ಳಿ ಮೆಟ್ರೊ ನಿಲ್ದಾಣ, ಬೆಳಿಗ್ಗೆ 10



ಡಾ.ಸಿ.ಎನ್. ಮಂಜುನಾಥ್


25ನೇ ವಾರ್ಷಿಕೋತ್ಸವ ಸಮಾರಂಭ: ಮುಖ್ಯ ಅತಿಥಿಗಳು: ಡಾ. ಶಾಲಿನಿ ಚಂದ್ರಶೇಖರ್ ನಾಯಿ, ಜಿ.ಆರ್. ಗೋಪಿನಾಥ್, ಉಮಾ ನಂಬಿಯಾರ್, ಆಯೋಜನೆ: ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ರಾಯಲ್ ಆರ್ಕಿಡ್ ಹೋಟೆಲ್, ದೊಮ್ಮಲೂರು, ಬೆಳಿಗ್ಗೆ 10.30

ಸಮುದಾಯ ರಾಜ್ಯ ಸಮ್ಮೇಳನದ ಲಾಂಛನ ಬಿಡುಗಡೆ: ಅಚ್ಯುತ್, ಅಗ್ರಹಾರ ಕೃಷ್ಣಮೂರ್ತಿ, ಸಿ.ಕೆ. ಗುಂಡಣ್ಣ, ಮಂಜುಳಾ, ಸುಕನ್ಯಾ ಕೆ., ಲಕ್ಷ್ಮಿ ಚಂದ್ರಶೇಖರ್, 'ಘನತೆಯ ಬದುಕು: ಸಾಂಸ್ಕೃತಿಕ ಮಧ್ಯಪ್ರವೇಶ' ವಿಚಾರಗೋಷ್ಠಿ: ಉದ್ಘಾಟನೆ: ಮೂಡ್ನಾಕೂಡು ಚಿನ್ನಸ್ವಾಮಿ, ವಿಷಯ ವಿಸ್ತರಣೆ: ಬಿ. ಸುರೇಶ್, ಅಧ್ಯಕ್ಷತೆ: ಜಿ. ರಾಮಕೃಷ್ಣ, ಅಭಿಪ್ರಾಯ ಹಂಚಿಕೆ: ಜೆ. ಲೋಕೇಶ್, ಶಶಿಕಾಂತ್ ಯಡಹಳ್ಳಿ, ಗೌರಿ ದತ್ತು, ಬಹುಭಾಷಾ ಕವಿಗೋಷ್ಠಿ: ಕೆ. ಷರೀಫಾ, ಕಾಶಿನಾಥ ಅಂಬಲಗಿ, ಅಜಮ್ ಶಾಹೀದ್, ಚಾಂದಿನಿ, ಕೆ. ಮಹಂತೇಶ್, ಗಿರಿಧರ ಕಾರ್ಕಳ, ಎಸ್. ಮಂಜುನಾಥ್, ಶಿವಣ್ಣ, ಪ್ರಮೋದ ಕೆ.ಎಂ., ರಮೀಜ್ ತೊನ್ನಕ್ಕಲ್, ಆಯೋಜನೆ: ಸಮುದಾಯ ಕರ್ನಾಟಕ, ಸ್ಥಳ: ಸೌಹಾರ್ದ ಸಭಾಂಗಣ, ನಂ.1, ಮೊದಲನೆ ಅಡ್ಡರಸ್ತೆ, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ, ಮಧ್ಯಾಹ್ನ 3

'ಸುರ್ ತರಂಗ್' ಸಂಗೀತ ಕಾರ್ಯಕ್ರಮ: ಜಹೀರ್, ವಿದ್ಯಾ ವೆಂಕಟ್, ಮುಖ್ಯ ಅತಿಥಿ: ಪೂಜಾ ವೈದ್ಯನಾಥ್, ಆಯೋಜನೆ: ಸ್ವಾಸ್ತಿಕ್ಸ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಇಂದಿರಾನಗರ ಸಂಗೀತ ಸಭಾ, ಪುರಂದರ ಭವನ, ಎಚ್‌ಎಎಲ್ 2 ಹಂತ, ಸಂಜೆ 4

'ನನ್ನ ಧಾಟಿಯ ನೀನರಿಯೆ ನನ್ನ ಹಾಡೇ ಬೇರೆ' ಕಲ್ಯಾಣ್ ಕುಮಾರ್ ಅಭಿನಯದ ಚಲನಚಿತ್ರ ಗೀತೆಗಳ ಗಾಯನ: ರವಿರಾಜ್, ಅಚ್ಯುತ್ ಸಂಕೇತಿ ಸಂಪದ, ಭಾರತಿ ಸಂಗ್ರಿ, ರಮಾ ಪ್ರಸನ್ನ ಬಿ.ಜಿ., ಬಿ.ಎಂ. ವಿಜಯಲಕ್ಷ್ಮಿ, ಹೇಮಾ ರಘು ಪಿ.ಆರ್., ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4.30

'ಕನ್ನಡ ಕಲರವ' ರಾಜ್ಯೋತ್ಸವ ಕಾರ್ಯಕ್ರಮ: ಉದ್ಘಾಟನೆ: ನಾಗತಿಹಳ್ಳಿ ಚಂದ್ರಶೇಖರ್, ಮುಖ್ಯ ಅತಿಥಿಗಳು: ಜಯಕರ್ ಎಸ್. ಎಂ., ಎಲ್.ಎನ್. ಮುಕುಂದರಾಜ್, ಶೇಖ್ ಲತೀಫ್, ಅಧ್ಯಕ್ಷತೆ: ಸುರೇಶ್ ವಿ. ನಾಡಗೌಡರ್, ಆಯೋಜನೆ ಹಾಗೂ ಸ್ಥಳ: ಕಾನೂನು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10



ನಾಗತಿಹಳ್ಳಿ ಚಂದ್ರಶೇಖರ್

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿಗಳು: ದು. ಸರಸ್ವತಿ, ಹುಲಿಕುಂಟೆ ಮೂರ್ತಿ, ಅಧ್ಯಕ್ಷತೆ: ವಸಂತ, ಆಯೋಜನೆ ಹಾಗೂ ಸ್ಥಳ: ಅಂಚೆ ಮನರಂಜನಾ ಕೂಟ, ಆರ್.ಟಿ. ನಗರ ಪ್ರಧಾನ ಅಂಚೆ ಕಚೇರಿ, ಸಂಜೆ 4.30

ಸುವರ್ಣ ಕರ್ನಾಟಕ ಸಂಭ್ರಮ ಮತ್ತು ಕರ್ನಾಟಕ ರಾಜ್ಯೋತ್ಸವ ಸಂಭ್ರಮ: ಉದ್ಘಾಟನೆ: ನ್ಯಾ.ಪಿ.ಬಿ. ವರಾಳೆ, ಮುಖ್ಯ ಅತಿಥಿಗಳು: ನ್ಯಾ. ಕೃಷ್ಣ ಎಸ್. ದೀಕ್ಷಿತ್, ಎಂ.ಟಿ. ನಾಣಯ್ಯ, ಅಧ್ಯಕ್ಷತೆ: ಎನ್. ದೇವದಾಸ್, ಸನ್ಮಾನಿತರು: ಉದಯ ಹೊಳ್ಳ, ಆಯೋಜನೆ: ಗಾನಗಂಗಾ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5

ಕರ್ನಾಟಕ ರಾಜ್ಯೋತ್ಸವ ಸಮಾರಂಭ ಹಾಗೂ 'ಮಲ್ಲೇಶ್ವರಂ ರತ್ನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಯದುಗಿರಿ ಯತಿ ರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಮಲ್ಲೇಶ್ವರಂ 5ಕೆ ಫೌಂಡೇಶನ್, ಸ್ಥಳ: ರಾಮಾನುಜ ಸಂಸ್ಕೃತಿ ಭವನ, ಯದುಗಿರಿ ಯತಿರಾಜ ಮಠ, ಮಲ್ಲೇಶ್ವರ, ಸಂಜೆ 6.30

'ಗುಂಡು ಬಳಗ' ಸಾಮಾಜಿಕ ಹಾಸ್ಯ ನಾಟಕ ಪ್ರದರ್ಶನ: ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಬಾಲಕೃಷ್ಣೇಗೌಡ, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಮನಸ್ವಿ, ವಾದ್ಯ ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೀರಾಂಜನೇಯ ಸ್ವಾಮಿ ದೇವಸ್ಥಾನ, ಗೋವಿಂದರಾಜನಗರ ಪೊಲೀಸ್ ಠಾಣೆಯ ಹತ್ತಿರ, ಸರಸ್ವತಿನಗರ, ಸಂಜೆ 6.30

'ಪುಕ್ಕಟೆ ಸಲಹೆ' ಹಾಸ್ಯ ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡ, ಸ್ಥಳ: ಡಾ: ಸಿ ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7.30

ಬಿಡಿಎ ಅಧಿಕಾರಿಗಳ ಜೊತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ

ಖಾಸಗಿ ಸಹಭಾಗಿತ್ವದಲ್ಲಿ ಪಿಆರ್‌ಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಎಲ್ಲ ರೀತಿಯ ಮಾಹಿತಿ ಹಾಗೂ ದಾಖಲೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸಿದ್ಧಪಡಿಸಿಕೊಂಡು ನವೆಂಬರ್ ಅಂತ್ಯದ ವೇಳೆಗೆ ಟೆಂಡರ್ ಕರೆಯಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಬಿಡಿಎ ಕೇಂದ್ರ ಕಚೇರಿಯಲ್ಲಿ ವಿವಿಧ ಯೋಜನೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದರು.

ಭೂಸ್ವಾಧೀನ, ಅದಕ್ಕೆ ಪರಿಹಾರ ಸೇರಿದಂತೆ ಖಾಸಗಿಯವರಿಗೆ ಅನುಕೂಲವಾಗುವ ಎಲ್ಲ ವಿಷಯಗಳ ಬಗ್ಗೆ ಅಂತಿಮ ಯೋಜನೆ ತಯಾರಿಸಿಕೊಂಡು ಅದರಂತೆ ಟೆಂಡರ್ ಕರೆಯಲು ಸೂಚಿಸಿದರು.

ಎಲೆಕ್ಟ್ರಾನಿಕ್ ಸಿಟಿ ಪ್ರದೇಶದಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದ್ದು, ಪಿಆರ್‌ಆರ್–2 ಯೋಜನೆ ಬಗ್ಗೆ ಸಾಧ್ಯಾಸಾಧ್ಯತೆ ವರದಿ ತಯಾರಿಸಬೇಕು. ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆವರೆಗೆ ಪರ್ಯಾಯ ರಸ್ತೆ ನಿರ್ಮಿಸುವ ಯೋಜನೆ ಸಿದ್ಧಪಡಿಸಲೂ ಡಿಸಿಎಂ ತಿಳಿಸಿದರು.

ಶಿವರಾಮಕಾರಂತ ಬಡಾವಣೆಯ ಪ್ರಗತಿ ಹಾಗೂ ನಿವೇಶನ ಹಂಚಿಕೆ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯೊಂದಿಗೆ ಶಿವಕುಮಾರ್ ಚರ್ಚಿಸಿದರು. ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್, ಸಮಿತಿಯ ಸದಸ್ಯರಾದ ಜಯಕರ್ ಜರೋಮ್, ಡಾ. ಎಸ್.ಟಿ. ರಮೇಶ್, ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಬಿಡಿಎ ಆಯುಕ್ತ ಎನ್. ಜಯರಾಮ್, ಕಾರ್ಯದರ್ಶಿ ವೈ.ಬಿ. ಶಾಂತರಾಜು ಉಪಸ್ಥಿತರಿದ್ದರು.

ಹೆಬ್ಬಾಳ ಜಂಕ್ಷನ್ ಮೇಲ್ಸೇತುವೆ ಅಗಲೀಕರಣ, ವಸತಿ ಯೋಜನೆಗಳು, ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾಮಗಾರಿಯ ಪ್ರಗತಿ, ಪರಿಷ್ಕೃತ ಮಹಾ ಯೋಜನೆ-2015 ಮತ್ತು ಇತರೆ ಕಾಮಗಾರಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಡಿಸಿಎಂ ಚರ್ಚೆ ನಡೆಸಿದರು.

ಬಿಡಿಎ ಫ್ಲ್ಯಾಟ್‌ಗಳ ದರ ಹೆಚ್ಚಳ!

ಬಿಡಿಎ ಅಭಿವೃದ್ಧಿಪಡಿಸಿರುವ ಫ್ಲ್ಯಾಟ್‌ಗಳ ದರವನ್ನು ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಹೆಚ್ಚಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಮಾರ್ಗಸೂಚಿ ದರದಂತೆ ಹಿಂದೆ ನಿರ್ಧರಿಸಲಾಗಿರುವ ಫ್ಲ್ಯಾಟ್‌ಗಳ ದರ ಕಡಿಮೆಯಾಗಿದ್ದು, ಈಗಿನ ಮಾರ್ಗಸೂಚಿ ದರದಂತೆ ಪುನರ್‌ನಿಗದಿ ಮಾಡಬೇಕು ಎಂದು ಅಧಿಕಾರಿಗಳ ಸಭೆಯಲ್ಲಿ ಅವರು ಹೇಳಿದ್ದಾರೆ.

‘ಬಿಡಿಎ ಫ್ಲ್ಯಾಟ್‌ಗಳು ಖಾಸಗಿಯವರೊಂದಿಗೆ ಸ್ಪರ್ಧೆ ನೀಡುವಂತಿರಬೇಕು. ಅವರ ಗುಣಮಟ್ಟ ಹಾಗೂ



ಪ್ರಚಾರವನ್ನು ಬಿಡಿಎ ಕೂಡ ಮಾಡಬೇಕು. ಅಲ್ಲದೆ, ಅಪಾರ್ಟ್‌ಮೆಂಟ್ ನಿರ್ಮಾಣಕ್ಕೂ ಮುನ್ನವೇ ‘ಪ್ರೀ-ಲಾಂಚ್ ಆಫರ್’ ನೀಡಿ, ನೋಂದಣಿ ಮಾಡಿಸಿಕೊಳ್ಳುವ ಯೋಜನೆಯನ್ನೂ ಅಳವಡಿಸಿಕೊಳ್ಳಬೇಕು’ ಎಂದು ಶಿವಕುಮಾರ್ ಸೂಚಿಸಿದ್ದಾರೆ.

‘ಭವಿಷ್ಯದಲ್ಲಿ ವಸತಿ ಯೋಜನೆಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಹೀಗಾಗಿ, ವಸತಿ ಯೋಜನೆಗಳತ್ತ ಹೆಚ್ಚಿನ ಆಸಕ್ತಿ ವಹಿಸಿ, ಸ್ಪರ್ಧಾತ್ಮಕ ಗುಣಮಟ್ಟ ಹಾಗೂ ದರದಲ್ಲಿ ಫ್ಲ್ಯಾಟ್‌ಗಳನ್ನು ನೀಡಬೇಕು. ಈ ಬಗ್ಗೆ ಹೆಚ್ಚಿನ ಯೋಜನೆಗಳನ್ನು ರೂಪಿಸಿ’ ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ.


ಪಾರಂಪರಿಕ ಜಾಗ, ಹಸಿರು ವನಗಳ ಸಮೀಕ್ಷೆಗೆ ಸೂಚನೆ

‘ಜೀವವೈವಿಧ್ಯ ದಾಖಲಾತಿ’ ಪುನರ್ ವಿಮರ್ಶೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಪಾರಂಪರಿಕ ಸ್ಥಳಗಳು, ಹಸಿರು ವನಗಳ ಬಗ್ಗೆ ಸಮೀಕ್ಷೆ ನಡೆಸಿ ವರದಿ ಸಲ್ಲಿಸಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚಿಸಿದರು.

‘ಜೀವವೈವಿಧ್ಯ ದಾಖಲಾತಿ’ಗೆ ಸಂಬಂಧಿಸಿದಂತೆ ಶುಕ್ರವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.



2020ನೇ ಸಾಲಿನಲ್ಲಿ ಪ್ರಕಟಿಸಿರುವ ‘ಜೀವವೈವಿಧ್ಯ ದಾಖಲಾತಿ’ಯನ್ನು ಪುನರ್‌ವಿಮರ್ಶಿಸಬೇಕು. ಅದಕ್ಕೆ ಸಲಹೆ, ಸೂಚನೆಗಳನ್ನು ಸ್ವೀಕರಿಸಿ, ದಾಖಲಾತಿಯನ್ನು ನವೀಕರಿಸಬೇಕು ಎಂದು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರೂ ಆದ ರಾಕೇಶ್ ಸಿಂಗ್ ಹೇಳಿದರು.

‘ಪಾರಂಪರಿಕ ಜಾಗ, ವನಗಳ ಸಮೀಕ್ಷೆ ನಡೆಸಬೇಕು. ಕ್ರಮಬದ್ಧವಾಗಿ ಜೀವವೈವಿಧ್ಯ ನಿರ್ವಹಣೆಗೆ ಬೇಕಾಗುವ ಎಲ್ಲಾ ಅಗತ್ಯ ಸೌಲಭ್ಯವನ್ನು ಪಾಲಿಕೆ ಒದಗಿಸಲಿದೆ’ ಎಂದು ತಿಳಿಸಿದರು.

ಜೀವವೈವಿಧ್ಯ ನಿರ್ವಹಣಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ‘ನಗರದಲ್ಲಿ ಕೃಷಿ, ಅರಣ್ಯ ಹಾಗೂ ವನ್ಯಜೀವಿ ವಿಭಾಗದಲ್ಲಿ ಜೀವವೈವಿಧ್ಯ ನಿರ್ವಹಣೆ ಸಂಬಂಧಿಸಿದಂತೆ ಸಂಪೂರ್ಣ ದಾಖಲಾತಿ ತಯಾರಿಸಬೇಕು’ ಎಂದು ಸೂಚಿಸಿದರು.

ನಗರದ ನರ್ಸರಿಗಳಲ್ಲಿನ ವಿಶಿಷ್ಟವಾದ ತಳಿಗಳ ಸಮೀಕ್ಷೆ ನಡೆಸಬೇಕು. ಬೆಂಗಳೂರಿನ ವಾತಾವರಣಕ್ಕೆ ತಕ್ಕಂತೆ ಬೆಳೆಯುತ್ತಿರುವ ಹೊಸ ತಳಿಗಳ ಪಟ್ಟಿ ಮಾಡಬೇಕು. ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಮರಗಳ ಸಮೀಕ್ಷೆ ನಡೆಸಿ ಯಾವ ಮರಗಳು ವಿನಾಶದ ಅಂಚಿನಲ್ಲಿದೆ, ಯಾವ ಮರಗಳು ಹೆಚ್ಚಿವೆ ಎಂಬುದರ ಬಗ್ಗೆ ವಿವರ ಪಡೆಯಬೇಕು ಎಂದು ಹೇಳಿದರು.

ವನ್ಯಜೀವಿ ಸಂಬಂಧಿಸಿದಂತೆ ಅಪಾಯದ ಅಂಚಿನಲ್ಲಿರುವ ಪಕ್ಷಿಗಳು ಹಾಗೂ ವಿಶಿಷ್ಟ ಜೀವಿಗಳ ಬಗ್ಗೆ ಸಮೀಕ್ಷೆ ನಡೆಸಬೇಕು. ಅವುಗಳ ಉಳಿವಿಗೆ ಎಲ್ಲಾ ರೀತಿಯ ಕ್ರಮಗಳ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡಲು ಸೂಚಿಸಿದರು.

ಜೀವವೈವಿಧ್ಯ ಉಳಿಸಲು ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ನವೀಕರಿಸಲು ಆಸಕ್ತ ಸ್ವಯಂಸೇವಕರನ್ನು ಒಳಗೊಂಡ ತಂಡ ರೂಪಿಸಬೇಕು ಎಂದು ತಿಳಿಸಿದರು.

ಅರಣ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಜಿ.ಎಲ್. ಸ್ವಾಮಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಾದ ಚಂದ್ರಶೇಖರ್, ಸಮಿತಿ ಸದಸ್ಯರಾದ ಅಕ್ಷಯ್ ಹೆಬ್ಲೀಕರ್, ಡಾ. ನಂದಿನಿ.ಎನ್., ಡಾ. ಉಷಾ ಆನಂದಿ, ವಿಜಯ್ ನಿಶಾಂತ್, ಭಾರ್ಗವ್.ಆರ್ ಸಭೆಯಲ್ಲಿ ಭಾಗವಹಿಸಿದ್ದರು.



ನಗರದಲ್ಲಿ ಶುಕ್ರವಾರ ‘ಡಾ. ಎಸ್ ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ’ ವತಿಯಿಂದ ಹುಬ್ಬಳ್ಳಿಯ ಸಂಶೋಧಕ ಬಿ.ವ್ಹಿ. ಶಿರೂರ ಅವರಿಗೆ ವಿದ್ಯಾಶಂಕರ ಪ್ರಶಸ್ತಿ ಮತ್ತು ಬೆಳಗಾವಿಯ ಪ್ರಕಾಶ್ ಗಿರಿಮಲ್ಲನವರ ಅವರಿಗೆ ವಿದ್ಯಾಶಂಕರ ಪುರಸ್ಕಾರ ನೀಡಿ ಗೌರವಿಸಲಾಯಿತು. ವಿದ್ಯಾಶಂಕರ ಅವರ ಸೊಸೆ ರೂಪ ಮಹೇಶ್, ಸಂಶೋಧಕ ಹಂಪ ನಾಗರಾಜಯ್ಯ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸಿ. ನಾಗಭೂಷಣ, ಚಿಂತಕ ಕೆ. ಮರುಳಸಿದ್ದಪ್ಪ, ‘ಡಾ. ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ’ದ ಅಧ್ಯಕ್ಷ ನಲ್ಲೂರು ಪ್ರಸಾದ್ ಆರ್.ಕೆ, ವಿದ್ಯಾಶಂಕರ ಅವರ ಮಗ ಮಹೇಶ್, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಪ್ರತಿಷ್ಠಾನದ ಜಂಟಿ ಕಾರ್ಯದರ್ಶಿ ನಾಗವೇಂದ್ರಸ್ವಾಮಿ ಚಿದರವಳ್ಳಿ ಮತ್ತು ಸದಸ್ಯ ಬಿ. ನಂಜುಂಡಸ್ವಾಮಿ ಇದ್ದರು – ಪ್ರಜಾವಾಣಿ ಚಿತ್ರ

ಸವಾರ ಸಾವು: ಅಪರಾಧಿಗೆ 60 ದಿನ ಜೈಲು ಶಿಕ್ಷೆ

ಬೆಂಗಳೂರು: ಶಿವಾಜಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಬೈಕ್ ಸವಾರ ವಿ.ಎಸ್. ರಾಜ್‌ಕುಮಾರ್ (68) ಮೃತಪಟ್ಟ ಪ್ರಕರಣದ ಅಪರಾಧಿ ಪ್ರಕಾಶ್ ಕುಂಬಾರ್‌ಗೆ 60 ದಿನಗಳ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ಎಂಎಂಟಿಸಿ ಸಂಚಾರ ನ್ಯಾಯಾಲಯ ಆದೇಶ ಹೊರಡಿಸಿದೆ.

‘ಕೆ.ಆರ್. ರಸ್ತೆ– ಕಬ್ಬನ್ ರಸ್ತೆ ಜಂಕ್ಷನ್‌ನಲ್ಲಿ 2017ರ ಮೇ 12ರಂದು ನಡೆದಿದ್ದ ಅಪಘಾತ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಶಿಕ್ಷೆ ಜೊತೆಯಲ್ಲಿ ಅಪರಾಧಿಗೆ ₹ 11,500 ದಂಡವನ್ನೂ ವಿಧಿಸಿದೆ’ ಎಂದು ಪೊಲೀಸರು ಹೇಳಿದರು.

‘ವಿ.ಎಸ್. ರಾಜ್‌ಕುಮಾರ್ ಅವರು ತಮ್ಮ ಬೈಕ್‌ನಲ್ಲಿ (ಕೆಎ 03 ಎಚ್‌ಜೆಡ್ 1053) ಕಮರ್ಷಿಯಲ್ ಸ್ಟ್ರೀಟ್ ಕಡೆಯಿಂದ ಎಂ.ಜಿ.ರಸ್ತೆ ಕಡೆಗೆ ಹೊರಟಿದ್ದರು. ಅಪರಾಧಿ ಪ್ರಕಾಶ್, ತಮ್ಮ ಬೈಕ್‌ನಲ್ಲಿ (ಕೆಎ 53 ಇಎಚ್ 6808) ಕಬ್ಬನ್ ರಸ್ತೆಯ ಮಣಿಪಾಲ್ ಸೆಂಟರ್ ಕಡೆಯಿಂದ ಬಿ.ಆರ್.ವಿ ಜಂಕ್ಷನ್ ಕಡೆಗೆ ತೆರಳುತ್ತಿದ್ದರು.’

‘ಕೆಂಪು ಸಿಗ್ನಲ್ ಜಂಪ್ ಮಾಡಿದ್ದ ಪ್ರಕಾಶ್, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದರು. ಇದರಿಂದಾಗಿ ಪ್ರಕಾಶ್ ಅವರ ಬೈಕ್, ರಾಜ್‌ಕುಮಾರ್ ಅವರಿಗೆ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಗಾಯಗೊಂಡಿದ್ದ ರಾಜ್‌ಕುಮಾರ್ ಅವರು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಮೇ 17ರಂದು ಮೃತಪಟ್ಟಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಚಿಕ್ಕೋಡಿ ತಾಲ್ಲೂಕಿನ ಪ್ರಕಾಶ್ ವಿರುದ್ಧ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು’ ಎಂದು ಹೇಳಿದರು.

ದತ್ತಿ ಉಪನ್ಯಾಸಕ್ಕೆ ಪದ್ಮಾ ಶೇಖರ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಕಮಲಾ ಹಂಪನಾ ಹೆಸರಿನ ವಿಶೇಷ ದತ್ತಿ ಉಪನ್ಯಾಸಕ್ಕೆ ಸಂಶೋಧಕಿ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪದ್ಮಾ ಶೇಖರ್ ಆಯ್ಕೆಯಾಗಿದ್ದಾರೆ.

ಕಮಲಾ ಹಂಪನಾ ಅವರು ಸಂಘದಲ್ಲಿ ದತ್ತಿನಿಧಿ ಸ್ಥಾಪಿಸಿದ್ದು, ಪ್ರತಿ ವರ್ಷ ಅವರ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸಕ್ಕೆ ಸಂಶೋಧಕರೊಬ್ಬರನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ತಿಳಿಸಿದ್ದಾರೆ.

ನಾಡೋಜ ಕಮಲಾ ಹಂಪನಾ ಸಾಹಿತ್ಯ ವೇದಿಕೆ ನೀಡುವ ‘ಕಮಲಾ ಹಂಪನಾ ಪ್ರಶಸ್ತಿ’ಗೆ ಕವಿ ಮಾಹೆರ್ ಮನ್ಸೂರ್ ಮತ್ತು ಸಾಮಾಜಿಕ ಹೋರಾಟಗಾರ್ತಿ ದು.ಸರಸ್ವತಿ ಆಯ್ಕೆಯಾಗಿದ್ದಾರೆ.


ವಿಶೇಷ ದತ್ತಿ ಉಪನ್ಯಾಸ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಇದೇ 19ರಂದು ಬೆಳಿಗ್ಗೆ 10 ಗಂಟೆಗೆ ಗಾಂಧಿ ಭವನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಪದ್ಮಾ ಶೇಖರ್



ದು. ಸರಸ್ವತಿ



ಮಾಹೆರ್ ಮನ್ಸೂರ್


ಕ್ರಿಕೆಟ್ ಬೆಟ್ಟಿಂಗ್: ಬುಕ್ಕಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿ ಸತೀಶ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಸತೀಶ್, ಬೆಟ್ಟಿಂಗ್ ಬುಕ್ಕಿ. ಈತನಿಂದ ₹ 1.50 ಲಕ್ಷ ನಗದು ಜಪ್ತಿ ಮಾಡಲಾಗಿದೆ. ₹ 41.71 ಲಕ್ಷ ಹಣವಿರುವ 3 ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತಗೊಳಿಸಲಾಗಿದೆ. ಪ್ರಮುಖ ಬುಕ್ಕಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬೆಟ್ಟಿಂಗ್‌ಗಾಗಿ ಜಾಲತಾಣ ಹಾಗೂ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿರುವ ಆರೋಪಿಗಳು, ಯೂಸರ್ ನೇಮ್ – ಪಾಸ್‌ವರ್ಡ್ ಮೂಲಕ ಖಾತೆ ತೆರೆದಿದ್ದರು. ನಂತರ, ಹಲವರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಇದಕ್ಕಾಗಿ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನೂ ರಚಿಸಿಕೊಂಡಿದ್ದರು’ ಎಂದು ತಿಳಿಸಿವೆ.



‘ವಿಶ್ವಕಪ್ ಆರಂಭಕ್ಕೂ ಮುನ್ನ ಪ್ರಮುಖ ಬುಕ್ಕಿ, ಇತರೆ ಆರೋಪಿಗಳಿಗೆ ತರಬೇತಿ ನೀಡಿದ್ದ. ವಿಶ್ವಕಪ್ ಕ್ರಿಕೆಟ್ ಆರಂಭದಿಂದ ಇದುವರೆಗೂ ಆರೋಪಿಗಳು, ಲಕ್ಷಾಂತರ ರೂಪಾಯಿ ಬೆಟ್ಟಿಂಗ್ ನಡೆಸಿದ್ದರೆಂಬುದು ತನಿಖೆಯಿಂದ ತಿಳಿದುಬಂದಿದೆ’ ಎಂದಿವೆ.

‘ಶಂಕರಪುರ ಪೊಲೀಸ್ ಠಾಣೆ ವ್ಯಾಪ್ತಿಯ ನ್ಯಾಷನಲ್ ಕಾಲೇಜು ಮುಂಭಾಗದಲ್ಲಿ ಬೆಟ್ಟಿಂಗ್‌ನಲ್ಲಿ ತೊಡಗಿದ್ದಾಗಲೇ ಸತೀಶ್‌ನನ್ನು ಬಂಧಿಸಲಾಗಿದೆ. ಈತನಿಂದ 6 ಮೊಬೈಲ್ ಹಾಗೂ 1 ಟ್ಯಾಬ್ ಸಹ ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ವಂಡರ್‌ಲಾ: ಒಂದು ಟಿಕೆಟ್ ಖರೀದಿಸಿದರೆ ಮತ್ತೊಂದು ಉಚಿತ

ಬೆಂಗಳೂರು: ನ. 19ರಂದು ಪುರುಷರ ದಿನದ ಅಂಗವಾಗಿ ವಂಡರ್‌ಲಾ ವಿಶೇಷ ಕೊಡುಗೆ ಘೋಷಿಸಿದ್ದು, ಒಬ್ಬ ಪುರುಷ ಒಂದು ಟಿಕೆಟ್ ಖರೀದಿಸಿದರೆ ಮತ್ತೊಬ್ಬರಿಗೆ ಉಚಿತ ಟಿಕೆಟ್ ನೀಡಲಾಗುತ್ತಿದೆ.

ಈ ಕೊಡುಗೆ ಪಡೆಯಲು ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸಬೇಕೆಂದು ವಂಡರ್‌ಲಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

‘ಅಮ್ಯೂಸ್‌ಮೆಂಟ್ ಪಾರ್ಕ್ ವಂಡರ್ಲಾ ಹಾಲಿಡೇಸ್ ಲಿಮಿಟೆಡ್ ವತಿಯಿಂದ ಪುರುಷರ ದಿನದಂದು ವಿಶೇಷ ಸ್ಪರ್ಧೆ ಆಯೋಜಿಸಲಾಗುತ್ತಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆಲ್ಲುವ 100 ಮಂದಿಗೆ ಬೆಂಗಳೂರು, ಕೊಚ್ಚಿ ಅಥವಾ ಹೈದರಾಬಾದ್ ಉದ್ಯಾನಗಳಿಗೆ ಉಚಿತ ಟಿಕೆಟ್ ಬಹುಮಾನವಾಗಿ ನೀಡಲಾಗುವುದು’ ಎಂದು ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಳ್ಳಿ ಹೇಳಿದ್ದಾರೆ.

ಟಿಕೆಟ್ ಕಾಯ್ದಿರಿಸಲು: https://bookings.wonderla.com

ಉಪನ್ಯಾಸಕರೊಬ್ಬರ ಕಿರುಕುಳ ಆರೋಪ; ವಿದ್ಯಾರ್ಥಿ ಆತ್ಮಹತ್ಯೆ


ಶಿಡ್ಲಘಟ್ಟ/ಚಿಕ್ಕಬಳ್ಳಾಪುರ: ತನ್ನ ಆತ್ಮಹತ್ಯೆಗೆ ಉಪನ್ಯಾಸಕರೊಬ್ಬರ ಕಿರುಕುಳ ಕಾರಣ ಎಂದು ಆರೋಪಿಸಿ ವಿಡಿಯೊ ಮಾಡಿ ವಿದ್ಯಾರ್ಥಿಯೊಬ್ಬ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಶಿಡ್ಲಘಟ್ಟ ತಾಲ್ಲೂಕಿನ ಮಲ್ಲಹಳ್ಳಿಯಲ್ಲಿ ಗುರುವಾರ ನಡೆದಿದೆ.

ಚಿಕ್ಕಬಳ್ಳಾಪುರ ಬಿಜಿಎಸ್ ಡಿಪ್ಲೊಮಾ ಕಾಲೇಜಿನ ವಿದ್ಯಾರ್ಥಿ ಗಜೇಂದ್ರ (18) ಆತ್ಮಹತ್ಯೆ ಮಾಡಿಕೊಂಡವರು. ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸಾವಿನ ನಂತರ ಪೋಷಕರು ಗಜೇಂದ್ರನ ಮೊಬೈಲ್ ಪರಿಶೀಲಿಸಿದ ವೇಳೆ ವಿಡಿಯೊ ಸಿಕ್ಕಿದೆ.

ರಸಸ್ವಾದ

ಹಾಗಲದ ಖಾದ್ಯಗಳು

ತಿನ್ನಲು ಕಹಿ, ಆರೋಗ್ಯಕ್ಕೆ ಸಿಹಿ ಎಂದೇ ಹಾಗಲಕಾಯಿಯನ್ನು ಗುರುತಿಸುವುದು. ಕೆಲವು ಪ್ರದೇಶಗಳಲ್ಲಿ ಪಿತೃಪಕ್ಷ ಕಾಲದಲ್ಲಿ ಹಾಗಲದಿಂದ ತಯಾರಾದ ಅಡುಗೆಗಳಿಗೆ ವಿಶೇಷ ಮಾನ್ಯತೆ. ಎಳೆಯ ಹಾಗಲಕಾಯಿಯಲ್ಲಿ ರುಚಿಯಾದ ಖಾದ್ಯಗಳನ್ನು ತಯಾರಿಸಿ ನಿತ್ಯದ ಅಡುಗೆಯನ್ನು ವಿಶೇಷವಾಗಿಸಬಹುದು. ಇದರ ರೆಸಿಪಿಯನ್ನು ಕೆ.ವಿ.ರಾಜಲಕ್ಷ್ಮಿ ನೀಡಿದ್ದಾರೆ.



ಹಾಗಲಕಾಯಿರಾಯತ

ಬೇಕಾಗುವ ಸಾಮಗ್ರಿ: ಸಣ್ಣಗೆ ಹೆಚ್ಚಿ, ಬೇಯಿಸಿದ ಹಾಗಲ ಕಾಯಿ 1/2 ಕಪ್, ಹಸಿಶುಂಠಿ ತುರಿ 1/2 ಚಮಚ, ತೆಂಗಿನ ತುರಿ 1 ಚಮಚ, ಮೊಸರು 1 ಕಪ್, 1/2ಚಮಚ ಸಕ್ಕರೆ, ರುಚಿಗೆ ತಕ್ಕಷ್ಟುಉಪ್ಪು.

ಮಾಡುವ ವಿಧಾನ: ತೆಂಗಿನತುರಿ, ಶುಂಠಿ, ಸಕ್ಕರೆ, ಉಪ್ಪು ಸೇರಿಸಿ ಅರೆದು ಮೊಸರಿನೊಂದಿಗೆ ಮಿಶ್ರಣ ಮಾಡಿಕೊಳ್ಳಿ. ನಂತರ ಇದನ್ನು ಬೆಂದ ಹಾಗಲಕ್ಕೆ ಸೇರಿಸಿ ಚೆನ್ನಾಗಿ ಕೈಯಾಡಿಸಿ, ಕೊತ್ತಂಬರಿ ಸೊಪ್ಪು ಉದುರಿಸಿ, ಜೀರಿಗೆ-ಇಂಗಿನ ಒಗ್ಗರಣೆ ಕೊಡಿ.



ಹಾಗಲದ ಪೋಹಾ

ಬೇಕಾಗುವ ಸಾಮಗ್ರಿ: ಮೀಡಿಯಂ ಅವಲಕ್ಕಿ 2 ಕಪ್,ಸಣ್ಣಗೆ ಹೆಚ್ಚಿ ಬೇಯಿಸಿದ ಹಾಗಲ ಕಾಯಿ 1/2 ಕಪ್, ಹಸಿರುಮೆಣಸಿನಕಾಯಿ ಸೀಳು 8-10,ಕರಿಬೇವು ಸ್ವಲ್ಪ, ಚಿಟಿಕೆ ಅರಿಶಿನ, ರುಚಿಗೆ ತಕ್ಕಷ್ಟು ಉಪ್ಪು. (ನಿಂಬೆರಸ 1/2 ಚಮಚ ಐಚ್ಛಿಕ)

ಮಾಡುವ ವಿಧಾನ: ಅವಲಕ್ಕಿಯನ್ನು ನೀರಿನಲ್ಲಿ ತೊಳೆದು ಬಸಿದುಕೊಳ್ಳಿ. ಬಾಣಲಿಯಲ್ಲಿ ಸಾಸಿವೆ ಸಿಡಿಸಿ, ಅರಿಶಿನ, ಹಸಿಮೆಣಸಿನಕಾಯಿ,ಬೇಯಿಸಿದ ಹಾಗಲ ಕಾಯಿ,ಕರಿಬೇವು ಹಾಕಿ ಬಾಡಿಸಿ, ನಂತರ ಅವಲಕ್ಕಿ, ಉಪ್ಪು ಸೇರಿಸಿ ಎರಡು ನಿಮಿಷ ಸಣ್ಣ ಉರಿಯಲ್ಲಿ ಕೈಯಾಡಿಸಿ, ಉರಿ ಆರಿಸಿ ನಿಂಬೆ ರಸ ಬೆರಸಿ ಮಿಶ್ರಣ ಮಾಡಿ.

ಹಾಗಲ- ಬೇಳೆ ಪಲ್ಯ

ಬೇಕಾಗುವ ಸಾಮಗ್ರಿ: ಬೇಯಿಸಿದ ಕಡಲೆಬೇಳೆ 1 ಕಪ್,ಬೇಯಿಸಿದ ಹಾಗಲ ಕಾಯಿ 1ಕಪ್,ತೆಂಗಿನ ತುರಿ 1/2 ಕಪ್, 3-4 ಒಣಮೆಣಸಿನಕಾಯಿ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ : ದಪ್ಪ ತಳದ ಬಾಣಲೆಗೆ ಸಾಸಿವೆ,ಉದ್ದಿನಬೇಳೆ, ಇಂಗು ಒಗ್ಗರಿಸಿ,ಮೆಣಸಿನಕಾಯಿ ಹುರಿದು, ಕಡಲೆಬೇಳೆ,ಹಾಗಲ ಕಾಯಿ, ತೆಂಗಿನ ತುರಿ ಮತ್ತು ಉಪ್ಪು ಸೇರಿಸಿ ಐದು ನಿಮಿಷ ಬಾಡಿಸಿ.



ಮಕ್ಕಳೊಂದಿಗೆ ಪಾಲಕರು ಭಾವನಾತ್ಮಕವಾಗಿ ಬೆರೆಯುವ ಮಹತ್ವವನ್ನು ಮಾನಸಿಕ ತಜ್ಞರಾಗಿರುವ ಅಕ್ಷರ ದಾಮ್ಲೆ ಇಲ್ಲಿ ವಿವರಿಸಿದ್ದಾರೆ...

ಮಕ್ಕಳೊಂದಿಗಿರಲಿ ಭಾವನಾತ್ಮಕ ಬೆಸುಗೆ



ಮಂಜುಶ್ರೀ ಕಡಕೋಳ

ಗ್ರಾಮೀಣ ಪ್ರದೇಶವಿರಲಿ, ನಗರವಿರಲಿ ಆಧುನಿಕ ಕಾಲದ ಪೋಷಕರ ಸವಾಲುಗಳು ಹಲವು. ಪುಟ್ಟ ಮಗುವಿನಿಂದ ಹಿಡಿದು ಶಾಲೆಗೆ ಹೋಗುವ ಮಕ್ಕಳ ಭವಿಷ್ಯ ರೂಪಿಸುವ ಹೊಣೆ ಬಹುತೇಕ ಪೋಷಕರದ್ದು. ಸಮಯದ ಅಭಾವ, ದುಡಿಮೆ, ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳುವಿಕೆಯ ಜತೆಗೇ ಮಕ್ಕಳ ದೈಹಿಕ-ಮಾನಸಿಕ ಬೆಳವಣಿಗೆಯತ್ತ ಗಮನ ನೀಡಬೇಕಾದ್ದು ಅಗತ್ಯ. ಗ್ಯಾಜೆಟ್‌ಗಳ ನಡುವೆ ಸದ್ದಿಲ್ಲದೆ ಕಳೆದುಹೋಗುತ್ತಿರುವ ಪೋಷಕ- ಮಕ್ಕಳ ಭಾವನಾತ್ಮಕ ಸಂಬಂಧ ಭವಿಷ್ಯದಲ್ಲಿ ಅಪಾಯಕಾರಿಯಾಗಬಲ್ಲದು. ಮಕ್ಕಳ ಬೆಳವಣಿಗೆಯ ಆರಂಭಿಕ ಹಂತದಲ್ಲೇ ಇವೆಲ್ಲವನ್ನೂ ಸಮರ್ಪಕವಾಗಿ ನಿಭಾಯಿಸಿದಲ್ಲಿ ಭಾವಿ ಪ್ರಜೆಗಳಾಗುವ ಮಕ್ಕಳ ಭವಿಷ್ಯವೂ ಆರೋಗ್ಯಕರವಾಗಿರಬಲ್ಲದು. ಆಧುನಿಕ ಪೋಷಕತ್ವದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾದರೆ ಕೆಲ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ.



ಅಕ್ಷರ ದಾಮ್ಲೆ

ಹೊಂದಾಣಿಕೆ

ಮಗುವಿನ ಮೊದಲ ಎರಡ್ಮೂರು ವರ್ಷ ಅಮೂಲ್ಯವಾದದ್ದು. ಇದು ಪೋಷಕರ ಜತೆಗೆ ಮಗು ಅನ್ಯೋನ್ಯತೆ ಬೆಳೆಸಿಕೊಳ್ಳುವ ಸಮಯ. ಹಾಗಾಗಿ, ಪೋಷಕರಲ್ಲಿ ಒಬ್ಬರಾದರೂ ಕಡ್ಡಾಯವಾಗಿ ಮಗುವಿಗೆ ಪೂರ್ಣ ಸಮಯ ಮೀಸಲಿಡುವುದು ಅಗತ್ಯ. ಉದ್ಯೋಗಸ್ಥ ಪೋಷಕರಲ್ಲಿ ಇಬ್ಬರಲ್ಲಿ ಒಬ್ಬರಾದರೂ ಹೊಂದಾಣಿಕೆ ಮಾಡಿಕೊಳ್ಳಲೇಬೇಕು. ಈ ಹಂತವು ಮಗುವಿಗೆ ತಂದೆ-ತಾಯಿಯ ಜೊತೆಗೆ ಭಾವನಾತ್ಮಕ ಸಂಬಂಧ ಬೆಸೆಯುವ ಹಂತ. ಹಾಗಾಗಿ, ಮೂರು ವರ್ಷಕ್ಕಿಂತ ಚಿಕ್ಕ ಮಗುವನ್ನು ಕ್ರಶ್‌ನಲ್ಲಿ ಬಿಡುವುದು ಸರಿಯಲ್ಲ. ಹಾಗಾಗಿ, ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು ಕಡಿಮೆ ವರ್ಕ್‌ಲೋಡ್ ಇರುವ ಇಲ್ಲವೇ ಪಾರ್ಟ್ ಟೈಂ ಕೆಲಸ ಮಾಡಬಹುದು ಎನ್ನುತ್ತಾರೆ 'ಮನೋಸಂವಾದ'ದ ಮಾನಸಿಕ ತಜ್ಞ ಅಕ್ಷರ ದಾಮ್ಲೆ.

ಅಜ್ಜ-ಅಜ್ಜಿಯೇ ಅಪ್ಪ-ಅಮ್ಮ!

ಅಪ್ಪ-ಅಮ್ಮ ಇಬ್ಬರೂ ಹೊರಗೆ ದುಡಿಯುವವರಾದರೆ ಎಷ್ಟೋ ಮನೆಗಳಲ್ಲಿ ಮಕ್ಕಳು ಅಜ್ಜ-ಅಜ್ಜಿಯರ ಆರೈಕೆಯಲ್ಲಿ ಬೆಳೆಯುತ್ತವೆ. ಈ ವೇಳೆ ಹೆತ್ತವರೊಂದಿಗೆ ಭಾವನಾತ್ಮಕವಾಗಿ ಬೆರೆಯದ ಮಕ್ಕಳು ಅಜ್ಜ- ಅಜ್ಜಿಯರನ್ನೇ ಅಪ್ಪ-ಅಮ್ಮ ಎಂದುಕೊಳ್ಳುವುದುಂಟು. ಹೆತ್ತವರೊಂದಿಗೆ ಸಕಾಲಕ್ಕೆ ಮೈತ್ರಿ ಅಥವಾ ಸಂಬಂಧ ಬೆಳೆಯದಿದ್ದರೆ ಈ ಸಮಸ್ಯೆ ಉಂಟಾಗುತ್ತದೆ. ಮಕ್ಕಳು ದೊಡ್ಡವರಾದ ಮೇಲೆ ಅಪ್ಪ-ಅಮ್ಮನ ಅಪರಿಚಿತನವನ್ನು ಸಹಿಸಿಕೊಳ್ಳಲಾಗದೇ ಕೋಪ, ಹತಾಶೆಯ ಸ್ಥಿತಿ ತಲುಪಬಹುದು. ಮಕ್ಕಳು ತಮ್ಮ ಮನಸಿನ ಭಾವನೆಗಳನ್ನು ಹಂಚಿಕೊಳ್ಳಲಾಗದೇ ಹೆತ್ತವರೊಂದಿಗೆ ಪರಿಚಯವೇ ಇಲ್ಲದಂತೆ ವರ್ತಿಸಬಹುದು.

ಕೇಳಿದ್ದನ್ನೆಲ್ಲಾ ಕೊಡಿಸದಿರಿ

ಕೆಲ ಹೆತ್ತವರು ಮಕ್ಕಳನ್ನು ಕ್ರಶ್ ಇಲ್ಲವೇ ಕಿಂಡರ್ ಗಾರ್ಡನ್‌ನಲ್ಲಿ ಬಿಟ್ಟು ಹೋದಾಗ ತಮ್ಮ ಬಗ್ಗೆಯೇ ಗಿಲ್ಟ್ ಮಾಡಿಕೊಳ್ಳುತ್ತಾರೆ. ಆಗ 'ನಾವು ಭಾವನಾತ್ಮಕವಾಗಿ ಮಗುವಿನೊಂದಿಗೆ ಇಲ್ಲ ಕನಿಷ್ಠ ಮೆಟಿರಿಯಲಿಸ್ಟ್ ಆಗಿ ಮಗು ಕೇಳಿದ್ದನ್ನಾದರೂ ಕೊಡಿಸೋಣ' ಎಂದು ಭಾವಿಸುತ್ತಾರೆ. ಇನ್ನು ಕೆಲವರು 'ನಮಗೆ ಇಂಥದ್ದು ಸಿಕ್ಕಿಲ್ಲ ನಮ್ಮ ಮಗುವಿಗಾದರೂ ಸಿಗಲಿ' ಎಂದು ಮಗು ಕೇಳಿದ್ದನ್ನೆಲ್ಲಾ ಕೊಡಿಸುತ್ತಾ ಹೋಗುತ್ತಾರೆ. ಆದರೆ, ಇದು ಮಗುವಿನಲ್ಲಿ ಹೆತ್ತವರು ಕೇಳಿದ್ದನ್ನೆಲ್ಲಾ ಕೊಡಿಸುತ್ತಾರೆ ಎನ್ನುವ ಒಂದು ರೀತಿಯ ಸಲೀಸು ಭಾವನೆ ಪೋಷಿಸುತ್ತದೆ. ಇದರಿಂದ ಮಗುವಿನಲ್ಲಿ ಕಷ್ಟಪಟ್ಟು ಗಳಿಸುವ ಪ್ರವೃತ್ತಿಯೇ ಬೆಳೆಯುವುದಿಲ್ಲ. ಹೆತ್ತವರು ಇರುವುದೇ ಕೊಡಿಸಲಿಕ್ಕೆ ಎನ್ನುವ ಭಾವವೂ ಬೆಳೆಯುತ್ತದೆ. ಮಗು ಕೇಳಿದ ವಸ್ತು ಅದಕ್ಕೆ ನಿಜವಾಗಿಯೂ ಅಗತ್ಯವಿದೆಯೇ, ನಮ್ಮ ಮಿತಿಯಲ್ಲಿ ಖರೀದಿಸಲು ಸಾಧ್ಯವೇ ಎಂಬದುನ್ನು ಹೆತ್ತವರು ಯೋಚಿಸುವುದು ಅಗತ್ಯ ಎನ್ನುತ್ತಾರೆ ಅಕ್ಷರ ದಾಮ್ಲೆ.

ಸೋಲನ್ನೂ ಪರಿಚಯಿಸಿ

ಹೆತ್ತವರು ಮಗುವಿಗೆ ಗೆಲುವಿನ ಜತೆಗೆ ಸೋಲನ್ನೂ ಪರಿಚಯಿಸುವುದು ಅಗತ್ಯ. ಅದು ವಸ್ತುಗಳ ಖರೀದಿಯಲ್ಲಾದರೂ ಇರಲಿ ಅಥವಾ ಆಟದಲ್ಲಾದರೂ ಇರಲಿ ಸೋಲು-ಗೆಲುವು ಎರಡನ್ನೂ ಪರಿಚಯಿಸಬೇಕು. ಇದರಿಂದ ಮಗು ದೊಡ್ಡದಾದ ಮೇಲೆ ಜೀವನದಲ್ಲಿ ಕಷ್ಟ ಎದುರಾದಾಗ ಅದನ್ನು ಎದುರಿಸುವ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

ಅತಿ ಕಾಳಜಿ ಬೇಡ

ಮಗು ಚಿಕ್ಕದಿರುವಾಗ ಕನಿಷ್ಠ ಒಂದು ಮೆಟ್ಟಿಲು ಹತ್ತುವಾಗಲೂ ಹೆತ್ತವರು ಓವರ್ ಪ್ರೊಟೆಕ್ಟಿವ್ ಭಾವ ಪ್ರದರ್ಶಿಸುತ್ತಾರೆ. ವಾಸ್ತವವಾಗಿ ಮಗುವಿಗೆ ತನ್ನದೇ ಆದ ಸಹಜವಾಗಿ ಪ್ರಕೃತಿದತ್ತವಾಗಿ ಎತ್ತರ, ಆಳವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇರುತ್ತದೆ. ಅಪ್ಪ- ಅಮ್ಮ ನಿನಗೆ ಅದು ಮಾಡಲಾಗದು ಅಂತ ಹೇಳಿದರೆ ಮಗುವೂ ತನಗೆ ಇದು ಸಾಧ್ಯವಾಗುವುದಿಲ್ಲವೇನೋ ಅಂತ ಭಾವಿಸುತ್ತದೆ. ಓವರ್ ಪ್ರೊಟೆಕ್ಟಿವ್ ಪೇರೆಂಟಿಗ್‌ನ ಸಮಸ್ಯೆ ಇದು. ಇದರಿಂದಾಗಿ ಮಗುವಿಗೆ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಲು ಅವಕಾಶ ಸಿಗುವುದಿಲ್ಲ. ಮಗು ಬಿದ್ದಾಗ ತಾನಾಗೇ ಮೇಲೇಳಲು ಕಲಿಯುತ್ತದೆ. ಇಂಥ ಸಹಜವನ್ನು ಹೆತ್ತವರು ರೂಢಿಸಿಕೊಳ್ಳಬೇಕು. ಮಗುವಿನ ಸ್ವಾತಂತ್ರ್ಯಕ್ಕೆ ಅಡ್ಡಿ ತಾರದೇ, ಮಾರ್ಗದರ್ಶನ ಮಾಡಿದರೂ ಸಾಕು.

ಬಾಲ್ಯದ ನೋವು ಜೀವನ ಪರ್ಯಂತ

ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಅದನ್ನು ತನ್ನ ಹೆತ್ತವರು ಗಮನಿಸಲಿ ಎನ್ನುವ ಭಾವ ಮಕ್ಕಳಿಗಿರುತ್ತದೆ. ಪೋಷಕರಿಂದ ಪ್ರೋತ್ಸಾಹವನ್ನೂ ನಿರೀಕ್ಷಿಸುತ್ತಾರೆ. ಅದು ದಕ್ಕದೇ ಹೋದಾಗ ಆ ನೋವು ಮಗುವಿಗೆ ಜೀವನ ಪರ್ಯಂತ ಕಾಡುವ ಸಾಧ್ಯತೆ ಇರುತ್ತದೆ. ಅಂತೆಯೇ ಕೆಲ ಹೆತ್ತವರು ತಮ್ಮ ಬಾಲ್ಯವನ್ನು ಮಗುವಿನ ಬಾಲ್ಯದೊಂದಿಗೆ ವಿನಾ ಕಾರಣ ಹೋಲಿಸಿ ಮಾತನಾಡುತ್ತಿರುತ್ತಾರೆ. ಇದು ಕೂಡಾ ಮಗುವಿನ ಮನಸಿನ ಮೇಲೆ ಪರಿಣಾಮ ಬೀರಬಹುದು. ತಮಗೆ ಸಿಗದಿರುವ ಸೌಕರ್ಯಕ್ಕಿಂತ ಸಿಕ್ಕಿರುವುದರ ಬಗ್ಗೆ ಹೇಳಿದರೆ ಮಕ್ಕಳೂ ಆಸಕ್ತಿಯಿಂದ ಕೇಳಬಲ್ಲರು.

ಸಾರ್ವಜನಿಕ ಓಡಾಟ ರೂಢಿಸಿ

ಮಕ್ಕಳಿಗೆ ಸಾರ್ವಜನಿಕ ಸಾರಿಗೆಯಲ್ಲೂ ಸಂಚರಿಸುವ ಅವಕಾಶ ಕಲ್ಪಿಸಬೇಕು. ಇದರಿಂದ ಮಕ್ಕಳು ಹೊರಜಗತ್ತು, ಜನರೊಂದಿಗೆ ಬೆರೆಯುವ ಗುಣ ಬೆಳೆಸಿಕೊಳ್ಳುತ್ತಾರೆ. ವ್ಯವಹಾರ ಕೌಶಲವನ್ನೂ ರೂಢಿಸಿಕೊಳ್ಳಲು ನೆರವಾಗುತ್ತದೆ.

ಕೆಲ ಮಕ್ಕಳು ಮನೆಯಲ್ಲಿ ಕೆಲಸ ಮಾಡುವ ತಮ್ಮ ತಾಯಂದಿರನ್ನು ನಿರ್ಲಕ್ಷ್ಯದಿಂದ ಕಾಣುತ್ತಾರೆ. ದುಡಿಯುವ ಅಪ್ಪನಿಗಷ್ಟೇ ಗೌರವ ಕೊಡುತ್ತಾರೆ. ಅಮ್ಮ ದುಡಿಯುವುದಿಲ್ಲ, ಹೆಚ್ಚು ಓದಿಲ್ಲ ಎನ್ನುವ ನೆಗಟೀವ್ ಇಮೇಜ್ ಕೂಡಾ ಬೆಳೆಸಿಕೊಂಡಿರುತ್ತಾರೆ. ಆದರೆ, ತಂದೆಯಾದವನು, 'ತಾಯಿ ಕನಿಷ್ಠಳಲ್ಲ, ಗೃಹಿಣಿಯ ಕೆಲಸವೂ ತನ್ನಷ್ಟೇ ಮಹತ್ವದ್ದು' ಎಂದು ಆಕೆಯ ಮಾನ್ಯತೆ ಎತ್ತಿಹಿಡಿಯಬೇಕು. ಇದರಿಂದ ಮಕ್ಕಳು ಅಪ್ಪ-ಅಮ್ಮ ಇಬ್ಬರನ್ನೂ ಸಮಾನಭಾವದಿಂದ ಕಾಣುವಂತಾಗುತ್ತದೆ.

ತಂದೆ-ತಾಯಿಯನ್ನು ಹೆಸರು ಹಿಡಿದು ಕರೆಯುವ ಅಭ್ಯಾಸ ಕೆಲ ಮಕ್ಕಳಿಗಿರುತ್ತದೆ. ಪೋಷಕರೂ ಇದನ್ನು ಸ್ನೇಹದ ಹೆಸರಿನಲ್ಲಿ ಸಮರ್ಥಿಸಿಕೊಳ್ಳಬಹುದು. ಆದರೆ, ಅದರಾಚೆಗೂ ಮಕ್ಕಳ ಮೇಲಿನ ಅಥಾರಿಟಿಯ ಹಕ್ಕನ್ನು ಹೆತ್ತವರು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳಬೇಕು. ಒಂದು ಹಂತದ ಅಂತರವನ್ನು ಉಳಿಸಿ ಕೊಳ್ಳಬೇಕು. ಹೆತ್ತವರು ಎಷ್ಟೇ ಬ್ಯುಸಿಯಾಗಿದ್ದರೂ ಮಕ್ಕಳ ಬಗ್ಗೆ ನಿಗಾ ಇಡುವುದೊಳಿತು. ಇದು ಮಕ್ಕಳು ಕೆಟ್ಟ ಚಟಗಳಿಗೆ ದಾಸರಾಗುವುದನ್ನೂ ತಡೆಯಲು ಸಹಕಾರಿ.

❖

ಮಹಿಳೆಯರ ದುರಂತದ ಮೂಲ ಎಲ್ಲಿದೆ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **37 ವರ್ಷದ ವಿವಾಹಿತೆ. ಗಂಡನ ವಯಸ್ಸು 39, ಮದುವೆಯಾಗಿ 8 ವರ್ಷ ಆಗಿದೆ, ಮಕ್ಕಳಿಲ್ಲ. ಪತಿ ಎಂ.ಟೆಕ್ ಮಾಡಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸಕ್ಕರೆ ಕಾಯಿಲೆ, ಬಿ.ಪಿ ಬಂದು 7 ವರ್ಷ ಆಯಿತು. ಅವರು ಮದ್ಯಪಾನ, ಧೂಮಪಾನ ಮತ್ತು ಗುಟ್ಕಾದ ದಾಸರಾಗಿದ್ದಾರೆ. ಎಷ್ಟೇ ಪ್ರಯತ್ನ ಮಾಡಿದರೂ ದುಶ್ಚಟಗಳನ್ನು ಬಿಡುತ್ತಿಲ್ಲ. ಒಳ್ಳೆಯ ಮಾತಿನಲ್ಲಿ ಹೇಳಿದೆ, ಬೈದು ಹೇಳಿದ್ದಕ್ಕೆ ಹೊಡೆದೆ ಬಿಟ್ಟರು. ನನ್ನ ಅರೋಗ್ಯ ಸುಧಾರಿಸಲು ತಿಂಗಳು ಬೇಕಾಯ್ತು. ಡೈವೋರ್ಸ್ ಪಡೆಯೋಣವೆಂದರೆ ನಮ್ಮ ಮನೆಯವರು ನೀನು ಬಂದರೆ ಊರಿನಲ್ಲಿ ಮಾನ ಮರ್ಯಾದೆ ಹೋಗುತ್ತದೆ, ತಂಗಿ ತಮ್ಮಂದಿರಿಗೆ ತೊಂದರೆಯಾಗುತ್ತದೆ ಎಂದು ತಡೆಯುತ್ತಾರೆ. ಮಕ್ಕಳಾದ ಮೇಲೆ ಸರಿ ಹೋಗುತ್ತಾನೆ ಎನ್ನುತ್ತಾರೆ. ಡಾಕ್ಟರ್ ಹತ್ತಿರ ತೋರಿಸಿದೆ. ಗಂಡನಲ್ಲಿ ಸಮಸ್ಯೆ ಇದೆ, ಅವರು ಎಲ್ಲಾ ದುಶ್ಚಟ ಬಿಡಬೇಕು ಎನ್ನುತ್ತಾರೆ. ನನಗೆ ವರದಕ್ಷಿಣೆ ಕಿರುಕುಳ ಏನು ಇಲ್ಲ. ಆದರೆ ತಿಂಗಳ ಮುಗಿಯಲು 10 ದಿನ ಇರುವಾಗಲೇ ಎಲ್ಲಾ ಸಂಬಳ ಖಾಲಿ. ನಾನು ಕೆಲಸಕ್ಕೆ ಹೋಗೋಣ ಎಂದರೆ ನನ್ನ ಗಂಡ ಅನುಮಾನದ ಪಿಶಾಚಿ. ಮನೆಯ ಗಂಡು ಮಕ್ಕಳು ಬಿಟ್ಟರೆ ನಾನು ಯಾವ ಗಂಡಸರನ್ನು ಮಾತನಾಡಿಸುವಂತಿಲ್ಲ. 9 ವರ್ಷದಿಂದ ನರಕದಲ್ಲಿ ಇದ್ದೇನೆ. ಯಾರ ಕಡೆಯಿಂದಲೂ ಬೆಂಬಲ ಇಲ್ಲ. ಹೇಳಲಾಗದಷ್ಟು ನೋವಿದೆ.**


ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪತ್ರದಲ್ಲಿ ಕೇವಲ ನಿಮ್ಮದೊಂದೇ ಅಲ್ಲ, ಸಾಕಷ್ಟು ಹೆಣ್ಣು ಮಕ್ಕಳ ದುರಂತದ ಕತೆಯಿದೆ. ಈ ದುರಂತದ ಹಿಂದಿರುವುದೇನು ಎನ್ನುವುದನ್ನು ಗುರುತಿಸಿದರೆ ಪರಿಹಾರಗಳ ದಾರಿಗಳು ಸಿಗುತ್ತದೆ. ನಿಮ್ಮ ಪತ್ರವನ್ನು ನೀವೇ ಬೇರೆ ದೃಷ್ಟಿಕೋನದಿಂದ ಓದಿದರೆ ನಿಮ್ಮ ನೋವಿನ ಮೂಲ ಹೊಳೆಯುತ್ತದೆ. ದಾಂಪತ್ಯ ಕಹಿಯಾಗಿದ್ದರೂ ಅದರಿಂದ ಹೊರಬರುವುದಕ್ಕೆ ತವರುಮನೆಯ ಬೆಂಬಲ ನಿರೀಕ್ಷಿಸುತ್ತಿದ್ದೀರಿ. ಆರ್ಥಿಕವಾಗಿ ಸ್ವತಂತ್ರರಾಗಲು ಪತಿಯ ಬೆಂಬಲ ನಿರೀಕ್ಷಿಸುತ್ತಿದ್ದೀರಿ. ಅಂದರೆ ನೀವು ಸಂಪೂರ್ಣ ಪರಾವಲಂಬಿಗಳು ಎಂದಾಯಿತಲ್ಲವೇ? ಇಂತಹ ಅವಲಂಬನೆ ಆರ್ಥಿಕವಾಗಿ ಸ್ವತಂತ್ರರಾಗಿಲ್ಲದಿರುವುದಕ್ಕೆ ಬಂದಿರುವುದು ಎಂದು ಮೇಲು ನೋಟಕ್ಕೆ ಅನ್ನಿಸಬಹುದು. ಆದರೆ ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವ ಸಾಕಷ್ಟು ಮಹಿಳೆಯರೂ ಕಹಿ ದಾಂಪತ್ಯದಿಂದ ಹೊರಬರುವುದಕ್ಕೆ ಹಿಂಜರಿಯುತ್ತಾರೆ. ಇದರ ಕಾರಣ ಮಹಿಳೆಯರ ಮಾನಸಿಕ ಅವಲಂಬನೆ. ಇಂತಹ ಮಾನಸಿಕ ಸ್ಥಿತಿಗೆ ಮಹಿಳೆಯರನ್ನೇ ದೂಷಿಸುವಂತಿಲ್ಲ.


ಕೌಟುಂಬಿಕವಾಗಿ, ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಮಹಿಳೆಯರು ಹೀಗೆಯೇ ಇರಬೇಕೆಂದು ನಿರ್ದೇಶಿಸಲಾಗುತ್ತದೆ. ಇಂತಹ ಕಟ್ಟಳೆಗಳನ್ನು ಮೀರುವವರನ್ನು ಅವಮಾನಿಸಲಾಗುತ್ತದೆ. ಇವುಗಳಿಂದ ತಪ್ಪಿಸಿಕೊಳ್ಳಲು ಮಹಿಳೆಯರು ತಮ್ಮತನವನ್ನು ಕಳೆದುಕೊಂಡು ಪುರುಷರ ಅಧಿನದಲ್ಲಿ ಇರುವುದು ಅನಿವಾರ್ಯವಾಗುತ್ತದೆ. ಈಗ ನಿಮ್ಮ ನೋವಿಗೆ ಪರಿಹಾರಗಳನ್ನು ಹುಡುಕೋಣ. ವ್ಯಸನಗಳಿಂದ ಮುಕ್ತರಾಗುವುದು ಬಿಡುವುದು ನಿಮ್ಮ ಪತಿಯ ಆಯ್ಕೆ. ಅವರನ್ನು ಸರಿಮಾಡುವುದು ನಿಮ್ಮ ಬದುಕಿನ ಗುರಿಯಾದರೆ ಅದು ನಿಮ್ಮ ಪರಾವಲಂಬನೆಯ ಸೂಚನೆಯಲ್ಲವೇ?

ನಿಮ್ಮ ಪತಿಯೇ ವ್ಯಸನಗಳಿಂದ ಹೊರಬರಲು ನಿರ್ಧರಿಸದಿದ್ದರೆ ಇತರರು ಸಹಾಯ ಮಾಡಲು ಸಾಧ್ಯವಿಲ್ಲ. 30ನೇ ಸೆಪ್ಟೆಂಬರ್ 2023ರ ಇದೇ ಅಂಕಣದಲ್ಲಿ ವ್ಯಸನಗಳಿಂದ ಮುಕ್ತರಾಗುವುದು ಹೇಗೆ ಎನ್ನುವುದರ ಕುರಿತು ಬರೆಯಲಾಗಿದೆ. ಇದನ್ನು ನಿಮ್ಮ ಪತಿಗೆ ಓದಲು ಕೊಡಿ. ನಿಮ್ಮ ಬದುಕು ಮತ್ತು ವ್ಯಕ್ತಿತ್ವಗಳನ್ನು ಸ್ವತಂತ್ರವಾಗಿ ಕಟ್ಟಿಕೊಳ್ಳುವುದು ಹೇಗೆಂದು ಯೋಚಿಸಿ. ನಿಮ್ಮ ವಿದ್ಯಾರ್ಹತೆಗೆ ಹೊಂದುವ ಒಂದು ಉದ್ಯೋಗವನ್ನು ಹುಡುಕಿಕೊಳ್ಳಿ. ಅದಕ್ಕೆ ಪತಿ ಅಡ್ಡಿಪಡಿಸಿದರೆ ಸ್ವತಂತ್ರವಾಗಿ ಬದುಕಲು ಹಿಂಜರಿಯಬೇಡಿ. ಅಗತ್ಯವಿದ್ದರೆ ಮಹಿಳೆಯರಿಗೆ ಸಹಾಯ ಮಾಡುವ ಸ್ವಸಹಾಯ ಸಂಸ್ಥೆಗಳು ಅಥವಾ ಸರ್ಕಾರಿ ಸಂಸ್ಥೆಗಳ ಬೆಂಬಲ ಪಡೆಯಿರಿ. ಹಂತಹಂತವಾಗಿ ಮಾನಸಿಕ ಅವಲಂಬನೆಯಿಂದ ಹೊರಬಂದು ನಿಮ್ಮೊಳಗಿನ ಶಕ್ತಿಯನ್ನು ಗುರುತಿಸಿಕೊಳ್ಳಿ. ಆರಂಭದ ಹಾದಿ ಕಠಿಣವಾಗಿರುತ್ತದೆ. ಆದರೆ ನಿಮ್ಮ ಬದುಕನ್ನು ರೂಪಿಸಿಕೊಳ್ಳುವುದು ನಿಮ್ಮದೇ ಜವಾಬ್ದಾರಿ ಎನ್ನುವುದು ನೆನಪಿರಲಿ. ನೀವು ಸ್ವತಂತ್ರರಾದ ಮೇಲೆ ನಿಮಗೆ ಸೂಕ್ತವೆನ್ನಿಸುವ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಆಗಲೂ ಪತಿಯಿಂದ ಬೇರೆಯಾಗುವ ಮೊದಲು ನಿಮಗೆ ಸರಿಯೆನ್ನಿಸಿದರೆ ಅವರಿಗೆ ಬದಲಾಗುವ ಒಂದು ಅವಕಾಶವನ್ನು ಕೊಡಬಹುದು. ಅವರು ನಿಮ್ಮನ್ನು ಬಿಟ್ಟು ವ್ಯಸನಗಳನ್ನೇ ಆಯ್ಕೆ ಮಾಡಿಕೊಂಡರೆ ನೀವು ನಿಮ್ಮ ಸ್ವಾತಂತ್ರ್ಯ, ಸಮಾಧಾನಗಳನ್ನು ಆಯ್ಕೆ ಮಾಡಿಕೊಳ್ಳಿ. ಶುಭವಾಗಲಿ.

❖



ಆನ್‌ಲೈನ್ ಸ್ನೇಹಿತ ಲಕ್ಷ ಲಕ್ಷ ಕಿತ್ತ



ಸಂತೋಷ ಜಿಗಳಿಕೊಪ್ಪ

ನನ್ನ ಪತಿ ಉದ್ಯಮಿ. ನಾನು ಗೃಹಿಣಿ. ಫೇಸ್‌ಬುಕ್‌ನಲ್ಲಿ 2023ರ ಫೆಬ್ರುವರಿಯಲ್ಲಿ ಕೆಲ್ಲಿ ಜಾನ್ಸನ್ ಹೆಸರಿನ ಖಾತೆಯಿಂದ ರಿಕ್ವೆಸ್ಟ್ ಬಂದಿತ್ತು. 'ಲಂಡನ್ ವೈದ್ಯ' ಎಂಬುದು 'ಬಯೋ'ದಲ್ಲಿತ್ತು. ವೈದ್ಯನಾಗಿರಬಹುದೆಂದು ತಿಳಿದು ರಿಕ್ವೆಸ್ಟ್ ಸ್ವೀಕರಿಸಿದ್ದೆ.

ಇದಾದ ಮರುದಿನವೇ ಆತನಿಂದ, 'ಹಾಯ್' ಸಂದೇಶ ಬಂದಿತ್ತು. ಅದಕ್ಕೆ ನಾನೂ ಪ್ರತಿಕ್ರಿಯಿಸಿದ್ದೆ. 'ನಾನು ಲಂಡನ್‌ನಲ್ಲಿ ವೈದ್ಯನಾಗಿದ್ದೇನೆ. ಭಾರತವೆಂದರೆ ನನಗೆ ಅಚ್ಚುಮೆಚ್ಚು. ನಿಮ್ಮ ಸ್ನೇಹ ಸಿಕ್ಕಿದ್ದಕ್ಕೆ ಖುಷಿಯಾಯಿತು' ಎಂದಿದ್ದ. 'ಧನ್ಯವಾದಗಳು' ಎಂಬುದಾಗಿ ನಾನೂ ಹೇಳಿದ್ದೆ. ಇದಾದ ನಂತರ, ನಮ್ಮಿಬ್ಬರ ಚಾಟಿಂಗ್ ಮುಂದುವರಿಯಿತು. ಪರಸ್ಪರ ಫೋಟೊ ಸಹ ವಿನಿಮಯ ಮಾಡಿಕೊಂಡೆವು. ಆತ, ಆಸ್ಪತ್ರೆಯಲ್ಲಿದ್ದ ಹಾಗೂ ಶಸ್ತ್ರಚಿಕಿತ್ಸೆ ಕೊಠಡಿಯಲ್ಲಿದ್ದ ಫೋಟೊಗಳನ್ನು ಕಳುಹಿಸಿದ್ದ. ಅವುಗಳನ್ನು ನೋಡಿ, ಆತ ವೈದ್ಯನಾಗಿರಬಹುದೆಂದು ಹೆಚ್ಚು ನಂಬಿದೆ.'

ನಕಲಿ ಖಾತೆ; ಆಮಿಷವೊಡ್ಡಿ ವಂಚಿಸುವ ಜಾಲ

ಸಾಮಾಜಿಕ ಮಾಧ್ಯಮಗಳ ನಕಲಿ ಖಾತೆಗಳ ಮೂಲಕ ಪರಿಚಯ ಮಾಡಿಕೊಳ್ಳುವ ವಂಚಕರು, ಸ್ನೇಹ ಬೆಳೆಸುತ್ತಾರೆ. ಉಡುಗೊರೆ ಕಳುಹಿಸುವುದಾಗಿ ಹೇಳುತ್ತಾರೆ. ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ, ವಿಮಾನ ನಿಲ್ದಾಣದಲ್ಲಿರುವ ಉಡುಗೊರೆಯನ್ನು ಮನೆಗೆ ಕಳುಹಿಸುವುದಾಗಿ ಹೇಳಿ ಶುಲ್ಕದ ಹೆಸರಿನಲ್ಲಿ ಲಕ್ಷ ಲಕ್ಷ ಪಡೆದು ನಾಪತ್ತೆಯಾಗುತ್ತಾರೆ. ಇಂಥ ಜಾಲದಲ್ಲಿ ಹೆಚ್ಚಾಗಿ ಯುವತಿಯರು, ಗೃಹಿಣಿಯರು ಹಾಗೂ ಉದ್ಯೋಗಸ್ಥ ಮಹಿಳೆಯರು ಸಿಲುಕಿ ಹಣ ಕಳೆದುಕೊಳ್ಳುತ್ತಿದ್ದಾರೆ.

'ಇಬ್ಬರಿಗೂ ಪರಿಚಯವಾಗಿ 15 ದಿನವಾಗಿತ್ತು. ಆದರೆ, ಈ ವಿಷಯವನ್ನು ನಾನು ಪತಿಗೆ ಹೇಳಿರಲಿಲ್ಲ. ಇದರ ನಡುವೆಯೇ ಆತ, 'ನೀನು ನನ್ನ ನೆಚ್ಚಿನ ಸ್ನೇಹಿತೆ. ನಿನಗೆ ಉಡುಗೊರೆ ನೀಡಬೇಕು' ಎಂದಿದ್ದ. ಜೊತೆಗೆ, ನನ್ನ ಮನೆಯ ವಿಳಾಸವನ್ನು ಪಡೆದುಕೊಂಡಿದ್ದ. ಚಿನ್ನದ ಸರಗಳು, ಕೈ ಗಡಿಯಾರ, ಓಲೆಗಳು, ಬಟ್ಟೆ, ಚಪ್ಪಲಿಗಳು ಹಾಗೂ ಇತರೆ ವಸ್ತುಗಳು ಬಾಕ್ಸ್‌ನಲ್ಲಿದ್ದ ಫೋಟೊವನ್ನು ಆತ ನನಗೆ ಕಳುಹಿಸಿದ್ದ. 'ಇದೆಲ್ಲವೂ ನಿನಗಾಗಿ. ಸದ್ಯದಲ್ಲೇ ನಿನ್ನ ಮನೆಗೆ' ಎಂದಿದ್ದ. ಆತನ ಮಾತು ಕೇಳಿ ಖುಷಿಯಾಗಿದ್ದೆ. ಉಡುಗೊರೆಗಾಗಿ ಕಾಯುತ್ತಿದ್ದೆ.


ನಾಲ್ಕು ದಿನಗಳ ನಂತರ ಮುಂಬೈ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿ ಹೆಸರಿನಲ್ಲಿ ವ್ಯಕ್ತಿಯೊಬ್ಬರಿಂದ ಕರೆ ಬಂದಿತ್ತು. 'ನಿಮ್ಮ ಲಂಡನ್ ಸ್ನೇಹಿತ ಕೆಲ್ಲಿ ಜಾನ್ಸನ್, ಉಡುಗೊರೆ ಬಾಕ್ಸ್ ಕಳುಹಿಸಿದ್ದಾರೆ. ಅದರಲ್ಲಿ ಚಿನ್ನದ ಆಭರಣ ಹಾಗೂ ದುಬಾರಿ ವಸ್ತುಗಳಿವೆ. ಅವುಗಳನ್ನು ನಿಮ್ಮ ವಿಳಾಸಕ್ಕೆ ಕಳುಹಿಸಬೇಕಾದರೆ, ಮೊದಲಿಗೆ ಕಸ್ಟಮ್ಸ್ ಶುಲ್ಕ ಪಾವತಿಸಬೇಕು' ಎಂದಿದ್ದ. ಅದನ್ನು ನಂಬಿ, ಆತ ಹೇಳಿದ್ದ ಖಾತೆಗೆ ಆರಂಭದಲ್ಲಿ ₹ 25 ಸಾವಿರ ಹಾಕಿದ್ದೆ. ಇದಾದ ಕೆಲ ಗಂಟೆಗಳ ಬಳಿಕ ಕರೆ ಮಾಡಿದ್ದ ಮತ್ತೊಬ್ಬ, 'ನಿಮ್ಮ ಉಡುಗೊರೆ ಬಾಕ್ಸ್ ಬೆಂಗಳೂರಿಗೆ ಕಳುಹಿಸಲಾಗುವುದು. ಇದಕ್ಕಾಗಿ ಕೋರಿಯರ್ ಹಾಗೂ ಕಸ್ಟಮ್ಸ್ ಶುಲ್ಕ ಪಾವತಿಸಬೇಕು' ಎಂದಿದ್ದ. ಅದನ್ನೂ ನಂಬಿ, ₹ 25 ಸಾವಿರ ಜಮೆ ಮಾಡಿದ್ದೆ.

ಕೆಲ್ಲಿ ಜಾನ್ಸನ್ ಕಳುಹಿಸಿದ್ದ ಬಾಕ್ಸ್ ಫೋಟೊಗಳನ್ನು ಪುನಃ ಕಳುಹಿಸಿದ್ದ ಯುವತಿಯೊಬ್ಬಳು, 'ನಾನು ಕಸ್ಟಮ್ಸ್ ಅಧಿಕಾರಿ. ನಿಮ್ಮ ಬಾಕ್ಸ್ ತೆರೆದು ನೋಡಲಾಗಿದೆ. ದುಬಾರಿ ಬೆಲೆಯ ಚಿನ್ನಾಭರಣ ಹಾಗೂ ವಸ್ತುಗಳಿವೆ. ನಿಮ್ಮ ಸ್ನೇಹಿತ ಕೆಲ್ಲಿ ಜಾನ್ಸ್ ಯಾವುದೇ ಕಸ್ಟಮ್ಸ್ ಶುಲ್ಕ ಪಾವತಿ ಮಾಡಿಲ್ಲ. ನೀವು ಭಾರತದ ತೆರಿಗೆ ಪಾವತಿ ಮಾಡಬೇಕು. ಅವಾಗಲೇ ಈ ಬಾಕ್ಸ್ ನಿಮ್ಮ ಮನೆಗೆ ಕಳುಹಿಸುತ್ತೇವೆ' ಎಂದಿದ್ದಳು. ಅವಳ ಮಾತು ನಂಬಿ, ಹಂತ ಹಂತವಾಗಿ ₹ 4.80 ಲಕ್ಷ ಕಳುಹಿಸಿದ್ದೆ. ಇದಾದ ನಂತರವೂ ನನಗೆ ಬಾಕ್ಸ್ ಬರಲಿಲ್ಲ. ಅದೇ ಯುವತಿ ಪುನಃ ಕರೆ ಮಾಡಿ, 'ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಿಮ್ಮ ಬಾಕ್ಸ್ ಸಿಲುಕಿಕೊಂಡಿದೆ. ಸ್ಥಳೀಯ ಶುಲ್ಕ ಪಾವತಿ ಮಾಡಿದರೆ ಮಾತ್ರ ಬಾಕ್ಸ್ ನಿಮ್ಮ ವಿಳಾಸಕ್ಕೆ ಬರುತ್ತದೆ' ಎಂದಿದ್ದಳು.'

'ಯುವತಿ ಪುನಃ ಹಣ ಕೇಳಿದ್ದರಿಂದ ಅನುಮಾನ ಬಂದಿತ್ತು. ಆಗ ಪತಿಗೆ ವಿಷಯ ತಿಳಿಸಿದ್ದೆ. ಮೊದಲೇ ಹೇಳಬೇಕಿತ್ತೆಂದು ಪತಿ ಬೈದರು. ಆದರೆ, ವಂಚನೆ ಜಾಲದ ಅರಿವು ನನಗಿರಲಿಲ್ಲ. ನಂತರ, ಪತಿ ಜೊತೆ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದೇನೆ. ಹಣ ಪಡೆದ ನಂತರ, ಕೆಲ್ಲಿ ಜಾನ್ಸನ್ ಎಂಬಾತ ತನ್ನ ಖಾತೆಯನ್ನೇ ಅಳಿಸಿ ಹಾಕಿದ್ದಾನೆ. ಆತ ಯಾರು? ಎಂಬುದು ಇದುವರೆಗೂ ಗೊತ್ತಾಗಿಲ್ಲ. ವಂಚನೆ ಉದ್ದೇಶದಿಂದ ಆತ, ನಕಲಿ ಖಾತೆ ಸೃಷ್ಟಿಸಿದ್ದನೆಂದು ಪೊಲೀಸರು ಹೇಳುತ್ತಿದ್ದಾರೆ'

'ಸಮಯ ಕಳೆಯಲು ಸಾಮಾಜಿಕ ಮಾಧ್ಯಮಗಳನ್ನು ನೋಡುತ್ತೇನೆ. ಹೊಸಬರು ಸ್ನೇಹಿತರಾಗುತ್ತಿದ್ದಂತೆ ಹಿಗ್ಗುತ್ತೇವೆ. ಆ ಸ್ನೇಹಿತ ಯಾರು? ನನಗೆ ಏಕೆ ರಿಕ್ವೆಸ್ಟ್ ಕಳುಹಿಸಿದ್ದಾನೆ? ಆತನ ಉದ್ದೇಶವೇನು? ದುಬಾರಿ ಉಡುಗೊರೆ ನನಗೆ ಏಕೆ ಕಳುಹಿಸುತ್ತಾನೆ? ಎಂಬ ಬಗ್ಗೆ ಯೋಚಿಸುವುದೇ ಇಲ್ಲ. ಆಮಿಷಗಳಿಗೆ ಒಳಗಾಗಿ ಹಣ ಕಳೆದುಕೊಳ್ಳುತ್ತೇವೆ. ಸಾಮಾಜಿಕ ಮಾಧ್ಯಮಗಳಲ್ಲಿ ಅಪರಿಚಿತರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವ ಮುನ್ನ ಎಚ್ಚರ ವಹಿಸಬೇಕೆಂದು ಈಗ ಅರಿವಾಗಿದೆ.'

– ನೊಂದ ಮಹಿಳೆ



ಸೈಬರ್ ಅಪರಾಧವಾದರೆ ದೂರು ನೀಡಿ:
112 ಅಥವಾ 1930
ಜಾಲತಾಣ: https://cybercrime.gov.in/



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

COLDWELL BANKER VALUE ADD REALTY
#1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80, Buying/ Selling, Immediate Settlement. SHIVARAJU: 9845390290, 7676547557.

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

FOR SALE 30x40 WEST FACE 1st BLOCK 40x60 9th BLOCK NORTH FACE. CALL: MANOJ 9731410616

AVAILABLE BDA Sites Banashankari 6th-Stage, 6th Block, 30x40, E/F, 60ft Road Genuine Buyers: 9663393533, 9945492464

SALE BSK 6th stage 9 Block 30x40 East Facing 66 lakh Also 40x60 west Facing 4th Block 1.72Cr Negotiable. 9945373839, 9620041313

Anjanapura

SALE BDA Anjanapura 8th Block 40x60 west Facing Near BDA complex 40Feet Road 9620041313/ 9945373839

Arkavathi Layout

ARKAVATHI LAYOUT Site For Sale 55x100 Both-Sides Road Adjacent to BDA Layout In Good Location Call: 86602-20048 76769-00174

J P Nagar

SALE BDA JP Nagar 9th phase 3rd Block East facing 60 feet 40x60 good location 1.5Km metro station 9945373839/ 9620041313

JPNAGAR 30X50, 50x80, Old House Price 26000/- BTM 2nd Stage, 30x50, Old House 3.40Cr, 9845704509.

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Kanakapura Road

NARAYANA NAGAR 1st Block 50x80 S/F 3rd Block 30x40 W/F Near Metro Station: 9964627255/ 9845511170

BDA SITE Sale 2400sqft 2Min drive from Vajrahalli Metro, 10 Min. to Jayanagar Shopping Complex, VajramuniNagar, Contact: NarasimhaMurthy: 9449350101

SITES FOR Sale Marvella Homz, Huttari BMRDA Approved, Behind Brigade Meadows, 2Kms from Kanakapura Road, Few Sites Available. 9108905129

Bommasandra

JP_LAKE VIEW BMRDA APPROVED 40x60 site for sale. East facing. Ready to Build/ Rentals. Near Bommasandra metro station. Price:3200/-sq.ft Contact: 7676829026

Gnanabharathi

DIRECT OWNER 30x50 Jnanabharathi BDA 2nd Block, 30X40 Railway Layout 1st Stage. Near Ring-road. 9886634578

Nagarabhavi

"NAGARABHAVI 'D'GROUP-LAYOUT 30x40 West facing 40 feet Road BDA-Khatha Site for-sale 13200/-per sqft Negotioble. 9164089633/ 9663226688"

Nelamangala

BMRDA/ NPA 30x50 West Facing Site 60ft Road, Near NH-4 Highway and Mangalore Highway: 8310681025


COMMERCIAL PLOT 40x60 West HUNNIGARE 100ft Main Road, Near Dr.Puneeth Rajkumar BDA Villa, 4800/- Call: 9035010595/ 9035055919

North

60X40 SITE SALE Premium Location 100 Meter Golden`Palms Resort,Alur Cricket Stadium, Near-to Unibic Factory Husukur`Road Alur Banglore 2300/-Sqft Slightly Negotiable 9632330007 9986420007

3 BHK LUXURY FLATS FOR SALE
DREAMVILLE HOME

PROJECT BY PROMAX PROPERTIES
ISO 9001:2015 CERTIFIED TRADE MARK REGISTERED



Ready to Move in

Amenities
GYM · Jogging Track · Club House · Mini Theater · Library · Kids Play area · Party Hall

SBI · ICICI Bank · AXIS BANK · HDFC BANK

BBMP APPROVED

RERA APPROVED
PRM/KA/ RERA/1251/446/PR/220622/005013

8073977742 / 9353084848
promaxdreamvillehome.com
Kothanur, Hennur Main Road Bangalore. 77

Rajarajeshwari Nagar

40X60 'A'KHATA East Facing Site for Sale attached to BEML 3rd Stage RajarajeshwariNagar. 9448288522

Sadashiva Nagar

SALE SADASHIVANAGAR 60x90 East Facing Site And 7-BHK Luxurious Bungalow, Genuine Buyers Only Contact: 9900001973

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

"BDA APPROVED 30x40 East-facing site sale near Amma Ashrama ready to build 10 minutes drive-to Metro. 9611538786"

VISHWESWARIAH LAYOUT 4th Block BDA Commercial 50x80 80ft Road. 6th Block BDA 30x40, 7500/-: 9964971895

DIRECT OWNER 30x40, 40x60 Vishveswaraiah Layout 1st Block, Behind 100ft Road, Beautiful Location. SREENIDHI. 9742681666

"28X40S/W CORNER BDA Site-Sale Kanaka Shree Layout 40 feet Road [Vishveshwaraiah Layout]- 9845143579"

SALE 30X40 VISHVESWARAIAH LAYOUT 4th Block South facing owner 82 lakh Negotiable 9945373839, 9620041313

Kempegowda Layout

50×80 SITE for sale at Nada Prabhu Kempegowda layout 5th block, P- sector, 5565 west facing, beside 300 feet. Call: 6362874644.

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

House

Banashankari

SALE 20X30, 30X40 Thripex House's BSK 6th Stage, J.P.Nagar 8th Phase, Anjanapura Fully Furnished Granit Flooring Call:8722777999 9449812176

Cunningham Road

QUEENS ROAD, 2031sqft southwest corner property with 24 squares old building for sale. 5.5Cr. Contact 6363161053. Brokers excuse.

Kengeri

HOUSE FOR SALE 2 BHK, 4 Floors, 1130 sq. ft. Estate facing, A Khata, 2.20 Crores, K.S. Town, Bande Mutt, Arunachalam Layout, Bangalore. 9731751079

HOUSE SALE 25x40, BDA WEST FACING, 25 SQUARE, 1BHK AND 4BHK HOUSE AT KENGERI SATELLITE TOWN, NEAR KENGERI METRO STATION, Rs.1.50 CRORE. NAGALINGA 7019009272, 9743378744 SHIVAKUMAR 9845875555

HAL And Around

SALE. HAL 3rd stage 32X40 site measuring with 1350 Sqft duplex house Rs. 3 Crore. Buyers call #8762018445. [BROKERS EXCUSE]

Kumaraswamy Layout

NEW DUPLEX House for Sale BDA 4 BHK 900 sqft nearby 15F Bus-stop. 9343307910

Flat

Chandra Layout

CANARA BANK Colony, 3 BHK Flat sale, 1635 sqft. Furnished, Carpark, behind Village Hyper Bazar, Chandra Layout. 9890345737.

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Rajarajeshwari Nagar

RR NAGAR 3BHK Flat For Sale 1782sft single floor, East Facing Near BEML Complex, price:1.25cr Negotiable Contact: 9972318124,9845301269

Uttarahalli

3/4 BHK New Luxurious Flats Sale, Fully Furnished, Italian Marble, Cauvery, Security, Car-parking. 70L/90L. 9844394444, 9945224058.

J P Nagar

FLAT FOR Sale at J.P.Nagar 7th Phase, Elita Promenade Apartment Ground Floor 1130Sq.ft. 9945427003

Agricultural Land

Ramanagar

AGRICULTURAL FARM Land Sale 7 Kms from RAMANAGAR 3 Acres 50Lakhs P.Acre Clear Title- 7019881566

Dabaspet

29GUNTA (EAST) LAND State Highway Attached 16Kms from Dabaspet, 66Kms from Bangalore SUITABLE: Petrol Bunks, Warehouse 4,40,000/- Per Gunta: 9845411113

Commerical

Bannerghatta Road

COMMERCIAL BANNERGHATTA Road, Hulimavu, Krishna Layout near Meenakshi Mall and Metro station, 75x110 A'Katha site 7,08,00,000/- Negotiable -9980761200

General

South

AVAILABLE/ WANTED 30x40 30x50,40x60,80x50- Residential Commercial Sites PG- Buildings Basavanagudi Jayanagar J.P.Nagar Chamarajpet Girinagar Hanumanthnagar Kanakapura/ Bannnnarghatta Road For RENT/LEASE/Sale 2-3-4-5 BHK Houses/Flats/ Office Space/Godown Spaces Call-9900399006

Commercial Land

Mysore

MYSORE RING Road Near GRS fantasy Park 1-acre Commercial Converted`Land For Sale 3000/sft Contact Sunil: 9845201710

REAL ESTATE BUYING

Sites

Anjanapura

WANTED BDA sites Anjanapura, Banashankari 6th stage, Vishweshwaraiah Layout, JPNagar 8 and 9th phase and any BDA katha & Mysore MUDA sites any measurement, Immediate settlement Genuine sellers, Contact: 9902038118: 9449060605: 7338328728.

Kanakapura Road

KANAKAPURA ROAD Wanted Site 30x40,40x60 Narayana Nagar, BCMC Layout Gubblala Anjanapura. Contact: 9380647082. Agents Excuse.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

RENTAL PROPERTIES

Accommodation Available

Commercial

THANISANDRA MAIN ROAD Opposite Reliance`Mart, Bangalore. Available Rent-30x40sft House-1st`Floor Suitable,Lab/ Any Office. Ground Laptop/Mobile Shop. 8073553577 9741069998.

2 BHK House, and 1000 Sqft. Office or Godown, Lift Available, 1st Cross, Cubbonpet, Bangalore. Contact: 7483167633, 9019795043

Industrial And Factory

AVAILABLE INDUSTRIAL Shed for Rent 95000 sqft at Soukya Road, Whitefield. Commercial 1750sqft x3 Floors, K.R.Road, Banashankari. Contact: 9341234288/ 9663224353/ 9845417487.

BUSINESS

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

JOB OPPORTUNITIES

Security & Detectives

WANTED SECURITY Field Officer / Marketing Officer / Security Guards Contact: 9986569896 / 8951205667

Diwali OFFER
E - Khata Sites for Sale



DC Converted Sites
Before DEvanahalli near hiranandani Project
₹2599 per Sq. Ft
Upto 80% Bank Loan
Features & Amenities
- Black Tap Roads
- Street Lights
- Under Ground Drainage
- Fully Covered Compound for Entire Layout
- Individual Water Connection for Each Plot

7993847390 / 7022160615

Multiple Vacancy

ಬೆಂಗಳೂರು ಮೂಲದ ಕಂಪನಿ ಈಗ ಹುಬ್ಬಳ್ಳಿ, ಹಾವೇರಿ ಮತ್ತು ಗದಗದಲ್ಲಿ
ಈ ಕೆಳಕಂಡ ಹುದ್ದೆಗಳಿಗೆ ಕೆಲಸಗಾರರು ಬೇಕಾಗಿದ್ದಾರೆ

ಜೆನರಲ್ ಮ್ಯಾನೇಜರ್
ಪದವಿ (MBAಗೆ ಆದ್ಯತೆ)
ಅನುಭವ : 10-15 ವರ್ಷಗಳು

ಬ್ರ್ಯಾಂಚ್ ಮ್ಯಾನೇಜರ್
ಪದವಿ (MBAಗೆ ಆದ್ಯತೆ)
ಅನುಭವ : 8-10 ವರ್ಷಗಳು

ಅಡ್ಮಿನ್ ಮ್ಯಾನೇಜರ್
ಪದವಿ (MBAಗೆ ಆದ್ಯತೆ)
ಅನುಭವ : 8-10 ವರ್ಷಗಳು

ಫೀಲ್ಡ್ ಸ್ಟಾಫ್
ಪಿಯುಸಿ, ಪದವಿ
ಯಾವುದೇ ಕೆಲಸದ ಅನುಭವ

ಆಫೀಸ್ ಎಕ್ಸಿಕ್ಯುಟಿವ್
ಪದವಿ
ಯಾವುದೇ ಕೆಲಸದ ಅನುಭವ

ಸೆಕ್ರೆಟರಿ
ಪದವಿ
ಟ್ಯಾಲಿ ಜೊತೆಗೆ ಟೈಪಿಂಗ್ ಹಾಗೂ ಕಂಪ್ಯೂಟರ್ ಜ್ಞಾನ

ಡ್ರೈವರ್ಸ್
4-ವ್ಹೀಲರ್ ಡ್ರೈವಿಂಗ್ ಲೈಸನ್ಸ್ ಅಗತ್ಯ

ಕೆಳಕಂಡ ಹೆಚ್ಚುವರಿ ಅರ್ಹತೆಗಳನ್ನು ಮೇಲ್ಕಂಡ ಅಭ್ಯರ್ಥಿಗಳು ಹೊಂದಿರಬೇಕು ಕಂಪ್ಯೂಟರ್ ಜ್ಞಾನ/ ದ್ವಿಚಕ್ರ/ 4-ವ್ಹೀಲರ್ ಡ್ರೈವಿಂಗ್ ಲೈಸನ್ಸ್/ ಎಕ್ಸ್-ಸರ್ವಿಸ್ ಮ್ಯಾನ್/ಎನ್‌ಸಿಸಿ/ಸ್ಕೌಟ್ಸ್/ ಸ್ಪೋರ್ಟ್ಸ್ ಮ್ಯಾನ್ ಇರುವವರಿಗೆ ಮಾನ್ಯತೆ.

Please send your resume at jobs.haveri@gmail.com

ಸೆಂಟರ್ ಆಪರೇಷನ್ ಮ್ಯಾನೇಜರ್ ಮತ್ತು ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಮಹಿಳಾ ಅಭ್ಯರ್ಥಿಗಳು ಎನ್‌ಜಿಒ ಸಂಸ್ಥೆಯಲ್ಲಿ ಕೆಲಸ ಮಾಡಲು ಇಚ್ಛಿಸುವ ಹೆಣ್ಣೂರು ಬಾಗಲೂರು ರಸ್ತೆಯ ಸುತ್ತಮುತ್ತಲಿನ ಪ್ರದೇಶದ
ಪದವೀಧರರು 3 ರಿಂದ 4 ವರ್ಷಗಳು ಎನ್‌ಜಿಒ ಸಂಬಂಧಿತ ಕೆಲಸಗಳಲ್ಲಿ ಕೆಲಸ ಮಾಡಿರಬೇಕು.
life line
APPLY mukundsagar2023@gmail.com
ಸಂಪರ್ಕಿಸಿ : 88844 59780

Teachers/ Professors

KISHORA VIDYA BHAVANA
Chintamani, Chikkaballapur District.
Over 50 years old reputed School requires
RESIDENTIAL PRINCIPAL
Post Graduate Candidates having brilliant academic record and over 15 years teaching experience and 5 years of administrative experience are preferred. They should be proficient in English with sound knowledge of state curriculum.
Benefits and Remuneration: befitting the experience and qualification.
Apply to:
Secretary, Kishora Vidya Bhavana, Chintamani - 563125
OR kishoravidyabhavana@gmail.com
Applications end on 30th November 2023

PERSONAL

Change of Name

CHANGE OF NAME
I, **KUNIGAL VENKATAPPA SAVITHRAMMA** W/o Late. Srinivasa M.S, R/at Chandana, 5th Cross, Vidyanagar, Behind Hotel Hoysala, Tumakuru- 572103. My name has been entered as **KUNIGAL VENKATAPPA SAVITHRI** in the passport. Hereby declaring that both names belongs to me. Henceforth I shall be called as **K.V. SAVITHRAMMA (KUNIGAL VENKATAPPA SAVITHRAMMA)** only. Vide affidavit dt.15/11/2023 before notary Smt. Vatsala, Bangalore

I,1)SUPRAJA S D/o Sridharan K,2) S.Supraja D/o K Sridharan,3)Supraja S D/o Sridharan K,4)S Supraja D/o K Sridhanran, R/at#309, 13th Cross, Saraswathinagar, Vijayanagar, Bengaluru -560040, have changed my name to Supraja Sridharan D/o Sridharan K.,Vide Affidavit Dated 16-11-2023, Before Notary B A Lakshminarayana Rao, Bangalore

RASHMI, WIFE/O, 6499031Y, SEP/ASH, ARUN KUMAR, Vill – Sultanpur, Farrukhnagar, Gurugram, Haryana changed name RASHMI to RASHMI RAGHAV, 16/11/2023, Tehsildar Farrukhnagar.

CHANGE OF NAME
I, **Anandhi Rajasekaran,** W/o Rajasekaran.S (a.k.a Raja Shanmugam Johns) 34/4 1st Cross, Lingarajapuram, St Thomas Town, Bangalore-560084 have changed my name to **Anandhi Anna Johns** forever vide affidavit dated 20th June 2022 Sworn before Notary **Sivakumara .M.N** Bangalore.

CHANGE OF NAME
I, **Rajasekaran.S** S/o B.V.Shanmugam 34/4 1st Cross, Lingarajapuram, St Thomas Town, Bangalore-560084 have changed my name to **Raja Shanmugam Johns** forever vide affidavit dated 20th June 2022 Sworn before Notary **Sivakumara .M.N** Bangalore.

I, MRS. Sowmya T, W/o Nagaraju D/o Late Thimme Gowda, aged 42 years, #173, Near M.K. Ahamed 13th Block, Nagarabhavi 2nd Stage, Bangalore- 560072 have changed my name from T. Sundaramma @ Sowmya to SOWMYA .T vide Affidavit dated 16-11-2023 sworn before the Notary Manohar Jeerige, Bengaluru.

CHANGE OF NAME
I, **ROOPALATHA RAGHURAM BHATTA**, R/at # Flat 104, Lavender Block, HM World City Aprts, Near Vinayaka Talkies, JP Nagar, Bengaluru-560062 have changed my name to **ROOPA RAGHURAM BHAT** vide affidavit dt.15/11/2023 before Notary Ambreshappa, Bengaluru. Henceforth I shall be called **ROOPA RAGHURAM BHAT** only.

I JAYAPRAKASH HOLAGUNDI. B-206, Sovereign Shantinivasa Apartment, Sarjapura main road, Yamare, Bengaluru- 562125 have changed my minor son name from SATVIK PRAKASH HOLAGUNDI to RATHANRAAJ BHAGGAV

I JAYAPRAKASH HOLAGUNDI B-206, Sovereign Shantinivasa Apartment, Sarjapura main road, Yamare, Bengaluru- 562125 have changed my minor daughter name from SUDEEPTI HOLAGUNDI to JHANVICA BHARGAV

PRAVEEN KUMAR, 6494386A, NK/ ASH, Vill - Badheri , Muzaffarnagar, Uttar Pradesh changed Son's name LAKSHYA PANWAR to LAKSHAY PANWAR, 17/11/2023, Notary K.V. Mani, Bangalore

TOURS & TRAVEL

Travel

30X24, 3BHK, 'A' Katha Independent duplex House for Sale with Shop, Carparking 1,45,00000/-. Sapthagiri Layout near Tata promot,Banashankari 3rd Stage, Bangalore. Contact: 9900915699, 9448976021

ಕೃಷಿ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ • ರೋಗ ನಿರೋಧ ಶಕ್ತಿಯ ತಳಿಗಳ ಆವಿಷ್ಕಾರಕ್ಕೆ ಕರೆ

ಬರ: ರೈತರಿಗೆ ₹16 ಸಾವಿರ ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳೆ ವಿಮೆ ಪಾವತಿಸಿದ್ದರೂ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಬೆಳೆ ನಷ್ಟ ಪರಿಹಾರ ದೊರೆಯುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿ-ಮೇಳ-2023ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ರೈತರಿಗೆ ಸರ್ಕಾರವು ಸಹಾಯಧನ ನೀಡಬಹುದು. ಆದರೆ, ಬೆಳೆನಷ್ಟಕ್ಕೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ. ವಿಮಾ ಕಂಪನಿಗಳೂ ಪೂರ್ಣ ಪ್ರಮಾಣದಲ್ಲಿ ಬೆಳೆ ಪರಿಹಾರ ನೀಡುತ್ತಿಲ್ಲ' ಎಂದು ಹೇಳಿದರು.

'ಮುಂಗಾರು ಕೈಕೊಟ್ಟಿದ್ದರಿಂದ ರಾಜ್ಯದಲ್ಲಿ ₹ 33 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಬೆಳೆ ನಷ್ಟವಾಗಿದೆ. ಅದರಲ್ಲಿ ಎನ್‌ಡಿಆರ್‌ಎಫ್ ಅಡಿ, ₹17,900 ಕೋಟಿಯಷ್ಟು ಪರಿಹಾರ ನೀಡಲು ಮಾತ್ರ ಸಾಧ್ಯವಾಗಲಿದೆ. ಉಳಿದಂತೆ ರೈತರಿಗೇ ₹16 ಸಾವಿರ ಕೋಟಿಯಷ್ಟು ಬೆಳೆ ನಷ್ಟವಾಗುತ್ತಿದೆ. ಈ ಮೊತ್ತವನ್ನು ಯಾರೂ ಭರಿಸುತ್ತಿಲ್ಲ' ಎಂದು ಹೇಳಿದರು.

'ಹಸಿರು ಕ್ರಾಂತಿ ನಿರಂತರವಾಗಿ ಆಗಬೇಕು. ಹೊಸ ತಳಿಗಳು, ಮಣ್ಣಿನ ಫಲವತ್ತತೆ, ತಂತ್ರಜ್ಞಾನ, ರೈತರಿಗೆ ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋದಾಮುಗಳು ಆಗಬೇಕು. ಆಗ ಮಾತ್ರ ಸುಸ್ಥಿರವಾದ ಕೃಷಿ ಬೆಳವಣಿಗೆ ಆಗುತ್ತದೆ' ಎಂದು ಹೇಳಿದರು.

'ಬರಗಾಲದ ಸಂದರ್ಭದಲ್ಲಿ ಉತ್ತಮ ಇಳುವರಿ ನೀಡುವ ತಳಿಗಳನ್ನು ಆವಿಷ್ಕರಿಸಿದರೆ ಕೃಷಿ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ಮಳೆ ನೀರು ಸಂಗ್ರಹಿಸುವ ರೈತರಿಗೆ ಅನುದಾನ ನೀಡಲಾಗುವುದು' ಎಂದು ಭರವಸೆ ನೀಡಿದರು.

'ಕೃಷಿ ವಿಶ್ವವಿದ್ಯಾಲಯಗಳು ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಸಂಸ್ಥೆಗಳಲ್ಲ. ಕೃಷಿ ವಿದ್ಯಾರ್ಥಿಗಳನ್ನು ತಯಾರಿಸುವ ಜೊತೆಗೆ ಸಂಶೋಧನೆಗಳಿಗೆ ಒತ್ತು ನೀಡಬೇಕು. ರಾಜಸ್ಥಾನ ಬಿಟ್ಟರೆ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಣಭೂಮಿಯಿದೆ. ಕೃಷಿಯಿಂದ ವಿಮುಖರಾಗುವ ರೈತರ ಸಂಖ್ಯೆ ಹೆಚ್ಚುತ್ತಿದ್ದು, ಕೃಷಿಯನ್ನು ಲಾಭದಾಯಕ ಮಾಡುವತ್ತ ಕೃಷಿ ವಿಶ್ವವಿದ್ಯಾಲಯಗಳು ಮುಂದಾಗಬೇಕು' ಎಂದು ಹೇಳಿದರು.


'ಕಡಿಮೆ ನೀರು ಸಾಕಾಗುವ ಹಾಗೂ ರೋಗ ನಿರೋಧಶಕ್ತಿಯಿರುವ ತಳಿಗಳನ್ನು ಆವಿಷ್ಕಾರ ಮಾಡಬೇಕು' ಎಂದು ಸೂಚನೆ ನೀಡಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೃಷಿಯನ್ನು ಲಾಭದಾಯಕ ಮಾಡುವತ್ತ ಗಮನ ಹರಿಸಬೇಕು ಎಂದು ಅವರು ಹೇಳಿದರು.

ಶಾಸಕ ಶರತ್ ಬಚ್ಚೇಗೌಡ, ಕುಲಪತಿ ಎಚ್.ವಿ.ಸುರೇಶ್ ಹಾಗೂ ಇತರ ಅಧಿಕಾರಿಗಳು ಇದ್ದರು.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಶುಕ್ರವಾರ ಆರಂಭವಾದ ಕೃಷಿಮೇಳದಲ್ಲಿ (ಎಡದಿಂದ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿ.ಆರ್.ಮಂಜುನಾಥ (ಎಚ್.ಡಿ.ದೇವೇಗೌಡ ಅತ್ಯುತ್ತಮ ರೈತ ಪ್ರಶಸ್ತಿ), ಶಿವಮೊಗ್ಗ ಜಿಲ್ಲೆಯ ಎಚ್.ಟಿ.ರಾಜೇಂದ್ರ (ಎಂ.ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ), ರಾಮನಗರ ಜಿಲ್ಲೆಯ ಬಿ.ಪಿ.ವಾಸು (ಕ್ಯಾನ್ ಬ್ಯಾಂಕ್ ಪ್ರಶಸ್ತಿ), ಕೋಲಾರ ಜಿಲ್ಲೆಯ ಎ.ವಿ.ರತ್ನಮ್ಮ (ಕ್ಯಾನ್ ಬ್ಯಾಂಕ್ ರೈತ ಮಹಿಳಾ ಪ್ರಶಸ್ತಿ), ಹಾಸನ ಜಿಲ್ಲೆಯ ಬಿ.ಜಿ.ಮಂಜೇಗೌಡ (ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ) ಹಾಗೂ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಎಂ.ವಿ.ಧನಂಜಯ್ (ತೋಟಗಾರಿಕೆ ಸಂಶೋಧನಾ ದತ್ತಿ ಪ್ರಶಸ್ತಿ) ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಲಪತಿ ಎಸ್.ವಿ.ಸುರೇಶ, ಶಾಸಕ ಶರತ್ ಬಚ್ಚೇಗೌಡ, ಸಚಿವ ಚಲುವರಾಯಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು — ಪ್ರಜಾವಾಣಿ ಚಿತ್ರ




'ಲಂಚವಿಲ್ಲದ ಕೆಲಸ ರೈತರದ್ದು'

'ಸಂಬಳ, ಬಡ್ತಿ, ನಿವೃತ್ತಿ ವೇತನ, ಲಂಚವಿಲ್ಲದ ಕೆಲಸ ರೈತರದ್ದು. ಕೃಷಿ ಕೆಲಸದಿಂದ ರೈತರಿಗೆ ನಿವೃತ್ತಿ ಎಂಬುದೂ ಇಲ್ಲ. ಹೇಗೋ ರೈತರು ಬದುಕು ನಡೆಸುತ್ತಿದ್ದಾರೆ. ಸರ್ಕಾರಗಳು ರೈತರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನಗರಗಳತ್ತ ರೈತರ ವಲಸೆ ಹೆಚ್ಚಾಗಿದೆ. ಆಸ್ತಿ ಮಾರಾಟ ಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಿಂದ ಶೇ 42ರಷ್ಟು ಮಂದಿ ನಗರಗಳತ್ತ ವಲಸೆ ಬಂದಿದ್ದಾರೆ' ಎಂದು ಹೇಳಿದರು.

'ಬರಗಾಲವಿರುವ ಕಾರಣ ನರೇಗಾ ಯೋಜನೆ ಮಾನವ ದಿನಗಳನ್ನು 100 ದಿನಗಳ ಬದಲು 150 ದಿನಗಳಿಗೆ ಏರಿಕೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

'ನಮ್ಮ ರೈತರು ಇಡೀ ದೇಶಕ್ಕೆ ಮಾದರಿ': ನೀರಿನ ಸದ್ಬಳಕೆ ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡುವ ಬಗ್ಗೆ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ರೈತರು ಇಡೀ ದೇಶಕ್ಕೆ ಮಾದರಿ ಆಗಿದ್ದಾರೆ. ರಾಮನಗರದ ರೈತರಿಗಿಂತ ಈ ಭಾಗದ ರೈತರು ಚೆನ್ನಾಗಿ ಜೀವನ ಕಟ್ಟಿಕೊಂಡಿದ್ದಾರೆ ಎಂದು ಹೇಳಿದರು.



ಏಕಲವ್ಯ ಹಳ್ಳಿಕಾರ್ ಹೋರಿಯನ್ನು ಜನರು ಕುತೂಹಲದಿಂದ ವೀಕ್ಷಿಸಿದರು.

ಏಕಲವ್ಯ ಹಳ್ಳಿಕಾರ್ ಎತ್ತಿನ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ತುರುವೇಕೆರೆಯ ಏಕಲವ್ಯ ಹಳ್ಳಿಕಾರ್ ನಾಟಿ ಎತ್ತು ಈ ಬಾರಿಯ ಕೃಷಿ ಮೇಳದಲ್ಲಿ ಜನರ ಗಮನ ಸೆಳೆಯುತ್ತಿದೆ.

ಕೃಷಿಮೇಳದ ಪಶುಸಂಗೋಪನಾ ವಿಭಾಗದ ಮಳಿಗೆಯಲ್ಲಿ ಈ ಎತ್ತು ಜನರನ್ನು ಸೆಳೆಯುತ್ತಿದೆ. ಇದರ ವಯಸ್ಸು 4 ವರ್ಷ. ಬೆಲೆ ಬರೋಬ್ಬರಿ ₹ 26 ಲಕ್ಷ.

ತುರುವೇಕೆರೆಯ ಮಾಜಿ ಶಾಸಕ ಮಸಾಲ ಜಯರಾಂ ಅವರು, ಈ ಹಳ್ಳಿಕಾರ್ ಹೋರಿಯನ್ನು ಖರೀದಿಸಿದ್ದರು. ಈ ಹೋರಿಗೆ ಬೇಯಿಸಿದ ಹುರುಳಿ ನುಚ್ಚು, ರವೆಬೂಸ, ಕೊಬ್ಬರಿ, ಬೆಲ್ಲ, ನಾಟಿ ಮೊಟ್ಟೆ, ಪಚ್ಚಬಾಳೆಹಣ್ಣು, ವಾರಕ್ಕೊಮ್ಮೆ ನಾಟಿ ಬೆಣ್ಣೆ, ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ತಲಾ ಎರಡೂವರೆ ಲೀಟರ್ ಹಾಲನ್ನು ಆಹಾರವಾಗಿ ನಿಡಲಾಗುತ್ತಿದೆ ಎಂದು ಸಾಕಾಣಿಕೆದಾರ ಯಡಿಯೂರಪ್ಪ ಹೇಳಿದರು.

ಆರೋಗ್ಯ–ಆಹಾರ ಜಾಗೃತಿಗೆ ಪೋಷಣಾ ಕಾರ್ಡ್

ಬೆಂಗಳೂರು: ವ್ಯಕ್ತಿಯ ಎತ್ತರ, ತೂಕ ಅಳತೆ ಮಾಡಿ, ಅದಕ್ಕೆ ತಕ್ಕಂತೆ 'ಡಯಟ್' ಸಲಹೆ ನೀಡುವ ವಿಶಿಷ್ಟ ಮಳಿಗೆಯೊಂದು ಕೃಷಿ ಮೇಳದ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು.

ಕೃಷಿ ವಿಶ್ವವಿದ್ಯಾಲಯದ ಅಖಿಲ ಭಾರತ ಸುಸಂಘಟಿತ ಸಂಶೋಧನೆ ಯೋಜನೆ(ಕೃಷಿ ನಿರತ ಮಹಿಳೆಯರು) ಮಳಿಗೆ ಅದು.

ಆಹಾರ ತಜ್ಞೆ ಉಷಾ ರವೀಂದ್ರ ನೇತೃತ್ವದ ವಿಜ್ಞಾನಿಗಳ ತಂಡ, ಮಳಿಗೆಗೆ ಭೇಟಿ ನೀಡುತ್ತಿದ್ದ ಆಸಕ್ತರ ಎತ್ತರ, ತೂಕ ಅಳತೆ ಮಾಡಿ, 'ಆಹಾರ ಪಥ್ಯ'ದ ಬಗ್ಗೆ ಸಲಹೆ ನೀಡುತ್ತಿದ್ದರು.

ತಪಾಸಣೆ ನಂತರ, ವ್ಯಕ್ತಿಯ ವಯಸ್ಸು ಮತ್ತು ದೇಹದಾರ್ಢ್ಯಕ್ಕೆ ತಕ್ಕಂತೆ ಯಾವ ತರಹದ ಆಹಾರವನ್ನು, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಹಾಗೂ ಜೀವನ ಶೈಲಿ ಹೇಗಿರಬೇಕೆಂಬ ಮಾಹಿತಿಯಿರುವ 'ಪೋಷಣಾ ಕಾರ್ಡ್'ಗಳನ್ನು ನೀಡುತ್ತಿದ್ದರು.

ಅತಿ ತೂಕವಿದ್ದವರಿಗೆ ಕೆಂಪು, ಕಿತ್ತಳೆ ಹಾಗೂ ಹಳದಿ ಬಣ್ಣದ ಕಾರ್ಡ್‌ಗಳು, ಕಡಿಮೆ ತೂಕವಿರುವವರಿಗೆ ಗಾಢ ಹಸಿರು ಬಣ್ಣದ ಕಾರ್ಡ್ ಹಾಗೂ ಸರಿಯಾದ ತೂಕವಿದ್ದರಿಗೆ ತಿಳಿ ಹಸಿರು ಬಣ್ಣದ ಕಾರ್ಡ್ ನೀಡುತ್ತಿದ್ದರು. ಕಾರ್ಡ್‌ನಲ್ಲಿ ವ್ಯಕ್ತಿಯ ಹೆಸರು, ವಯಸ್ಸು, ತೂಕ, ಎತ್ತರ, ಬಾಡಿ ಮಾಸ್ ಇಂಡೆಕ್ಸ್ (ಬಿಎಂಐ) ನಮೂದಿಸುತ್ತಿದ್ದರು.

'ಡಯಟ್ ಎಂದರೆ ಆಹಾರ ತ್ಯಜಿಸುವುದಲ್ಲ. ಬದಲಿಗೆ ಯಾರು, ಯಾವ ಆಹಾರವನ್ನು ಎಷ್ಟು ಸೇವಿಸಬೇಕೆಂಬುದನ್ನು ತಿಳಿಸಿ, ಆಹಾರ–ಆರೋಗ್ಯದ ಸಂಬಂಧ ಕುರಿತು ಜಾಗೃತಿ ಮೂಡಿಸುವುದು ಈ ಪೋಷಣಾ ಕಾರ್ಡ್‌ನ ಉದ್ದೇಶ' ಎಂದು ವಿಜ್ಞಾನಿ ಉಷಾ ರವೀಂದ್ರ ತಿಳಿಸಿದರು.

ಅಭಿಪ್ರಾಯಗಳು

ಮಾಹಿತಿ ಕಣಜ



ಕೃಷಿಮೇಳ ರೈತರಿಗೆ ಹಲವು ವರ್ಷದಿಂದ ಉತ್ತಮ ಮಾಹಿತಿ ಒದಗಿಸುತ್ತಿದೆ. ಕಳೆದ ವರ್ಷ ಮಳೆಯಿಂದಾಗಿ ಪ್ರಾತ್ಯಕ್ಷಿಕೆ ವೀಕ್ಷಣೆಗೆ ತೊಂದರೆ ಆಗಿತ್ತು. ಕೋಳಿ ಪ್ರಪಂಚ ವಿಭಾಗವು ಕುಕ್ಕುಟೋದ್ಯಮದಿಂದ ಲಾಭವನ್ನು ರೈತರಿಗೆ ತಿಳಿಸುತ್ತಿದೆ.

ಮರುಗೇಶ್, ಆನೇಕಲ್

ಸಮಗ್ರ ಮಾಹಿತಿ



ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಕುಸಿತ ಕಂಡಿದ್ದು, ರೈತರು ಸಮಸ್ಯೆ ಎದುರಿಸುತ್ತಿದ್ದಾರೆ. ಬರಗಾಲದ ಸಂದರ್ಭದಲ್ಲಿ ನೀರಿನ ನಿರ್ವಹಣೆ ಹಾಗೂ ಮಳೆ ನೀರು ಸಂಗ್ರಹದ ಬಗ್ಗೆ ಮೇಳ ಮಾಹಿತಿ ಒದಗಿಸುತ್ತಿದೆ.

ರಾಧಾ, ಕೋಲಾರ

ಮಾಹಿತಿ ಬೇಕಿತ್ತು...



ಈರುಳ್ಳಿ, ಮೆಕ್ಕೆಜೋಳ ಬೆಳೆಗಳ ಬಗ್ಗೆ ಮತ್ತಷ್ಟು ಮಾಹಿತಿ ನೀಡುವ ಮಳಿಗೆಗಳನ್ನು ಹಾಕಬೇಕಿತ್ತು. ಮಾರಾಟಕ್ಕಿಂತ ರೈತರಿಗೆ ಮಾಹಿತಿ ನೀಡುವುದಕ್ಕೆ ಆದ್ಯತೆ ನೀಡಬೇಕಿತ್ತು. ಕೃಷಿಮೇಳ ಮಾರಾಟ ಮೇಳ ಆಗಬಾರದು. ಕೆಲವು ಕಡೆ ಮಾರಾಟವೇ ಪ್ರಧಾನ ಆಗಿದೆ.

ಬೋರಯ್ಯ, ಚಳ್ಳಕೆರೆ



ಪ್ರಾತ್ಯಕ್ಷಿಕೆ ವೀಕ್ಷಿಸಿದ ವಿದ್ಯಾರ್ಥಿಗಳು —ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

1.31 ಲಕ್ಷ ಮಂದಿ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿ ಮೇಳಕ್ಕೆ ಮೊದಲ ದಿನ ರೈತರ ಸಂಖ್ಯೆ ಕಡಿಮೆಯಿತ್ತು.

ಕಳೆದ ವರ್ಷ ಹಿಂಗಾರು ಮಳೆಯ ನಡುವೆಯೂ ವಿವಿಧ ಜಿಲ್ಲೆಗಳ ರೈತರು ಮೇಳಕ್ಕೆ ಆಗಮಿಸಿ ಕಣ್ತುಂಬಿಕೊಂಡಿದ್ದರು. ಈ ವರ್ಷ ಬರದ ಛಾಯೆ ಆವರಿಸಿದ್ದರಿಂದ ರೈತರ ಸಂಖ್ಯೆ ಕಡಿಮೆಯಿತ್ತು. ಮೇಳದಲ್ಲಿ ವಿದ್ಯಾರ್ಥಿಗಳು, ನಗರದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಳಿಗೆಗಳು ಹಾಗೂ ಪ್ರಾತ್ಯಕ್ಷಿಕೆ ವೀಕ್ಷಿಸಿದರು.

ಶುಕ್ರವಾರ 1.31 ಲಕ್ಷ ಮಂದಿ ಮೇಳ ವೀಕ್ಷಣೆ ಮಾಡಿದ್ದು, 8 ಸಾವಿರ ಮಂದಿ ರಿಯಾಯಿತಿ ದರದಲ್ಲಿ ಮಧ್ಯಾಹ್ನದ ಊಟ ಸವಿದರು ಎಂದು ವಿವಿ ತಿಳಿಸಿದೆ. ₹ 40ಕ್ಕೆ ಮೈಸೂರು ಪಾಕ್, ಹೆಸರು ಕಾಳು ಪಲ್ಯ, ಮುದ್ದೆ, ಸಾಗು, ಮೊಟ್ಟೆ, ಅನ್ನ, ಸಾಂಬರ್ ನೀಡಲಾಯಿತು. ಮೊದಲ ದಿನ ₹ 80 ಲಕ್ಷ ವಹಿವಾಟು ನಡೆದಿದೆ ಎಂದು ವಿವಿ ಮೂಲಗಳು ತಿಳಿಸಿವೆ. ನವೆಂಬರ್ 20ರ (ಸೋಮವಾರ) ಸಂಜೆ ಕೃಷಿಮೇಳಕ್ಕೆ ತೆರೆ ಬೀಳಲಿದೆ.

'ಧರ್ತಿ ಮಿತ್ರ' ಮೊಬೈಲ್ ಆ್ಯಪ್

ಮೇಳದಲ್ಲಿ ಮಣ್ಣಿನ ಫಲವತ್ತತೆ ಮತ್ತು ರಸಗೊಬ್ಬರ ಶಿಫಾರಸ್ಸಿಗೆ 'ಧರ್ತಿ ಮಿತ್ರ' ಹೆಸರಿನ ವೆಬ್ ಹಾಗೂ ಮೊಬೈಲ್ ಆ್ಯಪ್ ಅಭಿವೃದ್ಧಿ ಪಡಿಸಲಾಗಿದ್ದು, ಅದನ್ನು ಬಿಡುಗಡೆ ಮಾಡಲಾಯಿತು.

ವಿವಿಯ ಅಖಿಲ ಭಾರತ ಸುಸಂಘಟಿತ ಸಂಶೋಧನಾ ಯೋಜನೆ ಅಡಿ ಈ ಇವುಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾಸನ, ಚಾಮರಾಜನಗರ, ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ರೈತರಿಗಾಗಿ ಈ ಆ್ಯಪ್ ಅಭಿವೃದ್ಧಿಸಲಾಗಿದೆ.

ರೈತರು ಯಾವುದೇ ಪ್ರಯೋಗಾಲಯಕ್ಕೆ ಹೋಗದೇ, ಮೊಬೈಲ್ ಆ್ಯಪ್ ಬಳಸಿಕೊಂಡು ತಮ್ಮ ಜಮೀನಿನ ಮಣ್ಣಿನ ಫಲವತ್ತತೆ ತಿಳಿಯಬಹುದಾಗಿದೆ. ಈ ಸಾಫ್ಟ್‌ವೇರ್‌ನಲ್ಲಿ ರೈತರು ಜಮೀನಿನ ಸರ್ವೆ ನಂಬರ್ ನಮೂದಿಸುವ ಮೂಲಕ ಮಣ್ಣಿನ ಪೋಷಕಾಂಶಗಳ ಮಾಹಿತಿ ಜೊತೆಗೆ ರಸಗೊಬ್ಬರಗಳ ಶಿಫಾರಸ್ಸಿನ ಪ್ರಮಾಣದ ವರದಿಯನ್ನು ಪಡೆಯಬಹುದಾಗಿದೆ. ಪ್ರಯೋಗಾಲಯದಲ್ಲಿ ವಿಶ್ಲೇಷಣೆ ಮಾಡಿದ ವರದಿಗೆ ಹೋಲಿಸಿದರೆ ಈ ವರದಿಯು ಶೇ 75ರಿಂದ 90ರಷ್ಟು ನಿಖರವಾಗಿರುತ್ತದೆ ಎಂದು ಕೃಷಿ ವಿಜ್ಞಾನಿಗಳು ಹೇಳಿದರು.

ಸಿರಿಧಾನ್ಯದ ಲೋಕ ಅನಾವರಣ

ಮೊದಲ ಬಾರಿಗೆ ಸಿರಿಧಾನ್ಯ ಎಕ್ಸ್‌ಪೊ: ರೈತರ ಆಕರ್ಷಣೆಯ ಕೇಂದ್ರ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ ಕೃಷಿಮೇಳದಲ್ಲಿ ಸಿರಿಧಾನ್ಯಗಳ ಲೋಕವೇ ಅನಾವರಣಗೊಂಡಿದೆ. ಆಹಾರ, ಆರೋಗ್ಯ, ಆದಾಯಕ್ಕೆ ಸಿರಿಧಾನ್ಯಗಳು ಎಂಬ ಘೋಷವಾಕ್ಯದ ಅಡಿ ಈ ಮೇಳ ಆಯೋಜಿಸಲಾಗಿದೆ. ಮೊದಲ ಬಾರಿಗೆ ಸಿರಿಧಾನ್ಯ ಮಳಿಗೆಗಳ ಪ್ರತ್ಯೇಕ ವಿಭಾಗವನ್ನೇ ಸ್ಥಾಪಿಸಲಾಗಿದ್ದು ರೈತರ ಆಕರ್ಷಣೆ ಕೇಂದ್ರವಾಗಿದೆ.

ಸಿರಿಧಾನ್ಯಗಳಲ್ಲಿ ಹಲವು ಬಗೆಯ ಉತ್ಪನ್ನಗಳು ಇಲ್ಲಿ ಅನಾವರಣಗೊಂಡಿವೆ. ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಅಂಗವಾಗಿ ಈ ಮೇಳ ಆಯೋಜಿಸಲಾಗಿದೆ.

ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ತಯಾರಿಸಿರುವ ಸಿರಿಧಾನ್ಯದ ಪುಡಿ, ಸಿರಿಧಾನ್ಯದ ಬ್ರೆಡ್, ಬಿಸ್ಕತ್ತು ಸೇರಿದಂತೆ ಹಲವು ಬಗೆಯ ತಿನಿಸುಗಳು ಗಮನ ಸೆಳೆಯುತ್ತಿವೆ. ಅಲ್ಲದೇ ಸಿರಿಧಾನ್ಯದ ಮಹತ್ವವನ್ನೂ ಸಾರುತ್ತಿದೆ ಈ ಮೇಳ. ಸದ್ಯ 20ಕ್ಕೂ ಹೆಚ್ಚು ಮಳಿಗೆಗಳಲ್ಲಿ ಸಿರಿಧಾನ್ಯದ ಉತ್ಪನ್ನಗಳಿದ್ದು ಶನಿವಾರ ಅವುಗಳ ಸಂಖ್ಯೆ ಹೆಚ್ಚಲಿವೆ.

ಅಖಿಲ ಭಾರತ ಸುಸಂಘಟಿತ ಸಿರಿಧಾನ್ಯ ಮಳಿಗೆಯಲ್ಲಿ ಸಿರಿಧಾನ್ಯದ ವೈಭವವೇ ಇದೆ. ಸಾಂಪ್ರದಾಯಿಕ ಸಿರಿಧಾನ್ಯ ಶೇಖರಣೆ, ಒಳಕಲ್ಲು, ಸಂಸ್ಕರಣಾ ಪದ್ಧತಿ, ಮೊರದಿಂದ ಸಿರಿಧಾನ್ಯ ಸ್ವಚ್ಛತೆ, ಬೀಸುವ ಕಲ್ಲು, ಹಿಟ್ಟಿನಿಂದ ರೊಟ್ಟಿ ತಯಾರಿಕೆ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ. ಇದು ರೈತರನ್ನು ಆಕರ್ಷಿಸುತ್ತಿದೆ.

ಸಿರಿಧಾನ್ಯಕ್ಕೆ ರೋಗಬಾಧೆ: ಸಿರಿಧಾನ್ಯಕ್ಕೂ ಹಲವು ರೋಗಗಳು ಬಾಧಿಸುತ್ತಿದ್ದು ಅವುಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಕುತ್ತಿಗೆ ರೋಗ, ಬೆಂಕಿರೋಗ, ಇಲುಕುಬೆಂಕಿ ರೋಗ, ತೆನೆಕಾಡಿಗೆ ರೋಗ, ಎಲೆ ಅಂಗಮಾರಿ ರೋಗ, ಕಾಳುಕಾಡಿಗೆ ರೋಗಗಳು ಸಾಮಾನ್ಯವಾಗಿ ಸಿರಿಧಾನ್ಯದ ಬೆಳೆಗೆ ಕಾಡುತ್ತವೆ. ನವಣೆ, ಸಾಮೆ, ಹಾರಕ, ಊದಲು, ಬರಗು ಬೆಳೆಗೂ ಸುಳಿನೊಣಗಳ ಕಾಟ ಇದೆ. ಈ ರೋಗ ಬಾರದಂತೆ ತಡೆಯುವುದು ಹೇಗೆ ಎಂಬ ಮಾಹಿತಿ ಮೇಳದಲ್ಲಿ ರೈತರಿಗೆ ಲಭಿಸುತ್ತಿದೆ. ಈ ಬೆಳೆ ಬೆಳೆದ ರೈತರು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.



ಸಿರಿಧಾನ್ಯಗಳ ಮಳಿಗೆಯಲ್ಲಿ ಸಂಸ್ಕರಣೆಯ ವಿವಿಧ ಹಂತಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಬಳಕೆ ಹೆಚ್ಚು: ಉತ್ಪಾದನೆ ಕಡಿಮೆ'



ಸುಜಯ್

ಸಿರಿಧಾನ್ಯಕ್ಕೆ ಈಗ ಬೇಡಿಕೆ ಹೆಚ್ಚಾಗಿದ್ದು ಪೂರೈಕೆ ಕಡಿಮೆಯಿದೆ. ನಾವು ಸಿರಿಧಾನ್ಯ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುತ್ತಿದ್ದು ಸ್ವಸಹಾಯ ಸಂಘಗಳಿಗೆ ತರಬೇತಿ ಸಹ ನೀಡುತ್ತಿದ್ದೇವೆ. ಕಳೆದ ಕೆಲವು ತಿಂಗಳಿಂದ ಸಿರಿಧಾನ್ಯದ ಪಾಸ್ತ, ಬ್ರೆಡ್, ಬಿಸ್ಕತ್ತಿಗೆ ಬೇಡಿಕೆ ಹೆಚ್ಚಾಗಿದೆ ಎಂದು ಕನಕಪುರ ಆರ್ಗ್ಯಾನಿಕ್ ಪ್ರೊಡ್ಯೂಸರ್ ಕಂಪನಿಯ ಸುಜಯ್ ರಾಮಸಾಗರ ಹೇಳಿದರು.

ಸಿರಿಧಾನ್ಯದಿಂದ ಅವಲಕ್ಕಿ ತಯಾರಿಸಲಾಗುತ್ತಿದೆ. ರೈತ ಉತ್ಪಾದಕ ಸಂಸ್ಥೆಯಿಂದ ಸಿರಿಧಾನ್ಯ ಬೆಳೆಯಲು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು ನಾವೇ ಧಾನ್ಯ ಖರೀದಿಸಿ ಮೌಲ್ಯವರ್ಧನೆ ಮಾಡುತ್ತಿದ್ದೇವೆ. ಇದರಿಂದ ರೈತರಿಗೂ ಲಾಭವಾಗುತ್ತಿದೆ ಎಂದು ಅವರು ಹೇಳಿದರು.

ಮೇಳದಲ್ಲಿ ಕಂಡಿದ್ದು...

- 'ಬೆಲ್ಲ ಬಳಸಿ ಆರೋಗ್ಯ ವೃದ್ಧಿಸಿ' ಘೋಷಣೆ ಅಡಿ ಮಂಡ್ಯದ ಬೆಲ್ಲದ ಪರಿಸೆ ಗಮನ ಸೆಳೆಯುತ್ತಿದೆ.
- ಹಳ್ಳಿಕಾರ್ ಹೋರಿಗಳು ಆಕರ್ಷಕವಾಗಿವೆ.
- ರೈತರ ಮಾಹಿತಿಗೆ ಸಲಹಾ ಸೇವೆ ಮಳಿಗೆ ಆರಂಭಿಸಲಾಗಿದೆ. ಈ ಮಳಿಗೆಯತ್ತ ಬರುವ ರೈತರ ಸಂಖ್ಯೆ ಹೆಚ್ಚಾಗಿದೆ.
- ಕೋಳಿ ಪ್ರಪಂಚವು ಮೊಟ್ಟೆ ಹಾಗೂ ಕೋಳಿ ಮಾಂಸ ಸೇವನೆಯ ಮಹತ್ವ ಸಾರುತ್ತಿದೆ.
- ಸರ್ಕಾರದ ಗ್ಯಾರಂಟಿ ಯೋಜನೆಗಳ ಮಾಹಿತಿ ನೀಡುವ ವಾರ್ತಾ ಇಲಾಖೆ ಮಳಿಗೆ ಗಮನ ಸೆಳೆಯಿತು.



ಸವಿತಾ

'ಪ್ರತಿ ಸಿರಿಧಾನ್ಯಕ್ಕೂ ಮಹತ್ವವಿದೆ. ಕೆಲವರು ಎಲ್ಲ ಪುಡಿಗಳನ್ನು ಮಿಶ್ರ ಮಾಡಿ ಮಾರಾಟ ಮಾಡುತ್ತಾರೆ. ನಾವು ಪ್ರತ್ಯೇಕವಾಗಿ ಪುಡಿ ಮಾಡಿಯೇ ಮಾರಾಟ ಮಾಡುತ್ತಿದ್ದೇವೆ. ಈ ಪುಡಿಯಿಂದ ಗಂಜಿ, ಸೂಪ್, ದೋಸೆ ತಯಾರಿಸಿ ಸೇವಿಸಬಹುದು' ಎಂದು ಐಶ್ವರ್ಯ ಸ್ವಸಹಾಯ ಸಂಘದ ಸವಿತಾ ಹೇಳಿದರು.

'ಬಿಳಿ ನೊಣ' ನಿಯಂತ್ರಣಕ್ಕೆ ಬೇವಿನ ಎಣ್ಣೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಲೀಟರ್ ನೀರಿಗೆ 5 ಮಿ.ಲೀ ಬೇವಿನೆಣ್ಣೆ, 1 ಮಿಲೀ ಸೋಪ್ ಆಯಿಲ್ ಬೆರೆಸಿ, ಹದಿನೈದು ದಿನಕ್ಕೊಮ್ಮೆ ಬಿಳಿ ನೊಣ ಬಾಧಿತ ತೆಂಗಿನ ಗರಿಗಳ ಕೆಳಭಾಗಕ್ಕೆ ಸಿಂಪಡಿಸಿದರೆ, ನೊಣಗಳ ಬಾಧೆ ಕ್ರಮೇಣ ಕಡಿಮೆಯಾಗುತ್ತದೆ...

ನಗರದ ಕೃಷಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿಮೇಳದಲ್ಲಿ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರಕಾಶ್, ಅವರು ಮಳಿಗೆಗೆ ಭೇಟಿ ನೀಡಿದ ರೈತರಿಗೆ ತೆಂಗು ಮತ್ತಿತರ ಬೆಳೆಗಳಿಗೆ ತಗಲುವ ಬಿಳಿನೊಣ ಬಾಧೆ ಹಾಗೂ ಅದನ್ನು ನಿವಾರಿಸುವ ವಿಧಾನವನ್ನು ವಿವರಿಸಿದರು.

ಪ್ರದರ್ಶನಕ್ಕಿಟ್ಟಿದ್ದ ಬಿಳಿ ನೊಣ ಬಾಧಿತ ತೆಂಗಿನ ಗರಿಗಳನ್ನು ರೈತರಿಗೆ ತೋರಿಸಿ ವಿವರಣೆ ನೀಡಿದ ಪ್ರಕಾಶ್ ಅವರು, 'ಇದು ತೆಂಗಿಗಷ್ಟೇ ಅಲ್ಲದೇ, ಅದರೊಂದಿಗೆ ಬೆಳೆಯುವ ಅಡಿಕೆ, ಬಾಳೆಯಂತಹ ಬೆಳೆಗಳನ್ನು ಬಾಧಿಸುತ್ತದೆ. ಈ ನೊಣಗಳು ಎಲೆಗಳಲ್ಲಿರುವ ರಸ ಹೀರುತ್ತವೆ. ಇದರಿಂದ ಗಿಡಗಳು ಸೊರಗುತ್ತವೆ. ಕೀಟಬಾಧೆ ಪತ್ತೆಯಾದ ಆರಂಭದಲ್ಲೇ ಬೇವಿನೆಣ್ಣೆ–ಸೋಪ್ ಆಯಿಲ್ ಮಿಶ್ರಣ, ಸಿಂಪಡಿಸಿದರೆ ಬಾಧೆಯನ್ನು ಹತೋಟಿಗೆ ತರಬಹುದು' ಎಂದು ಸಲಹೆ ನೀಡಿದರು.

'ಈ ಮಿಶ್ರಣವನ್ನು ಸಿಂಪಡಿಸುತ್ತಿದ್ದರೆ, ಬಿಳಿ ನೊಣದ ಬಾಧೆ ನಿವಾರಣೆಯಾಗುವ ಜೊತೆಗೆ, ಈ ನೊಣವನ್ನು ತಿನ್ನುವ ಸ್ವಾಭಾವಿಕ ಕೀಟಗಳು ಅಭಿವೃದ್ಧಿಯಾಗುತ್ತವೆ. ಮಿಶ್ರಣ ಸಿಂಪಡಿಸುವವರು ಕಡ್ಡಾಯವಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಬಿಳಿ ನೊಣ ಗಾಳಿಯಿಂದ ಹರಡುತ್ತದೆ. ಹಾಗಾಗಿ, ಈ ಮಿಶ್ರಣ ಸಿಂಪಡಿಸುವ ವಿಧಾನವನ್ನು ಸಾಮೂಹಿಕವಾಗಿ ಅನುಸರಿಸುವುದು ಒಳ್ಳೆಯದು ಎಂದು ರೈತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಾಷ್ ಕ್ಯಾಂಪಸ್‌ಗೆ ನೇರ ಸಂಪರ್ಕ: ಮೆಟ್ರೊ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಕಸಂದ್ರದಲ್ಲಿ ನಿರ್ಮಾಣಗೊಳ್ಳುತ್ತಿರುವ ನೆಲದಡಿ ಮೆಟ್ರೊ ನಿಲ್ದಾಣದಿಂದ ಬಾಷ್ ಕ್ಯಾಂಪಸ್‌ಗೆ ನೇರ ಸಂಪರ್ಕ ಒದಗಿಸಲು ಬಿಎಂಆರ್‌ಸಿಎಲ್ ಮತ್ತು ಬಾಷ್ ಸಂಸ್ಥೆ ಒಪ್ಪಂದ ಮಾಡಿಕೊಂಡಿವೆ.

ಬಾಷ್ ಆವರಣಕ್ಕೆ ಮೆಟ್ರೊ ನಿಲ್ದಾಣದಿಂದ ನೇರ ಸಂಪರ್ಕ ಒದಗಿಸಲು ಒಪ್ಪಂದ ಮಾಡಿಕೊಂಡಿರುವುದರಿಂದ ಬಾಷ್ ಸಂಸ್ಥೆಯ 1,200ಕ್ಕೂ ಅಧಿಕ ಉದ್ಯೋಗಿಗಳಿಗೆ ರಸ್ತೆ ದಾಟುವ ಪ್ರಯಾಸ ತಪ್ಪಲಿದೆ. 30 ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ನೆಲದಡಿ ಸಂಪರ್ಕ (70 ಅಡಿ ಉದ್ದ) ಕಾಮಗಾರಿಯನ್ನು ಬಿಎಂಆರ್‌ಸಿಎಲ್ ನಿರ್ವಹಿಸಲಿದೆ. ಅದರ ಅಂದಾಜು ವೆಚ್ಚ ₹ 30 ಕೋಟಿಯನ್ನು ಬಾಷ್ ಭರಿಸಲಿದೆ.

ಕಾಳೇನ ಅಗ್ರಹಾರದಿಂದ ನಾಗವಾರವರೆಗಿನ ರೀಚ್–6 ಮೆಟ್ರೊ ಮಾರ್ಗದಲ್ಲಿ ಇದು ಮೊದಲ ಒಪ್ಪಂದವಾಗಿದ್ದು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ಮತ್ತು ಬಾಷ್ ಸಂಸ್ಥೆಯ ಹಿರಿಯ ಪ್ರಧಾನ ವ್ಯವಸ್ಥಾಪಕ ಅರವಿಂದ್ ಮಯ್ಯ ಒಪ್ಪಂದಕ್ಕೆ ಸಹಿ ಹಾಕಿದರು.

19ರವರೆಗೆ ಚಿಕಣಿ ವರ್ಣಚಿತ್ರಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕಾಶ್ ಫೌಂಡೇಶನ್ 'ಪ್ಲೇ:ಎಕ್ಸ್‌ಪೆರಿಮೆಂಟ್ಸ್ ವಿಥ್ ಇಂಡಿಯನ್ ಮಿನಿಯೇಚರ್ಸ್' ಶೀರ್ಷಿಕೆಯಡಿ ಬರ್ಲಿ ಸ್ಟ್ರೀಟ್‌ನ ಕಾಶ್‌ನಲ್ಲಿ ಹಮ್ಮಿಕೊಂಡಿರುವ ಚಿಕಣಿ ವರ್ಣಚಿತ್ರಗಳ (ಮಿನಿಯೇಚರ್ಸ್) ಪ್ರದರ್ಶನಕ್ಕೆ ಚಾಲನೆ ದೊರೆತಿದ್ದು, ಈ ಪ್ರದರ್ಶನ ಇದೇ 19ರವರೆಗೆ ನಡೆಯಲಿದೆ.

ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಸಾರ್ವಜನಿಕರಿಗೆ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಇದು ಸಮೂಹ ಚಿತ್ರಕಲಾ ಪ್ರದರ್ಶನವಾಗಿದ್ದು, ವಿಜಯ್ ಸಿದ್ದರಾಮಪ್ಪ ಹಾಗರಗುಂಡಗಿ, ರಿಯಾಸುದ್ದೀನ್ ಹಾಗೂ ಗಾರ್ಗಿ ಚಂದೋಲ ಅವರ ಕಲಾಕೃತಿಗಳು ಪ್ರದರ್ಶನದಲ್ಲಿವೆ. ಸಾಂಪ್ರದಾಯಿಕ ಭಾರತೀಯ ಚಿಕಣಿ ಕಲೆಯನ್ನು ವಿಶಿಷ್ಟ ರೀತಿಯಲ್ಲಿ ಪ್ರಸ್ತುತಪಡಿಸಲಾಗಿದೆ.

ಕಲಬುರಗಿಯ ಹಾಗರಗುಂಡಗಿ ಅವರು ಸುರಪುರ ಶೈಲಿಯ ಡೆಕ್ಕನ್ ಚಿಕಣಿ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದು, ಅವರ 12 ಕಲಾಕೃತಿಗಳು ಪ್ರದರ್ಶನದಲ್ಲಿವೆ. ಈ ಕಲಾಕೃತಿಗಳು ಪ್ರಮುಖವಾಗಿ ಪೌರಾಣಿಕ ದಂತಕಥೆಗಳನ್ನು ಕೇಂದ್ರೀಕರಿಸಿವೆ. ಜೈಪುರದ ರಿಯಾಸುದ್ದೀನ್ ಅವರು ರಜಪೂತ ಚಿಕಣಿ ಶೈಲಿಯ ವರ್ಣಚಿತ್ರಗಳನ್ನು ಪ್ರಸ್ತುತಪಡಿಸಿದ್ದಾರೆ. ನವದೆಹಲಿಯ ಚಂದೋಲ ಅವರು ಸಮಕಾಲೀನ ವಿಷಯಗಳನ್ನು ಆಧರಿಸಿ, ಚಿಕಣಿ ವರ್ಣಚಿತ್ರಗಳನ್ನು ರಚಿಸಿದ್ದಾರೆ.




ರಿಯಾಸುದ್ದೀನ್ ಅವರು ರಚಿಸಿದ ಚಿಕಣಿ ವರ್ಣಚಿತ್ರ

ಈ ಚಿತ್ರಕಲೆ ಪ್ರದರ್ಶನವು ಕಾಶ್‌ನ ಸಂಸ್ಥಾಪನಾ ಸದಸ್ಯ ಮಂಜು ಸಾರಾ ರಾಜನ್ ಅವರ ಪರಿಕಲ್ಪನೆಯಾಗಿದೆ. ವಾಸ್ತುಶಿಲ್ಪವನ್ನು ಡೇವಿಡ್ ಜೊ ಥಾಮಸ್ ವಿನ್ಯಾಸಗೊಳಿಸಿದ್ದಾರೆ.

ನಿಧನವಾರ್ತೆ

ಎನ್. ಪ್ರೇಮ್‌ಕುಮಾರ್



ಬೆಂಗಳೂರು: ಬಸವೇಶ್ವರ ನಗರದ ನಿವಾಸಿ ಎನ್. ಪ್ರೇಮ್ ಕುಮಾರ್(48) ಅವರು ಶುಕ್ರವಾರ ನಿಧನರಾದರು. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ.

ಅಂತ್ಯಕ್ರಿಯೆ ಶನಿವಾರ ಮಾಗಡಿ ರಸ್ತೆಯ ಸುಮನಹಳ್ಳಿಯ ಚಿತಾಗಾರದಲ್ಲಿ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ತಿದ್ದುಪಡಿ

ಶುಕ್ರವಾರದ (ನ.17)ರ ಸಂಚಿಕೆಯ 3ಎ ಪುಟದಲ್ಲಿ ಪ್ರಕಟವಾಗಿದ್ದ 'ಕೆಪಿಎಸ್‌ಸಿ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ' ಎಂಬ ಸುದ್ದಿ ಅದೇ ಪುಟದಲ್ಲಿ 'ಬಸ್ ಡಿಕ್ಕಿ: ಮಹಿಳೆ ಸಾವು ಎಂಬ ಶೀರ್ಷಿಕೆಯಲ್ಲಿಯೂ ಪ್ರಕಟವಾಗಿ ತಪ್ಪಾಗಿದೆ.

ಸಿಸ್ಟೊಬಾಲ್: ವಿಜೇತ ಭಾರತ ತಂಡದಲ್ಲಿ ಆಡಿದ್ದ ಸಚಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡವು, ಥಾಯ್ಲೆಂಡ್ ಮತ್ತು ಶ್ರೀಲಂಕಾದಲ್ಲಿ ಇತ್ತೀಚೆಗೆ ನಡೆದ ಸಿಸ್ಟೊಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ಈ ತಂಡದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ಸಚಿನ್ ಎಸ್. ಆಡಿದ್ದರು.

ಎಂಟು ಪಂದ್ಯಗಳ ಪೈಕಿ 6 ಪಂದ್ಯಗಳಲ್ಲಿ ಆಡಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಸಚಿನ್ ಅವರನ್ನು ಚಿಕ್ಕಬಳ್ಳಾಪುರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಮುನಿರಾಜು ಹಾಗೂ ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕ ಶ್ರೀಹರಿ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಬೆಂಗಳೂರು ರೇಸ್

ಆಲ್ ಅಟ್ರ್ಯಾಕ್ಟಿವ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ ಅಟ್ರ್ಯಾಕ್ಟಿವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಲ್ವೆಡೆನ್ 7, ಇಸಾಬೆಲ್ 8, ಸ್ಟಾರ್ ಕಾನ್ಸೆಪ್ಟ್ 1
2ನೇ ರೇಸ್: ರೀಗಲ್ ಅರಿಸ್ಟೊಕ್ರಾಟ್ 11, ನೆವಡ ಗೋಲ್ಡ್ 4, ಬ್ರೇವ್ ಮೆಜೆಸ್ಟಿ 2
3ನೇ ರೇಸ್: ಇಲ್ ವೊಲೊ 2, ಫಿನಾಮಿನನ್ 4, ಹಾನರಬಲ್ ಡ್ಯೂಟಿ 1
4ನೇ ರೇಸ್: ಗಲಾಹಡ್ 7, ಫಿಲಾಸಫಿ 3, ಚಾಂಪಿಯನ್ಸ್ ವೇ 2
5ನೇ ರೇಸ್: ಆಲ್ ಅಟ್ರ್ಯಾಕ್ಟಿವ್ 1, ಓ ಹನ್ನಿನಿ 2, ಪ್ರೈಸ್‌ಲೆಸ್ ಗೋಲ್ಡ್ 3
6ನೇ ರೇಸ್: ಪ್ರಾನ 4, ಕಲಾಮಿಟ್ಸ 3, ಸಿರೇನಿಯಸ್ 1
7ನೇ ರೇಸ್: ಮಾಜ್‌ಗೋರ್‌ವೆಲ್ 7, ನಿಕೊಲಿನ 2, ಮ್ಯಾಕ್ರಾನ್ 4

ಉತ್ತಮ ಬೆಟ್: ರೀಗಲ್ ಅರಿಸ್ಟೊಕ್ರಾಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ದಾಖಲೆಗಳ ಶೀಘ್ರ ಬಿಡುಗಡೆ, ತನಿಖೆಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯ

‘ಲುಲು ಮಾಲ್‌ಗೆ 24 ಎಕರೆ ಕಬಳಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಿನರ್ವ ಮಿಲ್‌ಗೆ ಮೀಸಲಿಟ್ಟಿದ್ದ 24 ಎಕರೆ ಖರಾಬು ಭೂಮಿ ಕಬಳಿಸಿ ಐಷಾರಾಮಿ ಲುಲು ಮಾಲ್ ಕಟ್ಟಲಾಗಿದೆ. ಈ ಕುರಿತು ತನಿಖೆ ನಡೆಸಬೇಕು’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

‘ದೀಪಾವಳಿ ಸಮಯದಲ್ಲಿ ನನ್ನ ಅರಿವಿಗೆ ಬಾರದೆ ಅಚಾತುರ್ಯವಾಗಿರುವುದಕ್ಕೆ ನನ್ನನ್ನು ವಿದ್ಯುತ್ ಕಳ್ಳ ಎನ್ನುವ ಕಾಂಗ್ರೆಸ್ ನಾಯಕರು ತಮ್ಮ ಪಕ್ಕದಲ್ಲೇ ಕುಳಿತುಕೊಳ್ಳುವ ಮಹಾನ್ ಕಳ್ಳನ ಕಡೆಯೂ ನೋಡಬೇಕು. ಅವರು ನಕಲಿ ಸೊಸೈಟಿಯನ್ನು ಅಸಲಿ ಮಾಡಿಕೊಂಡಿದ್ದಾರೆ. ಸುಜಾತ ನಿಲ್ದಾಣದ ಬಳಿ ಇದ್ದ ಹೈಟೆನ್ಷನ್ ತಂತಿಗಳನ್ನು ಲುಲು ಮಾಲ್ ಕೆಳಗಡೆ ತೆಗೆದುಕೊಂಡು ಹೋಗಿರುವುದಕ್ಕೆ ಪಾವತಿಸಿದ ಹಣ, ಮಾಲ್ ಆರಂಭಕ್ಕೂ ಮೊದಲು ಬಳಸಿದ 6 ತಿಂಗಳ ವಿದ್ಯುತ್ ಬಳಕೆಯ ಬಗ್ಗೆಯೂ ಬೆಸ್ಕಾಂ ವಿಚಕ್ಷಣ ದಳ ಮಾಹಿತಿ ಬಹಿರಂಗಪಡಿಸಬೇಕು’ ಎಂದು ಆಗ್ರಹಿಸಿದರು.

ಆರೋಪಗಳ ತನಿಖೆಗೆ ಸಹಕಾರ: ‘ಗಣಿಗಾರಿಕೆಗೆ ಸಂಬಂಧಿಸಿದ ನನ್ನ ಮೇಲಿನ ಆರೋಪಗಳ ತನಿಖೆಗೆ ಸಂಪೂರ್ಣ ಸಹಕಾರ ನೀಡುವೆ. ತಮ್ಮ ಸ್ವಾರ್ಥಕ್ಕಾಗಿ ಲೋಕಾಯುಕ್ತದ ಕತ್ತು ಹಿಸುಕಿದವರೇ ಈಗ ವಿಶೇಷ ತನಿಖಾ ತಂಡದ ಅವಧಿ ವಿಸ್ತರಿಸಿರುವುದು ಸ್ವಾಗತಾರ್ಹ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನಿಖೆಗಾಗಿಯೇ ಪ್ರತ್ಯೇಕ ಘಟಕ ತೆರೆಯಿರಿ ಎಂದು ಮುಖ್ಯಮಂತ್ರಿಗೆ ಸಲಹೆ ನೀಡುವೆ’ ಎಂದರು.

‘ಗಣಿಗಾರಿಕೆಗೆ ಸಂಬಂಧಿಸಿದ ನಾಲ್ಕೂ ಪ್ರಕರಣಗಳಲ್ಲಿ ಯಾವುದೇ ಲೋಪ ಎಸಗಿಲ್ಲ. ಬಿಜೆಪಿ ಸರ್ಕಾರ ಇದ್ದಾಗಲೂ ಲೋಕಾಯುಕ್ತ, ಸಿಐಡಿ ತನಿಖೆ ನಡೆದಿದೆ. ನನ್ನ ಮೇಲೆ ಆರೋಪ ಮಾಡಿದವರೇ ಜೈಲಿಗೆ ಹೋಗಿ ಬಂದರು. ಮುಂದೆಯೂ ಎದೆಗುಂದದೇ ಧೈರ್ಯವಾಗಿ ಎದುರಿಸುವೆ. ಬಿಡದಿ ಜಮೀನಿನ ವಿಷಯದಲ್ಲೂ 38 ವರ್ಷಗಳಿಂದ ಹಲವು ತನಿಖೆ ಎದುರಿಸಿದ್ದೇನೆ. ಉಪ ವಿಭಾಗಾಧಿಕಾರಿಯೊಬ್ಬರು 200 ಎಕರೆ ಕಬಳಿಸಿದ್ದೇನೆ ಎಂದು ವರದಿ ಕೊಟ್ಟಿದ್ದರು. ವಾಸ್ತವದಲ್ಲಿ ನನ್ನದೇ ಮೂರ್‍ನಾಲ್ಕು ಎಕರೆ ಕಡಿಮೆ ಇದೆ. ಚಲುವರಾಯ ಸ್ವಾಮಿ ಒತ್ತಾಯದಂತೆ ಮತ್ತೆ ತನಿಖೆಗೆ ಆದೇಶಿಸುವುದನ್ನು ಸ್ವಾಗತಿಸುವೆ’ ಎಂದರು.

‘ನನ್ನ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಸರ್ಕಾರ ಹೊರಟಿದೆ. ಹೆದರಿಸಿದರೆ ಕುಮಾರಸ್ವಾಮಿ ಹೆದರಿಕೊಳ್ಳುತ್ತಾನೆ. ಬಾಯಿ ಮುಚ್ಚಿಸಬಹುದು ಎಂದು ಯಾರಾದರೂ ನಂಬಿದ್ದರೆ ಅದು ಅವರ ಮೂರ್ಖತನ. ಗುರುವಾರ ಸಂಪುಟ ಸಭೆ ಆದ ಮೇಲೆ ನನ್ನನ್ನು ಕಟ್ಟಿ ಹಾಕಲು ತಂತ್ರಗಾರಿಕೆ ರೂಪಿಸಲು ಇನ್ನೊಂದು ಸಭೆ ಮಾಡಿದ್ದಾರೆ. ಇದಕ್ಕೆಲ್ಲ ಜಗ್ಗುವುದಿಲ್ಲ. ಎದುರಿಸುವ ಶಕ್ತಿ ನನಗಿದೆ’ ಎಂದು ಅವರು ಹೇಳಿದರು.

> **ಸಂಭಾಷಣೆ ದೊಡ್ಡದು ಮಾಡುವ ಅಗತ್ಯವಿಲ್ಲ ಎಂದ ಎಚ್‌.ಡಿ.ರೇವಣ್ಣಗೆ ಹೃದಯ ವೈಶಾಲ್ಯವಿದೆ. ವಿರೋಧ ಪಕ್ಷದ ನಾಯಕನಾಗಿ ನನ್ನ ಕೆಲಸ ಮಾಡಿದ್ದೇನೆ**
> **ಎಚ್‌.ಡಿ.ಕುಮಾರಸ್ವಾಮಿ**
> ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಅಧಿವೇಶನದಲ್ಲೂ ‘ಸಂಭಾಷಣೆ’ ಪ್ರಸ್ತಾಪ


ಕುಮಾರಸ್ವಾಮಿ

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪುತ್ರ ಯತೀಂದ್ರ ಅವರ ಜತೆ ನಡೆಸಿದ ಸಂಭಾಷಣೆಗೆ ವರುಣ ಕ್ಷೇತ್ರದ ಶಾಲೆಗಳ ಸಿಎಸ್‌ಆರ್ ನಿಧಿಯ ಸ್ವರೂಪ ನೀಡಿದ್ದಾರೆ. ‘ಡೂಪ್ಲಿಕೇಟ್ ಸಿಎಂ’ ಡಿ.ಕೆ.ಶಿವಕುಮಾರ್ ಹೇಳಿಕೊಟ್ಟ ನಂತರವೇ ಮುಖ್ಯಮಂತ್ರಿ ಇಂತಹ ಹೇಳಿಕೆ ನೀಡಿದ್ದಾರೆ. ಈ ವಿಚಾರವನ್ನು ಮುಂದಿನ ಅಧಿವೇಶನದಲ್ಲೂ ಪ್ರಸ್ತಾಪ ಮಾಡುವೆ ಎಂದು ಕುಮಾರಸ್ವಾಮಿ ಹೇಳಿದರು.

ಬ್ಲ್ಯಾಕ್‌ಮೇಲ್‌ಗೆ ಹೆದರುವುದಿಲ್ಲ: ಡಿ.ಕೆ. ಶಿವಕುಮಾರ್



ಬೆಂಗಳೂರು: ‘ಎಚ್‌.ಡಿ. ಕುಮಾರಸ್ವಾಮಿ ಅವರ ಬ್ಲ್ಯಾಕ್‌ಮೇಲ್‌ಗಳಿಗೆ ನಾನು ಹೆದರುವುದಿಲ್ಲ. ಇದು ಅವರಿಗೂ ಗೊತ್ತು. ಅವರು ಕೇಳಿರುವ ಎಲ್ಲ ದಾಖಲೆಗಳನ್ನು ಒದಗಿಸಲು ಸಿದ್ಧ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಮೇಕೆದಾಟು ಪಾದಯಾತ್ರೆ ಕನಕೋತ್ಸವ ಮತ್ತು ಲುಲು ಮಾಲ್‌ನ ಆರಂಭಕ್ಕೂ ಮುನ್ನ ಶಿವಕುಮಾರ್ ವಿದ್ಯುತ್ ಕಳವು ಮಾಡಿದ್ದರು’ ಎಂಬ ಕುಮಾರಸ್ವಾಮಿ ಆರೋಪದ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ಅವರ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡಲು ತಯಾರಿದ್ದೇನೆ’ ಎಂದರು.

‘ಕುಮಾರಸ್ವಾಮಿ ಹುಚ್ಚರಾಗಿದ್ದಾರೆ. ತಾಳ್ಮೆ ಕಳೆದುಕೊಂಡಿರುವ ಅವರು ಹತಾಶೆಯಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅವರು ಏನೇನು ಕೇಳುತ್ತಾರೆ? ಅವರ ಮಾತುಗಳಿಗೆ ರಾಜ್ಯದ ಜನ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇನ್ನೂ ಬೇಕಾದರೆ ಆ ಉತ್ತರವನ್ನು ನಾನು ಕೊಡುತ್ತೇನೆ. ಅವರು ಕೇಳುತ್ತಿರುವ ಲೆಕ್ಕಾಚಾರದ ಪಟ್ಟಿ ಕೊಡೋಣ’ ಎಂದು ಹೇಳಿದರು.

ತಪ್ಪು ಮಾಡಿದ್ದರೆ ಗಲ್ಲಿಗೇರಿಸಲಿ: ‘ಲುಲು ಮಾಲ್ ನಿರ್ಮಾಣಕ್ಕೆ ಖರಾಬು ಜಮೀನು ಕಬಳಿಸಲಾಗಿದೆ’ ಎಂಬ ಕುಮಾರಸ್ವಾಮಿ ಅವರ ಆರೋಪ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, ‘ನಾನು ಮಾಲ್ ನಿರ್ಮಿಸಿರುವ ಜಾಗ ಕೇಂದ್ರ ಸರ್ಕಾರದ ಒಂದು ಸಂಸ್ಥೆಗೆ ಸೇರಿತ್ತು. ಅವರು ದಾಖಲೆಗಳನ್ನು ಪ್ರಕಟಿಸಿ, ಜಮೀನು ಮಾರಾಟಕ್ಕೆ ಟೆಂಡರ್ ಆಹ್ವಾನಿಸಿದ್ದರು. ನನ್ನ ಸ್ನೇಹಿತರು ಆ ಜಮೀನು ಖರೀದಿಸಿದ್ದರು. ಅವರಿಂದ ಖರೀದಿಸಿ ಜಂಟಿ ಸಹಭಾಗಿತ್ವದಲ್ಲಿ ಮಾಲ್ ನಿರ್ಮಿಸಿದ್ದೇನೆ’ ಎಂದರು.

‘ಜಮೀನು ಖರೀದಿ, ಮಾಲ್ ನಿರ್ಮಾಣ ಮಾಡುವುದರಲ್ಲಿ ಏನಾದರೂ ತಪ್ಪಿದ್ದರೆ ನನ್ನನ್ನು ಗಲ್ಲಿಗೇರಿಸಲಿ. ನನ್ನನ್ನು ಈ ರೀತಿಯಲ್ಲಿ ನಿಯಂತ್ರಿಸಲು ಅವರು ಈಗಾಗಲೇ ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಕುಮಾರಸ್ವಾಮಿಯವರ ತಂದೆಯವರು ಕೂಡ 10- 15 ವರ್ಷಗಳ ಹಿಂದೆಯೇ ಜೈರಾಜ್ ಎಂಬ ಅಧಿಕಾರಿಯ ಮೂಲಕ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿದ್ದರು. ಈಗ ಕೂಡ ಯಾವುದೇ ರೀತಿಯ ತನಿಖೆಯನ್ನು ಬೇಕಿದ್ದರೂ ಮಾಡಿಸಲಿ. ಎದುರಿಸಲು ಸಿದ್ಧನಿದ್ದೇನೆ’ ಎಂದು ಹೇಳಿದರು.

‘ಶೋಭಾ ಡೆವಲಪರ್ಸ್ ಪಾಲುದಾರ’

‘ಲುಲು ಮಾಲ್ ಅನ್ನು ನನ್ನ ಪಾಲುದಾರರಾದ ಶೋಭಾ ಡೆವಲಪರ್ಸ್ ಕಂಪನಿಯವರು ನಿರ್ಮಾಣ ಮಾಡಿದ್ದಾರೆ’ ಎಂದು ಶಿವಕುಮಾರ್ ಹೇಳಿದರು.


ಲುಲು ಮಾಲ್‌ಗೆ ವಿದ್ಯುತ್ ಸಂಪರ್ಕ ಕುರಿತು ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರತಿ ಸಂದರ್ಭದಲ್ಲೂ ನನ್ನ ಆಸ್ತಿ ವಿವರಗಳನ್ನು ಘೋಷಿಸಿದ್ದೇನೆ. ನಾನು ಅಕ್ರಮವಾಗಿ ವಿದ್ಯುತ್ ಬಳಕೆ ಮಾಡಿದ್ದೇನೆ ಎಂಬ ಆರೋಪವನ್ನು ಅವರು ಮಾಡಿದ್ದಾರೆ. ಮಾಲ್ ನಿರ್ಮಾಣ ಸಂದರ್ಭದಲ್ಲಿ ಎಷ್ಟು ವಿದ್ಯುತ್ ಬಳಕೆ ಮಾಡಲಾಗಿತ್ತು ಎಂಬುದರ ದಾಖಲೆ ಒದಗಿಸುವಂತೆ ಪಾಲುದಾರರನ್ನು ಕೇಳುತ್ತೇನೆ’ ಎಂದರು.

ಸುದ್ದಿ 2 ನಿಮಿಷ

ಜನವರಿ ಅಂತ್ಯದೊಳಗೆ ಎಲ್ಲ ಪ್ರಕರಣ ಇತ್ಯರ್ಥ: ಕೃಷ್ಣ ಬೈರೇಗೌಡ

ಹಾಸನ: ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಬಾಕಿ ಇದ್ದ, 5 ವರ್ಷಗಳಿಗಿಂತ ಹಳೆಯದಾದ 60 ಸಾವಿರ ಪ್ರಕರಣಗಳ ಪೈಕಿ 30 ಸಾವಿರ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, ಉಳಿದವುಗಳನ್ನು ಜನವರಿಯೊಳಗೆ ಇತ್ಯರ್ಥಪಡಿಸಲು ಸೂಚಿಸಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ನವೆಂಬರ್ ಅಂತ್ಯದೊಳಗೆ ಮುಗಿಸಲು ಸೂಚಿಸಲಾಗಿದೆ’ ಎಂದರು.



‘ನಾನು ಹೇಳಿದಾಕ್ಷಣ ಅಧಿಕಾರಿಗಳು ಮಾಡುವುದಿಲ್ಲ. ನಾವೇ ಅವರ ಬೆನ್ನು ಹತ್ತಬೇಕು. ಹೀಗಾಗಿಯೇ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡುತ್ತಿದ್ದೇನೆ’ ಎಂದರು.

‘ಯಾವ ಕಡತ ಎಲ್ಲಿದೆ, ಯಾವ ಹಂತದಲ್ಲಿದೆ ಎಂಬ ಮಾಹಿತಿ ಇ-ಆಫೀಸ್‌ನಲ್ಲಿ ಬೆರಳ ತುದಿಯಲ್ಲಿ ಸಿಗಲಿದೆ. ನೂರರಷ್ಟು ಇ- ಆಫೀಸ್ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮೊದಲು ದಾಖಲೆಗಳನ್ನು ಕಳೆದು ಹಾಕಲಾಗುತ್ತಿತ್ತು. ಜನ ಬಂದು ಕೈಮುಗಿದುಕೊಂಡು ನಿಲ್ಲಲಿ ಎಂದು ಕಡತಗಳನ್ನು ಬಾಕಿ ಇಡುವ ಪರಿಸ್ಥಿತಿಯೂ ಇತ್ತು. ಇ-ಆಫೀಸ್ ಮೂಲಕ ಕಂದಾಯ ದಾಖಲೆಗಳ ಡಿಜಿಟಲೀಕರಣದಿಂದ ಅದು ಕಡಿಮೆಯಾಗಲಿದೆ’ ಎಂದರು.

‘ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರ ಬಳಿ, ಅರ್ಜಿಗಳು 15 ದಿನಗಳಿಗಿಂತ ಹೆಚ್ಚು ದಿನ ಉಳಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಬೆಂಗಳೂರಿನಲ್ಲಿ ಕುಳಿತು ಕಾಯ್ದೆ, ಕಾನೂನು ಜಾರಿಗೆ ತಂದರೆ ಸಾಲದು. ಅದಕ್ಕಾಗಿ ಬೃಹತ್ ಅಭಿಯಾನ ಮಾಡಲಾಗುವುದು’ ಎಂದರು.

ವೇತನಕ್ಕಾಗಿ ಹೈಕೋರ್ಟ್‌ಗೆ ಮೊರೆ

ಬಾಗಲಕೋಟೆ: ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿ, ಈಚೆಗೆ ನಿವೃತ್ತರಾದ ರಂಗನಗೌಡ ದಂಡಣ್ಣವರ ತಮಗೆ ಬರಬೇಕಾದ ಬಾಕಿ ವೇತನ, ಗಳಿಕೆ ರಜೆ, ಪ್ರಯಾಣ ಭತ್ಯೆ ಇತ್ಯಾದಿಗಳ ಮಂಜೂರಾತಿಗೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಕಾನೂನಾತ್ಮಕವಾಗಿ ಬರಬೇಕಾದ ಸೌಲಭ್ಯ ನೀಡುವಂತೆ ನೋಟಿಸ್ ನೀಡಿದರೂ ಉತ್ತರ ಬಾರದಿದ್ದಾಗ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ರಿಜಿಸ್ಟ್ರಾರ್ ಹಾಗೂ ಆಡಳಿತಾಧಿಕಾರಿ ಅಲ್ಲದೆ ಅಕೌಂಟಂಟ್ ಜನರಲ್ ಅವರಿಗೆ ಬಾಕಿ ಇರುವ ವೇತನ ಇತರೆ ಸೌಲಭ್ಯಗಳನ್ನು ಕಲ್ಪಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿರುವೆ ಎಂದು ರಂಗನಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಟ್ಟೆಕಿಚ್ಚು, ದ್ವೇಷದಿಂದ ಸುಳ್ಳು ಆರೋಪ: ಸಿ.ಎಂ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಮೈಸೂರು: ‘ಎಚ್‌.ಡಿ. ಕುಮಾರಸ್ವಾಮಿ ಹೊಟ್ಟೆಕಿಚ್ಚು ಹಾಗೂ ದ್ವೇಷದಿಂದ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ನಮ್ಮ ಮಗನ (ಡಾ.ಯತೀಂದ್ರ ಸಿದ್ದರಾಮಯ್ಯ) ವಿಚಾರದಲ್ಲಿ ಸುಮ್ಮನೆ ಸುಳ್ಳು ಹಬ್ಬಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನನ್ನ ಮಗ ನನಗಾಗಿ ವರುಣ ಕ್ಷೇತ್ರ ಬಿಟ್ಟು ಕೊಟ್ಟಿದ್ದಾನೆ. ಈಗ ನನ್ನ ಪರವಾಗಿ ಅಲ್ಲಿ ಜನರ ಕೆಲಸ ಮಾಡುತ್ತಿದ್ದಾನೆ. ಇದು ತಪ್ಪಾ? ಅಲ್ಲಿನ ಆಶ್ರಯ ಸಮಿತಿ ಅಧ್ಯಕ್ಷನಾಗಿರುವ ಕಾರಣ ಕೆಲವು ವಿಚಾರಗಳ ಬಗ್ಗೆ ನನ್ನ ಜೊತೆ ಚರ್ಚಿಸಿದ್ದಾನೆ. ಅದಕ್ಕೆ ಬೇರೆ ಅರ್ಥ ಕಲ್ಪಿಸಿದರೆ ಹೇಗೆ?’ ಎಂದು ಕೇಳಿದರು.

‘ನನಗೆ ದ್ವೇಷದ ರಾಜಕೀಯ ಗೊತ್ತಿಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಒಪ್ಪುವುದಿಲ್ಲ. ಕುಮಾರಸ್ವಾಮಿ ಹೇಳುವುದೆಲ್ಲಾ ಸುಳ್ಳು. ಸುಳ್ಳೇ ಅವರ ಮನೆಯ ದೇವರು. ಅವರು ಈವರೆಗೆ ಯಾವುದಾದರೂ ಒಂದು ಸತ್ಯ ಹೇಳಿದ್ದರೆ ತೋರಿಸಿ. ಅವರ ಆರೋಪಗಳು ಸತ್ಯವಾಗಿವೆಯೇ? ಬರೀ ಹಿಟ್ ಅಂಡ್ ರನ್ ಮಾಡುತ್ತಾರೆ’ ಎಂದರು.

‘ಕುಮಾರಸ್ವಾಮಿ ವಿಧಾನಮಂಡಲ ಅಧಿವೇಶನದಲ್ಲಿ ಚರ್ಚಿಸಿದರೆ ಉತ್ತರ ಕೊಡುತ್ತೇವೆ, ಓಡಿ ಹೋಗುವುದಿಲ್ಲ. ಅವರಿಗೆ ದಂಡ ವಿಧಿಸಿರುವುದು ಬೆಸ್ಕಾಂ. ಕುಮಾರಸ್ವಾಮಿಯವರು ಮೊದಲು ತಪ್ಪೇ ಮಾಡಿಲ್ಲ ಎಂದಿದ್ದರು. ಬಳಿಕ ದಂಡ ಕಟ್ಟಿರುವುದು ಅವರು ಅಪರಾಧ ಮಾಡಿರುವುದನ್ನು ಒಪ್ಪಿಕೊಂಡಂತಾಗಿದೆ’ ಎಂದರು.

‘ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದ ಬಿಟ್ ಕಾಯಿನ್, ಕೋವಿಡ್, ಮೆಡಿಕಲ್ ಕಾಲೇಜು ಮಂಜೂರಾತಿ, ಶೇ 40ರಷ್ಟು ಕಮಿಷನ್ ಆರೋಪ ಕುರಿತು ನಾಲ್ಕು ಸಮಿತಿಗಳನ್ನು ರಚಿಸಿ ತನಿಖೆಗೆ ವಹಿಸಲಾಗಿದೆ. ಸಮಿತಿಗಳು ವರದಿ ಕೊಟ್ಟಿಲ್ಲ. ಕುಮಾರಸ್ವಾಮಿ ಸುಳ್ಳು ಆರೋಪಗಳನ್ನು ಮಾಡುತ್ತಾರೆ. ಅದನ್ನೆಲ್ಲ ತನಿಖೆ ನಡೆಸಲಾಗುತ್ತದೆಯೇ? ಆರೋಪಿಸುವವರು ದಾಖಲೆಗಳಿದ್ದರೆ ಕೊಡಬೇಕು. ದಾಖಲೆ ಕೊಟ್ಟರೆ ಖಂಡಿತ ತನಿಖೆ ಮಾಡುತ್ತೇವೆ. ಅಗತ್ಯವಿದ್ದರೆ ಕುಮಾರಸ್ವಾಮಿ ವಿರುದ್ಧವೂ ತನಿಖೆಗೆ ಹಿಂಜರಿಯುವುದಿಲ್ಲ’ ಎಂದರು.

> **ರಾಜ್ಯದಲ್ಲಿ ಶೇ 40ರಷ್ಟು ಕಮಿಷನ್ ಸರ್ಕಾರ ಎಂದು ಕರೆಯುತ್ತಿದ್ದುದ್ದು ಬಿಜೆಪಿ ಸರ್ಕಾರವನ್ನೇ ಹೊರತು, ನಮ್ಮನ್ನಲ್ಲ. ಈ ಸತ್ಯ ಗೊತ್ತಿದ್ದರೂ ಪ್ರಧಾನಿ ನಮ್ಮ ವಿರುದ್ಧ ಮಾತನಾಡುತ್ತಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಜಿಟಿಡಿ, ಸೋಮಣ್ಣ ಯಾರೇ ಬಂದರೂ ಸ್ವಾಗತ: ಸಿದ್ದರಾಮಯ್ಯ

ಮೈಸೂರು: ‘ಜೆಡಿಎಸ್‌ನ ಜಿ.ಟಿ. ದೇವೇಗೌಡ, ಬಿಜೆಪಿಯ ವಿ. ಸೋಮಣ್ಣ ಸೇರಿದಂತೆ ಯಾರೇ ಆಗಲಿ ಕಾಂಗ್ರೆಸ್ ಪಕ್ಷದ ತತ್ವ-ಸಿದ್ಧಾಂತವನ್ನು ಒಪ್ಪಿ ಬಂದರೆ ಸ್ವಾಗತಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, ‘ಜಿಟಿಡಿ ಹಾಗೂ ಸೋಮಣ್ಣ ಅವರನ್ನು ಪಕ್ಷಕ್ಕೆ ಆಹ್ವಾನಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಬೇರೆ ಬೇರೆ ಪಕ್ಷಗಳ ಮುಖಂಡರನ್ನು ಸೇರಿಸಿಕೊಳ್ಳುತ್ತಿದ್ದೇವೆ’ ಎಂದು ಅವರು ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿಗೆ ನನ್ನನ್ನು ಕಂಡರೆ ಭಯವಿರುವುದರಿಂದಲೇ ಪಂಚ ರಾಜ್ಯಗಳ ಚುನಾವಣೆಯಲ್ಲಿ ನಮ್ಮ ಬಗ್ಗೆ ಮಾತನಾಡಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಅವರು, ಈಗ ಅದೇ ಗ್ಯಾರಂಟಿಗಳನ್ನೇ ಬೇರೆ ಕಡೆ ಘೋಷಿಸಿದ್ದಾರೆ. ಅದರ ಅರ್ಥವೇನು? ಕೇಂದ್ರದಿಂದ ಕೈಗೊಂಡಿರುವ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ವಾಹನದಲ್ಲೂ ಗ್ಯಾರಂಟಿ ಎಂದು ಬಳಸಿದ್ದಾರೆ’ ಎಂದು ವ್ಯಂಗ್ಯವಾಡಿದರು. ‘ಇದು ರಾಜಕೀಯ ಇಬ್ಬಂದಿತನ’ ಎಂದು ಟೀಕಿಸಿದರು.

ಸಚಿವ ಜಮೀರ್ ಹೇಳಿಕೆಗೆ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯ ದೊಡ್ಡ ದೊಡ್ಡ ನಾಯಕರು ಬಂದು ಯು.ಟಿ. ಖಾದರ್ ಅವರಿಗೆ ಸಾಹೇಬರೇ ನಮಸ್ಕಾರ ಎಂದು ಕೈ ಮುಗಿಯುತ್ತಿದ್ದಾರೆ. ಇದನ್ನೆಲ್ಲ ಮಾಡಿದ್ದು ಯಾರು? ಕಾಂಗ್ರೆಸ್ ಪಕ್ಷ’ ಎಂಬುದಾಗಿ ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ನೀಡಿದ ಹೇಳಿಗೆ ವಿವಾದದ ಸ್ವರೂಪ ಪಡೆದುಕೊಂಡಿದೆ.

ತೆಲಂಗಾಣ ವಿಧಾನಸಭಾ ಚುನಾವಣೆ ಪ್ರಚಾರದ ವೇಳೆ ಕಾಂಗ್ರೆಸ್ ಪಕ್ಷ ಮುಸ್ಲಿಮರಿಗೆ ಏನು ಕೊಟ್ಟಿದೆ ಎಂದು ವಿವರಿಸಲು ಹೋದ ಜಮೀರ್, ನೀಡಿದ ಹೇಳಿಕೆ ಕರ್ನಾಟಕದ ಪ್ರತಿಪಕ್ಷ ನಾಯಕರನ್ನು ರೊಚ್ಚಿಗೆಬ್ಬಿಸಿದೆ.

ತಮ್ಮ ಮಾತು ವಿವಾದದ ಸ್ವರೂಪ ಪಡೆಯುತ್ತಿದ್ದಂತೆ, ಸ್ಪಷ್ಟನೆ ನೀಡಿದ ಜಮೀರ್, ‘ನಾನು ಯಾವುದೇ ವ್ಯಕ್ತಿ ಅಥವಾ ಪಕ್ಷದ ಶಾಸಕರನ್ನು ಅವಮಾನಿಸಿಲ್ಲ. ಕಾಂಗ್ರೆಸ್ ಪಕ್ಷವು ಮುಸ್ಲಿಮರಿಗೆ ಪ್ರಾತಿನಿಧ್ಯ ನೀಡಿದೆ ಎಂಬುದನ್ನಷ್ಟೇ ಹೇಳಿದ್ದೇನೆ’ ಎಂದಿದ್ದಾರೆ.

‘ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಮುಸ್ಲಿಂ ಸಮುದಾಯದವರಿಗೆ ಸ್ಪೀಕರ್ ಸ್ಥಾನ ನೀಡಲಾಗಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷಗಳ ಶಾಸಕರೂ ಸನ್ಮಾನ್ಯ ಸಭಾಧ್ಯಕ್ಷರೇ ಎಂದು ಕರೆಯುತ್ತೇವೆ. ಇಂತಹ ಉನ್ನತ ಹುದ್ದೆಗೇರುವ ಅವಕಾಶ ನೀಡಲಾಗಿದೆ ಎಂದಷ್ಟೇ ಹೇಳಿದ್ದೆ’ ಎಂದಿದ್ದಾರೆ.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಹಲವರು ನನ್ನ ಮಾತನ್ನು ತಪ್ಪಾಗಿ ಅರ್ಥ ಮಾಡಿಕೊಂಡು ವಿವಾದದ ಸ್ವರೂಪ ನೀಡುತ್ತಿದ್ದಾರೆ. ಇಬ್ಬರಿಗೆ ಸಚಿವ ಸ್ಥಾನ, ಮುಖ್ಯ ಸಚೇತಕ ಸ್ಥಾನ, ರಾಜಕೀಯ ಕಾರ್ಯದರ್ಶಿ, ಎಲ್ಲದಕ್ಕಿಂತಲೂ ಮುಖ್ಯವಾಗಿ ಸ್ಪೀಕರ್ ಸ್ಥಾನ ನೀಡಲಾಗಿದೆ ಎಂಬುದನ್ನು ನಾನು ಹೇಳಿದ್ದೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷವು ಮುಸ್ಲಿಂ ಸಮುದಾಯಕ್ಕೆ ನೀಡಿರುವ ಗೌರವವನ್ನು ಸ್ಮರಿಸುವುದು ತಪ್ಪೆ’ ಎಂದೂ ಅವರು ಪ್ರಶ್ನಿಸಿದ್ದಾರೆ.

ಜಮೀರ್ ಅಹಮ್ಮದ್ ಹೇಳಿದ್ದೇನು?

‘ಕರ್ನಾಟಕದಲ್ಲಿ ಕಾಂಗ್ರೆಸ್ 135 ಸ್ಥಾನ ಗಳಿಸಿದೆ. ಅದರಲ್ಲಿ ಒಂಬತ್ತು ಶಾಸಕರು ಮುಸಲ್ಮಾನರಿದ್ದೇವೆ. ಒಂಬತ್ತು ಶಾಸಕರು ಗೆದ್ದ ಬಳಿಕ ಕಾಂಗ್ರೆಸ್ ಸರ್ಕಾರದಲ್ಲಿ ಐವರು ಮುಸ್ಲಿಮರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀರ್ ಅಹಮದ್‌ಗೆ ಮೂರು ಖಾತೆಗಳೊಂದಿಗೆ ಸಚಿವ ಸ್ಥಾನ ನೀಡಿದ್ದಾರೆ. ರಹೀಂ ಖಾನ್‌ಗೆ ಸಚಿವ ಸ್ಥಾನ ನೀಡಿದ್ದಾರೆ. ಇಲ್ಲೇ ಕುಳಿತಿದ್ದಾರಲ್ಲ ಸಲೀಂ ಅಹಮ್ಮದ್ ಅವರನ್ನು ಮುಖ್ಯ ಸಚೇತರಕನ್ನಾಗಿ ಮಾಡಲಾಗಿದೆ. ನಜೀರ್ ಅಹಮ್ಮದ್ ಅವರನ್ನು ರಾಜಕೀಯ ಕಾರ್ಯದರ್ಶಿಯನ್ನಾಗಿ ಮಾಡಲಾಗಿದೆ.

ಕರ್ನಾಟಕದ ಈವರೆಗಿನ ಇತಿಹಾಸದಲ್ಲಿ ಮುಸ್ಲಿಮರು ಸ್ಪೀಕರ್ ಆಗಿಲ್ಲ. ಕಾಂಗ್ರೆಸ್ ಪಕ್ಷವು ಯು.ಟಿ. ಖಾದರ್ ಅವರನ್ನು ಸ್ಪೀಕರ್ ಮಾಡಿದೆ. ಬಿಜೆಪಿಯ ದೊಡ್ಡ ದೊಡ್ಡ ನಾಯಕರು ಬಂದು ಯು.ಟಿ. ಖಾದರ್ ಅವರಿಗೆ ಸಾಹೇಬರೇ ನಮಸ್ಕಾರ ಎಂದು ಕೈ ಮುಗಿಯುತ್ತಿದ್ದಾರೆ. ಇದನ್ನೆಲ್ಲ ಮಾಡಿದ್ದು ಯಾರು? ಕಾಂಗ್ರೆಸ್ ಪಕ್ಷ’ ಎಂದಿದ್ದರು.

ಜಮೀರ್ ಕ್ಷಮೆ ಕೇಳಲಿ: ಎಚ್‌ಡಿಕೆ

ವಿಧಾನಸಭಾಧ್ಯಕ್ಷ ಸ್ಥಾನದ ಗೌರವ ಉಳಿಯಬೇಕಾದರೆ ಸಚಿವ ಜಮೀರ್ ಅಹಮದ್ ಕ್ಷಮೆ ಕೇಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

‘ಅಂತಹ ಸ್ಥಾನದಲ್ಲಿ ಕುಳಿತವರನ್ನು ಧರ್ಮದ ಆಧಾರದಲ್ಲಿ ನೋಡಬಾರದು. ಜಮೀರ್ ಮಾತಿನಿಂದ ಸಿಟ್ಟಿಗೆದ್ದ ಎಲ್ಲ ಶಾಸಕರೂ ಸಭಾಧ್ಯಕ್ಷರಿಗೆ ಗೌರವ ಸಲ್ಲಿಸುವುದಿಲ್ಲ ಎಂದು ಕುಳಿತುಕೊಂಡರೆ ಸದನದ ಗೌರವ ಏನಾಗುತ್ತದೆ’ ಎಂದೂ ಅವರು ಪ್ರಶ್ನಿಸಿದರು.

ಜಮೀರ್ ವಜಾಕ್ಕೆ ಒತ್ತಾಯ

ಸಿದ್ದಾಪುರ/ಬಾಗಲಕೋಟೆ: ‘ವಿಧಾನಸಭಾಧ್ಯಕ್ಷ ಹುದ್ದೆಗೆ ಧರ್ಮದ ನಂಟು ಬೆಸೆಯುವ ಪ್ರಯತ್ನ ನಡೆಸಿದ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ರಾಜ್ಯ ಸಚಿವ ಸಂಪುಟದಿಂದ ವಜಾಗೊಳಿಸಬೇಕು’ ಎಂದು ಬಿಜೆಪಿ ನಾಯಕ ವಿಶ್ವೇಶ್ವರ ಹೆಗಡೆ ಕಾಗೇರಿ ಒತ್ತಾಯಿಸಿದರು.

‘ಸಾಂವಿಧಾನಿಕವಾಗಿ ಪಕ್ಷಾತೀತ, ಧರ್ಮಾತೀತವಾದ ಹುದ್ದೆಗೆ ಧರ್ಮದ ನಂಟು ಬೆಸೆಯುವ ಮೂಲಕ ಈ ಹುದ್ದೆಯ ಹೆಸರಿನಲ್ಲಿ ರಾಜಕೀಯ ಲಾಭಕ್ಕಾಗಿ ಸಚಿವರು ಯತ್ನಿಸಿದ್ದಾರೆ. ಇದನ್ನು ವಿಧಾನಸಭಾಧ್ಯಕ್ಷರು ಗಂಭೀರವಾಗಿ ಪರಿಗಣಿಸಿ ಸಚಿವರ ವಿರುದ್ಧ ಶಿಸ್ತುಕ್ರಮಕ್ಕೆ ಮುಂದಾಗಬೇಕು. ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಸಂವಿಧಾನಕ್ಕೆ ಅಪಮಾನ ಮಾಡುವಂತಹ ಹೇಳಿಕೆ ನೀಡಿರುವ ಜಮೀರ್ ಅಹಮದ್ ಅವರು ಕ್ಷಮೆ ಕೇಳಬೇಕು. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಬಾಗಲಕೋಟೆಯಲ್ಲಿ ಆಗ್ರಹಿಸಿದರು.

ಬಿಜೆಪಿ ನಾಯಕರ ಆಕ್ರೋಶ

ಬೆಂಗಳೂರು: ಸಭಾಧ್ಯಕ್ಷರ ವಿಷಯವಾಗಿ ಸಚಿವ ಜಮೀರ್ ಅಹಮದ್ ನೀಡಿದ ಹೇಳಿಕೆಗೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಮತೀಯ ಲೇಪನ ಹಚ್ಚಿರುವುದು ಖಂಡನೀಯ. ಸಂವಿಧಾನಕ್ಕೆ ಅಗೌರವ ಕೊಡುವ ಹೇಳಿಕೆ ನೀಡಿರುವ ಜಮೀರ್ ಅವರನ್ನು ಕರೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬುದ್ಧಿ ಮಾತು ಹೇಳಬೇಕು ಎಂದು ವಿಧಾನಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಒತ್ತಾಯಿಸಿದರು.

‘ಜಮೀರ್ ಅವರ ಹೇಳಿಕೆಯನ್ನು ಗಮನಿಸಿದ್ದೇನೆ. ಪ್ರಜಾಪ್ರಭುತ್ವದಲ್ಲಿ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಸಭಾಧ್ಯಕ್ಷರ ಸ್ಥಾನ ಬಹಳ ದೊಡ್ಡದು ಮತ್ತು ಗೌರವಯುತವಾದುದು. ಪೀಠದಲ್ಲಿ ಯಾರು ಕುಳಿತುಕೊಳ್ಳುತ್ತಾರೆ ಎಂಬುದು ಪ್ರಜಾಪ್ರಭುತ್ವ ವ್ಯವಸ್ಥೆಯಂತೆ ನಡೆಯುತ್ತದೆ. ಬಿಜೆಪಿಯವರು ಮುಸ್ಲಿಂ ಸಮುದಾಯದ ಖಾದರ್ ಅವರಿಗೆ ನಮಸ್ಕಾರ ಮಾಡುವ ಸ್ಥಿತಿಯನ್ನು ಕಾಂಗ್ರೆಸ್ ತಂದಿದೆ ಎಂಬ ಹೇಳಿಕೆ ಪ್ರಜಾತಂತ್ರಕ್ಕೆ ಶೋಭೆ ತರುವುದಿಲ್ಲ’ ಎಂದರು.

ಎಲುಬಿಲ್ಲದ ನಾಲಗೆ: ‘ನಾಲಿಗೆ ಇದೆ ಎಂದು ಏನೇನೋ ಮಾತನಾಡುವುದಲ್ಲ. ಖಾದರ್‌ಗೆ ತಲೆ ಬಾಗಲ್ಲ. ನಾವು ಸಭಾಧ್ಯಕ್ಷ ಸ್ಥಾನಕ್ಕೆ ಗೌರವ ಕೊಡ್ತೇವೆ. ಆ ಸ್ಥಾನದಲ್ಲಿ ಯಾರೇ ಇದ್ದರೂ ಗೌರವ ಕೊಡಬೇಕಾಗಿದ್ದು ಶಾಸಕರ ಕರ್ತವ್ಯ. ನಿಮ್ಮ ಬಾಯಿಂದ ಬರುವ ಮಾತಿನಿಂದ ಕೋಮು ಘರ್ಷಣೆ ಸೃಷ್ಟಿಯಾಗುತ್ತದೆ’ ಎಂದು ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿದ್ದಾರೆ.



‘ಚಳಿ’ಯ ಹೊದಿಕೆ
ಚಳಿಯ ಪ್ರಮಾಣ ಹೆಚ್ಚಿದ ಹಿನ್ನೆಲೆಯಲ್ಲಿ ಕಲಬುರಗಿಯ ರಾಮತೀರ್ಥ ಬಳಿ ಕೊಳೆಗೇರಿಯಲ್ಲಿ ಶುಕ್ರವಾರ ಬೆಳಿಗ್ಗೆ ಮಹಿಳೆಯರು ಬೆಚ್ಚನೆಯ ಹೊದಿಕೆ ಹೊದ್ದುಕೊಂಡಿದ್ದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಅತೃಪ್ತಿ ಮಧ್ಯೆ ಅಶೋಕ ಆಯ್ಕೆ

ಒಂದನೇ ಪುಟದಿಂದ...

ಆರಂಭದಲ್ಲಿ ಬಿ.ಎಸ್. ಯಡಿಯೂರಪ್ಪ ಮನೆಗೆ, ಬಳಿಕ ಬಸವರಾಜ ಬೊಮ್ಮಾಯಿ ಮನೆಗೆ ಭೇಟಿ ನೀಡಿ, ಅವರ ಜತೆ ಚರ್ಚಿಸಿ ಮಾಹಿತಿ ಪಡೆದುಕೊಂಡರು.

ಈ ವೇಳೆಗಾಗಲೇ, ಯತ್ನಾಳ ಅವರಿಗೆ ವೀಕ್ಷಕರು ಯಾವ ಹೆಸರನ್ನು ತಂದಿದ್ದಾರೆ ಎಂಬ ವಾಸನೆ ಬಡಿದಿದ್ದರಿಂದ, ಬಹಿರಂಗವಾಗಿ ತಮ್ಮ ಆಕ್ರೋಶವನ್ನು ಹೊರಹಾಕಿದರು. ಅರವಿಂದ ಬೆಲ್ಲದ ಅವರೂ ತಮ್ಮ ಅಸಮಾಧಾನವನ್ನು ತೋಡಿಕೊಂಡರು. ಪಕ್ಷದ ಶಿಸ್ತಿನ ಸಿಪಾಯಿಗಳು ಎಂದು ಕರೆಸಿಕೊಳ್ಳುವ ಶಾಸಕರೂ ತಮ್ಮ ಅಸಮಾಧಾನವನ್ನು ತಮ್ಮ ಆಪ್ತರು ಮತ್ತು ಮಾಧ್ಯಮ ಪ್ರತಿನಿಧಿಗಳ ಬಳಿ ತೋಡಿಕೊಂಡರು.

ಸಿಟ್ಟಿಗೆದ್ದಿದ್ದ ಯತ್ನಾಳ ಅವರನ್ನು ಸಮಾಧಾನಪಡಿಸಲು ನಿರ್ಮಲಾ ಮತ್ತು ದುಷ್ಯಂತ್ ಕುಮಾರ್ ಅವರು ಬಸನಗೌಡರ ಮನೆಗೇ ತೆರಳಿದರು. ‘ಈ ಸಂದರ್ಭದಲ್ಲಿ ವಿಜಯೇಂದ್ರ ಅವರನ್ನು ನನ್ನ ಮನೆಗೆ ಕರೆದುಕೊಂಡು ಬರಬೇಡಿ’ ಎಂದು ಸಂಘಟನಾ ಕಾರ್ಯದರ್ಶಿ ರಾಜೇಶ್ ಅವರಿಗೆ ಕರೆ ಮಾಡಿದ ಯತ್ನಾಳ ತಾಕೀತು ಮಾಡಿದ್ದರು.

‘ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರ ಅವರ ನೇಮಕ ಮಾಡಿರುವುದು ಹಲವು ಶಾಸಕರಿಗೆ ಸಮಾಧಾನವಿಲ್ಲ, ಬೇಗುದಿ ಇದೆ. ಅದರ ಮೇಲೆ ಈಗ ಅಶೋಕ ಅವರನ್ನು ಹೇರಲಾಗಿದೆ. ವಿಜಯೇಂದ್ರ ಅವರಿಗೆ ಕಾರ್ಯ ನಿರ್ವಹಿಸಲು ಅನುಕೂಲ ಆಗಲಿ ಎಂಬ ಕಾರಣಕ್ಕೆ ಯಡಿಯೂರಪ್ಪ ಅವರ ಸಲಹೆಯ ಮೇರೆಗೆ ಅಶೋಕ ಅವರನ್ನು ಈ ಸ್ಥಾನಕ್ಕೆ ತರಲು ನಿರ್ಧರಿಸಿರಬಹುದು’ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಶಾಸಕರೊಬ್ಬರು ತಿಳಿಸಿದರು.

‘ಸದ್ಯಕ್ಕೆ ಲೋಕಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದು ನಮ್ಮ ಗುರಿ. ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಲು ಎಲ್ಲ ನೋವುಗಳನ್ನು ನುಂಗಿಕೊಳ್ಳುತ್ತೇವೆ. ಒಟ್ಟಾಗಿ ಶ್ರಮಿಸುತ್ತೇವೆ’ ಎಂದು ಅವರು ಹೇಳಿದರು.

‘ಬಿವೈವಿ ನನ್ನ ಮನೆಗೆ ಕಾಲಿಡುವುದು ಬೇಡ’

‘ಬಿ.ವೈ.ವಿಜಯೇಂದ್ರ ನನ್ನ ಮನೆಗೆ ಕಾಲಿಡುವುದು ಬೇಡ. ನನ್ನನ್ನು ಮಾತನಾಡಿಸಲು ಬರುವ ಅಗತ್ಯವೂ ಇಲ್ಲ’ ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಸವರಾಜ ಬೊಮ್ಮಾಯಿ ಅವರ ಮನೆಯಲ್ಲಿದ್ದ ಯತ್ನಾಳ, ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜೇಶ್ ಅವರಿಗೆ ಕರೆ ಮಾಡಿ ಹೀಗೆ ಸೂಚಿಸಿದರು.

ಹೀಗಾಗಿ, ಪಕ್ಷದ ವೀಕ್ಷಕರಾದ ನಿರ್ಮಲಾ ಸೀತಾರಾಮನ್ ಮತ್ತು ದುಶ್ಯಂತ್ ಕುಮಾರ್ ಗೌರವ್ ಅವರ ಜತೆಗೆ ವಿಜಯೇಂದ್ರ ಅವರು ಯತ್ನಾಳ ಅವರ ಮನೆಗೆ ಭೇಟಿ ನೀಡುವ ಯೋಚನೆಯನ್ನು ಕೈಬಿಟ್ಟರು.

‘ವರಿಷ್ಠರು ಕೇವಲ ಚೇಲಾಗಳ ಮಾತುಗಳನ್ನು ಕೇಳಿಕೊಂಡು ನಿರ್ಧಾರ ತೆಗೆದುಕೊಳ್ಳಬಾರದು, ಕೆಲವರು ಬ್ಲ್ಯಾಕ್ ಮೇಲ್ ಮಾಡಲು ಪ್ರಯತ್ನ ಮಾಡುತ್ತಾರೆ. ಅವುಗಳಿಗೆಲ್ಲ ನಾನು ಭಯ ಪಡುವುದಿಲ್ಲ. ನನ್ನ ಮಾತುಗಳನ್ನು ಕೇಳಿ ವೀಕ್ಷಕರು ಸಂತೋಷ ವ್ಯಕ್ತಪಡಿಸಿದ್ದಾರೆ. ಎಲ್ಲವನ್ನೂ ಧೈರ್ಯವಾಗಿ ಹೇಳಿದ್ದೀರಿ’ ಎಂದು ಹೇಳಿದ್ದಾರೆ’ ಎಂದು ಯತ್ನಾಳ ತಿಳಿಸಿದರು.

> **ಯಾರಿಗೂ ಬೇಸರವಿಲ್ಲ , ಯಾರೂ ಬಹಿಷ್ಕಾರ ಹಾಕಿಲ್ಲ. ಉತ್ತರ ಕರ್ನಾಟಕದ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಆ ಭಾಗದವರಿಗೇ ಕೊಡಬೇಕಿತ್ತು**
> **ಅರವಿಂದ ಬೆಲ್ಲದ,** ಶಾಸಕ

ಜೋಡೆತ್ತುಗಳಂತೆ ಕೆಲಸ: ಅಶೋಕ

‘ಭ್ರಷ್ಟಾಚಾರ, ದುರಾಡಳಿತ, ಸ್ವಜನಪಕ್ಷಪಾತದಿಂದ ತುಂಬಿ ತುಳುಕುತ್ತಿರುವ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಕಿತ್ತೊಗೆಯುವುದೇ ನಮ್ಮ ಆದ್ಯತೆ. ಇದಕ್ಕಾಗಿ ಎಲ್ಲ ಶಾಸಕರೂ ಒಗ್ಗಟ್ಟಾಗಿ ಶ್ರಮಿಸುತ್ತೇವೆ. ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ನಾನು ಯಾವುದೇ ಗೊಂದಲವಿಲ್ಲದೆ, ಜೋಡೆತ್ತುಗಳಂತೆ ಕೆಲಸ ಮಾಡುತ್ತೇವೆ’ ಎಂದು ವಿರೋಧಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಆರ್.ಅಶೋಕ ತಿಳಿಸಿದರು.

ಆಯ್ಕೆ ಪ್ರಕ್ರಿಯೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯವನ್ನು ದಿವಾಳಿ ಎಬ್ಬಿಸಿರುವ ಕಾಂಗ್ರೆಸ್ ಸರ್ಕಾರದ ಪ್ರತಿಯೊಂದು ಹಗರಣವನ್ನೂ ಬಯಲಿಗೆಳೆಯುತ್ತೇವೆ. ರೈತರ, ಜನ ಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸುವ ಮೂಲಕ ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ’ ಎಂದರು.

‘ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳನ್ನೂ ಗೆಲ್ಲಬೇಕು ಮತ್ತು ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಗುರಿಯನ್ನು ವರಿಷ್ಠರು ನೀಡಿದ್ದಾರೆ. ಅದನ್ನು ಸಾಕಾರಗೊಳಿಸುವ ಹೊಣೆಗಾರಿಕೆ ನಮ್ಮದು. ಸದನದ ಒಳಗೆ ಮತ್ತು ಹೊರಗೆ ಜೆಡಿಎಸ್ ಜತೆ ಸೇರಿ ಕೆಲಸ ಒಟ್ಟಿಗೆ ಕೆಲಸ ಮಾಡುತ್ತೇವೆ’ ಎಂದು ಅಶೋಕ ತಿಳಿಸಿದರು.

ಅಶೋಕ ಆಯ್ಕೆಯ ಹಿಂದಿನ ಲೆಕ್ಕಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಮತ್ತು ಪ್ರಾದೇಶಿಕ ಪ್ರಾತಿನಿಧ್ಯವನ್ನು ಬದಿಗಿಟ್ಟು, ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಆರ್. ಅಶೋಕ ಅವರನ್ನು ಆಯ್ಕೆ ಮಾಡಿರುವ ಹಿಂದಿನ ಲೆಕ್ಕಾಚಾರಗಳೇನು ಎಂಬುದು ಬಿಜೆಪಿಯಲ್ಲಿ ಚರ್ಚೆಗೆ ಕಾರಣವಾಗಿದೆ.

ಸಚಿವರಾಗಿ ಹಲವು ಖಾತೆ ನಿಭಾಯಿಸಿದ್ದರೂ ಅಶೋಕ ಅವರು, ಇಡೀ ರಾಜ್ಯದ ಒಕ್ಕಲಿಗ ನಾಯಕರಾಗಿ ಹೊರಹೊಮ್ಮಿದವರಲ್ಲ. ಈಗ ಪ್ರತಿನಿಧಿಸುತ್ತಿರುವ ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಬಿಟ್ಟರೆ, ಅದರಾಚೆಗೆ ತಮ್ಮ ಪ್ರಭಾವಳಿಯನ್ನು ವಿಸ್ತರಿಸಿಕೊಂಡವರೂ ಅಲ್ಲ. ‘ಹೊಂದಾಣಿಕೆ’ ರಾಜಕಾರಣದ ಅಪವಾದವನ್ನೂ ಬಿಜೆಪಿ ನಾಯಕರೇ ಅವರ ವಿರುದ್ಧ ಹೊರಿಸಿದ್ದೂ ಇದೆ. ಇಷ್ಟೆಲ್ಲ ಇದ್ದರೂ, ಪಕ್ಷದ ವರಿಷ್ಠರ ನಿರ್ದೇಶನದ ಮೇರೆಗೆ ವೀಕ್ಷಕರು ಹೊತ್ತು ತಂದ ಹೆಸರು ಅಶೋಕ ಅವರೊಬ್ಬರದ್ದೇ ಆಗಿತ್ತು. ಶಾಸಕಾಂಗ ಪಕ್ಷದ ಸಭೆಯನ್ನು ‘ಶಾಸ್ತ್ರೋಕ್ತ’ವಾಗಿ ನಡೆಸಿ ಹೆಸರು ಸೂಚಿಸಿ, ಅನುಮೋದಿಸಿ, ಪ್ರಕಟಿಸುವ ಕೆಲಸವಷ್ಟೇ ಶುಕ್ರವಾರ ನಡೆಯಿತು.

ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಒಲ್ಲೈಕೆ, ಒಕ್ಕಲಿಗರನ್ನು ಕಡೆಗಣಿಸಿಲ್ಲವೆಂಬ ಸಂದೇಶ ರವಾನೆ ಹಾಗೂ ವಿಧಾನಸಭೆ ಚುನಾವಣೆಗೆ ಮುನ್ನ ಅಶೋಕ ಅವರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಅನಿವಾರ್ಯವೂ ಈ ಆಯ್ಕೆಯ ಹಿಂದಿದೆ ಎನ್ನುತ್ತವೆ ಪಕ್ಷದ ಮೂಲಗಳು.

ಪಕ್ಷದ ಅಧ್ಯಕ್ಷರಾಗಿ ತಮ್ಮ ಮಗ ವಿಜಯೇಂದ್ರ ಅವರನ್ನು ನೇಮಿಸಿಕೊಳ್ಳುವಲ್ಲಿ ಯಶಸ್ವಿಯಾದ ಯಡಿಯೂರಪ್ಪ, ಪಕ್ಷದಲ್ಲಿ ಮೇಲುಗೈ ಸಾಧಿಸಿದ್ದರು. ವಿರೋಧ ಪಕ್ಷದ ನಾಯಕನ ಆಯ್ಕೆ ವಿಷಯ ಬಂದಾಗ, ತಾವು ಹೇಳಿದಂತೆ ಕೇಳುವ ವ್ಯಕ್ತಿಯನ್ನೇ ಆ ಸ್ಥಾನಕ್ಕೆ ಕೂರಿಸಬೇಕೆಂಬ ಇರಾದೆ ಅವರಲ್ಲಿ ಸಹಜವಾಗಿಯೇ ಇತ್ತು. ತಮ್ಮ ಎದುರಾಳಿ ಬಣದ ಬಿ.ಎಲ್. ಸಂತೋಷ್ ಗುಂಪಿನವರಿಗೆ ಈ ಸ್ಥಾನ ದಕ್ಕಿದರೆ, ಸರ್ಕಾರದ ವಿರುದ್ಧ ಸದನದ ಒಳ–ಹೊರಗೆ ಸಂಘಟಿತ ಹೋರಾಟ ನಡೆಸಲಾಗದು. ಜತೆಗೆ, ಪಕ್ಷದ ಸಂಘಟನೆಗೂ ಅಡ್ಡಿಯಾಗಬಹುದೆಂಬ ಯಡಿಯೂರಪ್ಪ ಆಲೋಚನೆ ಈ ಆಯ್ಕೆಯ ಹಿಂದೆ ಕೆಲಸ ಮಾಡಿದೆ.

ಪದ್ಮನಾಭನಗರ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪರ್ಧಿಸಿದ್ದ ಕನಕಪುರ ಹೀಗೆ ಎರಡು ಕ್ಷೇತ್ರಗಳಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ವರಿಷ್ಠರು ಅಶೋಕ ಅವರಿಗೆ ಒತ್ತಡ ಹೇರಿದ್ದರು. ಶಿವಕುಮಾರ್ ಎದುರು ಸ್ಪರ್ಧಿಸಿ, ಮುಖಭಂಗವಾಗಬಾರದೆಂಬ ಕಾರಣಕ್ಕೆ ಅಶೋಕ ಒಪ್ಪಿರಲಿಲ್ಲ. ಪಕ್ಷ ಅಧಿಕಾರಕ್ಕೆ ಬಂದರೆ, ಉತ್ತಮ ಅವಕಾಶದ ಭರವಸೆಯನ್ನೂ ಆಗ ನೀಡಲಾಗಿತ್ತು. ಎರಡು ಕ್ಷೇತ್ರಗಳ ಸ್ಪರ್ಧೆ ತಮ್ಮನ್ನು ರಾಜಕೀಯವಾಗಿ ಮುಗಿಸುವ ತಂತ್ರದ ಭಾಗ ಎಂದೇ ಅಶೋಕ ಭಾವಿಸಿದ್ದುಂಟು. ಹಾಗಿದ್ದರೂ, ಕನಕಪುರದಲ್ಲಿ ಸ್ಪರ್ಧೆ ಮಾಡಿ ಸೋಲು ಕಂಡಿದ್ದರು. ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ಅಶೋಕ, ಅದು ಸಿಗದೇ ಇದ್ದಾಗ ಮುನಿಸಿಕೊಂಡಿದ್ದರು. ವಿರೋಧ ಪಕ್ಷದ ನಾಯಕ ಸ್ಥಾನ ನೀಡುವ ಮೂಲಕ ಅವರನ್ನು ಸಮಾಧಾನಿಸುವ ಯತ್ನ ನಡೆಸಲಾಗಿದೆ ಎಂದೂ ಮೂಲಗಳು ಹೇಳಿವೆ.

ಕಾಂಗ್ರೆಸ್‌ನಲ್ಲಿ ಶಿವಕುಮಾರ್ ಉಪಮುಖ್ಯಮಂತ್ರಿಯಾಗಿದ್ದು, ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಅವರ ಬಳಿಯೇ ಇದೆ. ಒಕ್ಕಲಿಗ ಸಮುದಾಯದ ಮುನ್ನೆಲೆಯ ನಾಯಕರಾಗಿ ಅವರು ಗುರುತಿಸಿಕೊಳ್ಳುತ್ತಿದ್ದಾರೆ. ಈ ಹೊತ್ತಿನೊಳಗೆ, ಒಕ್ಕಲಿಗ ಪ್ರಾಬಲ್ಯವಿರುವ ಹಳೆ ಮೈಸೂರು ಪ್ರಾಂತ್ಯದಲ್ಲಿ, ಈ ಸಮುದಾಯಕ್ಕೆ ಪ್ರಾತಿನಿಧ್ಯವಿಲ್ಲವೆಂಬ ಸಂದೇಶ ಹೋದರೆ ಲೋಕಸಭೆ ಚುನಾವಣೆಯಲ್ಲಿ ಹಿನ್ನಡೆಯಾಗಬಹುದೆಂಬ ಭಯವೂ ಈ ಆಯ್ಕೆಯ ಹಿಂದಿದೆ.

ಅಶೋಕ ರಾಜಕೀಯ ನಡೆ

ಆರ್.ಅಶೋಕ (ಜಾಲಹಳ್ಳಿ ರಾಮಯ್ಯ ಅಶೋಕ) 1957ರ ಜುಲೈ 1ರಂದು ಬೆಂಗಳೂರಿನ ಜಾಲಹಳ್ಳಿಯಲ್ಲಿ ಜನಿಸಿದರು. ತಮ್ಮ 10ನೇ ವಯಸ್ಸಿಗೇ ಆರ್‌ಎಸ್‌ಎಸ್ ಸೇರಿದ ಅವರು ವಿ.ವಿ.ಪುರಂ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ಪಡೆದರು. 1975–77 ರಲ್ಲಿ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ನಡೆದ ಹೋರಾಟದಲ್ಲಿ ಭಾಗವಹಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಎಲ್‌.ಕೆ.ಅಡ್ವಾಣಿ ಮುಂತಾದವರ ಜತೆ ಒಂದು ತಿಂಗಳು ಜೈಲು ವಾಸ ಅನುಭವಿಸಿದರು.

1995ರಲ್ಲಿ ಬಿಜೆಪಿಯ ನಗರ ಅಧ್ಯಕ್ಷರಾಗಿ ಸರ್ಕಾರದ ವಿರುದ್ಧ ಹೋರಾಟ ನಡೆಸಿದರು. 1997ರಲ್ಲಿ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ ಉಪಚುನಾವಣೆಯಲ್ಲಿ ಮೊದಲಬಾರಿಗೆ ಗೆದ್ದು ವಿಧಾನಸಭೆಗೆ ಆಯ್ಕೆ ಆದರು. ಆ ಬಳಿಕ 1999 ಮತ್ತು 2004ರ ವಿಧಾನಸಭಾ ಚುನಾವಣೆಯಲ್ಲೂ ಗೆಲುವು ಸಾಧಿಸಿದರು. ಕ್ಷೇತ್ರ ಪುನರ್‌ವಿಂಗಡನೆಯ ಬಳಿಕ ಪದ್ಮನಾಭ ನಗರ ಕ್ಷೇತ್ರ ರೂಪುಗೊಂಡಿತು. ಈ ಕ್ಷೇತ್ರದಲ್ಲಿ 2008, 2013, 2018 ಮತ್ತು 2023ರ ಚುನಾವಣೆಗಳಲ್ಲಿ ಗೆಲುವು ಸಾಧಿಸಿದರು. ಒಟ್ಟು 7 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

- 2006–2007 ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ
- 2008–2011ರಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸಾರಿಗೆ ಮತ್ತು ಆಹಾರ ಸಚಿವ
- 2011–13ರಲ್ಲಿ ಸದಾನಂದಗೌಡ ಹಾಗೂ ಜಗದೀಶ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ಸಾರಿಗೆ ಮತ್ತು ಗೃಹ ಖಾತೆ. ಶೆಟ್ಟರ್ ಮುಖ್ಯಮಂತ್ರಿ ಆಗಿದ್ದಾಗ, ಉಪಮುಖ್ಯಮಂತ್ರಿ
- 2019ರಲ್ಲಿ ಯಡಿಯೂರಪ್ಪ ಮತ್ತು 2021ರಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಕಂದಾಯ ಸಚಿವ

ಮದುವೆ ಆಗುವುದಾಗಿ ವಂಚನೆ–ದೂರು • ಮೈಸೂರಿನ ವಿಜಯನಗರ ಠಾಣೆಯಲ್ಲಿ ಸಂತ್ರಸ್ತೆ ವಿರುದ್ಧವೂ ಎಫ್‌ಐಆರ್

ಬಿಜೆಪಿ ಸಂಸದನ ಮಗನ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ


ವೈ.ರಂಗನಾಥ್

ಬೆಂಗಳೂರು: ಮದುವೆಯಾಗುವುದಾಗಿ ಹೇಳಿ ದೈಹಿಕ ಸಂಪರ್ಕ ಹೊಂದಿ ಮಹಿಳೆಯೊಬ್ಬರನ್ನು ವಂಚಿಸಿರುವ ಆರೋಪದಡಿ ಬಳ್ಳಾರಿ ಕ್ಷೇತ್ರದ ಬಿಜೆಪಿ ಸಂಸದ ದೇವೇಂದ್ರಪ್ಪ ಅವರ ಪುತ್ರ ವೈ. ರಂಗನಾಥ್ ವಿರುದ್ಧ ಬೆಂಗಳೂರಿನ ಬಸವನಗುಡಿ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಆರೋಪ ತಳ್ಳಿ ಹಾಕಿರುವ ರಂಗನಾಥ್, 'ಮಹಿಳೆ ಹಾಗೂ ಸ್ನೇಹಿತರು, ಸುಳ್ಳು ಆರೋಪ ಹೊರಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಜಾತಿನಿಂದನೆ ಸಹ ಮಾಡಿದ್ದಾರೆ' ಎಂದು ಮೈಸೂರಿನ ವಿಜಯನಗರ ಠಾಣೆಗೆ ದೂರು ನೀಡಿದ್ದಾರೆ. ಸಂತ್ರಸ್ತ ಮಹಿಳೆ ಹಾಗೂ ಇತರರ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ.

'ಮಹಿಳೆ ಹಾಗೂ ರಂಗನಾಥ್ ಇಬ್ಬರೂ ದೂರು ನೀಡಿದ್ದಾರೆ. ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಎರಡೂ ಪ್ರಕರಣಗಳ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಹೋಟೆಲ್‌ನಲ್ಲಿ ದೈಹಿಕ ಸಂಪರ್ಕ: '2022ರಲ್ಲಿ ಸ್ನೇಹಿತರ ಮೂಲಕ ರಂಗನಾಥ್ ಪರಿಚಯವಾಗಿದ್ದರು. ಆಗಾಗ ಮೊಬೈಲ್ ಕರೆ ಮಾಡಿ ಮಾತನಾಡುತ್ತಿದ್ದರು. ಒಮ್ಮೆ ಕರೆ ಮಾಡಿದ್ದಾಗ, 'ನಾನು ಮೈಸೂರಿನ ಪಿಯು ಕಾಲೇಜಿನಲ್ಲಿ ಉಪನ್ಯಾಸಕ. ನಿನ್ನನ್ನು ಪ್ರೀತಿಸುತ್ತಿದ್ದೇನೆ. ನೀನು ನನ್ನನ್ನು ಮದುವೆಯಾದರೆ, ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂಬುದಾಗಿ ಹೇಳಿದ್ದರು' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

'2023ರ ಜನವರಿ 24ರಂದು ಬೆಂಗಳೂರಿನ ಕೊಡಿಗೆಹಳ್ಳಿಯಲ್ಲಿರುವ ಹೋಟೆಲ್‌ಗೆ ರಂಗನಾಥ್ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿಂದ, ಮೈಸೂರಿಗೆ ಕರೆದೊಯ್ದು ಲಲಿತ್ ಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಇರಿಸಿದ್ದರು. ನನ್ನನ್ನು ಮದುವೆಯಾಗುವುದಾಗಿ ಹೇಳಿ ನಂಬಿಸಿದ್ದರು. ಅಂದು ರಾತ್ರಿ ಮದ್ಯ ಕುಡಿದು, ನನ್ನ ಜೊತೆ ದೈಹಿಕ ಸಂಪರ್ಕ ಮಾಡಿದ್ದರು. ಮರುದಿನ ಬೆಂಗಳೂರಿಗೆ ವಾಪಸು ಕಳುಹಿಸಿದ್ದರು. ಇತ್ತೀಚಿನ ದಿನಗಳಲ್ಲಿ ರಂಗನಾಥ್ ನನ್ನ ಜೊತೆ ಮಾತನಾಡುತ್ತಿಲ್ಲ. ಮದುವೆಯಾಗು ಎಂದರೆ, ಕೊಲೆ ಬೆದರಿಕೆಯೊಡ್ಡುತ್ತಿದ್ದಾರೆ' ಎಂದು ಮಹಿಳೆ ಆರೋಪಿಸಿದ್ದಾರೆ.


₹ 15 ಲಕ್ಷಕ್ಕೆ ಬ್ಲ್ಯಾಕ್‌ಮೇಲ್: ವಿಜಯನಗರ ಠಾಣೆಗೆ ನ. 13ರಂದು ದೂರು ನೀಡಿರುವ ರಂಗನಾಥ್, 'ಸ್ನೇಹಿತರ ಮೂಲಕ ಆರೋಪಿ ಮಹಿಳೆ ಪರಿಚಯವಾಗಿತ್ತು. ನನ್ನನ್ನು ಪ್ರೀತಿಸುವುದಾಗಿ ಅವರು ಹೇಳುತ್ತಿದ್ದರು. ಆದರೆ, ನಾನು ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದೆ' ಎಂದು ಹೇಳಿದ್ದಾರೆ.

'2023ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಎದುರು ನನ್ನನ್ನು ಭೇಟಿಯಾಗಿದ್ದ ಮಹಿಳೆ, ಅವಾಚ್ಯ ಪದಗಳಿಂದ ನಿಂದಿಸಿದ್ದರು. ಮದುವೆಯಾಗುವಂತೆ ಒತ್ತಾಯಿಸಿ ಜಾತಿ ನಿಂದನೆ ಮಾಡಿದ್ದರು. ನನ್ನ ಜೊತೆಗೆ ಫೋಟೊ ತೆಗೆಸಿಕೊಂಡಿದ್ದ ಮಹಿಳೆ, ಅದೇ ಫೋಟೊಗಳನ್ನು ಪತ್ನಿಗೆ ಕಳುಹಿಸುವುದಾಗಿ ಬೆದರಿಸಿ ₹32,500 ಪಡೆದಿದ್ದರು.'

'ಮಹಿಳೆಯ ಸ್ನೇಹಿತನೊಬ್ಬ ₹15 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದ. ಹಣ ನೀಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಸಿದ್ದ. ಹಣ ಕೊಟ್ಟಿರಲಿಲ್ಲ. ಕನಿಷ್ಠ ₹10 ಲಕ್ಷವನ್ನಾದರೂ ನೀಡುವಂತೆ ಆತ ಒತ್ತಾಯಿಸಿದ್ದ. ಹಣ ನೀಡಲು ಸಾಧ್ಯವಿಲ್ಲವೆಂದು ಹೇಳಿದ್ದೆ' ಎಂದು ರಂಗನಾಥ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ರಂಗನಾಥ್ ಅವರು ನಂಜನಗೂಡು ತಾಲ್ಲೂಕು ಹದಿನಾರು ಪಿಯು ಕಾಲೇಜಿನ ಉಪನ್ಯಾಸಕರಾಗಿದ್ದು, ಸದ್ಯ ಮಹಾರಾಜ ಪಿಯು ಕಾಲೇಜಿನಲ್ಲಿ ನಿಯೋಜನೆ ಮೇಲಿದ್ದಾರೆ.

'ತನಿಖೆ ಬಳಿಕ ಸತ್ಯ ಬಹಿರಂಗ'


ವೈ.ದೇವೇಂದ್ರಪ್ಪ

ಅರಸೀಕೆರೆ (ವಿಜಯನಗರ ಜಿಲ್ಲೆ): 'ನನ್ನ ಪುತ್ರ ವೈ.ರಂಗನಾಥ್ ವಿರುದ್ಧ ಯುವತಿ ದೂರು ದಾಖಲಿಸಿದ ವಿಷಯ ಮಾಧ್ಯಮಗಳ ಮೂಲಕ ನನಗೆ ಗೊತ್ತಾಗಿದೆ. ಪುತ್ರ ಸಹ ಪ್ರತಿದೂರು ಸಲ್ಲಿಸಿದ್ದಾರೆ. ಕಾನೂನಿನ ಮೇಲೆ ಗೌರವವಿದ್ದು, ತನಿಖೆ ಬಳಿಕ ಸತ್ಯ ಹೊರಬೀಳಲಿದೆ' ಎಂದು ಬಳ್ಳಾರಿ–ವಿಜಯನಗರ ಕ್ಷೇತ್ರದ ಬಿಜೆಪಿ ಸಂಸದ ವೈ.ದೇವೇಂದ್ರಪ್ಪ ಹೇಳಿದರು.

'ಚುನಾವಣೆ ಸಂಧರ್ಭದಲ್ಲಿ ಪಕ್ಷದ ವರ್ಚಸ್ಸು ಹಾಳುಗೆಡವಲು ಹನಿಟ್ರ್ಯಾಪ್ ಮಾಡಿರುವ ಶಂಕೆ ಇದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಸುಳ್ಳು ಸಾಕ್ಷಿ: ಎರಡು ವರ್ಷ ಜೈಲು ಶಿಕ್ಷೆ

ಬಾಗಲಕೋಟೆ: ಲೋಕಾಯುಕ್ತ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳಿದ ಆರೋಪದ ಮೇಲೆ ಶಶಿಕಾಂತ ಹಡಗಲಿಗೆ ಎರಡು ವರ್ಷ ಸಾದಾ ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿ ಪ್ರಧಾನ ಸಿಜೆಎಂ ನ್ಯಾಯಾಲಯವು ಆದೇಶಿಸಿದೆ.

ಶಶಿಕಾಂತ ಹಡಗಲಿಯು ತನ್ನ ತಾಯಿಗೆ ಬರಬೇಕಾದ ಪರಿಹಾರದ ಹಣ ₹10 ಸಾವಿರ ಮಂಜೂರು ಮಾಡಲು ಹುನಗುಂದ ಸಿಡಿಪಿಒ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ಗೋಪಾಲ ಹೆರಕಲ್ ₹1 ಸಾವಿರ ಲಂಚ ಕೊಡುವಂತೆ ಕೇಳಿದ್ದರು.

ಲಂಚ ಕೊಡಲು ಒಪ್ಪದ ಶಶಿಕಾಂತ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ಗೋಪಾಲ ₹ 1 ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಲೋಕಾಯುಕ್ತ ವಿಶೇಷ ನ್ಯಾಯಾಲಯ ವಿಚಾರಣೆ ವೇಳೆ ಶಶಿಕಾಂತ, 'ಗೋಪಾಲ ಯಾವುದೇ ಲಂಚ ಕೇಳಿಲ್ಲ. ಲೋಕಾಯುಕ್ತ ಪೊಲೀಸರು ಒಂದು ಬಿಳಿ ಹಾಳೆಯ ಮೇಲೆ ಸಹಿ ಪಡೆದಿದ್ದಾರೆ' ಎಂದು ಸುಳ್ಳು ಸಾಕ್ಷಿ ಹೇಳಿದ್ದು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಶಶಿಕಾಂತ ವಿರುದ್ಧ ದೂರು ದಾಖಲಿಸಲಾಗಿತ್ತು.

ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಪಲ್ಲವಿ ಆರ್ ಶುಕ್ರವಾರ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಹಿಂದಿದ್ದ ಅಭಿಯೋಜಕ ಎಂ.ಕೆ. ಪಾಟೀಲ, ಈಗಿರುವ ಎಂ.ಸಿ. ಮಸಳಿ ವಾದ ಮಂಡಿಸಿದ್ದರು.

ಕಾಟಾಚಾರದ ಪಿಐಎಲ್ ವಜಾ

ವಸತಿ ಯೋಜನೆ ಪ್ರಶ್ನಿಸಿದ್ದ ಅರ್ಜಿ; ಹೈಕೋರ್ಟ್ ವಿಭಾಗೀಯ ಪೀಠ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸನ ಜಿಲ್ಲೆಯ ಭುವನಹಳ್ಳಿ, ಕೆಂಚನಹಳ್ಳಿ, ಸಮುದ್ರದಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ವಸತಿರಹಿತರಿಗೆ ಮನೆ ನಿರ್ಮಿಸುವ ₹1,017 ಕೋಟಿ ಮೊತ್ತದ ಯೋಜನೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಕಾಟಾಚಾರಕ್ಕೆ ಸಲ್ಲಿಸಲಾಗಿದೆ' ಎಂದು ಅತೃಪ್ತಿ ವ್ಯಕ್ತಪಡಿಸಿರುವ ಹೈಕೋರ್ಟ್, ವಜಾಗೊಳಿಸಿದೆ.

ಈ ಸಂಬಂಧ ಅಡುವಳ್ಳಿಯ ಅಭಿಷೇಕ್ ಸಲ್ಲಿಸಿದ್ದ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ತಮ್ಮ ಹಿನ್ನೆಲೆಯ ವಿವರಗಳನ್ನು ನೀಡದ ಕಾರಣ ಅವರು ಯಾವ ಉದ್ದೇಶದಿಂದ ಪಿಐಎಲ್ ಸಲ್ಲಿಸಿದ್ದಾರೆ ಎಂಬ ಮಾಹಿತಿ ಇಲ್ಲವಾಗಿದೆ. ನಿಯಮಗಳ ಪ್ರಕಾರ ಪಿಐಎಲ್ ಸಲ್ಲಿಸುವ ಮುನ್ನ, ಅರ್ಜಿದಾರರು ಯಾವ ವಿಷಯದ ಬಗ್ಗೆ ಅರ್ಜಿ ಸಲ್ಲಿಸಲು ಬಯಸುತ್ತಾರೋ ಆ ವಿಷಯದ ಬಗ್ಗೆ ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿರಬೇಕು. ಆದರೆ, ಈ ಪ್ರಕರಣದಲ್ಲಿ ಪಿಐಎಲ್ ಸಲ್ಲಿಸಿದ ನಂತರ ಸಂಬಂಧಿಸಿದ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿತು.

'ಪಿಐಎಲ್ ಸಲ್ಲಿಸುವ ಸಂಬಂಧ ಹೈಕೋರ್ಟ್ 2018ರಲ್ಲೇ ನಿಯಮಗಳನ್ನು ರೂಪಿಸಿದೆ. ಈ ನಿಯಮಗಳು 2019ರಿಂದಲೂ ಜಾರಿಯಲ್ಲಿವೆ. ಈ ನಿಯಮಗಳ ಅನುಸಾರ ಅರ್ಜಿದಾರರು ತಮ್ಮ ಹೆಸರು, ಇ–ಮೇಲ್ ವಿಳಾಸ, ವೃತ್ತಿ, ಹಿನ್ನೆಲೆ, ಆದಾಯದ ಮೂಲ ಸೇರಿದಂತೆ ಸಮಗ್ರ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಕೋರ್ಟ್‌ಗೆ ಸಲ್ಲಿಸಬೇಕಿತ್ತು. ಆದರೆ, ಅರ್ಜಿಯಲ್ಲಿ ಹೆಸರು ಬಿಟ್ಟರೆ ಬೇರೆ ಯಾವುದೇ ವಿವರಗಳನ್ನು ನೀಡಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಸಿವಿಲ್ ಜಡ್ಜ್ ಪರೀಕ್ಷೆ: ಗರ್ಭಿಣಿಗೆ ವಿಶೇಷ ಅವಕಾಶ

ಬೆಂಗಳೂರು: ನ್ಯಾಯಾಧೀಶರ ಹುದ್ದೆಗೆ ನಡೆಯಲಿರುವ ಲಿಖಿತ ಪರೀಕ್ಷೆ ಬರೆಯಲು ಎಂಟೂವರೆ ತಿಂಗಳ ಗರ್ಭಿಣಿ ವಕೀಲೆಯೊಬ್ಬರಿಗೆ ಹೈಕೋರ್ಟ್ ಅವರಿರುವ ಊರಿನಲ್ಲೇ ಅವಕಾಶ ಕಲ್ಪಿಸಿದೆ. ಇದೇ ಮೊದಲ ಬಾರಿಗೆ ಹೈಕೋರ್ಟ್ ಇಂತಹುದೊಂದು ವಿಶೇಷ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಕುರಿತಂತೆ ಅಭ್ಯರ್ಥಿ ಸಲ್ಲಿಸಿದ್ದ ಮನವಿಯನ್ನು ಸಿವಿಲ್ ನ್ಯಾಯಾಧೀಶರ ನೇರ ನೇಮಕಾತಿ ಸಮಿತಿಯ ನ್ಯಾಯಮೂರ್ತಿಗಳಾದ ಪಿ.ಎಸ್.ದಿನೇಶ್ ಕುಮಾರ್, ಕೆ.ಸೋಮಶೇಖರ್, ಎಸ್.ಸುನಿಲ್ ದತ್ ಯಾದವ್, ಅಶೋಕ್ ಎಸ್. ಕಿಣಗಿ ಮತ್ತು ಎಂ.ನಾಗಪ್ರಸನ್ನ ಅವರು ಮಾನ್ಯ ಮಾಡಿದ್ದು, ಈ ನಿರ್ಧಾರಕ್ಕೆ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಸಮ್ಮತಿ ಸೂಚಿಸಿದ್ದಾರೆ.

'ಸಿವಿಲ್ ನ್ಯಾಯಾಧೀಶರ 57 ಹುದ್ದೆಗಳ ಭರ್ತಿಗೆ ಇದೇ 18 ಮತ್ತು 19ರಂದು ಲಿಖಿತ ಮುಖ್ಯ ಪರೀಕ್ಷೆ ಬೆಂಗಳೂರಿನಲ್ಲಿ ಮಾತ್ರವೇ ನಡೆಯಲಿದ್ದು, ಬೇರೆಲ್ಲೂ ಬರೆಯಲು ಅವಕಾಶವಿಲ್ಲ. ಮಂಗಳೂರಿನ ವಕೀಲೆ ನೇತ್ರಾವತಿ ಅವರೂ ಈ ಪರೀಕ್ಷೆಗೆ ಹಾಜರಾಗಬೇಕಿದ್ದು, ಅವರೀಗ ತುಂಬು ಗರ್ಭಿಣಿಯಾಗಿರುವ ಕಾರಣ ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲೇ ಪರೀಕ್ಷೆಗೆ ಹಾಜರಾಗಲು ಅವರಿಗೆ ಅವಕಾಶ ಒದಗಿಸಲಾಗಿದೆ. ಪರೀಕ್ಷೆ ಬರೆಯುವ ಸ್ಥಳದಲ್ಲಿ ಅಭ್ಯರ್ಥಿಗೆ ಅನುಕೂಲವಾಗುವಂತೆ ಎಲ್ಲಾ ರೀತಿಯ ವೈದ್ಯಕೀಯ ಸೌಲಭ್ಯಕ್ಕೆ ವ್ಯವಸ್ಥೆ ಸಜ್ಜುಗೊಳಿಸಲಾಗಿದೆ' ಎಂದು ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಮ ಕೈಗೊಂಡ 'ಏರ್ ಇಂಡಿಯಾ ಎಕ್ಸ್‌ಪ್ರೆಸ್' ವಿಮಾನಯಾನ ಸಂಸ್ಥೆ

ಆರೋಪಿ ಪ್ರವೀಣ್ ಕೆಲಸದಿಂದ ಅಮಾನತು

ಪ್ರಜಾವಾಣಿ ವಾರ್ತೆ


ಪ್ರವೀಣ್

ಮಂಗಳೂರು: 'ಏರ್ ಇಂಡಿಯಾ ಎಕ್ಸ್‌ಪ್ರೆಸ್' ವಿಮಾನಯಾನ ಸಂಸ್ಥೆಯಲ್ಲಿ ಕ್ಯಾಬಿನ್ ಸಿಬ್ಬಂದಿ ಆಗಿ ಕಾರ್ಯನಿರ್ವಹಿಸುತ್ತಿದ್ದ ಕೊಲೆ ಆರೋಪಿ ಪ್ರವೀಣ್ ಅರುಣ್ ಚೌಗಲೆಯನ್ನು ಸಂಸ್ಥೆಯು ಕೆಲಸದಿಂದ ಅಮಾನತು (ಡಿರೋಸ್ಟರ್)ಗೊಳಿಸಿದೆ.

'ಈ ಘಟನೆಯಿಂದ ನಮಗೆ ತೀವ್ರ ದುಃಖವಾಗಿದ್ದು, ಮೃತರ ಸಂಬಂಧಿಗಳಿಗೆ ನಾವು ಬೆಂಬಲ ನೀಡಿ, ತನಿಖೆಗೆ ಎಲ್ಲ ಸಹಕಾರ ನೀಡುತ್ತೇವೆ. ಈ ಘಟನೆ ಗಮನಕ್ಕೆ ಬಂದ ತಕ್ಷಣದಿಂದಲೇ ಆತನನ್ನು ಕೆಲಸದಿಂದ ಅಮಾನತು ಮಾಡಲಾಗಿದೆ' ಎಂದು ಸಂಸ್ಥೆಯ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಉಡುಪಿ ಜಿಲ್ಲೆ ಮಲ್ಪೆ ಸಮೀಪದ ನೇಜಾರಿನ ತೃಪ್ತಿ ಲೇಔಟ್‌ನಲ್ಲಿ, ಸಹೋದ್ಯೋಗಿ ಅಯ್ನಾಜ್ ಹಾಗೂ ಅವರ ಕುಟುಂಬದ ಹಸೀನಾ, ಅಫ್ನಾನ್, ಅಸೀಮ್ ಅವರನ್ನು ಕೊಲೆ ಮಾಡಿದ್ದ ಆರೋಪದ ಮೇಲೆ ಪ್ರವೀಣ್ ಚೌಗಲೆಯನ್ನು ನವೆಂಬರ್ 16ರಂದು ಪೊಲೀಸರು ಬಂಧಿಸಿದ್ದಾರೆ.

'ಪೊಲೀಸ್ ಕಸ್ಟಡಿಯಲ್ಲಿರುವ ಪ್ರವೀಣ್ ಚೌಗಲೆಯ ವಿಚಾರಣೆ ಮುಂದುವರಿದಿದೆ. ಈತ ಏಳೆಂಟು ತಿಂಗಳ ಹಿಂದೆ ಸುಮಾರು ₹18 ಲಕ್ಷ ಮೌಲ್ಯದ ಹೊಸ ಕಾರನ್ನು ಖರೀದಿಸಿರುವ ಮಾಹಿತಿ ಲಭ್ಯವಾಗಿದೆ. ಕ್ಯಾಬಿನ್ ಸಿಬ್ಬಂದಿ ಆಗಿದ್ದ ಆತನ ಬಳಿ ಅಷ್ಟು ದೊಡ್ಡ ಮೊತ್ತದ ಹಣ ಎಲ್ಲಿಂದ ಬಂತು ಎಂಬ ಬಗ್ಗೆ ಕೂಡ ತನಿಖೆ ನಡೆಯುತ್ತಿದೆ. ಆತನ ವ್ಯವಹಾರಗಳು ಅನೇಕ ಅನುಮಾನಗಳನ್ನು ಹುಟ್ಟು ಹಾಕಿದ್ದು, ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತ್ವರಿತಗತಿ ನ್ಯಾಯಾಲಯದಲ್ಲಿ ವಿಚಾರಣೆ'

ಉಡುಪಿ: ಇಲ್ಲಿಯ ನೇಜಾರಿನಲ್ಲಿ ಈಚೆಗೆ ನಡೆದ ಒಂದೇ ಕುಟುಂಬದ ನಾಲ್ವರ ಹತ್ಯೆ ಪ್ರಕರಣದ ತನಿಖೆಯನ್ನು ತ್ವರಿತಗತಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವಂತೆ ಮೃತರ ಕುಟುಂಬದ ಸದಸ್ಯರು ಮನವಿ ನೀಡಿದ್ದು ಕಾನೂನು ಚೌಕಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆ. ನೊಂದ ಕುಟುಂಬಕ್ಕೆ ಶೀಘ್ರ ನ್ಯಾಯ ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಶುಕ್ರವಾರ ಘಟನಾ ಸ್ಥಳಕ್ಕೆ ಭೇಟಿನೀಡಿ ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಮಾತನಾಡಿದ ಅವರು, ಇದು ಅಮಾನುಷ ಕೃತ್ಯ. ಸಂತ್ರಸ್ತರ ಪರ ಸರ್ಕಾರ ನಿಲ್ಲಲಿದೆ ಎಂದರು.

'ಆರೋಪಿ ವಿಕೃತ ಮನಸ್ಥಿತಿಯವನಾಗಿದ್ದು ಕೇವಲ 20 ನಿಮಿಷಗಳಲ್ಲಿ ನಾಲ್ವರ ಜೀವ ತೆಗೆದಿದ್ದಾನೆ. ಅತ್ಯಂತ ಹೇಯ ಕೃತ್ಯ ಎಸಗಿರುವ ಆರೋಪಿಗೆ ಕಾನೂನಿನಡಿ ತಕ್ಕ ಶಿಕ್ಷೆಯಾಗಲಿದೆ' ಎಂದು ಸಚಿವೆ ಭರವಸೆ ನೀಡಿದರು.

ಕಾವೇರಿ ವಿವಾದ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಪುರಸ್ಕರಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ, 'ಜಾಗೃತ ಕರ್ನಾಟಕ–ಜಾಗೃತ ಭಾರತ' ಸಂಘಟನೆ ಅಧ್ಯಕ್ಷ ಕೆ.ಎನ್.ಮಂಜುನಾಥ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

'ಇದು ಅಂತರರಾಜ್ಯ ನದಿ ನೀರು ಹಂಚಿಕೆ ವಿಚಾರವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಅಂತರರಾಜ್ಯ ನದಿ ನೀರು ವ್ಯಾಜ್ಯ ಕಾಯ್ದೆ–1956ರ ಅನ್ವಯ ಹೈಕೋರ್ಟ್ ಯಾವುದೇ ಆದೇಶ ನೀಡಲಾಗದು. ಸುಪ್ರೀಂಕೋರ್ಟ್ ಮಾತ್ರವೇ ಇಂತಹ ಅರ್ಜಿಗಳ ವಿಚಾರಣೆ ನಡೆಸಿ ಆದೇಶ ನೀಡಬಹುದಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ, 'ಅರ್ಜಿದಾರರು ಬೇಕಿದ್ದರೆ ಪರ್ಯಾಯ ವೇದಿಕೆಗಳಲ್ಲಿ ಪರಿಹಾರ ಕಂಡುಕೊಳ್ಳಬಹುದು' ಎಂದು ಸೂಚಿಸಿ ಅರ್ಜಿ ವಿಲೇವಾರಿ ಮಾಡಿತು.

ಆರ್‌.ಡಿ. ಪಾಟೀಲ ಹೈಕೋರ್ಟ್ ಮೊರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಕ್ಟೋಬರ್ 28ರಂದು ನಡೆಸಿದ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಪರೀಕ್ಷಾ ಅಕ್ರಮ ನಡೆಸಿದ ಪ್ರಕರಣದಲ್ಲಿ ಬಂಧಿತನಾಗಿರುವ ಜಿಲ್ಲೆಯ ಅಫಜಲಪುರದ ಆರ್‌.ಡಿ. ಪಾಟೀಲ ತನ್ನ ವಿರುದ್ಧ ದಾಖಲಾದ ಮೂರು ಎಫ್‌ಐಆರ್‌ಗಳನ್ನು ರದ್ದುಗೊಳಿಸಬೇಕು ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾನೆ.

ಶುಕ್ರವಾರ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಕೆ. ನಟರಾಜನ್ ನೇತೃತ್ವದ ನ್ಯಾಯ ಪೀಠವು, ಈ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿ ಸಿಐಡಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ನವೆಂಬರ್ 28ಕ್ಕೆ ಮುಂದೂಡಿತು.

ಅಮಾಯಕರ ಬಂಧನ– ಆರೋಪ: ಶುಕ್ರವಾರ ಆರೋಗ್ಯ ತಪಾಸಣೆಗಾಗಿ ನಗರದ ಜಿಮ್ಸ್ ಆಸ್ಪತ್ರೆಗೆ ಕರೆತಂದ ವೇಳೆ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಆರ್‌.ಡಿ. ಪಾಟೀಲ, ಪೊಲೀಸರು ಕೆಇಎ ಅಕ್ರಮಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಸುಳ್ಳು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಅಮಾಯಕರನ್ನು ಬಂಧಿಸಿ, ಅವರಿಂದ ಖಾಲಿ ಹಾಳೆಯ ಮೇಲೆ ಒತ್ತಾಯಪೂರ್ವಕವಾಗಿ ಸಹಿ ಹಾಕಿಸಿಕೊಂಡಿದ್ದಾರೆ. ನೀವೂ ಇದರಲ್ಲಿ ಭಾಗಿಯಾಗಿದ್ದೀರಿ ಎಂದು ಸುಳ್ಳು ಆರೋಪ ಮಾಡಿದ್ದಾರೆ. ಅಮಾಯಕ ಎ.ಇ ರುದ್ರಗೌಡ ಅವರನ್ನೂ ಬಂಧಿಸಿದ್ದಾರೆ. ಇದೆಲ್ಲವೂ ಕಾನೂನುಬಾಹಿರವಾಗಿದೆ' ಎಂದು ಅಸಮಾಧಾನ ಹೊರಹಾಕಿದ. ಅಷ್ಟರಲ್ಲಿ ಪೊಲೀಸರು ಆತನನ್ನು ಆಸ್ಪತ್ರೆಯೊಳಗೆ ಕರೆದೊಯ್ದರು.

'ವಿಶ್ವದ ಮೊದಲ ಗುಮ್ಮಟ ತಾರಾಲಯ': ಕೇಂದ್ರದಿಂದ ₹5 ಕೋಟಿ

ತಾರಾಲಯಕ್ಕೆ ಫ್ರಾನ್ಸ್, ಜಪಾನ್ ನೆರವು

• ಎಂ. ಮಹೇಶ

ಮೈಸೂರು: ಬಾಹ್ಯಾಕಾಶ ಕುರಿತಾದ ಕುತೂಹಲಿಗಳಿಗೆ, ಮುಂದಿನ ವರ್ಷದ ಆಗಸ್ಟ್ ಹೊತ್ತಿಗೆ ಚಾಮುಂಡಿಬೆಟ್ಟದ ತಪ್ಪಲಿನಿಂದ ಇಡೀ ತಾರಾಮಂಡಲವನ್ನೇ ಕಣ್ತುಂಬಿಕೊಳ್ಳುವ ಅವಕಾಶ ಸಿಗಲಿದೆ. ಅತ್ಯಾಧುನಿಕ ಟೆಲಿಸ್ಕೋಪ್‌ಗಳ ಮೂಲಕ ಧೂಮಕೇತುಗಳು, ಗ್ರಹಣದಂತಹ ಖಗೋಳದ ಕೌತುಕಗಳನ್ನು ಅಡೆತಡೆ ಇಲ್ಲದೆ ವೀಕ್ಷಿಸಬಹುದು.

ಬೆಟ್ಟದ ತಪ್ಪಲಿನಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಜಯಚಾಮರಾಜ ಒಡೆಯರ್ ಉನ್ನತ ಕಲಿಕಾ ಕೇಂದ್ರದ ಆವರಣದಲ್ಲಿ ಅತ್ಯಾಧುನಿಕ ತಾರಾಲಯದ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಜಪಾನ್ ಹಾಗೂ ಫ್ರಾನ್ಸ್‌ನ ಸಂಸ್ಥೆಗಳು ತಾಂತ್ರಿಕ ನೆರವು ನೀಡುತ್ತಿವೆ. ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯು ಇಲ್ಲಿ ತಾರಾಲಯದ ಜೊತೆಗೆ ಕಾಸ್ಮೊಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ(ಕಾಸ್ಮಸ್)ವನ್ನೂ ನಿರ್ಮಿಸುತ್ತಿದೆ. ಇವುಗಳಿಗೆ 2022ರ ಮಾರ್ಚ್‌ನಲ್ಲಿ ಶಂಕುಸ್ಥಾಪನೆ ನಡೆದಿತ್ತು.

'8ಕೆ ರೆಸಲ್ಯೂಶನ್' ಹೊಂದಿರುವ ಅತ್ಯಾಧುನಿಕ 15-ಮೀಟರ್ ಎಲ್‌ಇಡಿ ತಾರಾಲಯವು, 'ವಿಶ್ವದ ಮೊದಲ ಗುಮ್ಮಟ ತಾರಾಲಯ' ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಒಟ್ಟು ₹ 81 ಕೋಟಿ ವಿನಿಯೋಗಿಸಲಾಗುತ್ತಿದ್ದು, ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಸಂಸದರ ನಿಧಿಯಿಂದ₹ 5 ಕೋಟಿ ನೀಡಿದ್ದಾರೆ.


ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅತ್ಯಾಧುನಿಕ ತಾರಾಲಯದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ

'ನಿರ್ಮಾಣ ಕಾರ್ಯವು ಗಮನಾರ್ಹ ಪ್ರಗತಿಯನ್ನು ಸಾಧಿಸುತ್ತಿದೆ. ರಾಜ್ಯದ ಯುವಜನರಲ್ಲಿ ಬಾಹ್ಯಾಕಾಶ ಮತ್ತು ವಿಶ್ವವಿಜ್ಞಾನದ ಬಗ್ಗೆ ಆಸಕ್ತಿಯನ್ನು ಬೆಳೆಸುವ ಉದ್ದೇಶದಿಂದ 'ಡಿಜಿಸ್ಟಾರ್ 7 ತಾರಾಲಯ'ವನ್ನು ಸ್ಥಾಪಿಸಲಾಗುತ್ತಿದೆ. ಎಲ್‌ಇಡಿ ಗುಮ್ಮಟವನ್ನು ಕೊನಿಕಾ-ಮಿನೋಲ್ಟಾ (ಜಪಾನ್), ಆರ್‌ಎಸ್‌ಎ-ಕಾಸ್ಮೊಸ್ (ಫ್ರಾನ್ಸ್) ಮತ್ತು ಮೆಸರ್ಸ್ ಆರ್ಬಿಟ್-ಅನಿಮೇಟ್ (ಇಂಡಿಯಾ) ಕನ್ಸೋರ್ಟಿಯಂ ಅಭಿವೃದ್ಧಿಪಡಿಸುತ್ತಿವೆ. ಎಲ್‌ಇಡಿ ಡೋಮ್‌ನ ಅಭಿವೃದ್ಧಿ ಮತ್ತು ಸಿವಿಲ್ ನಿರ್ಮಾಣವೂ ಪ್ರಗತಿಯಲ್ಲಿದೆ' ಎಂದು ಅವರು 'ಎಕ್ಸ್'(ಟ್ವೀಟ್)ನಲ್ಲಿ ತಿಳಿಸಿದ್ದಾರೆ.

ನಿರ್ಮಾಣ ಮತ್ತು ಕಾರ್ಯಾಚರಣೆಗಾಗಿ ಮೈಸೂರು ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ (ಐಐಎ) ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ-ತರಬೇತಿ ಕೇಂದ್ರ ಯೋಜನೆಯ ಅನುಷ್ಠಾನವನ್ನು ಸಚಿವಾಲಯದ ಕಾರ್ಯದರ್ಶಿ ಮಾರ್ಗದರ್ಶನದ ಸಲಹಾ ಮಂಡಳಿಯ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಅನುದಾನ ನೀಡಿದೆ. ಸುಧಾರಿತ ಮತ್ತು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

ಈ ತಾರಾಲಯವು ಪ್ಲೇಬ್ಯಾಕ್ ಎಂಜಿನ್ ಹೊಂದಿರಲಿದೆ. ಆ ಕ್ಷಣದ ಮಾಹಿತಿಯನ್ನು ನೀಡಬಲ್ಲ (ರಿಯಲ್ ಟೈಮ್) ತಾರಾಲಯವು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಶಿಕ್ಷಣ ಮತ್ತು ತರಬೇತಿಗೆ ಸಹಕಾರಿಯಾಗಲಿದೆ. ಖಗೋಳವಿಜ್ಞಾನದ ವ್ಯವಸ್ಥಿತ ದಾಖಲಾತಿಯೊಂದಿಗೆ ದತ್ತಾಂಶ, ಕೋಡಿಂಗ್, ಪ್ರಾಯೋಗಿಕ ಅನುಭವವನ್ನು ಸಂಸ್ಕರಿಸುವ ಕುರಿತು ತರಬೇತಿಯನ್ನೂ ಇಲ್ಲಿ ನೀಡಲಾಗುವುದು.

ಮುಖ್ಯಾಂಶಗಳು

- ₹ 81 ಕೋಟಿ ವೆಚ್ಚದ ಯೋಜನೆ
- ಮೈಸೂರು ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ
- 2024ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ

ನೇಮಕಾತಿಗಳಲ್ಲಿ ಅಕ್ರಮ ತಡೆ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಗಳಲ್ಲಿ ಅಕ್ರಮ, ಭ್ರಷ್ಟಾಚಾರ ತಡೆಯುವ ಉದ್ದೇಶದಿಂದ ರೂಪಿಸಿರುವ ಕರ್ನಾಟಕ ಸಾರ್ವಜನಿಕ ಪರೀಕ್ಷಾ (ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಅನ್ಯಾಯದ ವಿಧಾನ ತಡೆಗಟ್ಟುವಿಕೆ) ಮಸೂದೆ-2023ಕ್ಕೆ ಗುರುವಾರ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ಡಿಸೆಂಬರ್ 4ರಿಂದ ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲದ ಅಧಿವೇಶನದಲ್ಲೇ ಈ ಮಸೂದೆಯನ್ನು ಮಂಡಿಸಿ, ಅಂಗೀಕಾರ ಪಡೆಯುವುದಕ್ಕೂ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ನೇಮಕಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಸೋರಿಕೆ, ಭ್ರಷ್ಟಾಚಾರದ ಮೂಲಕ ಅಕ್ರಮ ನೇಮಕಾತಿ ಸೇರಿದಂತೆ ಎಲ್ಲ ಬಗೆಯ ಅಕ್ರಮಗಳಿಗೂ ಕಡಿವಾಣ ಹಾಕುವ ಉದ್ದೇಶವನ್ನು ಈ ಮಸೂದೆ ಹೊಂದಿದೆ.

ಈ ಕುರಿತು ಸಾಮಾಜಿಕ ಮಾಧ್ಯಮಗಳ ತಮ್ಮ ಅಧಿಕೃತ ಖಾತೆಗಳಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಸಹಾಯಕ ಪ್ರಾಧ್ಯಾಪಕರು, ಪ್ರಥಮ ದರ್ಜೆ ಸಹಾಯಕರು ಸೇರಿ ಹಲವು ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆದಿದ್ದವು. ವರ್ಷಾನುಗಟ್ಟಲೆ ತಯಾರಿ ನಡೆಸಿ, ಪ್ರಾಮಾಣಿಕವಾಗಿ ಪರೀಕ್ಷೆ ಎದುರಿಸಿದ್ದ ಸಾವಿರಾರು ಅಭ್ಯರ್ಥಿಗಳು ಉದ್ಯೋಗ ವಂಚಿತರಾಗಿದ್ದರು' ಎಂದಿದ್ದಾರೆ.

'ಇಂತಹ ಅಕ್ರಮ, ಅವ್ಯವಹಾರಗಳನ್ನು ತಡೆಗಟ್ಟಿ, ಅರ್ಹರಿಗೆ ಸರ್ಕಾರಿ ಉದ್ಯೋಗ ದೊರಕಿಸಲು ಕಟ್ಟುನಿಟ್ಟಿನ ಪರೀಕ್ಷಾ ವಿಧಾನ, ಪಾರದರ್ಶಕ ನೇಮಕಾತಿ ಪ್ರಕ್ರಿಯೆ ಅಳವಡಿಸಲು ಈ ಮಸೂದೆಯನ್ನು ರೂಪಿಸಲಾಗಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಷ್ಟೇ ಅಲ್ಲ, ಅರ್ಹರಿಗೆ ಮಾತ್ರ ಉದ್ಯೋಗ ಸಿಗಬೇಕು ಎಂಬುದಕ್ಕೆ ನಮ್ಮ ಆದ್ಯತೆ' ಎಂದು ಹೇಳಿದ್ದಾರೆ.


ವೈದ್ಯ ವಿಜ್ಞಾನದಲ್ಲಿ ಕೆಎಲ್‌ಇ ಸಂಸ್ಥೆಯ ಹೊಸ ಹೆಜ್ಜೆ: ಪ್ರಭಾಕರ ಕೋರೆ

ವೈದ್ಯಕೀಯ ತಂತ್ರಜ್ಞಾನ ನಾವೀನ್ಯತಾ ಕೇಂದ್ರ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕಾಹೇರ್) ವತಿಯಿಂದ ನಾವೀನ್ಯತಾ ಕೇಂದ್ರ ಸ್ಥಾಪಿಸಲಾಗಿದೆ. ವಿಜ್ಞಾನ ಮತ್ತು ವೈದ್ಯಕೀಯ ತಂತ್ರಜ್ಞಾನದಲ್ಲಿ ಸಂಶೋಧನೆ ಕೈಗೊಳ್ಳಲು ನವೋದ್ಯಮಿಗಳು ಮತ್ತು ಸಂಶೋಧಕರಿಗೆ ಇದು ಪೂರಕವಾಗಲಿದೆ' ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

'ನವೀನ ಪರಿಕಲ್ಪನೆ ಹೊಂದಿರುವವರಿಗೆ ಸಂಶೋಧನೆ ಕೈಗೊಳ್ಳಲು ಅಗತ್ಯ ವೇದಿಕೆ ಒದಗಿಸಲಿದೆ. ಆರಂಭಿಕ ಹಂತದಲ್ಲಿ ನಾವು ₹3 ಕೋಟಿ ನಿಧಿ ಭರಿಸುತ್ತೇವೆ. ಮುಂದಿನ ತಿಂಗಳು ಇದು ಕಾರ್ಯಾರಂಭ ಮಾಡಲಿದೆ. ಈ ಪ್ರದೇಶದಲ್ಲಿ ಮೊದಲ ಬಾರಿ ಆರಂಭಗೊಳ್ಳುವ ಈ ಕೇಂದ್ರ ಆರ್ಥಿಕ ಸುಧಾರಣೆ ಮೇಲೆ ಗಮನಾರ್ಹ ಪರಿಣಾಮ ಬೀರುವ ನಿರೀಕ್ಷೆ ಇದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.


ಪ್ರಭಾಕರ ಕೋರೆ

'ಗೇಟ್ಸ್ ಫೌಂಡೇಷನ್ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಕೌನ್ಸಿಲ್ (ಐಸಿಎಂಆರ್) ನಮ್ಮೊಂದಿಗೆ ಕೈಜೋಡಿಸಿವೆ. ವೈದ್ಯಕೀಯ ತಂತ್ರಜ್ಞಾನ ಮತ್ತು ಆರೋಗ್ಯ ರಕ್ಷಣಾ ವ್ಯವಸ್ಥೆ ಅಭಿವೃದ್ಧಿಪಡಿಸುವಲ್ಲಿ ಈ ಕೇಂದ್ರ ಮಹತ್ತರ ಪಾತ್ರ ವಹಿಸಲಿದೆ. ಇಲ್ಲಿ ಆರಂಭಗೊಳ್ಳುವ ಸ್ಟಾರ್ಟಪ್‌ಗಳಿಗೆ ಶೈಕ್ಷಣಿಕ ಸಂಪನ್ಮೂಲ, ಅಗತ್ಯ ಮಾಹಿತಿ, ಮಾರ್ಗದರ್ಶನ, ನೆಟ್‌ವರ್ಕಿಂಗ್ ಮತ್ತು ಅನುಭವಿಗಳಿಂದ ಸಹಕಾರ ಸಿಗಲಿದೆ' ಎಂದರು.

'ಸಂಶೋಧಕರು ತಮ್ಮ ಪರಿಕಲ್ಪನೆ ಮತ್ತು ಆಲೋಚನೆಯನ್ನು ಆಯ್ಕೆ ಸಮಿತಿ ಮುಂದೆ ಪ್ರಸ್ತುತಪಡಿಸಬೇಕು. ಅದನ್ನು ಪರಿಶೀಲಿಸಿದ ಬಳಿಕ, ಅಗತ್ಯ ಸೌಲಭ್ಯ ಒದಗಿಸಲಾಗುತ್ತದೆ. ಸಂಶೋಧಕರಿಗೆ ಮಾರ್ಗದರ್ಶನ ನೀಡಲು ಎಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರಗಳಲ್ಲಿ ಪರಿಣತ ತಂತ್ರಜ್ಞರನ್ನು ಗುರುತಿಸಿದ್ದೇವೆ' ಎಂದರು.

ಪಾಲುದಾರಿಕೆಗೆ ಪ್ರಯತ್ನ: 'ವೈದ್ಯಕೀಯ, ದಂತ ವೈದ್ಯಕೀಯ, ಔಷಧ ವಿಜ್ಞಾನ ಮತ್ತು ಆಯುರ್ವೇದ ಕ್ಷೇತ್ರಗಳಲ್ಲಿ ನಮ್ಮ ವಿಶ್ವವಿದ್ಯಾಲಯ ಹೆಚ್ಚಿನ ಪೇಟೆಂಟ್‌ಗಳನ್ನು ಹೊಂದಿದೆ. ಹೊಸ ಕಂಪನಿಗಳನ್ನು ಆರಂಭಿಸಲು ಉದ್ಯಮಶೀಲತೆ ಸಾಮರ್ಥ್ಯವೂ ವಿಶ್ವವಿದ್ಯಾಲಯಕ್ಕಿದೆ. ದೇಶದಲ್ಲಿರುವ ಇತರೆ ಸ್ಟಾರ್ಟಪ್, ಹೂಡಿಕೆದಾರರು ಮತ್ತು ಆರೋಗ್ಯ ಪೂರೈಕೆದಾರರು ಸಂಪರ್ಕ ಸಾಧಿಸಲು ಈ ಕೇಂದ್ರ ಅವಕಾಶಗಳನ್ನು ಒದಗಿಸಲಿದೆ. ಕೇಂದ್ರಕ್ಕೆ ಅಗತ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಬೇರೆ ದೇಶಗಳಿಂದ ಆಮದು ಮಾಡಲಾಗುತ್ತಿದೆ. ಕಾನ್ಪುರದ ಐಐಟಿ ಮತ್ತು ಇತರರೊಂದಿಗೆ ಪಾಲುದಾರಿಕೆಗೆ ಪ್ರಯತ್ನಿಸಲಾಗುತ್ತಿದೆ' ಎಂದರು.

ಕಾಹೇರ್ ಕುಲಪತಿ ಡಾ.ನಿತಿನ್ ಗಂಗಾನೆ, 'ಹೊಸ ವೈದ್ಯಕೀಯ ತಾಂತ್ರಿಕ (ಮೆಡ್‌–ಟೆಕ್) ಉತ್ಪನ್ನ ಮತ್ತು ಸೇವೆಗಳನ್ನು ಈ ಕೇಂದ್ರ ಅಭಿವೃದ್ಧಿಪಡಿಸುತದೆ. ಜತೆಗೆ, ವಾಣಿಜ್ಯೀಕರಣಗೊಳಿಸಿ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುತ್ತದೆ. ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ತಂತ್ರಜ್ಞಾನ ವಲಯದಲ್ಲಿನ ಸ್ಟಾರ್ಟಪ್‌ಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಮಾತ್ರ ಮೀಸಲಾಗಿದೆ' ಎಂದು ತಿಳಿಸಿದರು.

ಕುಲಸಚಿವ ಡಾ.ಎಂ.ಎಸ್. ಗಣಾಚಾರಿ, ಸಂಶೋಧನಾ ವಿಭಾಗದ ನಿರ್ದೇಶಕ ಡಾ.ಎಸ್.ಎಸ್.ಗೌಡರ, ಹಾಸ್ಪಿಟಲ್ ಡೆವಲಪ್‌ಮೆಂಟ್, ನ್ಯೂ ಪ್ರಾಜೆಕ್ಟ್ಸ್ ವಿಭಾಗದ ನಿರ್ದೇಶಕ ಡಾ.ವಿ.ಡಿ.ಪಾಟೀಲ, ಜೆಎನ್‌ಎಂಸಿ ಪ್ರಾಚಾರ್ಯರಾದ ಡಾ.ಎನ್.ಎಸ್.ಮಹಾಂತಶೆಟ್ಟಿ, ಯೋಗೇಶ ಕುಲಕರ್ಣಿ ಇತರರಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಮ್ಮನ್ನು ಪ್ರೀತಿಸದೇ ಇರುವವರನ್ನು ಯಾವುದೇ ಪೂರ್ವಗ್ರಹಗಳನ್ನು ಇಟ್ಟುಕೊಳ್ಳದೇ ಮರೆತುಬಿಡೋಣ.

–ಪಾಬ್ಲೊ ನೆರೂಡ

ಸಂಧ್ಯಾಕಾಲದಲ್ಲಿ ನೆಮ್ಮದಿಯ ಬದುಕು ಸಾಮೂಹಿಕ ಹೊಣೆಗಾರಿಕೆ ಅಗತ್ಯ

ಹೆತ್ತವರನ್ನು ನೋಡಿಕೊಳ್ಳುವುದು ಕಾನೂನು ಬಾಧ್ಯತೆಯಷ್ಟೇ ಅಲ್ಲ, ಅದು ಮಕ್ಕಳ ನೈತಿಕ ಕರ್ತವ್ಯವೂ ಹೌದು ಎನ್ನುವ ಹೈಕೋರ್ಟ್ ಅಭಿಪ್ರಾಯವು ಸಾಮಾಜಿಕ ಸಂಬಂಧಗಳಲ್ಲಿ ಮಾನವೀಯ ಸಂವೇದನೆಗಳ ಕೊರತೆಯಿರುವುದನ್ನು ಬಟ್ಟ ಬಯಲು ಮಾಡಿ ತೋರಿಸುವಂತಿದೆ. ಮಗಳು ಮತ್ತು ಅಳಿಯನೊಂದಿಗಿನ ಹಿರಿಯ ನಾಗರಿಕರೊಬ್ಬರ ಕಾನೂನು ವ್ಯಾಜ್ಯದ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಬದುಕಿನ ಮುಸ್ಸಂಜೆಯಲ್ಲಿರುವ ಅಪ್ಪ–ಅಮ್ಮನನ್ನು ನೋಡಿಕೊಳ್ಳುವುದನ್ನು ಮಕ್ಕಳು ಪುಣ್ಯಕಾರ್ಯವೆಂದು ಭಾವಿಸಬೇಕಾಗಿಲ್ಲ; ಪೋಷಕರನ್ನು ನೋಡಿಕೊಳ್ಳುವುದು ಮಕ್ಕಳ ಆದ್ಯ ಕರ್ತವ್ಯ ಎಂಬುದರ ನ್ಯಾಯಪೀಠದ ಅಭಿಪ್ರಾಯವು ಕಿವಿಮಾತಿನಂತಿದೆ ಹಾಗೂ ಹಿರಿಯ ನಾಗರಿಕರಲ್ಲಿ ಆತ್ಮವಿಶ್ವಾಸ ಮೂಡಿಸುವ ನಡೆಯೂ ಆಗಿದೆ. ಇತ್ತೀಚಿನ ದಿನಗಳಲ್ಲಿ ಪೋಷಕರ ಮೇಲೆ ಹಕ್ಕುದಾರರಿಂದಲೇ ನಡೆಯುವ ದೌರ್ಜನ್ಯ ಪ್ರಕರಣಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವ ನ್ಯಾಯಪೀಠವು ಅಂಥ ಪ್ರಕರಣಗಳಲ್ಲಿ ನ್ಯಾಯಾಲಯಗಳು ಮತ್ತು ಪ್ರಾಧಿಕಾರಗಳು ಹೆಚ್ಚು ಸಂವೇದನಾಶೀಲವಾಗಿರಬೇಕು ಎಂದು ಹೇಳಿರುವುದು ಸರಿಯಾಗಿದೆ. ಹಿರಿಯ ನಾಗರಿಕರ ವಿಷಯದಲ್ಲಿ ಕುಟುಂಬದವರು ಅಥವಾ ಸಮಾಜ ಅಸೂಕ್ಷ್ಮವಾಗಿ ವರ್ತಿಸುವುದನ್ನು ಯಾವ ಕಾರಣಕ್ಕೂ ಒಪ್ಪಲಾಗದು. ಹಾಗೆಯೇ ಅಮ್ಮ–ಅಪ್ಪನನ್ನು ನೋಡಿಕೊಳ್ಳುವುದು ಮಕ್ಕಳ ಒಳ್ಳೆಯತನ ಎಂದೂ ಭಾವಿಸಬೇಕಾಗಿಲ್ಲ. ವೃದ್ಧಾಪ್ಯ ಎನ್ನುವುದು ಎಲ್ಲರ ಪಾಲಿಗೂ ಅನಿವಾರ್ಯವಾದ ಕಟುವಾಸ್ತವ. ಹಾಗಾಗಿ, ಹಿರಿಯ ನಾಗರಿಕರನ್ನು ಅಕ್ಕರೆಯಿಂದ ಕಾಣುವುದು ನಮ್ಮ ನಾಳೆಗಳನ್ನು ಸುಂದರ ಆಗಿಸಿಕೊಳ್ಳುವ ಕಾಳಜಿಯೂ ಆಗಿದೆ.



ಹಿರಿಯರನ್ನು ಗೌರವದಿಂದ ನಡೆಸಿಕೊಳ್ಳುವುದು ನಾಗರಿಕ ಸಮಾಜದ ಪ್ರಮುಖ ಲಕ್ಷಣ

ವೃದ್ಧಾಪ್ಯದಲ್ಲಿ ಮತ್ತೊಬ್ಬರನ್ನು ಅವಲಂಬಿಸುವುದು ಹಿರಿಯ ನಾಗರಿಕರಿಗೆ ಅನಿವಾರ್ಯ. ಆರೋಗ್ಯದ ಸಮಸ್ಯೆಗಳೊಂದಿಗೆ, ಭಾವನಾತ್ಮಕ ಹಾಗೂ ಹಣಕಾಸಿನ ಸಮಸ್ಯೆಗಳನ್ನೂ ಅವರು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ಕುಟುಂಬದ ಸದಸ್ಯರ ನಿಂದನೆ ಹಾಗೂ ತಿರಸ್ಕಾರಕ್ಕೂ ಗುರಿಯಾಗಬೇಕಾಗುತ್ತದೆ. ಮಕ್ಕಳು ಹಿರಿಯರಿಗೆ ಆಹಾರ ಹಾಗೂ ಔಷಧೋಪಚಾರ ಸರಿಯಾಗಿ ಒದಗಿಸದ ಪ್ರಕರಣಗಳು ದೇಶದ ವಿವಿಧ ಭಾಗಗಳಿಂದ ಆಗಾಗ ವರದಿಯಾಗುತ್ತಲೇ ಇರುತ್ತವೆ. ಈ ಸಮಸ್ಯೆಯು ಭಾರತಕ್ಕೆ ಸೀಮಿತವಾದ ವಿದ್ಯಮಾನ ಅಲ್ಲ. ವಿಶ್ವದ ಅನೇಕ ದೇಶಗಳಲ್ಲಿ ಹಿರಿಯ ನಾಗರಿಕರು ಅಸಹಾಯಕತೆ, ಅಸುರಕ್ಷತೆಯಿಂದ ಬಳಲುತ್ತಿದ್ದು, ಅಂಥ ಹಿರಿಯರಿಗೆ ಕಾನೂನಿನ ಆಸರೆ ಒದಗಿಸುವ ಪ್ರಯತ್ನಗಳು ನಡೆದಿವೆ. ಆಹಾರ, ಬಟ್ಟೆ, ವಸತಿ, ವೈದ್ಯಕೀಯ ನೆರವುಗಳನ್ನು ಕಾನೂನಿನ ಮೂಲಕ ಖಾತರಿಪಡಿಸುವ ಪ್ರಯತ್ನಗಳು ಜಾರಿಯಲ್ಲಿವೆ. ಹಿರಿಯರ ಬಗೆಗಿನ ನಿರ್ಲಕ್ಷ್ಯ ಕುಟುಂಬದಲ್ಲಿ ಮಾತ್ರವಲ್ಲದೆ, ಮನೆಯಿಂದ ಹೊರಗೆ ಸಮಾಜದಲ್ಲೂ ಕಂಡುಬರುತ್ತದೆ. ಪಿಂಚಣಿ ಅಥವಾ ವೃದ್ಧಾಪ್ಯ ವೇತನ ಪಡೆಯಲಿಕ್ಕಾಗಿ ಬ್ಯಾಂಕುಗಳು ಹಾಗೂ ಅಂಚೆ ಕಚೇರಿಗಳಿಗೆ ಧಾವಿಸುವ ಹಿರಿಯ ನಾಗರಿಕರೊಂದಿಗೆ ಕೆಲವು ಅಧಿಕಾರಿಗಳು ಒರಟಾಗಿ ವರ್ತಿಸುವುದಿದೆ. ವಾಹನಗಳಿಗೆ ಮೀಸಲಿರುವ ರಸ್ತೆ ವ್ಯವಸ್ಥೆಯಂತೂ ಹಿರಿಯರ ಪಾಲಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ನಾವು ರೂಪಿಸಿಕೊಂಡಿರುವ ನಾಗರಿಕ ವ್ಯವಸ್ಥೆಯಲ್ಲಿ ಮಕ್ಕಳು ಹಾಗೂ ವೃದ್ಧರ ಅಗತ್ಯತೆ ಕಡಿಮೆ. ಕೂಡು ಕುಟುಂಬಗಳು ಅಪರೂಪವಾಗುತ್ತಿರುವ ದಿನಗಳಲ್ಲಿ ಮನೆಯ ಒಳಗೂ ವೃದ್ಧರು ಒಂಟಿಯಾಗಿ ಉಳಿಯುವ ಸ್ಥಿತಿಯಿದೆ. ಮನೆಮಂದಿಯ ಮೊಬೈಲ್ ಫೋನ್ ಗೀಳಿನಿಂದಾಗಿ ಮಕ್ಕಳು ಹಾಗೂ ಮೊಮ್ಮಕ್ಕಳೊಂದಿಗಿನ ಹಿರಿಯ ನಾಗರಿಕರ ಒಡನಾಟದ ಅವಧಿ ಕೂಡ ಕಡಿಮೆಯಾಗುತ್ತಿದೆ. ಕೊರೊನಾ ಕಾಲಘಟ್ಟ ಹಿರಿಯ ನಾಗರಿಕರ ಸಮಸ್ಯೆಗಳನ್ನು ಮತ್ತಷ್ಟು ತೀವ್ರಗೊಳಿಸಿದೆ. ರೈಲು ಪ್ರಯಾಣದಲ್ಲಿ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರಿಯಾಯಿತಿಯನ್ನು ಕೊರೊನಾ ಸಂದರ್ಭದಲ್ಲಿ ರದ್ದುಗೊಳಿಸಿದ ಕೇಂದ್ರ ಸರ್ಕಾರ, ಆ ಸೌಲಭ್ಯವನ್ನು ಮರಳಿ ನೀಡಲು ಮುಂದಾಗಿಲ್ಲ. ಉಳಿತಾಯ ಠೇವಣಿಗಳ ಮೇಲಿನ ಬಡ್ಡಿದರ ಕಡಿತಗೊಂಡಿರುವುದೂ ಹಿರಿಯ ನಾಗರಿಕರ ಜೀವನ ನಿರ್ವಹಣೆಗೆ ತೊಡಕಾಗಿ ಪರಿಣಮಿಸಿದೆ.

ಭಾರತದಲ್ಲಿ 2022ರ ಜುಲೈ ಹೊತ್ತಿಗೆ ಹಿರಿಯ ನಾಗರಿಕರ ಸಂಖ್ಯೆ 15 ಕೋಟಿಯಷ್ಟಿತ್ತು ಎಂದು ಅಂದಾಜಿಸಲಾಗಿದೆ. ಈ ಪ್ರಮಾಣ 2050ರ ವೇಳೆಗೆ ದುಪ್ಪಟ್ಟಾಗುವ ನಿರೀಕ್ಷೆಯಿದೆ. ಹಿರಿಯ ನಾಗರಿಕರ ಸಂಖ್ಯೆಯ ಹೆಚ್ಚಳಕ್ಕೆ ತಕ್ಕಂತೆ ಅವರಿಗೆ ಸವಲತ್ತುಗಳನ್ನು ಒದಗಿಸುವ ಕಾರ್ಯಕ್ರಮಗಳು ರೂಪುಗೊಂಡಿಲ್ಲ. ಹಿರಿಯರನ್ನು ಸಮಾಜದ ಮುಖ್ಯವಾಹಿನಿಯ ಭಾಗವಾಗಿಸಿಕೊಳ್ಳುವ ಹಾಗೂ ದೈಹಿಕ ಸಾಮರ್ಥ್ಯ ಹೊಂದಿರುವವರಿಗೆ ಗೌರವದಿಂದ ದುಡಿಯುವ ಅವಕಾಶಗಳನ್ನು ಒದಗಿಸುವ ಪ್ರಯತ್ನಗಳೂ ಸಾಕಷ್ಟು ನಡೆದಿಲ್ಲ. ವಯಸ್ಸಾದವರು ಯಾವುದೇ ಕೆಲಸವನ್ನು ಮಾಡಲಾಗದ ನಿಷ್ಪ್ರಯೋಜಕರು ಎನ್ನುವ ಮನೋಭಾವದಲ್ಲೇ ಸಮಸ್ಯೆಯ ಮೂಲವಿದೆ. ಹಿರಿಯ ನಾಗರಿಕರ ಹಿತಾಸಕ್ತಿ ರಕ್ಷಣೆಗಾಗಿ 'ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ- 2007' ಜಾರಿಯಲ್ಲಿದ್ದರೂ, ಅದರ ಸಮರ್ಪಕ ಅನುಷ್ಠಾನ ಆಗಿರುವ ಉದಾಹರಣೆಗಳು ಕಡಿಮೆ. ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರನ್ನು ಪ್ರೀತಿ ಹಾಗೂ ಗೌರವದಿಂದ ನಡೆಸಿಕೊಳ್ಳದಿರುವುದು ಸಮಾಜದ ಅನಾರೋಗ್ಯದ ಸಂಕೇತ. ಹಿರಿಯರನ್ನು ಗೌರವದಿಂದ ನಡೆಸಿಕೊಳ್ಳುವುದು ನಾಗರಿಕ ಸಮಾಜದ ಪ್ರಮುಖ ಲಕ್ಷಣವೂ ಹೌದು.

ದಿನದ ಟ್ವೀಟ್


ಅಪಘಾತ ನಿಯಂತ್ರಿಸಲೇಬೇಕಿದೆ



ರಸ್ತೆ ಅಪಘಾತಕ್ಕೆ ಬಲಿಯಾಗುವವರ ಸಂಖ್ಯೆಯಲ್ಲಿ ಭಾರತವು ಮೊದಲ ರ್‍ಯಾಂಕ್ ಪಡೆದಿದೆ (ಜಾಗತಿಕವಾಗಿ ಶೇ 11ರಷ್ಟು ಪಾಲು ಹೊಂದಿದೆ). ಪ್ರತಿವರ್ಷವೂ ದೇಶದ ರಸ್ತೆಗಳಲ್ಲಿ 15 ಲಕ್ಷ ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಗಂಟೆಗೆ 18 ಸಾವುಗಳು ಸಂಭವಿಸುತ್ತಿವೆ. ಕಾರಿನ ಮಾಲೀಕತ್ವ ಹೊಂದುವುದು ಜನರ ಆಕಾಂಕ್ಷೆಯಾಗಿರುತ್ತದೆ, ಅದು ಆರ್ಥಿಕತೆಯ ದೃಷ್ಟಿಯಿಂದಲೂ ಉತ್ತಮ. ಆದರೆ ಸುರಕ್ಷಿತ ನಡಿಗೆ ಹಾಗೂ ಸಾರ್ವಜನಿಕ ಸಂಚಾರಕ್ಕೆ ಹೂಡಿಕೆ ಮಾಡಬೇಕಾದ ಕಾಲ ಇದಾಗಿದೆ.

ಶಿಲ್ಪಿ ಸಾಹು, ಎಂಜಿನಿಯರ್, ಓಟಗಾರ್ತಿ

ಕಿಡಿನುಡಿ



ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡಕ್ಕೂ ಬಿಬಿಎಂಪಿಯು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ) ಹಾಲು ಕರೆಯುವ ಹಸುವಿದ್ದಂತೆ... ನುಣುಚಿಕೊಳ್ಳುವ ಮಾರ್ಗಗಳನ್ನು ಸೃಷ್ಟಿಸಿ, ಅವನ್ನು ಸ್ವಹಿತಾಸಕ್ತಿಗೆ ಬಳಸಿಕೊಳ್ಳದೆ ಯಾರೂ ಬಿಡುವುದಿಲ್ಲ.

(ಲೋಕಸಭಾ ಚುನಾವಣೆ ಮುಗಿಯುವವರೆಗೂ ಬಿಬಿಎಂಪಿ ಚುನಾವಣೆ ನಡೆಯುವ ಸಾಧ್ಯತೆ ಇಲ್ಲ ಎಂಬ ಮಾಧ್ಯಮ ವರದಿಗೆ ಪ್ರತಿಕ್ರಿಯೆ)

ಶ್ರೀನಾಥ್ ಮೆನನ್

25 ವರ್ಷಗಳ ಹಿಂದೆ

ಬುಧವಾರ, 18-11-1998

- **ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣಕ್ಕೆ ಅರ್ಹತೆ ಆಧಾರ**

ಬೆಂಗಳೂರು, ನ. 17– ರಾಜ್ಯದಲ್ಲಿನ ಖಾಸಗಿ ಮತ್ತು ಸರ್ಕಾರಿ ವೈದ್ಯಕೀಯ ಹಾಗೂ ದಂತವೈದ್ಯ ಕಾಲೇಜುಗಳ ಸ್ನಾತಕೋತ್ತರ ಶಿಕ್ಷಣಕ್ಕೆ 1999– 2000ದಿಂದ ಸೀಟುಗಳಿಗೆ ಅರ್ಹತೆಯ ಮೇಲೆ ವಿದ್ಯಾರ್ಥಿಗಳ ಆಯ್ಕೆ ಆಗಬೇಕೆಂದು ಹೈಕೋರ್ಟ್ ಆದೇಶಿಸಿತು.

ಖಾಸಗಿ ಕಾಲೇಜುಗಳ ಸ್ನಾತಕೋತ್ತರ ಶಿಕ್ಷಣದ ಶುಲ್ಕವನ್ನು ಸರ್ಕಾರ ಎರಡು ತಿಂಗಳಲ್ಲಿ ನಿಗದಿ ಮಾಡಬೇಕು, ಖಾಸಗಿ ಕಾಲೇಜುಗಳು ಸರ್ಕಾರ ನಿಗದಿ ಮಾಡಿದ ಶುಲ್ಕಕ್ಕಿಂತ ಹೆಚ್ಚಾಗಿ ವಸೂಲಿ ಮಾಡಬಾರದೆಂದು ಆದೇಶಿಸಿತು.

ಬೆಂಗಳೂರಿನ ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಸ್ನಾತಕೋತ್ತರ ತರಗತಿಗಳಿಗೆ 1996-97ರಲ್ಲಿ ನಿಗದಿಯಾದ ಸಂಖ್ಯೆಗಿಂತ ಹೆಚ್ಚು ಪ್ರವೇಶ ನೀಡಿರುವುದನ್ನು ಸಕ್ರಮಗೊಳಿಸಬೇಕು. ಆದರೆ 1998– 99ನೇ ಸಾಲಿಗೆ ಆ ಕಾಲೇಜಿನ ಸ್ನಾತಕೋತ್ತರ ತರಗತಿಗಳಿಗೆ ಯಾರಿಗೂ ಪ್ರವೇಶ ನೀಡಬಾರದು ಎಂದು ಸ್ಪಷ್ಟಪಡಿಸಿತು.

ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಶಿಕ್ಷಣಕ್ಕೆ 1996– 97ರಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ್ದು, ಹೆಚ್ಚುವರಿ ವಿದ್ಯಾರ್ಥಿಗಳನ್ನು ಕೈಬಿಡಬೇಕೆಂದು ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಹೇಳಿದ್ದುದನ್ನು ಪ್ರಶ್ನಿಸಿ, ಕಾಲೇಜು ಮತ್ತು ಅಲ್ಲಿನ ಸ್ನಾತಕೋತ್ತರ ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು, ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ.ಎಸ್.ಠಾಕೂರ್ ಅವರು ಪುರಸ್ಕರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 18-11-1973

- **ಆರ್ಥಿಕ ಬಿಕ್ಕಟ್ಟು ನಿವಾರಣೆಗೆ ಸರ್ವರ ಸಹಕಾರಕ್ಕೆ ಪ್ರಧಾನಿ ಕರೆ**

ಲಖನೌ, ನ. 17– ರಾಷ್ಟ್ರವು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಯುದ್ಧಕ್ಕೆ ಇಂದು ಹೋಲಿಸಿದ ಪ್ರಧಾನಿ ಇಂದಿರಾ ಗಾಂಧಿಯವರು, ಇದಕ್ಕೆ ಪರಿಹಾರ ಕಂಡುಹಿಡಿಯಲು ಆರ್ಥಿಕ ತಜ್ಞರು, ವಿಜ್ಞಾನಿಗಳು, ಸರ್ಕಾರದ ಜತೆ ವಿರೋಧ ಪಕ್ಷಗಳು ಸಹಕರಿಸಬೇಕು ಎಂದರು.

ಜನತೆಯನ್ನು ಉದ್ರೇಕಗೊಳಿಸಲು ಸಹಾಯಕವಾದ ಬಂದ್‌ಗಳು ಮತ್ತು ಮುಷ್ಕರಗಳ ಬಗ್ಗೆಯೇ ವಿರೋಧ ಪಕ್ಷಗಳು ಮಾತನಾಡುತ್ತವೆ. ಇದು ಸಮಸ್ಯೆಗೆ ಪರಿಹಾರವಲ್ಲ. ಬದಲು ಸಮಸ್ಯೆಯನ್ನು ಜಟಿಲಗೊಳಿಸುತ್ತದೆ ಎಂದು ಹೇಳಿದರು.

- **ವಿಮಾನ ಉದ್ದಿಮೆಯಲ್ಲಿ ಸ್ವಾವಲಂಬನೆ**

ಲಖನೌ, ನ. 17– ಹಿಂದೂಸ್ತಾನ ವಿಮಾನ ಕಾರ್ಖಾನೆಗೆ ಸೇರಿದ ಪ್ರತಿಷ್ಠಿತ ಸಲಕರಣೆಗಳ ಉತ್ಪಾದನೆ ಘಟಕವನ್ನು ಪ್ರಧಾನಿ ಇಂದಿರಾ ಗಾಂಧಿ ಉದ್ಘಾಟಿಸಿದರು. ಈ ಘಟಕವು ವಿಮಾನ ಉದ್ದಿಮೆಯಲ್ಲಿ ಭಾರತವನ್ನು ಸ್ವಾವಲಂಬನೆಯತ್ತ ಒಯ್ಯಲಿದೆ.

ಚುನಾವಣಾ ಬಾಂಡ್ ವ್ಯವಸ್ಥೆಯು ಭ್ರಷ್ಟಾಚಾರವನ್ನು ಕಾನೂನುಬದ್ಧವಾಗಿಸುತ್ತದೆ

ತನ್ನನ್ನು ನಂಬುವಂತೆ ಕೋರಿದ ಸರ್ಕಾರ!



ವಿಶ್ಲೇಷಣೆ

ಕೆ.ವಿ. ಧನಂಜಯ

ಚುನಾವಣಾ ಬಾಂಡ್ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು 2018ರ ಜನವರಿಯಲ್ಲಿ ಜಾರಿಗೆ ತಂದರು. ಇದಕ್ಕಾಗಿ ಕೆಲವು ಕಾನೂನುಗಳನ್ನು ರೂಪಿಸಲಾಯಿತು. ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟಕ್ಕೆ ರಾಜ್ಯಸಭೆಯಲ್ಲಿ ಆಗ ಬಹುಮತ ಇಲ್ಲವಾಗಿದ್ದ ಕಾರಣ, ರಾಜ್ಯಸಭೆಯ ಅನುಮೋದನೆಯ ಅಗತ್ಯವನ್ನು ತಪ್ಪಿಸಲು ಇವನ್ನು 'ಹಣಕಾಸು ಮಸೂದೆ'ಗಳು ಎಂದು ಕರೆಯಲಾಯಿತು. ಈ ಯೋಜನೆಯ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಗಳಿಗೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

ಈ ಯೋಜನೆಯ ಅಡಿಯಲ್ಲಿ ಯಾವುದೇ ವ್ಯಕ್ತಿ ಯಾವುದೇ ಪ್ರಮುಖ ಪಕ್ಷಕ್ಕೆ ₹1,000ಕ್ಕಿಂತ ಹೆಚ್ಚಿನ ದೇಣಿಗೆ ನೀಡಬಹುದು. ಪಕ್ಷವು ದೇಣಿಗೆ ನೀಡಿದವನ ಹೆಸರನ್ನು, ದೇಣಿಗೆ ನೀಡಿದವರು ಕೂಡ ತಾವು ದೇಣಿಗೆ ನೀಡಿದ್ದು ಯಾರಿಗೆ ಎಂಬುದನ್ನು ಬಹಿರಂಗಪಡಿಸಬೇಕಿಲ್ಲ. ದೇಶದ ಯಾವುದೇ ಪ್ರಮುಖ ಪಕ್ಷಕ್ಕೆ ಚುನಾವಣಾ ಬಾಂಡ್ ಮೂಲಕ ಎಷ್ಟು ಬೇಕಿದ್ದರೂ ದೇಣಿಗೆ ನೀಡಬಹುದು.

ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅನರ್ಹ ವ್ಯಕ್ತಿಯೊಬ್ಬರಿಗೆ ದೊಡ್ಡ ಮೊತ್ತದ ಗುತ್ತಿಗೆಯೊಂದನ್ನು ನೀಡಬಹುದು. ಇದಕ್ಕೆ ಪ್ರತಿಯಾಗಿ ಸಂಬಂಧಪಟ್ಟ ರಾಜಕೀಯ ಪಕ್ಷಕ್ಕೆ ಗುತ್ತಿಗೆದಾರನು ಚುನಾವಣಾ ಬಾಂಡ್ ಮೂಲಕ 'ಲಂಚ' ನೀಡಬಹುದು. ಆದರೆ ಈ ಭ್ರಷ್ಟಾಚಾರವನ್ನು ಗುರುತಿಸಲು ಸಾರ್ವಜನಿಕವಾಗಿ ಯಾರಿಂದಲೂ ಆಗದು. ಹೀಗಾಗಿ, ಚುನಾವಣಾ ಬಾಂಡ್ ವ್ಯವಸ್ಥೆಯು ಭ್ರಷ್ಟಾಚಾರವನ್ನು ಕಾನೂನುಬದ್ಧವಾಗಿಸುತ್ತದೆ. ಆ ಮೂಲಕ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ನು ಕೆಲಸಕ್ಕೆ ಬಾರದ್ದನ್ನಾಗಿ ಮಾಡುತ್ತದೆ. ಇಂಥದ್ದೊಂದು ಸಾಧ್ಯತೆಯನ್ನು ವಿಚಾರಣೆಯ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳೂ ಪ್ರಸ್ತಾಪಿಸಿದರು. ಆದರೆ ಸರ್ಕಾರವು ತನ್ನಲ್ಲಿ ವಿಶ್ವಾಸ ಇರಿಸುವಂತೆ, ಆಧಾರರಹಿತ ಊಹೆಗಳಿಗೆ ಮಾನ್ಯತೆ ನೀಡದಂತೆ ಹೇಳಿತು.

ದೇಶದ ಪ್ರಥಮ ಲೋಕಸಭಾ ಚುನಾವಣೆಯ ನಂತರದಲ್ಲಿ, ರಾಜಕೀಯ ದೇಣಿಗೆಗಳು ಹಾಗೂ ಅಭ್ಯರ್ಥಿಗಳು ಮಾಡುವ ವೆಚ್ಚವನ್ನು ನಿಯಂತ್ರಿಸಲು ಹಲವು ಕಾನೂನುಗಳನ್ನು ರೂಪಿಸಲಾಗಿದೆ. ಆದರೆ, ಪಕ್ಷಗಳು ಮಾಡುವ ವೆಚ್ಚವನ್ನು ನಿಯಂತ್ರಿಸಲು ಯಾವುದೇ ಕಾನೂನು ಇರಲಿಲ್ಲ. 2021-22ನೇ ಹಣಕಾಸು ವರ್ಷದಲ್ಲಿ ತಾನು ₹1,033 ಕೋಟಿಯನ್ನು ಚುನಾವಣಾ ಬಾಂಡ್ ಮೂಲಕ ಪಡೆದಿರುವುದಾಗಿ ಬಿಜೆಪಿ ತಿಳಿಸಿದೆ. ಅದೇ ವರ್ಷದಲ್ಲಿ ಪಕ್ಷವು ₹645 ಕೋಟಿಯನ್ನು ಚುನಾವಣಾ ವೆಚ್ಚದ ರೂಪದಲ್ಲಿ ಖರ್ಚು ಮಾಡಿದೆ. ಇದರಲ್ಲಿ ಅಭ್ಯರ್ಥಿಗಳಿಗೆ ನೀಡಿರುವ ಹಣಕಾಸಿನ ನೆರವು ₹ 146 ಕೋಟಿಯೂ ಸೇರಿದೆ. ಹಣಕಾಸಿನ ನೆರವು ಅಂದರೇನು? ಯಾರಿಗೂ ತಿಳಿದಿಲ್ಲ.

ಚುನಾವಣಾ ಬಾಂಡ್ ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಬಿಜೆಪಿ ಭಾರಿ ಪ್ರಯೋಜನ ಪಡೆದಿದೆ. ಅದು ಇಲ್ಲಿಯವರೆಗೆ ಚುನಾವಣಾ ಬಾಂಡ್ ಮೂಲಕ ₹ 5,000 ಕೋಟಿಗಿಂತ ಹೆಚ್ಚು ಹಣ ಪಡೆದಿದೆ. ಕಾಂಗ್ರೆಸ್ ಪಕ್ಷವು ಸರಿಸುಮಾರು ₹ 1,000 ಕೋಟಿ ಪಡೆದಿದೆ. ವ್ಯಕ್ತಿಯೊಬ್ಬ ತಾನು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಪಕ್ಷಗಳಿಗೆ ನೀಡುವುದು ಏಕೆ ಎಂಬುದನ್ನು ತಿಳಿಯಲು ಸಾರ್ವಜನಿಕರು ಬಯಸುತ್ತಾರೆ. ಭಾರಿ ಮೊತ್ತವನ್ನು ಪಕ್ಷಗಳಿಗೆ ದೇಣಿಗೆ ನೀಡುವವ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ 'ಭ್ರಷ್ಟಾಚಾರ' ಎಸಗಿದ್ದಾನೆ ಎಂದು ಸಾಬೀತು ಮಾಡಲು ಆಗದಿದ್ದರೂ, ಭಾರಿ ಮೊತ್ತದ ದೇಣಿಗೆಗೆ ಇದ್ದ ಪ್ರೇರಣೆ ಏನು ಎಂಬುದನ್ನು ತಿಳಿಯಲು ಜನರಿಗೆ ಅವಕಾಶ ಇರಬೇಕು.

2002ರಲ್ಲಿ ನೀಡಿದ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವವರು ತಮ್ಮ ಕ್ರಿಮಿನಲ್ ಹಿನ್ನೆಲೆ, ಸಂಪತ್ತಿನ ವಿವರ, ಶೈಕ್ಷಣಿಕ ಅರ್ಹತೆಯನ್ನು ಬಹಿರಂಗಪಡಿಸಬೇಕು ಎಂದು ಹೇಳಿತು. ಆದಾಯ ತೆರಿಗೆ ವಿವರ ಸಲ್ಲಿಸದಿದ್ದ ಕಾರಣಕ್ಕೆ ಬಿಜೆಪಿ, ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವುದಕ್ಕೆ ಸುಪ್ರೀಂ ಕೋರ್ಟ್ 1997ರಲ್ಲಿ ಆದೇಶಿಸಿತ್ತು. 1975ರಲ್ಲಿ ಕೋರ್ಟ್, ಪಕ್ಷ ಮಾಡುವ ಯಾವುದೇ ವೆಚ್ಚವನ್ನು ಅಭ್ಯರ್ಥಿಯ ವೆಚ್ಚವಾಗಿ ಪರಿಗಣಿಸಬೇಕು ಎಂದು ಹೇಳಿತ್ತು. ಇದಕ್ಕೆ ಸಂಸತ್ತು ಪ್ರತಿರೋಧ ತೋರಿದಾಗ, ಪಕ್ಷಗಳ ವೆಚ್ಚವನ್ನು ಅಭ್ಯರ್ಥಿಯ ವೆಚ್ಚವಾಗಿ ಪರಿಗಣಿಸಬಾರದು ಎಂದಾದಲ್ಲಿ ಪಕ್ಷಗಳು ತಮ್ಮ ಲೆಕ್ಕಪತ್ರವನ್ನು ವಾರ್ಷಿಕ ತಪಾಸಣೆಗೆ ಒಳಪಡಿಸಬೇಕು, ಆದಾಯ ತೆರಿಗೆ ವಿವರವನ್ನು ಸಲ್ಲಿಸಬೇಕು ಎಂದು ಹೇಳಿತು. ಪಾರದರ್ಶಕತೆಯ ರಕ್ಷಣೆಯಲ್ಲಿ ಇಷ್ಟು ಕಠಿಣವಾಗಿದ್ದ ಸುಪ್ರೀಂ ಕೋರ್ಟ್, ಅಪಾರದರ್ಶಕವಾದ ಚುನಾವಣಾ ಬಾಂಡ್ ಯೋಜನೆಯು 2018ರಿಂದಲೂ ನಡೆದು ಬರುವುದಕ್ಕೆ ಅವಕಾಶ ಕೊಟ್ಟಿದೆ.

ಬಾಂಡ್ ವ್ಯವಸ್ಥೆಯನ್ನು ಕೇಂದ್ರವು ಹಲವು ವಾದಗಳ ಮೂಲಕ ಸಮರ್ಥಿಸಿಕೊಂಡಿದೆ. ಬಹುತೇಕ ವಾದಗಳು ಕ್ಷುಲ್ಲಕವಾಗಿವೆ. ದೇಣಿಗೆ ನೀಡಿದವರ ವಿವರ ಬಹಿರಂಗವಾದರೆ, ಅವರ ವಿರುದ್ಧ ರಾಜಕೀಯ ಪಕ್ಷಗಳು ಹಗೆ ತೀರಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಸರ್ಕಾರ ಹೇಳಿದೆ. ಹಾಗೆ ಮಾಡುವ ಸಾಮರ್ಥ್ಯ ಇರುವುದು ಆ ರಾಜಕೀಯ ಪಕ್ಷದ ನೇತೃತ್ವದ ಸರ್ಕಾರಕ್ಕೆ ಅಥವಾ ಪೊಲೀಸರಿಗೆ ಮಾತ್ರ. ಆದರೆ ಸರ್ಕಾರ, ಪೊಲೀಸರು ಹಾಗೆ ಮಾಡಿದಲ್ಲಿ ಕೋರ್ಟ್ ಮಧ್ಯಪ್ರವೇಶಿಸಬಹುದು. ಅಪಾರದರ್ಶಕತೆಗೆ ಇದು ಸಮರ್ಥನೆ ಆಗಲಾರದು. ರಾಜಕೀಯ ಪಕ್ಷಗಳಿಗೆ ದೊಡ್ಡ ಮೊತ್ತ ನೀಡುವವರ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಬಹುದು ಎಂದು ಸರ್ಕಾರ ವಾದಿಸಿದೆ. ಆದರೆ, ಅದು ಕೂಡ ಬೋಗಸ್ ಸಮರ್ಥನೆ. ಟಾಟಾ ಹಾಗೂ ಬಿರ್ಲಾ ಸಮೂಹಗಳು, ರಾಜಕೀಯ ಪಕ್ಷಗಳಿಗೆ ಬಹಿರಂಗವಾಗಿ ದೇಣಿಗೆ ನೀಡಿವೆ. ಈ ಸಮೂಹಗಳು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದರ ಬಗ್ಗೆ ಯಾವತ್ತಿಗೂ ದೂರು ಹೇಳಿಲ್ಲ.

ಚುನಾವಣಾ ಬಾಂಡ್‌ಗಳ ಬಗ್ಗೆ ತನಗೂ ಗೊತ್ತಿರುವುದಿಲ್ಲ ಎಂದು ಕೇಂದ್ರ ಹೇಳಿದೆ. ಇದು ಸಂಪೂರ್ಣ ಸುಳ್ಳು. ಬಾಂಡ್ ನೀಡುವ ಎಸ್‌ಬಿಐ, ಕೇಂದ್ರ ಸರ್ಕಾರದ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ದೇಣಿಗೆ ನೀಡುವವರ ಕೆವೈಸಿ ದಾಖಲೆ ಪಡೆಯಲಾಗುತ್ತದೆ, ಕಾನೂನುಬದ್ಧ ಹಣ ಮಾತ್ರ ದೇಣಿಗೆಯಾಗಿ ಬರುತ್ತದೆ ಎಂದು ವಾದಿಸಲಾಗಿದೆ. ಆದರೆ, ಕೆವೈಸಿ ದಾಖಲೆ ಸಲ್ಲಿಸಿದ ಮಾತ್ರಕ್ಕೆ ದೇಣಿಗೆ ನೀಡುವವನ ಬಳಿ ಇರುವ ಹಣ ಸಕ್ರಮವಾದುದು ಎನ್ನಲಾಗದು. ವಿದೇಶಿ ಕಂಪನಿಗಳು ಭಾರತದಲ್ಲಿ ದೇಣಿಗೆ ನೀಡುವ ಉದ್ದೇಶದಿಂದಲೇ ಖಾಸಗಿ ಕಂಪನಿ ಆರಂಭಿಸಿ, ಅದರ ಮೂಲಕ ಬಾಂಡ್ ರೂಪದಲ್ಲಿ ಎಷ್ಟು ಮೊತ್ತವನ್ನು ಬೇಕಿದ್ದರೂ ನೀಡಬಹುದು.

ದೇಣಿಗೆ ನೀಡುವವರಿಂದ ಎಷ್ಟೇ ಮೊತ್ತವನ್ನು ಪಕ್ಷಗಳು ಗುಟ್ಟಾಗಿ ಪಡೆದರೂ ಅದರಲ್ಲಿ ಭ್ರಷ್ಟಾಚಾರ ನಡೆದಿರಬಹುದು ಎಂಬ ಅನುಮಾನವನ್ನು ಜನ ಹೊಂದಬಾರದು ಎನ್ನುವ ದೃಷ್ಟಿಕೋನವೊಂದನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಂಸತ್ತಿನ ಮೂಲಕ ಜನರ ಮೇಲೆ ಹೇರಿದೆ. ಈಗ ಸರ್ಕಾರವು ಈ ದೃಷ್ಟಿಕೋನವನ್ನು ಒಪ್ಪಿಕೊಳ್ಳಬೇಕು ಎಂದು ಕೋರ್ಟನ್ನು ಕೂಡ ಕೋರಿದೆ. ಸರ್ಕಾರವು ಈ ರೀತಿಯಾಗಿ ತನ್ನನ್ನು ನಂಬುವಂತೆ ಈ ಹಿಂದೆ ಕೋರಿದ್ದು 1975–77ರ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಮಾತ್ರ! ಆಗ ಸುಪ್ರೀಂ ಕೋರ್ಟ್ ಈ ವಾದವನ್ನು ಒಪ್ಪಿಕೊಂಡಿತ್ತು ಕೂಡ.

ಆದರೆ ನಂತರದಲ್ಲಿ, ಜೆ.ಸಿ.ಶಾ ಆಯೋಗವು ಆಂತರಿಕ ಆಕ್ರಮಣದ ಬಗ್ಗೆ ಇಂದಿರಾ ಗಾಂಧಿ ಅವರು ಹೇಳಿದ್ದು ಸಂಪೂರ್ಣವಾಗಿ ಆಧಾರರಹಿತ ಎಂದು ಹೇಳಿತು. ಕೇಂದ್ರ ಗೃಹ ಸಚಿವಾಲಯಕ್ಕೆ ಆಂತರಿಕ ಆಕ್ರಮಣದ ಬಗ್ಗೆ ಯಾವುದೇ ರಾಜ್ಯದಿಂದ ಯಾವ ಸಂದೇಶವೂ ರವಾನೆ ಆಗಿರಲಿಲ್ಲ. ತುರ್ತು ಪರಿಸ್ಥಿತಿ ಅವಧಿಯಲ್ಲಿ ಪೊಲೀಸರು 1.14 ಲಕ್ಷ ಜನರನ್ನು ಬಂಧಿಸಿದರು. ಅವರೆಲ್ಲ ಇಂದಿರಾ ಅವರ ರಾಜಕೀಯ ವಿರೋಧಿಗಳಾಗಿದ್ದರು. ಸರ್ಕಾರವನ್ನು ನಂಬಬೇಕು ಹಾಗೂ ಕಠಿಣ ಪ್ರಶ್ನೆಗಳನ್ನು ಕೇಳಬಾರದು ಎಂದು ಹಿಂದಿನ ಬಾರಿ ಸರ್ಕಾರ ಕೋರಿದ್ದಾಗ, ದೇಶಕ್ಕೆ ಬಹಳ ದೊಡ್ಡ ಕೆಡುಕು ಆಗಿತ್ತು. ಈ ಬಾರಿ ಮೋದಿ ನೇತೃತ್ವದ ಸರ್ಕಾರ ಕೂಡ, ಸರ್ಕಾರವನ್ನು ನಂಬುವಂತೆ, ಚುನಾವಣಾ ಬಾಂಡ್ ಯೋಜನೆಯನ್ನು ಎತ್ತಿಹಿಡಿಯುವಂತೆ ಕೋರಿದೆ.

ವಕೀಲನಾಗಿ ಈ ಲೇಖಕನ ಮಾತು ಇದು: ಚುನಾವಣಾ ಬಾಂಡ್ ಯೋಜನೆಯ ಬಗ್ಗೆ ಸರ್ಕಾರದ ವಾದ ಆಲಿಸಿರುವ ನ್ಯಾಯಮೂರ್ತಿಗಳಿಗೆ ಕೇಂದ್ರವನ್ನು ನಂಬಬೇಕು ಎಂದು ಅನ್ನಿಸಿದ್ದರೆ, ಹಾಗೆ ಮಾಡಲು ಅವರು ಸ್ವತಂತ್ರರು. ಆದರೆ ಅವರ ವೈಯಕ್ತಿಕ ವಿಶ್ವಾಸವನ್ನು ಜನರ ಮೇಲೆ ಹೇರಿದರೆ ಅದು ತಪ್ಪಾಗುತ್ತದೆ.

ಲೇಖಕ: ಸುಪ್ರೀಂ ಕೋರ್ಟ್ ವಕೀಲ



ಚುರುಮುರಿ



ಪಟಾಕಿ ಪುರಾಣ!

• ಬಿ.ಎನ್.ಮಲ್ಲೇಶ್

'ಏನ್ರಲೆ, ಎಲ್ರುದು ದೀಪಾವಳಿ ಆಯ್ತಾ? ಪಟಾಕಿ ಜೋರು ಅನ್ನಿ' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಹು ಕಣಲೆ, ಅಂಗಡಿಯೋನು ಗ್ಯಾರಂಟಿ ಪಟಾಕಿ ಅಂತ ಒಂದು ಕೊಟ್ಟಿದ್ದ, ಅದು ಒಂದ್ಸಲ ಹಚ್ಚಿದ್ರೆ ಐದ್ಸಲ ಢಂ ಅಂತಪ' ಗುಡ್ಡೆ ನಕ್ಕ.

'ಅದು ಮೋಸ್ಟ್‌ಲಿ ಕಾಂಗ್ರೆಸ್ ಪಟಾಕಿ ಇರ್ಬೇಕು ಕಣಲೆ, ಬಿಜೇಪಿದು ಯಾವುದೂ ಇರ್ಲಿಲ್ವಾ?'

'ಇತ್ತು, ಇನ್ನೂ ಹೊಸಾದು, ಶಿಕಾರಿಪುರದ್ದು... ಹೆಂಗೆ ಸೌಂಡ್ ಮಾಡುತ್ತೋ ಈಗ್ಲೇ ಗೊತ್ತಾಗಲ್ಲ ಅಂದ ಅಂಗಡಿಯೋನು, ಅದ್ಕೆ ತರ್ಲಿಲ್ಲ'.

'ಹೋಗ್ಲಿಬಿಡು, ನಮ್ ಕುಮಾರಣ್ಣ ಉದ್ದುದ್ದ ಸರ ಪಟಾಕಿ ಹಚ್ತಾ ಇದ್ರಲ್ಲ, ಎಲ್ಲ ಢಂ ಅಂದ್ವಾ?' ಮಂಜಮ್ಮ ಕೇಳಿದಳು.

'ಆ ಸರ ಪಟಾಕಿ ವಿರುದ್ಧ ಸಿದ್ರಾಮಣ್ಣ ಕರೆಂಟ್ ಪಟಾಕಿ ಹಚ್ಚಿ ಎಸೆದ್ರಂತಪ, ಅದರ ಸೌಂಡಿಗೆ ಎಲ್ಲ ಕಕ್ಕಾಬಿಕ್ಕಿ ಆಗೋದ್ರಂತೆ'.

'ಅಲೆ ಇವ್ನ, ಹೌದಾ? ಆಮೇಲೆ ಅದ್ಯಾವುದೋ ಫ್ಯಾಮಿಲಿ ಪಟಾಕಿ ಅಂತ ಬಂದೀತಂತೆ, ನೋಡ್ಲಿಲ್ವಾ?' ತೆಪರೇಸಿ ಕೇಳಿದ.

'ಫ್ಯಾಮಿಲಿ ಪಟಾಕಿ ಅಂತ ಇತ್ತು. ಆದ್ರೆ ಅದನ್ನ ಹಚ್ಚೋದು ಕಷ್ಟ. ಎಲ್ಲಿ ಹಚ್ಚಿದ್ರೂ ಅದು ಎಲ್ಲ ರಾಜಕಾರಣಿಗಳ ಮನೇಲು ಢಂ ಅನ್ನುತ್ತಂತೆ. ಸಾವಾಸ ಬ್ಯಾಡ ಅಂತ ಬಿಟ್ ಬಂದೆ' ಗುಡ್ಡೆ ನಕ್ಕ.

'ಪಟಾಕಿ ವಿಷ್ಯ ಸಾಕು ಬಿಡ್ರಲೆ, ಇರೋವು ಇಲ್ದೋವು ಎಲ್ಲ ಹೇಳಿದ್ರಿ, ನಾಳೆ ಅಂತರ ರಾಷ್ಟ್ರೀಯ ಪುರುಷರ ದಿನವಂತೆ, ಏನ್ಮಾಡೋಣ?' ತೆಪರೇಸಿ ಮಾತು ಬದಲಿಸಿದ.

'ಪುರುಷರ ದಿನ ವರ್ಷಕ್ಕೆ ಒಂದೇ, ಮಿಕ್ಕಿದ್ದೆಲ್ಲ ಮಹಿಳೆಯರ ದಿನಾನೇ. ನಡೀರಿ ಪಾರ್ಟಿ ಮಾಡಾಣ' ಎಂದ ಕಡೆಮನಿ ಕೊಟ್ರ.

ಅಲ್ಲೀತನಕ ಸುಮ್ಮನಿದ್ದ ಪಂಚರಂಗಿ ಪರ್ಮೇಶಿ 'ಮಂಜಮ್ಮ, ಪುರುಷರ ದಿನ ಅಂದಕೂಡ್ಲೆ ನೆನಪಾತು. ಬಾಳ ದಿನದಿಂದ ಕೇಳ್ಬೇಕು ಅಂತಿದ್ದೆ. ಈಗ ಮದುವೆಯಾದ ಹೆಣ್ಮಕ್ಕಳನ್ನ ಮುತ್ತೈದೇರು ಅಂತಾರೆ, ಗಂಡಸರಿಗೇನಂತಾರೆ?' ಎಂದು ಕೇಳಿದ.

'ನಿನ್ನಂಥೋರ್ನ ಮುತ್ತಾಳ ಅಂತಾರೆ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಉಳಿತಾಯವೇ ಅಭದ್ರತೆ ಸೃಷ್ಟಿಸಿದರೆ?!

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬ್ಯಾಂಕ್ ಠೇವಣಿದಾರರ ಹಿತ ಕಾಯಬೇಕಿದೆ

• ಬಿ.ಎಸ್.ಭಗವಾನ್


'ಅಲ್ಲಿಟ್ಟಿದ್ವಿ ಮಣ್ಣು ಮುಕ್ಕಿದ್ವಿ... ಈಗ ಇಲ್ಲಿಟ್ಟಿದ್ದಾಯ್ತು ಮಣ್ಣು ಮುಕ್ಕೋಕೆ' ಅಂತ ಎಂಬತ್ತರ ಇಳಿವಯಸ್ಸಿನ ದಂಪತಿ ಅಳಲು ತೋಡಿಕೊಂಡಿದ್ದರು. ಟಿ.ವಿ. ಪರದೆ ಮೇಲಿನ ಆ ದೃಶ್ಯ ಕರುಣಾಜನಕವಾಗಿತ್ತು. ಆ ಕಟ್ಟಡದ ಮುಂದೆ ಜಮಾಯಿಸಿದ್ದ ಜನ ಕಂಗಾಲಾಗಿದ್ದರು. ಅವರಲ್ಲಿ ಬಹುತೇಕರು ವೃದ್ಧರು. ಅಸಹಾಯಕತೆ ಅಲ್ಲಿ ಮಡುಗಟ್ಟಿತ್ತು. ಅವರು ಜೀರ್ಣಿಸಿಕೊಳ್ಳಲಾಗದಂತಹ ಷರತ್ತನ್ನು ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿತ್ತು. ಅಲ್ಲಿ ಸೇರಿದ್ದವರು ಬ್ಯಾಂಕ್ ಗ್ರಾಹಕರು.

ಹಲವು ಸಹಕಾರಿ ಬ್ಯಾಂಕುಗಳು, ಪತ್ತಿನ ಸಹಕಾರಿ ಸಂಘಗಳು ಗ್ರಾಹಕರಿಗೆ ಸಮರ್ಥವಾಗಿಯೇ ಸೇವೆ ಸಲ್ಲಿಸುತ್ತಿವೆ. ಠೇವಣಿಗಳ ಮೇಲೆ ಅಲ್ಪಸ್ವಲ್ಪ ಹೆಚ್ಚಿನ ಮೊತ್ತದ ಬಡ್ಡಿಯನ್ನೂ ನೀಡುತ್ತವೆ. ಸೇಫ್ ಡಿಪಾಸಿಟ್ ಸೌಲಭ್ಯಗಳೂ ಉಂಟು. ಆದರೆ ಅತಿ ಔದಾರ್ಯವೋ ಅವ್ಯವಹಾರವೋ ನಿರ್ಲಕ್ಷ್ಯವೋ ಸಾಲ ಮರುಪಾವತಿ ಆಗದೆ ಆರ್ಥಿಕವಾಗಿ ಹಿನ್ನಡೆ ಅನುಭವಿಸುತ್ತವೆ. ಎನ್.ಪಿ.ಎ. (ವಸೂಲಾಗದ ಸಾಲ) ಶಾಪದಿಂದ ಸೊರಗಿ ಇನ್ನು ಚೇತರಿಸಿಕೊಳ್ಳುವುದೇ ಕನಸೆಂದು ತಳಮಳಿಸುತ್ತವೆ. ವಾಸ್ತವವಾಗಿ ಈ ಭಾರ ಬೀಳುವುದು ಗ್ರಾಹಕರ ಮೇಲೆಯೇ. ರಿಸರ್ವ್ ಬ್ಯಾಂಕ್ ನಿರ್ಬಂಧಗಳು ಬಹು ಕಠಿಣವಾಗಿರುತ್ತವೆ. ಗ್ರಾಹಕರು ಬ್ಯಾಂಕಿನೊಂದಿಗೆ ವ್ಯವಹಾರ ನಡೆಸುವಂತಿಲ್ಲ, ಸಾಮಾನ್ಯವಾಗಿ ಆರು ತಿಂಗಳವರೆಗೆ ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚು ಡ್ರಾ ಮಾಡುವಂತಿಲ್ಲ, ಚೆಕ್ ನಗದಾಗಿಸುವಂತಿಲ್ಲ... ಇಂತಹ ಸ್ಥಿತಿಯಲ್ಲಿ, ಠೇವಣಿ ಇರಿಸಿದ ಸಂಘ– ಸಂಸ್ಥೆಗಳ ಪಾಡು ಹೇಳತೀರದು.

ಬ್ಯಾಂಕಿಂಗ್ ವ್ಯವಸ್ಥೆಗೆ ಎರಡು ಸಾವಿರ ವರ್ಷಗಳ ಚರಿತ್ರೆ ಇದೆ. ಮನುಷ್ಯ ಮನುಷ್ಯರ ನಡುವಿನ ಭರವಸೆಯೇ ಅದರ ಬಂಡವಾಳ. ಮೆಸಪಟೋಮಿಯಾದಲ್ಲಿ 2000ನೇ ವರ್ಷದ ಸುಮಾರಿನಲ್ಲಿ ದೇಗುಲಗಳಲ್ಲಿ ಹಣ ಠೇವಣಿ, ಸಾಲ ನೀಡಿಕೆಯಿತ್ತು ಎನ್ನಲಾಗಿದೆ. ದವಸ ಧಾನ್ಯ, ಆಭರಣ, ಜಮೀನು ರೂಪದಲ್ಲಿ ಬ್ಯಾಂಕ್‌ಗಳು ವ್ಯವಹರಿಸುತ್ತಿದ್ದವು. ಪಡೆದ ಉದ್ರಿಯನ್ನು ಯುಕ್ತ ಕಾಲದಲ್ಲಿ ಮರಳಿಸದಿದ್ದರೆ 'ದೈವ ಶಾಪ' ಖಾತರಿ ಎನ್ನುವ ನಂಬಿಕೆಯೇ ಆತ್ಮಸಾಕ್ಷಿಯಾಗಿತ್ತು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಬದುಕಿನ ಸಂಧ್ಯಾಕಾಲದಲ್ಲಿ ಮಕ್ಕಳಿಗೆ ಹೊರೆಯಾಗುವುದು ಬೇಡ, ಏನಿದ್ದರೂ ಅವರಿಗೆ ಸಹಾಯ ಮಾಡೋಣ ಎಂದೆಲ್ಲ ಕನಸು ಕಟ್ಟಿಕೊಂಡವರಿಗೆ ಜಿ.ಪಿ.ಎ. (ಜನರಲ್ ಪವರ್ ಆಫ್ ಅಟಾರ್ನಿ) ಎಂಬ ಕಾರ್ಮೋಡ ಧುತ್ತನೆ ಆವರಿಸಿರುತ್ತದೆ. ತಮ್ಮ ನಿವೃತ್ತಿ ಸೌಲಭ್ಯದಿಂದ, ಸಣ್ಣಪುಟ್ಟ ವಿಮಾ ಯೋಜನೆಗಳಿಂದ, ಚೂರುಪಾರು ಆಸ್ತಿ ಮಾರಿ ಬಂದ ಹಣವೆಲ್ಲ ಒಂದೆಡೆ ಇರಲಿ ಎಂದು ಇಟ್ಟ ಇಡುಗಂಟು ಇಕ್ಕಟ್ಟಿನ ಗಂಟಾದರೆ ಎಂತಹ ದುರ್ಗತಿ? ಸರಿ, ಇಟ್ಟ ಠೇವಣಿ ಎಷ್ಟೇ ಇರಲಿ 'ಡಿಪಾಸಿಟ್ ಇನ್‌ಶೂರೆನ್ಸ್ ಸ್ಕೀಂ' ವತಿಯಿಂದ ₹ 5 ಲಕ್ಷದತನಕ ಅದೂ ಎರಡು ತಿಂಗಳ ಬಳಿಕ ಬರುವ ಹಣವೊಂದೇ ಸದ್ಯದ ರಕ್ಷೆ. ತದನಂತರ ಉಳಿದ ಮೊತ್ತಕ್ಕಾಗಿ ಬ್ಯಾಂಕಿಗೆ ಅಲೆದಾಟ. ಹೇಗೂ ಗ್ರಾಹಕರು ವಿಮಾ ಹಣ ಪಡೆದಿದ್ದಾರಲ್ಲ ಎನ್ನುವ ತಾತ್ಸಾರ ಬ್ಯಾಂಕಿನ ಅಧಿಕಾರಿ ವರ್ಗಕ್ಕೆ.

ಅಂದಹಾಗೆ ಸಹಕಾರ ಸಂಘಗಳಲ್ಲಿ ಹಣವಿಟ್ಟ ಗ್ರಾಹಕರಿಗೆ ಈ ಸೌಲಭ್ಯ ಸಹ ಇಲ್ಲ. 'ನಾವೇನು ಮಾಡುವುದು? ನಿಮ್ಮ ಹಣವನ್ನು ನಾವು ಕಬ್ಬಿಣದ ಪೆಟ್ಟಿಗೆಯಲ್ಲಿ ಇಡಲಾದೀತೆ ಹೇಳಿ. ಅದನ್ನು ಸಾಲ ನೀಡಲೇಬೇಕು. ಬರುವ ಬಡ್ಡಿಯಿಂದ ತಾನೆ ಎಲ್ಲ. ಅವರು ಕೈಚೆಲ್ಲಿದರೆ ನಾವು ನಿಮಗೂ ಕೈಚೆಲ್ಲದೆ ಏನಿದೆ ದಾರಿ?' ಎನ್ನುವ ಉತ್ತರ! ಒಂದೆಡೆ, ಸಮರ್ಪಕವಾದ ಜಾಮೀನು, ಭದ್ರತೆಯಿಲ್ಲದೆ ಸಾಲ ಮಂಜೂರಾತಿಯಲ್ಲಿ ಅವರ ಬೇಜವಾಬ್ದಾರಿ ನಡೆ, ಇನ್ನೊಂದೆಡೆ, ಸಾಲಗಾರರಲ್ಲಿ ಸಕಾಲಕ್ಕೆ ಸಾಲ ತೀರಿಸಬೇಕೆಂಬ ಅಂತಃಸಾಕ್ಷಿಯ ಕೊರತೆ ಗ್ರಾಹಕರನ್ನು ಹೈರಾಣಾಗಿಸುತ್ತವೆ. ಆಗ ಗರಿಗರಿ ನೋಟು ತಂದವರು ಈಗ ಔಷಧಿಗೂ ಕಾಸಿಲ್ಲದೆ ತತ್ತರಿಸುತ್ತಾರೆ.



ಮಗಳ ಮದುವೆಗೆಂದು ಇಟ್ಟ ಹಣ, ವಿದ್ಯಾಭ್ಯಾಸಕ್ಕಾಗಿ ಕೂಡಿಸಿದ ಹಣ ನಿಶ್ಚಿತ ಠೇವಣಿಯಲ್ಲಿತ್ತು, ಇದೋ ಈಗ ಅನಿಶ್ಚಿತ. ಅಯ್ಯೋ, ಮೊನ್ನೆ ತಾನೆ ಅಸಲನ್ನು ಬಡ್ಡಿಸಮೇತ ನವೀಕರಿಸಿದ್ದೆ, ಎಂತಹ ದುರ್ವಿಧಿ ಎಂಬ ಚಡಪಡಿಕೆ, ಪ್ರಲಾಪ. ತೊಂಬತ್ತು ದಾಟಿದವರಿಗೂ 'ನಿಮ್ಮ ನಿಶ್ಚಿತ ಠೇವಣಿಯ ಅವಧಿ ಮುಂದಿನ ವಾರ ಮುಗಿಯುತ್ತದೆ. ನವೀಕರಿಸಿ ಮತ್ತೂ ಉತ್ತಮ ಉಳಿತಾಯ ಯೋಜನೆ ಸೇರಿ' ಎಂಬ ಸಂದೇಶ ಬಂದಿರುತ್ತದೆ!

ಗ್ರಾಹಕನಲ್ಲಿ ಮನುಷ್ಯನನ್ನು ಕಾಣದೆ ಮನುಷ್ಯನಲ್ಲಿ ಗ್ರಾಹಕನನ್ನು ಕಾಣುವುದು ಎಂತಹ ವಿಪರ್ಯಾಸ? ನಂಬಿಕೆ, ವಿಶ್ವಾಸದಿಂದ ಹಣವಿಟ್ಟ ಗ್ರಾಹಕರ ಅನ್ನ ತನ್ನ ತಟ್ಟೆಯಲ್ಲಿ ಇರಬಾರದೆಂಬ ಪ್ರಜ್ಞೆ ಸಾಲಗಾರರಲ್ಲಿ ಇದ್ದರೆ ಖಂಡಿತ ಎನ್.ಪಿ.ಎ. ಶಮನವಾಗುತ್ತದೆ. ಗ್ರಾಹಕರಿಗೆ ಹಣ ಮರಳಿಸಲಾಗದಿದ್ದರೆ ಕೆಲವು ಖಾಸಗಿ ಹಣಕಾಸು ಸಂಸ್ಥೆಗಳು ಮತ್ತೊಂದು ಉಪಾಯ ಕಂಡುಕೊಳ್ಳುತ್ತವೆ. ರಿಯಲ್ ಎಸ್ಟೇಟ್ ಮಾಲೀಕರೊಂದಿಗೆ ಒಡಂಬಡಿಕೆ ಮಾಡಿಕೊಂಡು 'ಠೇವಣಿ ಬದಲಿಗೆ ಸೈಟ್ ಕೊಳ್ಳಿ' ಎನ್ನುತ್ತವೆ. ಸದ್ಯ, ಏನೋ ಒಂದು ವಾಪಸಾಗುತ್ತಿದೆಯಲ್ಲ ಎಂದು ಗ್ರಾಹಕರು ಖುಷಿಪಡುತ್ತಾರೆ. ಆದರೆ ಅಂತಹ ಉತ್ಸಾಹವೇ ಮೇಲಾಗಿ ನಿವೇಶನಕ್ಕೆ ಸೂಕ್ತ ದಾಖಲೆಗಳುಂಟೇ ಎಂದು ಪರಿಶೀಲಿಸಲು ಬಿಡವು. ಹಾಗಾಗಿ, ಗ್ರಾಹಕ ಬಾಣಲೆಯಿಂದ ಬೆಂಕಿಗೆ ಎನ್ನುವಂಥ ಸ್ಥಿತಿಗೆ ಬರುತ್ತಾನೆ!

ಬ್ಯಾಂಕಿನಲ್ಲಿ ಗ್ರಾಹಕ ಇಟ್ಟ ಹಣವನ್ನು ವಾಯಿದೆಯ ದಿನ ಹಿಂಪಡೆಯಬಯಸುವುದು ಆತನ ಹಕ್ಕು. ಇನ್ನೊಂದು ಬ್ಯಾಂಕಿಗೆ ಈ ಬ್ಯಾಂಕನ್ನು ಸೇರಿಸುತ್ತಾರಂತೆ ಎನ್ನುವ ಪುಕಾರುಗಳು ಹರಿದಾಡುತ್ತವೆ. ಆ ವೇಳೆಗೆ ಅದೆಷ್ಟು ಮಂದಿ ಗ್ರಾಹಕರು ಲೋಕದಿಂದಲೇ ಮುಕ್ತರಾಗಿರುತ್ತಾರೊ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಠೇವಣಿದಾರರ ಹಿತ ಕಾಯಬೇಕಿದೆ. ಠೇವಣಿದಾರರು ತೆರಿಗೆಯನ್ನು ನಿಯತ್ತಾಗಿ ಪಾವತಿಸುತ್ತಾ ದೇಶದ ಆರ್ಥಿಕ ಸ್ಥಿರತೆಯಲ್ಲಿ ತೊಡಗಿಕೊಂಡವರು ಎಂಬುದನ್ನು ಮರೆಯಬಾರದು.

ವಾಚಕರ ವಾಣಿ

ಕೆಇಎ ಸುಧಾರಣೆ: ಅನಿವಾರ್ಯ ಅಗತ್ಯ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯಶೈಲಿಯಲ್ಲಿ ಸುಧಾರಣೆ ತರದೆ ಪಿಎಸ್‌ಐ ಮರುಪರೀಕ್ಷೆ ನಡೆಸಲು ಮುಂದಾಗಿರುವುದು ಆತುರದ ನಿರ್ಧಾರ. ಇತ್ತೀಚಿನ ದಿನಗಳಲ್ಲಿ ಬ್ಲೂಟೂತ್‌ನಂತಹ ಸಾಧನಗಳನ್ನು ಬಳಸಿ ನಡೆಸುವಂತಹ ಅಕ್ರಮಗಳನ್ನು ತಡೆಯಲು ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ಕೆಪಿಎಸ್‌ಸಿ ನಡೆಸುವ ಪರೀಕ್ಷೆಗಳಲ್ಲಿ ಬ್ಲೂಟೂತ್ ಬಳಕೆ ತಡೆಯಲು ಈಗಾಗಲೇ ಫ್ರಿಸ್ಕಿಂಗ್ ಮತ್ತು ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಜಾಮರ್ ಅಳವಡಿಕೆಯಂತಹ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಕೆಇಎ, ವಿವಿಧ ನಿಗಮ ಹಾಗೂ ಮಂಡಳಿಯ ಹುದ್ದೆಗಳಿಗೆ 5 ಲಕ್ಷ ಅಭ್ಯರ್ಥಿಗಳು ಬರೆದಿದ್ದ ಪರೀಕ್ಷೆಯನ್ನು ಸಹ ತಾಲ್ಲೂಕು ಕೇಂದ್ರದಲ್ಲಿ ಯಾವ ಜಾಮರ್ ಇಲ್ಲದೆಯೇ ನಡೆಸಿತ್ತು. ಇದರಿಂದ ಕೆಲವು ಕಡೆ ಅಭ್ಯರ್ಥಿಗಳು ಬ್ಲೂಟೂತ್ ಬಳಸಿ ಸಿಕ್ಕಿಬಿದ್ದಿದ್ದರು.

ಇತ್ತೀಚಿನ ದಿನಗಳಲ್ಲಿ ನಡೆದ ಯಾವ ಪರೀಕ್ಷೆ ಪ್ರಕ್ರಿಯೆಯೂ ಒಂದು ವರ್ಷದಲ್ಲಿ ಮುಗಿದ ಉದಾಹರಣೆಯೇ ಇಲ್ಲ. ಕೆಇಎ ಬರೀ ವಸ್ತ್ರಸಂಹಿತೆ, ವಿವಿಧ ಆವೃತ್ತಿಯ ಪ್ರಶ್ನೆಪತ್ರಿಕೆಗಳನ್ನು ನಿರ್ವಹಿಸಿದರಷ್ಟೇ ಸಾಲದು. ಆಧುನಿಕ ತಂತ್ರಜ್ಞಾನದ ದುರ್ಬಳಕೆ ತಡೆಗಟ್ಟಲು ಅತ್ಯಾಧುನಿಕ ಕ್ರಮಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕು. ಮೆಟಲ್ ಡಿಟೆಕ್ಟರ್, ಪ್ರತಿ ಕೊಠಡಿಯಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ, ಬಾಡಿ ಕ್ಯಾಮೆರಾ ಬಳಸಲೇಬೇಕು. ಇದಕ್ಕಾಗಿ ಸಂಸ್ಥೆಯು ಹಣ ಖರ್ಚು ಮಾಡಬೇಕು. ಪಿಎಸ್‌ಐ ಮರುಪರೀಕ್ಷೆಯನ್ನು ಮತ್ತೆ ಒಂದು ಸಣ್ಣ ತಪ್ಪೂ ಆಗದ ರೀತಿಯಲ್ಲಿ ನಡೆಸಬೇಕಾದುದು ಸರ್ಕಾರದ ಹೊಣೆಗಾರಿಕೆ.

ವಿನಯಕುಮಾರ್ ಸಿ., ಬಲಶೆಟ್ಟಿಹಾಳ, ಯಾದಗಿರಿ

ಕೊರಗಜ್ಜನ ಹೆಸರಲ್ಲಿ ವಂಚನೆ ತಪ್ಪಿಸಿ

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೈವತ್ವದ ಸ್ಥಾನಕ್ಕೆ ಏರಿರುವ ಕೊರಗಜ್ಜ ದೈವ ಇತ್ತೀಚೆಗೆ ಗಡಿಗಳನ್ನು ದಾಟಿ ಭಕ್ತರನ್ನು ಸೆಳೆಯುತ್ತಿದೆ. ಹೀಗಾಗಿ, ಕೊರಗಜ್ಜನ ದರ್ಶನಕ್ಕಾಗಿ ರಾಜ್ಯದ ನಾನಾ ಮೂಲೆಗಳಿಂದ ಈ ಜಿಲ್ಲೆಗಳಿಗೆ ಬರುವ ಭಕ್ತಾದಿಗಳಿಗೆ, ಕೊರಗಜ್ಜನ ದೈವಸ್ಥಾನದ ಬಗ್ಗೆ ಸಾಮಾನ್ಯವಾಗಿ ಸರಿಯಾದ ಮಾಹಿತಿ ಇರುವುದಿಲ್ಲ. ಈ ಕಾರಣಕ್ಕೆ ಅವರು ಹಲವು ರೀತಿಯಲ್ಲಿ ವಂಚನೆಗೆ ಒಳಗಾಗುತ್ತಿದ್ದಾರೆ.

ಕೆಲವು ವ್ಯಕ್ತಿಗಳು ಕೊರಗಜ್ಜನ ದೈವಸ್ಥಾನ ಸ್ಥಾಪಿಸಿ ದುಡ್ಡು ಮಾಡುವ ದಂಧೆಗೆ ಇಳಿದಿದ್ದಾರೆ. ಇಂತಹವರ ವಿರುದ್ಧ ಮುಜರಾಯಿ ಸಚಿವರು ಕಠಿಣ ಕ್ರಮಗಳನ್ನು ಕೈಗೊಂಡು ಭಕ್ತರನ್ನು ಸಂರಕ್ಷಿಸಬೇಕು.

ವರುಣ್ ತೋರಣಗಟ್ಟೆ, ಹೊಸಪೇಟೆ

ಶಿಕ್ಷಕರ ಬಲವರ್ಧನೆಗೆ ಸಿಗಲಿ ಆದ್ಯತೆ

ಶಿಕ್ಷಕರ ತರಬೇತಿಗೆ ಭಾರತವು ವಾರ್ಷಿಕವಾಗಿ 100 ಕೋಟಿ ಡಾಲರ್‌ನಷ್ಟು ಹಣವನ್ನು ಖರ್ಚು ಮಾಡಬೇಕು ಎಂದಿರುವ ಇನ್ಫೊಸಿಸ್‌ನ ಸಹಸಂಸ್ಥಾಪಕ ನಾರಾಯಣಮೂರ್ತಿ ಅವರ ಮಾತು ಸರಿಯಾಗಿದೆ. ಇಂದು ಶಿಕ್ಷಕರಿಗೆ ಉತ್ತಮ ತರಬೇತಿ ಸಿಕ್ಕರೆ ಅದರಿಂದ ಮಕ್ಕಳಲ್ಲಿ ಹಾಗೂ ಆ ಮೂಲಕ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಗಳು ಆಗುತ್ತವೆ.

ಪ್ರಪಂಚದಲ್ಲಿ ಜಪಾನ್ ಅತಿ ಹೆಚ್ಚು ಒತ್ತು ಕೊಡುತ್ತಿರುವುದು ಶಿಕ್ಷಕರ ಬಲವರ್ಧನೆಗೆ. ಅದರಿಂದ ಸಮಾಜದಲ್ಲಿ ಪರಿವರ್ತನೆ ಸಾಧ್ಯ ಎಂಬುದು ಅದಕ್ಕೆ ಮನದಟ್ಟಾಗಿದೆ. ನಮ್ಮಲ್ಲಿನ ಅನೇಕ ದೋಷಗಳಿಗೆ, ಅನಿಷ್ಟಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ ಶಿಕ್ಷಣದಲ್ಲಿ ನಿಜವಾದ ಬದಲಾವಣೆ ಆಗದೆ ಇರುವುದೇ ಕಾರಣ. ಅದಕ್ಕೆ ಸೂಕ್ತವಾದ ಚುಚ್ಚುಮದ್ದನ್ನು ಕೊಡಲೇಬೇಕಾಗಿದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಮಕ್ಕಳಿಗೆ ಲಭ್ಯವಾಗಲಿ ಸಿರಿಧಾನ್ಯ

ಸರ್ಕಾರಿ ಶಾಲಾ ಮಕ್ಕಳಿಗೆ ಮುಂದಿನ ತಿಂಗಳಿನಿಂದ ಹಾಲಿನ ಜೊತೆ ರಾಗಿ ಮಾಲ್ಟ್ ನೀಡಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಈ ನಿರ್ಧಾರವು ಸ್ವಾಗತಾರ್ಹ ಹಾಗೂ ಔಚಿತ್ಯಪೂರ್ಣ. ಇದರೊಂದಿಗೆ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲು ಮೊಳಕೆ ಕಟ್ಟಿದ ಸಿರಿಧಾನ್ಯವನ್ನೂ ವಿತರಿಸಿದರೆ ಬಹಳ ಉಪಯುಕ್ತ. ಇದರಿಂದ ಸಿರಿಧಾನ್ಯ ಬೆಳೆದ ರೈತರಿಗೂ ಆರ್ಥಿಕವಾಗಿ ಉತ್ತೇಜನ ನೀಡಿದಂತೆ ಆಗುತ್ತದೆ.

ಜಯವೀರ ಎ.ಕೆ, ಖೇಮಲಾಪುರ, ರಾಯಬಾಗ

ಪಟಾಕಿ ಪ್ರಮಾದ: ಆಪತ್ತಿಗೆ ಮೂಲ


ಅತ್ತಿಬೆಲೆಯಲ್ಲಿ ಸಂಭವಿಸಿದ ಪಟಾಕಿ ದುರಂತದ ನಂತರ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರವು ಪಟಾಕಿ ಮಾರುವವರ ಮೇಲೆ ಬಹಳಷ್ಟು ನಿಗಾ ವಹಿಸಿ, ನಿಯಮಗಳನ್ನು ಕಡ್ಡಾಯಗೊಳಿಸಿತ್ತು. ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ, ಪಟಾಕಿ ಮಾರಾಟ ನಿಯಂತ್ರಿಸಿತ್ತು. ಆದರೂ ಪಟಾಕಿ ದುರಂತ ಪ್ರಕರಣಗಳ ಸಂಖ್ಯೆಯೇನೂ ಕಡಿಮೆಯಾಗಲಿಲ್ಲ. ಇದಕ್ಕೆ ಮೂಲ ಕಾರಣ, ಜನರಲ್ಲಿ ಜಾಗೃತಿ ಇಲ್ಲದೇ ಇರುವುದು. ಪಟಾಕಿ ಅವಘಡಗಳಿಂದ ಏನಾಗಬಹುದು, ಅವುಗಳಿಂದ ನಾವು ಯಾವ ರೀತಿ ರಕ್ಷಣೆ ಪಡೆಯಬೇಕು ಎನ್ನುವುದನ್ನು ನಾಗರಿಕರು ಅರಿಯದಿದ್ದಾಗ ಇಂತಹ ಅಚಾತುರ್ಯಗಳು ಘಟಿಸುತ್ತವೆ. ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯ ಹೆಚ್ಚಾಗಿದ್ದು ಉಸಿರಾಡಲು ತೊಂದರೆ ಅನುಭವಿಸುವಂತಾಗಿದೆ. ಪಟಾಕಿ ಸೂಸುವ ಹೊಗೆಯಿಂದ ವಾತಾವರಣದ ಗಾಳಿ ಕಲುಷಿತಗೊಳ್ಳುತ್ತದೆ. ಅದರಿಂದ ಅಸ್ತಮಾ ಬಾಧಿತರಿಗೆ ತೊಂದರೆಯಾಗುತ್ತದೆ ಎನ್ನುವ ಪರಿಜ್ಞಾನ ನಮಗಿಲ್ಲ. ಹೀಗಾಗಿ, ಕೆಲವು ಬಗೆಯ ಪಟಾಕಿಗಳ ಮೇಲೆ ನಿಷೇಧವಿದ್ದರೂ ಪಟಾಕಿ ಹಚ್ಚುವ ಹುಮ್ಮಸ್ಸು ಮಾತ್ರ ಕಡಿಮೆಯಾಗಲಿಲ್ಲ.

ಹಬ್ಬದ ರಾತ್ರಿ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡಿದ ಒಂದು ವಿಡಿಯೊ ಹಲವರನ್ನು ದಿಗ್ಭ್ರಾಂತರನ್ನಾಗಿಸಿತು. ಶಿಕ್ಷಿತರು, ತಿಳಿವಳಿಕೆ ಇರುವವರು ಎಂದು ಕರೆಸಿಕೊಳ್ಳುವ ವಿದ್ಯಾರ್ಥಿಗಳು ಪಟಾಕಿಗಳನ್ನು ಒಂದು ಹಾಸ್ಟೆಲ್ಲಿನಿಂದ ಮತ್ತೊಂದು ಹಾಸ್ಟೆಲ್ಲಿಗೆ ಎಸೆಯುತ್ತಿದ್ದುದು, ಎಂತಹವರಿಗೂ ಎದೆ ಝಲ್ ಎನಿಸುವಂತಿತ್ತು. ಎಲ್ಲಾ ಗೊತ್ತಿದ್ದೂ ಅದನ್ನು ನಿರ್ಲಕ್ಷಿಸಿ ನಾವು ಈ ರೀತಿಯ ಪ್ರಮಾದಗಳನ್ನು ಮಾಡುತ್ತೇವೆ. ಆ ಮೂಲಕ ನಮಗೆ ನಾವೇ ಆಪತ್ತು ತಂದುಕೊಳ್ಳುತ್ತಿದ್ದೇವೆ.

ಜಗದೀಶ ಎಸ್. ಗಿರಡ್ಡಿ, ಗೊರಬಾಳ, ಇಳಕಲ್


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನುಡಿ ಬೆಳೆಸಲು ಬೇಕು ಸೃಜನಶೀಲ ಕ್ರಮ



ಇಂಗ್ಲಿಷ್ ಅಥವಾ ಹಿಂದಿ ವಿರೋಧ ಎನ್ನುವ ಕೇವಲ ಘೋಷಣೆಗಳು ಕನ್ನಡ ಭಾಷಾ ಬೆಳವಣಿಗೆಗೆ ಪೂರಕವಾಗದು. ಕನ್ನಡ ಭಾಷೆಯ ಬೆಳವಣಿಗೆಗೆ ಎಂಥ ಸೃಜನಶೀಲ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅಂಥದ್ದೇ ಕ್ರಮಗಳನ್ನು ತುಳು, ದಖನಿ, ಕೊಂಕಣಿ ಹಾಗೂ ಕರ್ನಾಟಕದ ಇನ್ನಿತರ ಭಾಷೆಗಳಿಗೂ ತೆಗೆದುಕೊಳ್ಳಬೇಕು. ಭಾಷೆಯ ಉಳಿವಿಗೆ ಬಹುಭಾಷಾ ಶಿಕ್ಷಣದ ವಿಧಾನವನ್ನು ಅನುಸರಿಸುವ ಕುರಿತು ಚಿಂತನೆ ನಡೆಸುವ ಕಾಲ ಸನ್ನಿಹಿತವಾಗಿದೆ

• ಜಿ.ಎನ್. ದೇವಿ






ಈ ಜಗತ್ತಿನಲ್ಲಿ, ಜನರು ಮಾತನಾಡುವ ಎಲ್ಲಾ ಭಾಷೆಗಳನ್ನು ಲೆಕ್ಕ ಹಾಕಿದರೆ ಸುಮಾರು 7,000 ಭಾಷೆಗಳಾಗಬಹುದು. ಒಂದು ಭಾಷೆಯನ್ನು ಎಷ್ಟು ಜನರು ಮಾತನಾಡುತ್ತಾರೆ ಎನ್ನುವುದನ್ನು ಲೆಕ್ಕಹಾಕಿ ಅದಕ್ಕೊಂದು ಶ್ರೇಯಾಂಕ ನೀಡಿ ಪಟ್ಟಿ ಮಾಡುವುದಾದರೆ, ಮೊದಲ 30 ಭಾಷೆಗಳ ಪಟ್ಟಿಗಳಲ್ಲಿ 11 ಭಾಷೆಗಳು ಭಾರತದ್ದೇ ಆಗಿರುತ್ತವೆ. ಹಿಂದಿ, ಬಾಂಗ್ಲಾ, ಮರಾಠಿ, ತೆಲುಗು, ಪಂಜಾಬಿ, ತಮಿಳು, ಉರ್ದು, ಗುಜರಾತಿ, ಮಲೆಯಾಳ, ಕನ್ನಡ ಹಾಗೂ ಒಡಿಯಾ– ಇವೇ ಆ 11 ಭಾಷೆಗಳು. ಒಂದೊಮ್ಮೆ ಈ 30 ಭಾಷೆಗಳ ಪಟ್ಟಿಯಲ್ಲಿ, ಯಾವ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎಂಬ ಪಟ್ಟಿ ತಯಾರಿಸಲು ಹೊರಟರೆ ಅಂಥವರಿಗೆ ಸುಮಾರು 10 ಭಾಷೆಗಳು ಸಿಗಬಹುದು. ಆ 10 ಭಾಷೆಗಳಲ್ಲಿ ಭಾರತದ ಮೂರು ಭಾಷೆಗಳೂ ಇರುತ್ತವೆ– ತಮಿಳು, ಮರಾಠಿ ಮತ್ತು ಕನ್ನಡ.

ಕನ್ನಡದ ಕುರಿತು ಹೆಮ್ಮೆ ಪಡುವುದಕ್ಕೆ ಇದಕ್ಕಿಂತ ಬೇರೆ ಯಾವ ಕಾರಣ ಬೇಕು ಹೇಳಿ. ಭಾಷೆಯ ಅತ್ಯಂತ ದೀರ್ಘವಾದ ಇತಿಹಾಸ ಮತ್ತು ಹೆಚ್ಚು ಜನರು ಮಾತನಾಡುವ ಭಾಷೆ– ಈ ಎರಡೂ ವಿಭಾಗಗಳಲ್ಲೂ ಕನ್ನಡ ಸ್ಥಾನಗಳಿಸಿದೆ. ಅಪೂರ್ವ ಸಾಹಿತ್ಯ ಪರಂಪರೆ, ತತ್ವಶಾಸ್ತ್ರ, ಜೊತೆಗೆ ಪದಕೋಶ ಹಾಗೂ ವಿಶ್ವಕೋಶಗಳಂಥ ಪಾಂಡಿತ್ಯಪೂರ್ಣ ಕೆಲಸಗಳೂ ಈ ಭಾಷೆಗೆ ಸಂಬಂಧಿಸಿ ನಡೆದಿವೆ. ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರದಲ್ಲೂ ಗಮನಾರ್ಹ ಕೆಲಸಗಳಾಗಿವೆ. ಕರ್ನಾಟಕದಲ್ಲಿ ಏಷ್ಯಾದಲ್ಲಿಯೇ ಅತ್ಯುತ್ತಮವಾದ ಸಂಗೀತ ಪರಂಪರೆ ಇದೆ. ಆದರೂ, ಕನ್ನಡ ಭಾಷೆಯ ಮುಂದಿನ ಪಥವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಎಲ್ಲವೂ ಸರಿ ಇದ್ದಂತೆ ತೋರುತ್ತಿಲ್ಲ.

ಭಾರತದ ಸಂವಿಧಾನವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದೆ ಮತ್ತು ಭಾಷೆಗಳ ಆಧಾರದಲ್ಲಿ 1950ರಲ್ಲಿ ರಾಜ್ಯಗಳ ವಿಂಗಡಣೆಯಾಗಿದೆ. ನಿಜಾಮರ ಸಾಮ್ರಾಜ್ಯದಲ್ಲಿ ಹಾಗೂ ಬಾಂಬೆ ಪ್ರಾಂತ್ಯದಲ್ಲಿ ಹಂಚಿಹೋಗಿದ್ದ ಪ್ರದೇಶಗಳನ್ನು ಒಟ್ಟುಗೂಡಿಸಿ ಕರ್ನಾಟಕ ರೂಪುಪಡೆಯಿತು. ಕನ್ನಡವು ಕರ್ನಾಟಕದ ಅಧಿಕೃತ ಭಾಷೆಯ ಪಟ್ಟ ಪಡೆದುಕೊಂಡಿತು. ದಖನಿ, ತುಳು ಹಾಗೂ ಕೊಂಕಣಿ ಭಾಷೆಗಳೊಂದಿಗೆ ತಮಿಳು ಹಾಗೂ ಮರಾಠಿ ಸೇರಿದಂತೆ ಕೆಲವು ಭಾಷೆಗಳು ನಾಡಿನ ಇತರ ಭಾಷೆಗಳಾದವು.



ಇದೇ ಕಾರಣಕ್ಕೆ ಕರ್ನಾಟಕದಲ್ಲಿ ಕನ್ನಡದ ಹೊರತಾಗಿಯೂ ಬೇರೆ ಬೇರೆ ಭಾಷೆ ಮಾತನಾಡುವ ಜನರಿದ್ದಾರೆ. ಕರ್ನಾಟಕದಲ್ಲಿ ಕನ್ನಡದ ಹೊರತಾಗಿ ಮಾತನಾಡುವ ಇತರೆ ಕೆಲವು ಭಾಷೆಗಳು– ಕೊಂಕಣಿ, ಹಿಂದಿ, ಮರಾಠಿ, ತೆಲುಗು, ತಮಿಳು, ಉರ್ದು ಅಥವಾ ದಖನಿ ಭಾಷೆಗಳು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿವೆ. ಇನ್ನುಳಿದ– ತುಳು, ಬ್ಯಾರಿ, ಕೊಡವ, ಸಂಕೇತಿ, ಬಂಜಾರ, ಕೊರಗ, ಇರುಳ, ಸಿದ್ದಿ, ಬಡಗ, ಸೋಲಿಗ, ಹಕ್ಕಿಪಿಕ್ಕಿ, ಎರವ, ಗೌಳಿ ಹಾಗೂ ಕುರುಬ ಭಾಷೆಗಳು 8ನೇ ಪರಿಚ್ಛೇದದಲ್ಲಿ ಸ್ಥಾನ ಪಡೆದುಕೊಂಡಿಲ್ಲ. ಹಾಗಿದ್ದರೂ ಇಂಗ್ಲಿಷ್ ಭಾಷೆಯು ಕರ್ನಾಟಕದಲ್ಲಿ ಹಲವು ಸ್ತರಗಳಲ್ಲಿ ತನ್ನ ಬಾಹು ಚಾಚಿದೆ. ಕಾನೂನು ಕ್ಷೇತ್ರದಲ್ಲಿ, ಆಡಳಿತದಲ್ಲಿ, ಉನ್ನತ ಶಿಕ್ಷಣದಲ್ಲಿ ಮತ್ತು ಕೈಗಾರಿಕೆಯಲ್ಲಿ ಇಂಗ್ಲಿಷ್ ತನ್ನ ಪಾರಮ್ಯವನ್ನು ಮೆರೆಯುತ್ತಿದೆ. ಇಷ್ಟೆಲ್ಲ ಭಾಷೆಗಳಿಗೆ ಕರ್ನಾಟಕವು ತನ್ನೊಡಲಲ್ಲಿ ಜಾಗ ಕೊಟ್ಟಿದೆ. ಅಲ್ಲಿಗೆ, ಭಾರತವನ್ನು ಬಹುಭಾಷಾ ರಾಷ್ಟ್ರವನ್ನಾಗಿ ಮಾಡಬೇಕು, ಜೊತೆಜೊತೆಗೆ ರಾಜ್ಯಗಳಿಗೆ ಅವುಗಳದ್ದೇ ಆದ ರಾಜ್ಯ ಭಾಷೆಯೊಂದಿರಬೇಕು ಎನ್ನುವ ಪರಿಕಲ್ಪನೆಯು ಕರ್ನಾಟಕದಲ್ಲಿ ಸಾಕಾರಗೊಂಡಂತಾಗಿದೆ.

ಕನ್ನಡವು ಸದ್ಯದ ಮಟ್ಟಿಗಂತೂ ರಾಜ್ಯದಲ್ಲಿ ಅತಿಹೆಚ್ಚು ಜನರು ಮಾತನಾಡುವ ಭಾಷೆ. ಆದರೆ, ಕನ್ನಡದ ಬೆಳವಣಿಗೆಯ ವೇಗ ಮಾತ್ರ ಕುಂಠಿತವಾಗ ತೊಡಗಿದೆ. 1961ರ ಗಣತಿಯಲ್ಲಿ ಕನ್ನಡವು ತಮ್ಮ ಮಾತೃಭಾಷೆ ಎಂದು ಭಾರತದಾದ್ಯಂತ ಶೇ 3.96ರಷ್ಟು ಜನರು ಹೇಳಿದ್ದರು. ಆದರೆ, ಈ ಪ್ರಮಾಣವು ದಶಕದಿಂದ ದಶಕಕ್ಕೆ ಕಡಿಮೆ ಆಗುತ್ತಲೇ ಬರುತ್ತಿದೆ. ಈಗ 50 ವರ್ಷಗಳಲ್ಲಿ ಕನ್ನಡವನ್ನು ಮಾತೃಭಾಷೆ ಎಂದು ಭಾರತದಾದ್ಯಂತ ಹೇಳಿಕೊಂಡಿರುವ ಜನರ ಪ್ರಮಾಣವು ಶೇ 3.96ರಷ್ಟಿಂದ ಶೇ 3.61ರಷ್ಟಕ್ಕೆ ಇಳಿಕೆಯಾಗಿದೆ. ಇದು 2011ರ ಗಣತಿಯ ಮಾಹಿತಿ. 121 ಕೋಟಿ (2011 ಗಣತಿ ಪ್ರಕಾರ) ಜನಸಂಖ್ಯೆಯಲ್ಲಿ ಶೇ 00.35ರಷ್ಟು ಪ್ರಮಾಣ ಕಡಿಮೆಯಾಗಿದೆ ಎಂದರೆ ಅದು ಹಲವು ಲಕ್ಷವಾಗುತ್ತದೆ.

ಹಿಂದೆಲ್ಲಾ ಗಣತಿ ಸಂದರ್ಭದಲ್ಲಿ, ಕೆಲವು ಜನರಷ್ಟೇ ಮಾತನಾಡುವ ಭಾಷೆ ಮಾತನಾಡುವವರನ್ನು ಕನ್ನಡ ಮಾತನಾಡುವ ಜನರು ಎಂದೇ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. 2011ರ ಗಣತಿಯ ಪ್ರಕಾರ, ಕನ್ನಡ ಮಾತನಾಡುವ ಜನರ ಸಂಖ್ಯೆಯು 4.37 ಕೋಟಿ, ಬಡಗ ಮಾತನಾಡುವ ಜನಸಂಖ್ಯೆಯು 1.33 ಲಕ್ಷ, ಕುರುಬ ಭಾಷೆ ಮಾತನಾಡುವವರ ಸಂಖ್ಯೆಯು 24,189 ಹಾಗೂ ಪ್ರಾಕೃತ ಮಾತನಾಡುವವರ ಸಂಖ್ಯೆಯು 12,257 ಇತ್ತು. 'ಹೆಸರೇ ಇಲ್ಲದ ಭಾಷೆ' ಮಾತನಾಡುವ ಸುಮಾರು 30,244 ಜನರೂ ಕರ್ನಾಟಕದಲ್ಲಿ ಇದ್ದರು.

ಭಾರತದಾದ್ಯಂತ ಕನ್ನಡ ಮಾತನಾಡುವ ಜನರ ಸಂಖ್ಯೆ ಮಾತ್ರವೇ ಇಳಿಕೆಯಾಗುತ್ತಿಲ್ಲ. ಈ ಪ್ರವೃತ್ತಿಯು ಇಡೀ ದ್ರಾವಿಡ ಭಾಷೆಗಳ ಕುಟುಂಬಕ್ಕೂ ಅಂಟಿದೆ. ಭಾರತದಲ್ಲಿ ಇಂಡೊ–ಆರ್ಯನ್ ಭಾಷೆಗಳನ್ನು ಮಾತನಾಡುವ ಜನರಿಗೆ ಹೋಲಿಸಿದರೆ (ಶೇ 78.05) ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳನ್ನು ಮಾತನಾಡುವ ಜನರ ಸಂಖ್ಯೆಯು (ಶೇ 19.64) ತೀರಾ ಕಡಿಮೆ ಪ್ರಮಾಣದ್ದು. ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಕನಿಷ್ಠ ಒಂದು ಭಾಷೆಯನ್ನಾದರೂ ತಮ್ಮ ಮಾತೃಭಾಷೆ ಎಂದು 23.78 ಕೋಟಿ ಜನರು 2011ರ ಗಣತಿಯಲ್ಲಿ ಹೇಳಿದ್ದರು.

ಕರ್ನಾಟಕದಲ್ಲಿ ನೆಲೆ ಕಂಡುಕೊಂಡಿರುವ ಇತರ ಭಾಷೆಗಳಿಗೂ ಆತಂಕ ತಪ್ಪಿದ್ದಲ್ಲ. ಮೊದಲೇ ಹೇಳಿದ ಹಾಗೆ, ಕರ್ನಾಟಕದಲ್ಲಿ ನೆಲೆಸಿರುವವರೆಲ್ಲರೂ ಕನ್ನಡವನ್ನೇ ಮಾತನಾಡುವುದಿಲ್ಲ. ಕರ್ನಾಟಕದಲ್ಲಿ ಭಾಷಾ ವೈವಿಧ್ಯದ ಕುರಿತ ಒಂದು ನೋಟ ಪಡೆದುಕೊಳ್ಳಬೇಕು ಎಂದಾದರೆ, 2001ರ ಗಣತಿಯ ಅಂಕಿ–ಅಂಶಗಳು ಒಳ್ಳೆಯ ಮಾಹಿತಿಗಳನ್ನು ಒದಗಿಸುತ್ತದೆ. ಆ ಗಣತಿಯ ಪ್ರಕಾರ, ಪ್ರತಿ 10,000 ನಿವಾಸಿಗಳಲ್ಲಿ 6,626 ಜನರು ಕನ್ನಡ ಮಾತನಾಡುವವರಿದ್ದರು. 1,054 ಜನರು ಉರ್ದು, 703 ಜನರು ತೆಲುಗು, 357 ಜನರು ತಮಿಳು, 360 ಜನರು ಮರಾಠಿ ಹಾಗೂ 250 ಜನರು ಹಿಂದಿ ಮಾತನಾಡುತ್ತಿದ್ದರು.

ಇದೇ ಸಂಯೋಜನೆಯು 2011ರ ಗಣತಿಯ ಹೊತ್ತಿಗೆ ಬಹಳ ಬದಲಾಗಿ ಹೋಯಿತು. 2021ರಲ್ಲಿ ನಡೆಯಬೇಕಿದ್ದ ಗಣತಿಯು ಇದುವರೆಗೂ ನಡೆದಿಲ್ಲ. ಆದ್ದರಿಂದ, ಈ 10 ವರ್ಷಗಳಲ್ಲಿ ಮತ್ತೆಷ್ಟು ಬದಲಾವಣೆಗಳಾಗಿವೆ ಎಂದು ನಮಗೆ ತಿಳಿದಿಲ್ಲ. ಭಾರತ ಹಾಗೂ ಕರ್ನಾಟಕದಲ್ಲಿ ಕನ್ನಡ ಮಾತನಾಡುವ ಜನರ ಸಂಖ್ಯೆಯಲ್ಲಿ ಈಗ ಏನಾಗಿದೆ ಎಂಬುದು ಗೊತ್ತಾಗಿಲ್ಲ. ಒಂದು ವಿಷಯವಂತೂ ಸ್ಪಷ್ಟವಾಗಿ ತೋರುತ್ತಿದೆ. ಹಿಂದಿ ಭಾಷೆಯ ಬೆಳವಣಿಗೆಯನ್ನು ನೋಡಿದರೆ, ಕನ್ನಡವಂತೂ ಆ ಪ್ರಮಾಣದಲ್ಲಿ ಬೆಳವಣಿಗೆ ಹೊಂದುತ್ತಿಲ್ಲ. ಕನ್ನಡವನ್ನು ಮಾತನಾಡುವ ಆ ಮೂಲಕ ಭಾಷೆಯನ್ನು ಬೆಳೆಸುವ ಕುರಿತು ಆಸಕ್ತಿ ಇರುವುದಕ್ಕಿಂತಲೂ ಇಂಗ್ಲಿಷ್ ಭಾಷೆಯನ್ನು ತಮ್ಮದಾಗಿಸಿಕೊಳ್ಳುವ ಆಸಕ್ತಿಯೇ ಯುವ ಪೀಳಿಗೆಯಲ್ಲಿ ಹೆಚ್ಚಾಗಿ ತೋರುತ್ತಿದೆ.

ಕನ್ನಡ ಮಾತನಾಡುವ ಜನರು ಬೇರೆ ರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಕನ್ನಡ ಭಾಷೆಯ ಬೆಳವಣಿಗೆಯು ಕುಂಠಿತಗೊಂಡಿರುವುದಕ್ಕೆ ಒಂದು ಕಾರಣ. ಆದರೆ, ಈ ಪ್ರಕ್ರಿಯೆಯು ಹಿಂದಿ, ಬಾಂಗ್ಲಾ, ತೆಲುಗು ಹಾಗೂ ಮರಾಠಿ ಮಾತನಾಡುವ ರಾಜ್ಯಗಳಲ್ಲೂ ನಡೆಯುತ್ತಿದೆ. ಕನ್ನಡ ಭಾಷೆಯ ಸ್ಥಿತಿಗತಿಯನ್ನು ಭಾರತದ ಇತರ ಭಾಷೆಗಳ ಸ್ಥಿತಿಗತಿಗೆ ಹೋಲಿಸಿ ನೋಡಿದರೆ, ಕನ್ನಡ ಭಾಷೆಯ ಬೆಳವಣಿಗೆಗೆ ಕರ್ನಾಟಕವು ಹೆಚ್ಚು ಸೃಜನಶೀಲವಾದ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾದ ಜರೂರು ಇರುವುದು ತಿಳಿಯುತ್ತದೆ.

ಇಂಗ್ಲಿಷ್ ಅಥವಾ ಹಿಂದಿ ವಿರೋಧ ಎನ್ನುವ ಕೇವಲ ಘೋಷಣೆಗಳು ಕನ್ನಡ ಭಾಷಾ ಬೆಳವಣಿಗೆಗೆ ಪೂರಕವಾಗದು. ಕನ್ನಡ ಭಾಷೆಯ ಬೆಳವಣಿಗೆಗೆ ಎಂಥ ಸೃಜನಶೀಲ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅಂಥದ್ದೆ ಕ್ರಮಗಳನ್ನು ತುಳು, ದಖನಿ, ಕೊಂಕಣಿ ಹಾಗೂ ಕರ್ನಾಟಕದ ಇನ್ನಿತರ ಭಾಷೆಗಳ ಬೆಳವಣಿಗೆಗೂ ತೆಗೆದುಕೊಳ್ಳಬೇಕು. ಭಾಷೆಯ ಉಳಿವಿಗೆ ಬಹುಭಾಷಾ ಶಿಕ್ಷಣದ ವಿಧಾನವನ್ನು ಅನುಸರಿಸುವ ಕುರಿತು ಚಿಂತನೆ ನಡೆಸುವ ಕಾಲ ಸನ್ನಿಹಿತವಾಗಿದೆ. ಒಡಿಶಾ, ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯಗಳು ಇಂಥದ್ದೊಂದು ವಿಧಾನವನ್ನು ಅಳವಡಿಸಿಕೊಂಡಿವೆ. ನಾವೂ ಇದನ್ನು ಅಳವಡಿಸಿಕೊಳ್ಳಬಹುದು.

ಲೇಖಕ: ಅಧ್ಯಕ್ಷ, ದಿ ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೇ

ಲೋಕಜ್ಞಾನಕ್ಕೆ ಕನ್ನಡ ಕಣಜವಾಗಲಿ



ಸದ್ಯ ಕರ್ನಾಟಕದ ಶೈಕ್ಷಣಿಕ ಪರಿಸರದಲ್ಲಿ ಕನ್ನಡ ವರ್ಸಸ್ ಇಂಗ್ಲಿಷ್ ಎಂಬ ಸನ್ನಿವೇಶ ಸೃಷ್ಟಿಯಾಗಿದೆ. ಕನ್ನಡ ಶಾಲೆಗಳಿಗೆ ಸೇರಬೇಕಾದ ಮಕ್ಕಳು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರುತ್ತಿವೆ. ಅಲ್ಲದೆ ರಾಜ್ಯದ ಕನ್ನಡ ಶಾಲೆಗಳಲ್ಲಿ ಕನ್ನಡವನ್ನು ಬೋಧಿಸುತ್ತಿರುವ ವಿಧಾನದಲ್ಲಿಯೇ ಮೂಲಭೂತ ದೋಷ ಇದ್ದಂತಿದೆ. ಇಂದು ಕಲಿಯುತ್ತಿರುವ ಮಕ್ಕಳ ಕನ್ನಡದ ಭಾಷಿಕ ಕೌಶಲಗಳು ತುಂಬಾ ದುರ್ಬಲವಾಗಿವೆ. ಇದು ಶೈಕ್ಷಣಿಕ ಪರಿಸರದಲ್ಲಿ ಗಟ್ಟಿಗೊಳ್ಳಬೇಕಾದ ಕನ್ನಡದ ಬೇರುಗಳು ಟೊಳ್ಳಾಗಿರುವುದನ್ನು ಸೂಚಿಸುತ್ತಿದೆ. ಹಾಗಾಗಿ ಮೊದಲು ಮಕ್ಕಳ ಕನ್ನಡ ಕಲಿಕೆಯ ಗುಣಮಟ್ಟ ಹೆಚ್ಚಿಸಬೇಕು.

ನಂತರ ತರಗತಿಗಳಲ್ಲಿ ದ್ವಿಭಾಷಾ ಬೋಧನೆಯ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಇಂಗ್ಲಿಷ್ ಮತ್ತು ಕನ್ನಡಗಳ ನಡುವೆ ಇರುವ ತರತಮ ನೆಲೆಯನ್ನು ಬದಲಿಸಬೇಕು. ಅದಕ್ಕೆ ತಕ್ಕನಾದ ನುಡಿನೀತಿ ಮತ್ತು ಶಿಕ್ಷಣ ನೀತಿಗಳನ್ನು ರೂಪಿಸಬೇಕಿದೆ. ಕನ್ನಡವನ್ನು ಸಾಹಿತ್ಯ ಜ್ಞಾನದ ಭಾಷೆಯಾಗಿ ಮಾತ್ರ ನೋಡದೆ ಅದನ್ನು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಭಾಷೆಯಾಗಿ ಬೆಳೆಸಲು ಬೇಕಾದ ಯೋಜನೆಗಳನ್ನು ಸರ್ಕಾರ ಮತ್ತು ಜನರು ಹಮ್ಮಿಕೊಳ್ಳಬೇಕು.

ಈ ಹಿಂದೆ ನಮ್ಮ ನೆಲದ ಕುಶಲಕರ್ಮಿಗಳು ಕನ್ನಡವನ್ನು ಎಲ್ಲ ವಲಯಗಳಲ್ಲಿಯೂ ಬಳಸುತ್ತಿದ್ದರು. ಅದೇ ರೀತಿಯಲ್ಲಿ, ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬದುಕಿನ ಎಲ್ಲ ವಿಷಯಗಳ ಅಭಿವ್ಯಕ್ತಿಗೂ ಕನ್ನಡ ಬಳಸಲು ಬೇಕಾದ ಪರಿಸರ ರೂಪಿಸಬೇಕು. ಶೈಕ್ಷಣಿಕ ಪರಿಸರದಲ್ಲಿ ಕನ್ನಡದ ಬೇರುಗಳನ್ನು ಗಟ್ಟಿಗೊಳಿಸದೆ, ಅದನ್ನು ಬದುಕಿನ ಭಾಗವಾಗಿಸದೆ, ಲೋಕಜ್ಞಾನದ ಕಣಜವಾಗಿಸದೆ ಮುಂದಿನ ದಶಕಗಳಲ್ಲಿ ಕನ್ನಡವನ್ನು ಸಮಗ್ರ ಮತ್ತು ಸದೃಢವಾಗಿ ಬೆಳೆಸಲು ಸಾಧ್ಯವಿಲ್ಲ.

ರಂಗನಾಥ ಕಂಟನಕುಂಟೆ, ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಬ್ಬಳ್ಳಿ

ಕಾಲ–ದೇಶಗಳ ಅಗತ್ಯಕ್ಕೆ ಸಜ್ಜುಗೊಳ್ಳಲಿ



ನುಡಿಯ ಉಳಿವು ಎಂದರೆ ನಾವು ನಿರಂತರವಾಗಿ ಆಚರಿಸಿಕೊಂಡು ಬಂದಿರುವ ಶೋಷಣೆ, ದೌರ್ಜನ್ಯ, ಅಪಮಾನದ ನೆಲೆಗಳನ್ನೇ ಮುಂದುವರಿಸಿಕೊಂಡು ಹೋಗುವುದಲ್ಲ. ಕಾಲ-ದೇಶದ ಅಗತ್ಯಗಳಿಗೆ ನಮ್ಮ ನುಡಿಗಳನ್ನು ಸಜ್ಜುಗೊಳಿಸಿ, ಆಯಾ ನುಡಿಗಳನ್ನು ಬದುಕಿನ ರಹದಾರಿಗಳನ್ನಾಗಿ ರೂಪಿಸುವುದು ಮತ್ತು ಎಲ್ಲರನ್ನೂ ಒಳಗೊಳ್ಳುವ ಹಾಗೂ ಎಲ್ಲರ ಏಳ್ಗೆಗಾಗಿ, ಆಯಾ ನುಡಿಗಳಲ್ಲಿ ಅವಕಾಶಗಳಿರಬೇಕಾದ ಜರೂರಿದೆ. ಈ ವಿನ್ಯಾಸಗಳನ್ನು ಕೈಬಿಟ್ಟು ಕೇವಲ ನುಡಿಯನ್ನು ಉಳಿಸಬೇಕು ಎನ್ನುವುದಾದರೆ, ಎಲ್ಲ ಸಮೂಹಗಳ ಸರ್ವತೋಮುಖ ಬೆಳವಣಿಗೆಯ ಹಿತಾಸಕ್ತಿಗಿಂತ, ಕೆಲವೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡುವ ಹುನ್ನಾರ ಮಾತ್ರವಿರುತ್ತದೆ.

ಆದ್ದರಿಂದ ಹೊಸಗಾಲದ ಆಧುನೀಕರಣ ಮತ್ತು ಪ್ರಮಾಣೀಕರಣ ಎನ್ನುವುದು ಎಲ್ಲರ ನುಡಿಯನ್ನು ರೂಪಿಸುವ ಹಾಗೂ ಆ ಮೂಲಕ ತಮ್ಮ ತಮ್ಮ ಬದುಕುಗಳನ್ನು ಕಟ್ಟಿಕೊಳ್ಳುವ ವಿನ್ಯಾಸಗಳು ಕಂಡರಿಯುವ ಮಾದರಿಗಳಾಗಿವೆ. ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಉದ್ಯೋಗದ ಪ್ರಶ್ನೆಗಳಿಗೆ ಪರಿಹಾರಗಳನ್ನು ನಾವು ಕಾಣುತ್ತೇವೆ. ಅಷ್ಟೆಯಲ್ಲದೇ, ನಮ್ಮ ರಾಜಕೀಯ ಪ್ರಾತಿನಿಧ್ಯ ಹಾಗೂ ಸಾಮಾಜಿಕ ಸಹಬಾಳ್ವೆಯ ತತ್ವಗಳು ಸಹಜ ರೂಢಿಗಳಾಗಿ ಚಾಲ್ತಿಗೆ ಬರುತ್ತವೆ. ಈ ಚರ್ಚೆಗಳು ನಮಗೆ ಕೇವಲ ಆದರ್ಶದ ನೆಲೆಗಳಾಗಿ ಗೋಚರಿಸಿದರೆ, ನಾವು ಯಾವತ್ತೂ ಏಳ್ಗೆಯನ್ನು ಪಡೆಯದ ಶಾಪಕ್ಕೆ ಒಳಗಾಗಿದ್ದೇವೆ ಎಂದೋ ಇಲ್ಲವೇ ಅಂತಹದೊಂದು ಶಪಥವನ್ನು ನಾವೇ ಮಾಡಿದ್ದೇವೆ ಎಂದರ್ಥ. ಇದಕ್ಕೆ ಬೇರೆ ಸಬೂಬನ್ನು ಹೇಳಲು ಸಾಧ್ಯವಿಲ್ಲ.

ಮೇಟಿ ಮಲ್ಲಿಕಾರ್ಜುನ, ಸಹಾಯಕ ಪ್ರಾಧ್ಯಾಪಕ, ಸಹ್ಯಾದ್ರಿ ವಿಶ್ವವಿದ್ಯಾಲಯ ಕಾಲೇಜು, ಶಿವಮೊಗ್ಗ

ರಕ್ತವರ್ಣದಲ್ಲಿ ನೀಲಿ ಸಮುದ್ರದ ಮರುಹೆಣಿಗೆ

ನಾವು ನೋಡಿದ ಸಿನಿಮಾ

ಸಪ್ತ ಸಾಗರದಾಚೆ ಎಲ್ಲೋ (Side B)

- ರಚನೆ ಮತ್ತು ನಿರ್ದೇಶನ: ಹೇಮಂತ್ ಎಂ. ರಾವ್
- ನಿರ್ಮಾಣ: ಪರಂವಃ ಪಿಕ್ಚರ್ಸ್
- ತಾರಾಗಣ: ರಕ್ಷಿತ್ ಶೆಟ್ಟಿ, ಚೈತ್ರಾ ಜೆ. ಆಚಾರ್, ರುಕ್ಮಿಣಿ ವಸಂತ್, ರಮೇಶ್ ಇಂದಿರಾ, ಗೋಪಾಲಕೃಷ್ಣ ದೇಶಪಾಂಡೆ ಮತ್ತಿತರರು.



ರಕ್ಷಿತ್ ಶೆಟ್ಟಿ

ನಿಶ್ಶಬ್ದ ನದಿಯಂತೆ ಹರಿದು ಪ್ರಕ್ಷುಬ್ಧ ಗಮ್ಯ ಸೇರಿದ್ದ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ಮೊದಲ ಭಾಗದ ಕಥೆಯ ಮುಂದುವರಿದ ಭಾಗವಿದು; ಕ್ಯಾಸೆಟ್‌ನ 'ಸೈಡ್–ಬಿ'ಯಂತೆ ಹೊಸ ತಿರುವು. ಇಲ್ಲಿಯೂ ಮೊದಲ ಅರ್ಧ ನಿಶ್ಶಬ್ದವೇ. ರಕ್ತವರ್ಣದಲ್ಲಿ ಕಳೆದುಹೋದ ನೀಲಿ ಬಣ್ಣವನ್ನು ಮರುಹೆಣಿಯುವ ನಾಯಕನ ತವಕ, ತುಡಿತವೇ ಈ ಭಾಗದ ಜೀವಾಳ. ಈ ದಾರಿಯಲ್ಲಿ ಪ್ರೀತಿಗೆ ಹಲವು ರೂಪ. ಅವನ್ನೆಲ್ಲ ಕಾಣಿಸುವಲ್ಲಿ ಗಟ್ಟಿಯಾಗಿ ವ್ಯಕ್ತಗೊಳ್ಳುವ ನಿರ್ದೇಶಕನ ಸಾವಧಾನ.

ಇಡೀ ಸಿನಿಮಾದ ದೃಶ್ಯಗಳ ಹೆಣಿಗೆಯಲ್ಲಿ ನಿರ್ದೇಶಕ ಹೇಮಂತ್ ಎಂ.ರಾವ್ ಅವರು ಎಲ್ಲಿಯೂ ಅವಸರ ತೋರಿಲ್ಲ. ಏಕಕಾಲದಲ್ಲಿ ಎರಡೂ ಭಾಗಗಳ ಚಿತ್ರೀಕರಣ ನಡೆಸಿರುವುದರಿಂದ ಮೊದಲ ಭಾಗದ ವೇಗದಲ್ಲೇ ಎರಡನೇ ಭಾಗವೂ ಸಾಗುತ್ತದೆ. ಕಥೆ 10 ವರ್ಷ ಮುಂದೆ ಸಾಗಿದ ನಂತರದ ಸಂದರ್ಭವೇ ಎರಡನೇ ಭಾಗದ ಆರಂಭ.

'ಮನು'(ರಕ್ಷಿತ್ ಶೆಟ್ಟಿ) ಸಣ್ಣ ಜೈಲಿನಿಂದ ಹೊರಜಗತ್ತೆಂಬ ದೊಡ್ಡ ಜೈಲು ಸೇರಿದ್ದಾನೆ, ದೈತ್ಯನಾಗಿದ್ದಾನೆ. ಆದರೆ 'ಪ್ರಿಯಾ'ಳ(ರುಕ್ಮಿಣಿ ವಸಂತ್) ಪ್ರೀತಿಯ ಬಂಧನದಿಂದ ಬಿಡುಗಡೆಯಾಗಿಲ್ಲ! ಆಕೆಯ ಧ್ವನಿ ಕೇಳುವ ತುಡಿತ; ನೋಡುವ ಹಂಬಲ. ಬೇರೊಬ್ಬನೊಂದಿಗೆ 'ಪ್ರಿಯಾ' ಮದುವೆಯಾಗಿದ್ದರೂ ಆಕೆಯ ಕನಸಿನ ಗೋಪುರವನ್ನು ನಿರ್ಮಾಣ ಮಾಡುವ ಗುರಿ ಹೊತ್ತ 'ಮನು'ವಿನ ಪಯಣವೇ ಎರಡನೇ ಭಾಗದ ಕಥೆ. ಕೆಂಪು ದೀಪದಡಿ ಸಿಗುವ 'ಸುರಭಿ'ಯಲ್ಲೇ(ಚೈತ್ರಾ ಜೆ.ಆಚಾರ್) 'ಪ್ರಿಯಾ'ಳನ್ನು ಕಾಣುವ 'ಮನು'ವಿನ ಪ್ರೀತಿಯ ರೂಪ ಭಿನ್ನ. ಈ ದಾರಿಯಲ್ಲೇ 'ಮನು'ವಿಗೆ 'ಸೋಮ'(ರಮೇಶ್ ಇಂದಿರಾ) ಮತ್ತೆ ಎದುರಾದಾಗ ಕಥೆಗೊಂದಿಷ್ಟು ವೇಗ, ಅಂತ್ಯ.

ಸಿನಿಮಾದ ಎರಡನೇ ಭಾಗವನ್ನು ವೀಕ್ಷಿಸುವಾಗ ಇಡೀ ಕಥೆಯ ಬರವಣಿಗೆಯನ್ನು ಉಲ್ಲೇಖಿಸಲೇಬೇಕು. ಪ್ರೀತಿಯೆಂಬ ವಿಷಯವನ್ನಿಟ್ಟುಕೊಂಡು ಬಹಳ ಗಾಢವಾಗಿ ಬರೆದ ಕಥೆ ಇದು. ಪ್ರೀತಿಯ ಉತ್ಕಟತೆಯನ್ನು ಇಲ್ಲಿ ಕಾಣಬಹುದು. ಜೈಲಿನಿಂದ ಹೊರಬಂದ ಬಳಿಕ 'ಮನು'ವನ್ನು ಕಾಡುವ 'ಪ್ರಿಯಾ'ಳ ನೆನಪು, ಪ್ರೀತಿಯನ್ನು ಬರೆದ, ತೆರೆಗಿಳಿಸಿದ ರೀತಿ ಅದ್ಭುತ. ಗಾಜಿನ ತುಣುಕುಗಳಲ್ಲೇ ಹಲವು ರೂಪಕಗಳನ್ನು ನಿರ್ದೇಶಕರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ನೀರಿನ ಹನಿ ಹನಿಯಲ್ಲಿ 'ಮನು'ವಿನ ಏಕಾಂತವನ್ನು ಮತ್ತು ವರ್ತಮಾನದ ಪರಿಸ್ಥಿತಿಯನ್ನು ಸಮೀಕರಿಸಿದಂತಹ ಬರವಣಿಗೆ ಉಲ್ಲೇಖಾರ್ಹ. ಬೆಳಕು–ಶಬ್ದದ ವಿನ್ಯಾಸ, ಅದ್ವೈತ ಗುರುಮೂರ್ತಿ ಅವರ ಛಾಯಾಚಿತ್ರಗ್ರಹಣಕ್ಕೆ ಈ ಭಾಗದಲ್ಲಿ ಹೆಚ್ಚು ಅಂಕ ಸಲ್ಲಬೇಕು. ತಾಂತ್ರಿಕವಾಗಿ ಎರಡನೇ ಭಾಗವು ಮೊದಲಿನದಕ್ಕಿಂತ ಮೇಲೇಳುತ್ತದೆ.

ರಕ್ಷಿತ್ ಅವರಿಗೆ ಇಲ್ಲಿ ತೆರೆ ದರ್ಶನದ ಅವಧಿ-(ಸ್ಕ್ರೀನ್‌ಸ್ಪೇಸ್) ಹೆಚ್ಚು. 'ಮನು'ವಿನ ಪಾತ್ರದ ಭಾವನೆ, ಗುಣಗಳು ಬದಲಾಗಿವೆ. ಇವುಗಳನ್ನು ರಕ್ಷಿತ್ ಸಮರ್ಥವಾಗಿ ನಿಭಾಯಿಸಿದ್ದಾರೆ. ಜೊತೆಗೆ 'ಸಿಂಪಲ್' ಸ್ಟಾರ್ ಮಚ್ಚು ಹಿಡಿದಿದ್ದಾರೆ! ರಕ್ಷಿತ್, 'ಚಾರ್ಲಿ'ಯಲ್ಲಿ ತೋರ್ಪಡಿಸಿದ್ದ ತಮ್ಮ ನಟನಾ ಸಾಮರ್ಥ್ಯವನ್ನು ಸಿನಿಮಾದ ಈ ಭಾಗದಲ್ಲಿ ಮತ್ತೊಮ್ಮೆ ತೆರೆದಿಟ್ಟಿದ್ದಾರೆ. ರುಕ್ಮಿಣಿ ಪಾತ್ರಕ್ಕೆ ಈ ಭಾಗದಲ್ಲಿ ಮಾತು ಕಡಿಮೆ, ಭಾವನೆಗಳು ಹೆಚ್ಚು. ಮೌನದಲ್ಲೂ ರುಕ್ಮಿಣಿ ಅಂಕ ಗಿಟ್ಟಿಸುತ್ತಾರೆ. ಸಹಜ ನಟನೆಯಿಂದ ಚೈತ್ರಾ ಗಮನಸೆಳೆಯುತ್ತಾರೆ. ನಟನೆಯಲ್ಲಿ ಸಿನಿಮಾದಿಂದ ಸಿನಿಮಾಗೆ ಅವರು ಪಳಗುತ್ತಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆಗೆ 'ಮನು'ವನ್ನು ನಡೆಸುವ, ಪ್ರೇಕ್ಷಕರನ್ನು ನಗಿಸುವ ಜವಾಬ್ದಾರಿ ಇಲ್ಲಿ ದೊರಕಿದೆ. ಅದನ್ನು ಅವರು ಚೆನ್ನಾಗಿ ನಿಭಾಯಿಸಿದ್ದಾರೆ. ಖಳನಟನಾಗಿ ರಮೇಶ್ ಇಂದಿರಾ ಅವರ ಭಿನ್ನ ಹಾವಭಾವ ಗಮನ ಸೆಳೆಯುತ್ತದೆ.

ಒಟ್ಟಿನಲ್ಲಿ ಇಡೀ ಕಥೆಯಾಗಿ ಭಿನ್ನ ಅನುಭವವೊಂದನ್ನು ಸಿನಿಮಾ ನೀಡಿದೆ.


ಅಭಿಲಾಷ್ ಪಿ.ಎಸ್.

ಪದಬಂಧ 5503

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ವೇದಾದಿಗಳನ್ನು ಅಧ್ಯಯನ ಮಾಡಿದವನು (4)
3. ತಡವಾಗಿ ಗೋಚರಿಸಿದ ಅಬ್ಬಿ (4)
2. ಆತುರ ಹೀಗೆ ಬಂದಿದೆ (3)
5. ತಮ ಆವರಿಸುವಾಗ ನೀಡಿದ ಓಟು (2)
6. ಈ ಪರಿ ಸಿಕ್ಕ ಗುರುತು! (4)
8. ಜಾಗರಣೆ ಮಾಡಿದ ಸ್ಥಳ (2)
9. ನೇಯ್ಗೆಯ ಯಂತ್ರ (2)
10. ತರತರದ ಕಾಯಿಪಲ್ಲೆ (4)
13. ಸುತ್ತ ಕಣ್ಣಾಡಿಸಿದಾಗ ಕಂಡಮಗ (2)
15. ಸುಮಾರು ಮೂರು ಮೈಲುಗಳ ಒಂದು ಅಳತೆ (4)
16. ಗುಡಿಯ ಸಭಾಮಂಟಪ (4)

ಮೇಲಿಂದ ಕೆಳಕ್ಕೆ
1. ಈತ ಹಿರಿಯ ಸಹೋದರ (2)
2. ಆತುರ ಹೀಗೆ ಬಂದಿದೆ (3)
3. ತರಿಯನ್ನು ತರಲು ತೋರಿದ ಅರ್ಜೆಂಟು! (4)
4. ಉಲ್ಟಾ ಆಗಿರುವ ಪ್ರಶ್ನೆ (3)
5. ಮತದೊಳಗಿರುವ ಅಭಿಪ್ರಾಯ (4)
6. ಈ ಪರಿ ತಪ್ಪಿಸಿಕೊಳ್ಳುವಿಕೆ (3)
7. ಈತ ಮೃತ್ಯುದೇವತೆಯ ಅಳು (4)
11. ಕಾಲುನಡಿಗೆಯಿಂದ ಹೋಗಲು ಇರುವ ದಾರಿ (4)
12. ವಾಹನದಲ್ಲಿ ಹೋಗುವಾಗ ಕಾಣಿಸಿದ ನೆರೆ (3)
13. ಒಳ್ಳೆಯ ಅದೃಷ್ಟ (3)
14. ಮಗಳ ಜೊತೆ ಬಂದಿರುವ ಪುತ್ರ(2)



ಹಿಂದಿನ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಏದುಸಿರು 2.ಪಾದರಸ 4.ಕವಾಡಿಗ 6.ಸಂತೋಷ 7.ಐಬಾ 9.ರಮ್ಮಾಕ 11.ವರ 13.ಸಂಬಳ 14.ನಳಪಾಕ 16.ಮಕರಂದ17.ನವಿರೆಳೆ

ಮೇಲಿಂದ ಕೆಳಕ್ಕೆ
1.ಏಕೀಕರಣ 2.ಪಾಪಿ 3.ರಜತೋತ್ಸವ 5.ಗಟಾರ 8.ಬಾಲಬಡಿಕ 10.ಕವನ 12.ರಣಕಹಳೆ 15.ಮುದ

ಸುಡೊಕು 5889

9		1		5		8	4	
			3		9			1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

5888 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪಂಚಮಿ ಗಂ. 09-19 ನಕ್ಷತ್ರ: ಉತ್ತರಾಷಾಢ ಗಂ. 24-07 ಯೋಗ: ಗಂಡ ಗಂ 26-17 ಕರಣ: ಬಾಲವ ಗಂ. 09-19, ವೃಶ್ಚಿಕ ಮಾಸದ 02 ನೇ ದಿನ, ಮಳೆನಕ್ಷತ್ರ: ವಿಶಾಖ 4. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-35 ಸೂರ್ಯಾಸ್ತ : 05-57 ಮುಸ್ಲಿಂ ದಿನಾಂಕ : 03 ಜುಮಾದುಲ್ಲಾವಲ್
ದಿನ ವಿಶೇಷ : ಜ್ಞಾನ ಪಂಚಮಿ (ಜೈನ್) ಅದೃಷ್ಟ ಸಂಖ್ಯೆ: 1, 6

ಮೇಷ: ಹಿತಶತ್ರುಗಳ ದ್ವೇಷಾಸೂಯೆಯಿಂದ ಬರುತ್ತಿದ್ದ ಮನಃಕ್ಲೇಶವು ಸಾಮರಸ್ಯದಿಂದ ದೂರಾಗುತ್ತದೆ. ಕೌಟುಂಬಿಕ ವ್ಯವಹಾರದಲ್ಲಿ ವಿರೋಧ ವ್ಯಕ್ತವಾಗುತ್ತದೆ.

ವೃಷಭ: ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ತಂದೆಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳಾಗಬಹುದು. ಕಳೆದುಕೊಂಡ ವಸ್ತು ಪುನಃ ನಿಮ್ಮ ಕೈಸೇರಲಿದೆ.

ಮಿಥುನ: ಅರೆ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲಗಲಾಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ. ಸತ್ಫಲಗಳಿಗೆ ಲಕ್ಷ್ಮಿನರಸಿಂಹನ ಸ್ವಾಮಿಯನ್ನು ಧ್ಯಾನಿಸುವುದು ಅನುಕೂಲಕರ.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳ ಜೊತೆಯಲ್ಲಿನ ಓಡಾಟ ನಿಮಗೆ ಹೆಚ್ಚಿನ ಸ್ಥಾನಮಾನದ ಜೊತೆಗೆ ಸಮವಾದ ಆಯಾಸವನ್ನು ತಂದು ಕೊಡಲಿದೆ. ಸೇವಕ ವರ್ಗದವರಿಂದ ಹೊಸ ಪಾಠ ಕಲಿಯುವ ಕಾಲ ಬರಲಿದೆ.

ಸಿಂಹ: ನಿಮ್ಮ ಕೆಲಸದ ಸಂಪೂರ್ಣತೆಗಾಗಿ ನೀವು ಇಂದು ಕೆಲಸಗಾರರಲ್ಲಿ ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

ಕನ್ಯಾ: ಸರ್ಕಾರಿ ಉದ್ಯೋಗದಲ್ಲಿರುವವರಿಗೆ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ಫಲಕೊಡಲಿದೆ. ಹಿಂದಿರುಗಿ ಬರಬೇಕಾಗಿರುವ ಹಣ ಸಂಜೆ ವೇಳೆಗೆ ಕೈ ಸೇರುವುದು. ಸಹೋದ್ಯೋಗಿಗಳ ಸಹಕಾರ ಉತ್ತಮವಾಗಿರಲಿದೆ.

ತುಲಾ: ಪ್ರಭಾವಿ ವ್ಯಕ್ತಿಗಳ ನಿಕಟ ಸಂಪರ್ಕದಿಂದ ನಿಮಗೆ ಅನುಕೂಲವಾಗಲಿದೆ. ಹಿರಿಯರು ಮಾಡಿದ ಪುಣ್ಯದ ಫಲ ನಿಮ್ಮ ಅನುಭವಕ್ಕೆ ಬರಲಿದೆ. ಅನಾರೋಗ್ಯ ಸ್ಥಿತಿಯು ಎದುರಾಗಿ ಆರ್ಥಿಕವಾಗಿ ಧನ ವ್ಯಯವಾಗಲಿದೆ.

ವೃಶ್ಚಿಕ: ಹತ್ತಾರು ವಿಷಯದಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟವಾದ ಒಂದು ಗುರಿಯ ಕಡೆಗೆ ತಲುಪುವ ಪ್ರಯತ್ನ ಮಾಡಿ. ಆತ್ಮೀಯರ ಅನಿರೀಕ್ಷಿತ ಆಘಾತದಿಂದ ದುಃಖದ ವಾತಾವರಣವಿರುವುದು.

ಧನು: ಅನಿವಾರ್ಯದ ಸಮಯಕ್ಕೆ ಅಕ್ಕಪಕ್ಕದವರ ಸಹಾಯ ಸಿಗಲಿದೆ. ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ದೈವಾನುಗ್ರಹದಿಂದ ನಿಮ್ಮ ಪ್ರಯತ್ನಬಲಕ್ಕೆ ಪುಷ್ಟಿ ಸಿಗಲಿದೆ.

ಮಕರ: ನಿಮ್ಮ ಕಲಾತ್ಮಕ ಮತ್ತು ಸೃಜನಶೀಲ ವ್ಯಕ್ತಿತ್ವ ಮುಂದಿನ ದಿನಗಳಲ್ಲಿ ಇನ್ನಷ್ಟು ವರ್ಧಿಸಲಿದೆ. ಟ್ರಾವೆಲ್ಸ್ ಉದ್ಯೋಗದವರಿಗೆ ಇಂದು ಬಹಳಷ್ಟು ಲಾಭದಾಯಕವಾಗಲಿದ್ದದು, ಆರ್ಥಿಕ ಮುಗಟ್ಟು ನಿವಾರಣೆಯಾಗುವುದು.

ಕುಂಭ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆ ಹರಿಯುವುದು ಹಾಗೂ ಅದರಿಂದ ನೆಮ್ಮದಿ ಸಿಗಲಿದೆ. ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿದ್ದರೂ ಮಾನಸಿಕ ಕಿರಿಕಿರಿ ತಪ್ಪದು. ವಾಹನ ಖರೀದಿಸುವ ಅವಶ್ಯಕತೆ ಹೆಚ್ಚಾಗಲಿದೆ.

ಮೀನ: ಜೀವನದಲ್ಲಿ ಎದುರಾದ ಗೊಂದಲದಿಂದ ಹೊರಬರಲು ಸತ್ಯದ ಮಾರ್ಗ ಅನುಕೂಲವಾಗಲಿದೆ. ನಿಮ್ಮ ಸುತ್ತಲೂ ವಾತಾವರಣ ಸಂತಸದಾಯಕವಾಗಿರಲಿದೆ. ಅಧಿಕಾರ ಪ್ರಾಪ್ತಿಯಲ್ಲಿ ಅಡೆತಡೆಯ ಸಂಭವವಿದೆ.

ವಿಧಾನಸಭೆ ಚುನಾವಣೆ: ಮಧ್ಯಪ್ರದೇಶದ ಸೋನೆವಾನಿ ಮತಗಟ್ಟೆಯಲ್ಲಿ ಶೇ 100ರಷ್ಟು ಮತದಾನ

ಕಾಂಗ್ರೆಸ್, ಬಿಜೆಪಿಗೆ ಗೆಲುವಿನ ವಿಶ್ವಾಸ

ಭೋಪಾಲ್/ ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆಗೆ 2ನೇ ಹಂತ ಮತ್ತು ಮಧ್ಯಪ್ರದೇಶ ವಿಧಾನಸಭೆಗೆ ಒಂದೇ ಹಂತದಲ್ಲಿ ಶುಕ್ರವಾರ ಮತದಾನ ನಡೆಯಿತು. ಮಧ್ಯಪ್ರದೇಶದಲ್ಲಿ ಆಡಳಿತಾರೂಢ ಬಿಜೆಪಿ ಅಧಿಕಾರ ಉಳಿಸಿಕೊಳ್ಳುವ ಉಮೇದಿನಲ್ಲಿದ್ದರೆ, ಛತ್ತೀಸಗಢದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ವಿಶ್ವಾಸ ಹೊಂದಿದೆ.

ಈ ಎರಡೂ ಪಕ್ಷಗಳ ಗೆಲುವಿನ ಓಟಕ್ಕೆ ಎಸ್‌ಪಿ, ಬಿಎಸ್‌ಪಿ, ಹಮರ್ ರಾಜ್ ಪಾರ್ಟಿ, ಜೆಡಿಯು, ಎಎಪಿ ಮತ್ತು ಗೊಂಡವಾನ ಗಣತಂತ್ರ ಪಾರ್ಟಿ-ಯಂತಹ(ಜಿಜಿಪಿ) ಸಣ್ಣ ಪಕ್ಷಗಳು ತಡೆಯೊಡ್ಡುವ ಸಾಧ್ಯತೆಯೂ ಇದೆ.

ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ (ಬಿಜೆಪಿ) ಮತ್ತು ಮಾಜಿ ಮುಖ್ಯಮಂತ್ರಿ ಕಮಲ್ ನಾಥ್ (ಕಾಂಗ್ರೆಸ್) ಮುಂಚೂಣಿಯಲ್ಲಿದ್ದರೆ, ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ 2018ರ ಫಲಿತಾಂಶ ಪುನರಾವರ್ತನೆಯನ್ನು ಎದುರು ನೋಡುತ್ತಿದ್ದಾರೆ. ಬಿಜೆಪಿ ಪ್ರಚಾರವನ್ನು ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಮುನ್ನಡೆಸಿದ್ದಾರೆ.

ಘರ್ಷಣೆ ನಿಯಂತ್ರಣಕ್ಕೆ: ಎರಡೂ ರಾಜ್ಯಗಳಲ್ಲಿ ಚುನಾವಣೆ ವೇಳೆ ಭಾರಿ ಪ್ರಮಾಣದಲ್ಲಿ ಹಿಂಸಾಚಾರ ನಡೆದ ವರದಿ ಆಗದಿದ್ದರೂ ಅಲ್ಲಲ್ಲಿ ನಡೆದ ಘರ್ಷಣೆಗಳನ್ನು ಸಕಾಲದಲ್ಲಿ ನಿಯಂತ್ರಣಕ್ಕೆ ತರಲಾಯಿತು.


ಛತ್ತೀಸಗಢ ವಿಧಾನಸಭಾ ಚುನಾವಣೆಯ 2ನೇ ಹಂತದ ಮತದಾನ ವೇಳೆ ಧಮ್ತಾರಿ ಜಿಲ್ಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಮತದಾರರು. ಪಿಟಿಐ ಚಿತ್ರ

ಮಧ್ಯಪ್ರದೇಶದ ಸೋನೆವಾನಿ ಮತಗಟ್ಟೆಯಲ್ಲಿ ಶೇಕಡಾ ನೂರರಷ್ಟು ಮತದಾನವಾಗಿದೆ. ಇಲ್ಲಿ 26 ಮಹಿಳೆಯರು ಮತ್ತು 16 ಪುರುಷರು ಸೇರಿ ಒಟ್ಟು 42 ಮತದಾರರು ಮತ ಚಲಾಯಿಸಿದ್ದಾರೆ ಎಂದು ಚುನಾವಣಾ ಆಯೋಗ ಹೇಳಿದೆ.

ಮತದಾರರು ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಲು ಅನುಕೂಲವಾಗುಂತೆ ಛತ್ತೀಸಗಢದ ಭರತ್‌ಪುರ-ಸೋನ್‌ಹತ್‌ನಲ್ಲಿ11 ಮತಗಟ್ಟೆಗಳನ್ನು ನಿರ್ಮಿಸಲಾಗಿತ್ತು. ಇಲ್ಲಿ 100ಕ್ಕಿಂತ ಸ್ವಲ್ಪ ಹೆಚ್ಚು ಮತದಾರರು ಇದ್ದರು. ಶೆರದಂಡ್‌ನ ಮತಗಟ್ಟೆಯಲ್ಲಿ ಕೇವಲ ಐವರು ಮತದಾರರಿದ್ದರು. ಈ ಮತಗಟ್ಟೆಗಳು ವಸತಿ ಪ್ರದೇಶದಿಂದ ದೂರದಲ್ಲಿದ್ದವು ಎಂದು ಆಯೋಗ ಹೇಳಿದೆ.

ಎರಡೂ ರಾಜ್ಯಗಳಲ್ಲಿ ಬುಡಕಟ್ಟು ಸಮುದಾಯದವರು ಮತದಾನ ಮಾಡಲು ಅನುಕೂಲವಾಗುವಂತೆ ಎಲ್ಲಾ ಪ್ರಯತ್ನ ಮಾಡಲಾಗಿತ್ತು. ಈ ಸಮುದಾಯದಲ್ಲಿ 7.52 ಲಕ್ಷಕ್ಕೂ ಹೆಚ್ಚು ಮತದಾರರು ಇದ್ದಾರೆ. ಛತ್ತೀಸಗಢ ಮತ್ತು ಮಧ್ಯಪ್ರದೇಶದಲ್ಲಿನ ಒಟ್ಟು 7.23 ಕೋಟಿ ಮತದಾರರು ಮುಕ್ತವಾಗಿ ಮತ್ತು ನ್ಯಾಯಸಮ್ಮತವಾಗಿ ಮತ ಚಲಾಯಿಸಲು ಕ್ರಮ ಕೈಗೊಳ್ಳಲಾಗಿತ್ತು ಎಂದು ಆಯೋಗ ಹೇಳಿದೆ. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಲಿದೆ.

ಸ್ಮಾರ್ಟ್ ಮತಗಟ್ಟೆಯಲ್ಲಿ ಸೆಲ್ಫಿಗೆ ಎ.ಐ. ಕ್ಯಾಮೆರಾ

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಇಂದೋರ್‌ನಲ್ಲಿ ಮತದಾರರು ಸರದಿ ಸಾಲಿನಲ್ಲಿ ನಿಲ್ಲದೆ ಮತಚಲಾಯಿಸುವ ಮತ್ತು ಕೃತಕ ಬುದ್ಧಿಮತ್ತೆ ಕ್ಯಾಮೆರಾ ಸಹಾಯದಿಂದ 'ಶಾಯಿ ಹಾಕಿದ ಬೆರಳು' ಸೆಲ್ಫಿ ತೆಗೆದುಕೊಳ್ಳುವಂತಹ ಸ್ಮಾರ್ಟ್ ಮತಗಟ್ಟೆ ಸ್ಥಾಪಿಸಲಾಗಿತ್ತು.

ವಿಧಾನಸಭಾ ಕ್ಷೇತ್ರ ಸಂಖ್ಯೆ 2ರ ನಂದಾ ನಗರದ ಮಾ ಕನಕೇಶ್ವರಿ ದೇವಿ ಸರ್ಕಾರಿ ಕಾಲೇಜಿನಲ್ಲಿ ಮತಗಟ್ಟೆ ಸ್ಥಾಪಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

'ಸ್ಮಾರ್ಟ್ ಕೇಂದ್ರದಲ್ಲಿ ಆನ್‌ಲೈನ್ ಟೋಕನ್ ವ್ಯವಸ್ಥೆ ಪರಿಚಯಿಸಲಾಗಿದೆ. ಹಕ್ಕು ಚಲಾಯಿಸಲು ಆಗಮಿಸುವವರಿಗೆ ಟೋಕನ್ ಸಂಖ್ಯೆಗಳನ್ನು ನೀಡಲಾಗುವುದು ಮತ್ತು ಅವರು ತಮ್ಮ ಸರದಿ ಬರುವವರೆಗೆ ಮತಗಟ್ಟೆಯಲ್ಲಿ ಆರಾಮವಾಗಿ ಕುಳಿತುಕೊಳ್ಳಬಹುದು' ಎಂದು ಸರ್ಕಾರಿ ಸ್ವಾಮ್ಯದ ಇಂದೋರ್ ಸ್ಮಾರ್ಟ್ ಸಿಟಿ ಡೆವಲಪ್‌ಮೆಂಟ್ ಲಿಮಿಟೆಡ್‌ನ ಸಹಾಯಕ ಯೋಜಕ ರೂಪಲ್ ಚೋಪ್ರಾ ತಿಳಿಸಿದ್ದಾರೆ.

ಮತಗಟ್ಟೆಯಲ್ಲಿ ಡಿಜಿಟಲ್ ಸೆಲ್ಫಿ ಪಾಯಿಂಟ್ ಸಹ ಅಭಿವೃದ್ಧಿಪಡಿಸಲಾಗಿದೆ. ಅಲ್ಲಿ ಎಐ ಸುಸಜ್ಜಿತ ಕ್ಯಾಮೆರಾ ಅಳವಡಿಸಲಾಗಿದೆ. ಮತ ಹಾಕಿದ ನಂತರ ಈ ಸ್ಥಳದಲ್ಲಿ ನಿಂತು ಅಳಿಸಲಾಗದ ಶಾಯಿ ಹೊಂದಿರುವ ಬೆರಳನ್ನು ಕ್ಯಾಮೆರಾಗೆ ತೋರಿಸಿದರೆ, ತಕ್ಷಣ ಸೆಲ್ಫಿ ಕ್ಲಿಕ್ ಮಾಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.

ಸೆಲ್ಫಿ ಪಾಯಿಂಟ್‌ನಲ್ಲಿ ಪರದೆಯ ಮೇಲೆ ಬಾರ್ ಕೋಡ್ ಕಾಣಿಸಿಕೊಳ್ಳುತ್ತದೆ ಮತ್ತು ಅದನ್ನು ಸ್ಕ್ಯಾನ್ ಮಾಡುವುದರಿಂದ ಫೋಟೋವನ್ನು ಮತದಾರರ ಮೊಬೈಲ್ ಫೋನ್‌ಗೆ ರವಾನಿಸಲಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಅಧಿಕಾರಿ ವಿವರಿಸಿದರು.

ಗೃಹ ಸಚಿವ ವಿರುದ್ಧ ಕ್ರಮಕ್ಕೆ ಆಗ್ರಹ: ರಾಜ್ಯದಲ್ಲಿ ಬಿಜೆಪಿ ಹೊರತುಪಡಿಸಿ ಯಾವುದೇ ಪಕ್ಷ ಚುನಾವಣೆಯಲ್ಲಿ ಗೆದ್ದರೆ ಪಾಕಿಸ್ತಾನದಲ್ಲಿ ಸಂಭ್ರಮಾಚರಣೆ ನಡೆಯಲಿದೆ ಎಂದು ಹೇಳಿಕೆ ನೀಡಿರುವ ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ್ ಮಿಶ್ರಾ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಹಿರಿಯ ಮುಖಂಡ ದಿಗ್ವಿಜಯ್ ಸಿಂಗ್ ಶುಕ್ರವಾರ ಒತ್ತಾಯಿಸಿದ್ದಾರೆ.

ರಾಷ್ಟ್ರದ ಸೇವೆ ಮಾಡಲು ಬಯಸುವವರು ಬಿಜೆಪಿಗೆ ಮತ ಚಲಾಯಿಸಬೇಕು ಎಂದು ಮಿಶ್ರಾ ಹೇಳಿದ್ದಾರೆ. ಇದು ಪ್ರಚೋದನಕಾರಿ ಹೇಳಿಕೆ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಚುನಾವಣಾ ಆಯೋಗ ತಕ್ಷಣವೇ ಅವರಿಗೆ ನೋಟಿಸ್ ನೀಡಬೇಕು ಎಂದು ಸಿಂಗ್ ಆಗ್ರಹಿಸಿದ್ದಾರೆ.

ಇಂತಹ ಹೇಳಿಕೆಗಳನ್ನು ನೀಡುವುದು ಮಿಶ್ರಾ ಅವರಿಗೆ ಅಭ್ಯಾಸವಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಅವರ ವಿರುದ್ಧದ ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದೆ. ಸಚಿವರು ವರ್ತಿಸುವ ರೀತಿಯನ್ನು ಪರಿಗಣಿಸಿದರೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕಿಲ್ಲ ಎಂದು ಹೇಳಿದರು. ದತಿಯಾದಲ್ಲಿ ಬೆಳಿಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಮಿಶ್ರಾ, ಬಿಜೆಪಿ ಹೊರತುಪಡಿಸಿ ಇತರೆ ಯಾವುದೇ ಪಕ್ಷ ಗೆದ್ದರೆ ಪಾಕಿಸ್ತಾನದಲ್ಲಿ ಸಂಭ್ರಮಾಚರಣೆ ನಡೆಯಲಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಕಮಲ ಚಿಹ್ನೆಯ ಬಟನ್ ಒತ್ತಬೇಕು. ಇದು ಗಡಿಯಲ್ಲಿ ಸೇನಾ ಬಲ ಹೆಚ್ಚಲಿಸಲಿದೆ ಎಂದರು. ಮಿಶ್ರಾ ಅವರು ದತಿಯಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಮದ್ಯ ಮಾರಾಟದಲ್ಲಿ ಏರಿಕೆ: ಮಧ್ಯಪ್ರದೇಶದಲ್ಲಿ ಮದ್ಯ ಮಾರಾಟವು ಸೋಮವಾರ ಮತ್ತು ಬುಧವಾರ ಸಂಜೆಯ ನಡುವೆ ಸುಮಾರು 15 ಪ್ರತಿಶತದಷ್ಟು ಏರಿಕೆಯಾಗಿದೆ ಎಂದು ಅಬಕಾರಿ ಅಧಿಕಾರಿ ತಿಳಿಸಿದ್ದಾರೆ.

ಚುನಾವಣಾ ಕಣದಲ್ಲಿ

- **ಕಾಂಗ್ರೆಸ್‌ಗೆ ಮರಳಿದ ವಿಜಯಶಾಂತಿ:** ತೆಲಂಗಾಣ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ, ಬಿಜೆಪಿಗೆ ರಾಜೀನಾಮೆ ನೀಡಿದ ಮಾಜಿ ಸಂಸದೆ, ನಟಿ ವಿಜಯಶಾಂತಿ ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಮರಳಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.
- **ಇಂದು ಪ್ರಣಾಳಿಕೆ ಬಿಡುಗಡೆ:** ತೆಲಂಗಾಣ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ 18ರಂದು ಬಿಡುಗಡೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.
- **ಹಣ ಹಂಚಿಕೆ ಆರೋಪ:** ವಿಧಾನಸಭಾ ಚುನಾವಣೆಯ ಮುನ್ನಾದಿನ ಆಡಳಿತಾರೂಢ ಬಿಜೆಪಿ ಮತದಾರರಿಗೆ ಹಣ ಮತ್ತು ಮದ್ಯ ವಿತರಿಸಿದೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಶುಕ್ರವಾರ ಆರೋಪಿಸಿದ್ದಾರೆ.
  ಗುರುವಾರ ಇಡೀ ದಿನ ಹಣ ಮತ್ತು ಮದ್ಯ ವಿತರಿಸಿದ್ದಾರೆ. ಹಲವಾರು ವಿಡಿಯೊಗಳು ಬಂದಿವೆ. ಇಂದೋರ್ -1 ವಿಧಾನಸಭಾ ಕ್ಷೇತ್ರದಲ್ಲಿರುವ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಗಲಾಟೆ ಮಾಡಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

201 ಮತಗಟ್ಟೆ ನಿರ್ವಹಿಸಿದ ಮಹಿಳಾ ಸಿಬ್ಬಂದಿ

ರಾಯಪುರ (ಪಿಟಿಐ): ಛತ್ತೀಸಗಢದ ರಾಜಧಾನಿ ರಾಯಪುರದ ವಿಧಾನಸಭಾ ಕ್ಷೇತ್ರದ ಎಲ್ಲಾ 201 ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆಯನ್ನು ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದ್ದಾರೆ. ದೇಶದ ಚುನಾವಣೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಂತಹ ವ್ಯವಸ್ಥೆ ಮಾಡಲಾಗಿತ್ತು ಎಂದು ಚುನಾವಣಾ ಆಯೋಗ ಹೇಳಿದೆ.

'ರಾಯಪುರ ನಗರ ಉತ್ತರ ಕ್ಷೇತ್ರದಲ್ಲಿ 201 ಮತಗಟ್ಟೆಗಳಿವೆ. ಚುನಾವಣಾ ಅಧಿಕಾರಿಯಿಂದ ಮತಗಟ್ಟೆ ಅಧಿಕಾರಿಯವರೆಗೆ ಎಲ್ಲರೂ ಮಹಿಳೆಯರೇ. ಇಲ್ಲಿ 1046 ಮಹಿಳೆಯರನ್ನು ನೇಮಿಸಲಾಗಿತ್ತು' ಎಂದು ಚುನಾವಣಾ ಆಯೋಗ ಹೇಳಿದೆ. ಇಲ್ಲಿನ ವೀಕ್ಷಕಿ ಐಎಎಸ್ ಅಧಿಕಾರಿ ಆರ್. ವಿಮಲಾ ಮತ್ತು ಅವರ ಸಂಪರ್ಕ ಅಧಿಕಾರಿ ಸಹ ಮಹಿಳೆಯಾಗಿದ್ದರು. ಹೆಚ್ಚಿನ ಬೂತ್‌ಗಳಲ್ಲಿ ಭದ್ರತೆಯನ್ನೂ ಮಹಿಳಾ ಸಿಬ್ಬಂದಿ ನಿರ್ವಹಿಸಿದ್ದಾರೆ.

ವಿಶೇಷವೆಂದರೆ, ಛತ್ತೀಸಗಢದ ಮುಖ್ಯ ಚುನಾವಣಾ ಅಧಿಕಾರಿ ಸಹ ಮಹಿಳಾ ಐಎಎಸ್ ಅಧಿಕಾರಿ ರೀನಾ ಬಾಬಾ ಸಾಹೇಬ್ ಕಂಗಾಲೆ ಎಂದು ಪ್ರಕಟಣೆ ತಿಳಿಸಿದೆ.

'150ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲುವು'

ಇಂದೋರ್ (ಪಿಟಿಐ): ಮಧ್ಯಪ್ರದೇಶದಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲುವ ಮೂಲಕ ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಇಂದೋರ್ -1 ಕ್ಷೇತ್ರದ ಅಭ್ಯರ್ಥಿ ಕೈಲಾಶ್ ವಿಜಯವರ್ಗಿಯಾ ಹೇಳಿದ್ದಾರೆ.

ನುಡಿ-ಕಿಡಿ


ರಾಜಸ್ಥಾನದಲ್ಲಿ ಬಿಜೆಪಿಗೆ ಮುಖ್ಯಮಂತ್ರಿ ಅಭ್ಯರ್ಥಿ ಇಲ್ಲ. ಮೋದಿ ಅವರು ತಮ್ಮ ಹೆಸರಿನಲ್ಲಿ ಮತ ಕೇಳುತ್ತಾರೆ. ಆದರೆ ರಾಜ್ಯವನ್ನು ಮುನ್ನಡೆಸುವವರು ಯಾರು? ರಾಜ್ಯದಲ್ಲಿ ಆಡಳಿತ ನಡೆಸಲು ಅವರೇನು ದೆಹಲಿಯಿಂದ ಇಲ್ಲಿಗೆ ಬರುವುದಿಲ್ಲ, ಅದಕ್ಕೆ ಸ್ಥಳೀಯ ನಾಯಕನ ಅಗತ್ಯವಿದೆ.
ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ


ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿ ನಾನು ಇಲ್ಲ. ಈ ಸ್ಪರ್ಧೆಯಲ್ಲಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ನೀವು 2013, 2018ರಲ್ಲಿ ಮತ್ತು ಈಗ ಅದೇ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳಿದ್ದೀರಿ, ನಾನು ಅದೇ ಉತ್ತರವನ್ನು ನೀಡಿದ್ದೇನೆ.
ಜ್ಯೋತಿರಾದಿತ್ಯ ಸಿಂಧಿಯಾ, ಕೇಂದ್ರ ನಾಗರಿಕ ವಿಮಾನಯಾನ ಸಚಿವ


ಕಾರ್ಡ್ ಸ್ವೈಪ್ ಮಾಡಿ ಹಣ ಪಡೆಯಲು ಗೆಹಲೋತ್ ಸರ್ಕಾರ ಎಟಿಎಂ ಹೊಂದಿದೆ. ಇಲ್ಲಿ ಪಕ್ಷದ ದೆಹಲಿಯ ನಾಯಕರು ಹಣ ಪಡೆಯಲು ಕಾರ್ಡ್ ಸ್ವೈಪ್ ಮಾಡುತ್ತಿದ್ದಾರೆ. ಇಂತಹ ಸರ್ಕಾರವನ್ನು ಹೊಡೆದೋಡಿಸಬೇಕು.
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಟಿಎಸ್‌ಟಿಡಿಸಿ ಎಂಡಿ ಅಮಾನತು

ಹೈದರಾಬಾದ್ (ಪಿಟಿಐ): ತಿರುಪತಿಗೆ ಭೇಟಿ ನೀಡಿದ ವೇಳೆ ಸಚಿವ ಶ್ರೀನಿವಾಸ್ ಗೌಡ್ ಅವರೊಂದಿಗೆ ಇದ್ದ ಆರೋಪದ ಮೇಲೆ ತೆಲಂಗಾಣ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಉನ್ನತ ಅಧಿಕಾರಿಯನ್ನು ಅಮಾನತುಗೊಳಿಸಲು ಮತ್ತು ಮತ್ತೊಬ್ಬ ಅಧಿಕಾರಿಯನ್ನು ಹುದ್ದೆಯಿಂದ ವಜಾಗೊಳಿಸುವಂತೆ ಚುನಾವಣಾ ಆಯೋಗ ಶುಕ್ರವಾರ ಆದೇಶಿಸಿದೆ.

ಅಕ್ಟೋಬರ್ 15 ಮತ್ತು 16 ರಂದು ತಿರುಪತಿಯಲ್ಲಿ ಸಚಿವರೊಂದಿಗೆ ಇಬ್ಬರು ಅಧಿಕಾರಿಗಳು ಕಾಣಿಸಿಕೊಂಡಿರುವುದು ಕಂಡು ಬಂದ ಬಳಿಕ ಆಯೋಗವು ಟಿಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಬೋಯ್ನಪಲ್ಲಿ ಮನೋಹರ್ ರಾವ್ ಅವರನ್ನು ಅಮಾನತುಗೊಳಿಸಿದೆ ಮತ್ತು ಅವರ ವಿಶೇಷ ಕರ್ತವ್ಯ ಅಧಿಕಾರಿ ವೈ. ಸತ್ಯನಾರಾಯಣ ಅವರನ್ನು ವಜಾಗೊಳಿಸಿದೆ.

ನಿವೃತ್ತ ಡೆಪ್ಯುಟಿ ಕಲೆಕ್ಟರ್ ಸತ್ಯನಾರಾಯಣ ಅವರನ್ನು ರಾಜ್ಯ ಸರ್ಕಾರ ಮರು ನೇಮಕ ಮಾಡಿಕೊಂಡಿತ್ತು. ಮಹಬೂಬ್‌ನಗರ ವಿಧಾನಸಭಾ ಕ್ಷೇತ್ರದಿಂದ ಶ್ರೀನಿವಾಸ್ ಗೌಡ್ ಸ್ಪರ್ಧಿಸುತ್ತಿದ್ದಾರೆ.

'ತೆಲಂಗಾಣ: ಒಬಿಸಿ ಕೋಟಾ ಶೇ 23ರಿಂದ 42ಕ್ಕೆ ಹೆಚ್ಚಳ'

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಕಾಂಗ್ರೆಸ್, ಬೆಂಬಲದ ಬಿರುಗಾಳಿಯನ್ನೇ ಕಾಣಲಿದೆ. ಆಡಳಿತಾರೂಢ ಬಿಆರ್‌ಎಸ್ ಅಧಿಕಾರ ಕಳೆದುಕೊಳ್ಳಲಿದೆ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದರು.

ಖಮ್ಮಂ ಜಿಲ್ಲೆಯ ಪಿನಪಾಕದಲ್ಲಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಯನ್ನು ಶೇ 23ರಿಂದ ಶೇ 42ಕ್ಕೆ ಏರಿಸಲಾಗುವುದು. ಇದು ಪಂಚಾಯತಿ ಮಟ್ಟದಲ್ಲಿ 24,000 ಹೊಸ ನಾಯಕರ ಉದಯಕ್ಕೆ ದಾರಿ ಮಾಡಿಕೊಡಲಿದೆ ಎಂದರು.

ರಾಜ್ಯದಲ್ಲಿ ಎಲ್ಲೆಡೆ ಬಿಆರ್‌ಎಸ್‌ನ ಭ್ರಷ್ಟಾಚಾರ ವ್ಯಾಪಿಸಿದೆ. ರಾಜ್ಯದಲ್ಲಿ ಜನರ ಸರ್ಕಾರ ರಚಿಸುವುದು ಕಾಂಗ್ರೆಸ್‌ನ ಮೊದಲ ಗುರಿ. ನಂತರ ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರವನ್ನು ಕಿತ್ತೊಗೆಯಲಾಗುವುದು ಎಂದರು.

'ತೆಲಂಗಾಣದಲ್ಲಿ ಕಾಂಗ್ರೆಸ್ ಬಿರುಗಾಳಿ ಬೀಸಲಿದೆ ಎಂಬುದು ಕೆ. ಚಂದ್ರಶೇಖರರಾವ್ (ಕೆಸಿಆರ್) ಅವರಿಗೆ ಗೊತ್ತಾಗಿದೆ. ರಾಜ್ಯದಲ್ಲಿ ಕೆಸಿಆರ್ ಮತ್ತು ಅವರ ಪಕ್ಷ ಮತ್ತೆ ನೋಡಲು ಸಿಗದಂತೆ ಮಾಡುವ ಬಿರುಗಾಳಿ ಬೀಸಲಿದೆ' ಎಂದು ಹೇಳಿದರು.

'ಕಾಂಗ್ರೆಸ್ ಏನು ಮಾಡಿದೆ ಎಂದು ಮುಖ್ಯಮಂತ್ರಿ ಕೆಸಿಆರ್ ಕೇಳಿದ್ದಾರೆ. ಮುಖ್ಯಮಂತ್ರಿ ಸಾಬ್, ನೀವು ಓದಿದ ಶಾಲೆ, ಕಾಲೇಜು ಕಾಂಗ್ರೆಸ್‌ನಿಂದ ನಿರ್ಮಾಣವಾದದ್ದು. ನೀವು ಪಯಣಿಸುವ ರಸ್ತೆಯನ್ನು ಮಾಡಿದ್ದು ಕಾಂಗ್ರೆಸ್' ಎಂದರು.


ವಾರಂಗಲ್‌ನ ನರ್ಸಂಪೇಟ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ರಾಹುಲ್

ನರ್ಸಂಪೇಟ್‌ನಲ್ಲಿ ಮತ್ತೊಂದು ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್, ಬಿಆರ್‌ಎಸ್ ಸರ್ಕಾರ ರೈತರಿಂದ ಭೂಮಿಯನ್ನು ಕಸಿದುಕೊಂಡಿದೆ ಎಂದು ಆಪಾದಿಸಿದರು. ಅವಿಭಜಿತ ಆಂಧ್ರಪ್ರದೇಶದಲ್ಲಿ ರೈತರಿಗೆ ಕಾಂಗ್ರೆಸ್ ಉಚಿತ ವಿದ್ಯುತ್ ಪೂರೈಸಿತ್ತು. ಈ ಬಾರಿ ಚುನಾವಣೆಯಲ್ಲಿ ಗೆದ್ದರೆ ಉಚಿತ ವಿದ್ಯುತ್ ಪೂರೈಕೆಯನ್ನು ಮುಂದುವರಿಸುವುದಾಗಿ ಹೇಳಿದರು.

ತೆಲಂಗಾಣಕ್ಕೆ 6 ಗ್ಯಾರಂಟಿ

ಹೈದರಾಬಾದ್ (ಪಿಟಿಐ): ಆರು ಗ್ಯಾರಂಟಿಗಳು ಹಾಗೂ ಹಲವು ಘೋಷಣೆಗಳು ಇರುವ ತೆಲಂಗಾಣ ವಿಧಾನಸಭಾ ಚುನಾವಣಾ ಪ್ರಣಾಳಿಕೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಬಿಡುಗಡೆ ಮಾಡಿದರು.


ಮಲ್ಲಿಕಾರ್ಜುನ ಖರ್ಗೆ

ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಗೆ 'ಅಭಯ ಹಸ್ತಂ' ಎಂಬ ಹೆಸರು ನೀಡಿದೆ. ಏನೇ ಬಂದರೂ ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕು ಎಂಬ ಭಾವನೆ ಮತದಾರರಲ್ಲಿ ಇದೆ ಎಂದು ಖರ್ಗೆ ಹೇಳಿದರು.

'ಗ್ಯಾರಂಟಿಗಳನ್ನು ನಾವು ಕರ್ನಾಟಕದಲ್ಲಿ ನೀಡಿದ್ದೇವೆ, ಅವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಿರುವ ಕಾರಣ ಕರ್ನಾಟಕದ ಮಹಿಳೆಯರು ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ತೆಲಂಗಾಣದಲ್ಲಿ ಆರೂ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ' ಎಂದು ಖರ್ಗೆ ಹೇಳಿದರು.

'ಪ್ರಣಾಳಿಕೆಯು ನಮ್ಮ ಪಾಲಿಗೆ ಭಗವದ್ಗೀತೆ, ಕುರಾನ್, ಬೈಬಲ್ ಇದ್ದಂತೆ. ಆರೂ ಗ್ಯಾರಂಟಿಗಳಿಗೆ ಮೊದಲ ಸಂಪುಟ ಸಭೆಯಲ್ಲಿಯೇ ಅನುಮೋದನೆ ನೀಡಲಾಗುತ್ತದೆ' ಎಂದರು.

'ಮೋದಿ ಮತ್ತು ಕೆಸಿಆರ್ ಒಟ್ಟಾಗಿ ಏನೇ ಪ್ರಯತ್ನ ನಡೆಸಿದರೂ ನಾವು ಅಧಿಕಾರಕ್ಕೆ ಬರುವುದು ಖಚಿತ' ಎಂದು ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರಿಗೆ ಸವಾಲೆಸೆದರು.

ಮುಖ್ಯಮಂತ್ರಿ ರಾವ್ ಅವರು ತಾವು ನಿವೃತ್ತರಾಗಲು ಸಿದ್ಧರಿರುವುದಾಗಿ ಹೇಳುತ್ತಾರೆ, ಜನ ಕೂಡ ಅವರನ್ನು ಬೀಳ್ಕೊಡಲು ಸಿದ್ಧರಾಗಿದ್ದಾರೆ ಎಂದು ಲೇವಡಿ ಮಾಡಿದರು.

ಕಾಲೇಶ್ವರಂ ಏತ ನೀರಾವರಿ ಯೋಜನೆಯ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವ ಭರವಸೆಯನ್ನೂ ನೀಡಲಾಗಿದೆ.

ಪ್ರಣಾಳಿಕೆಯಲ್ಲಿ ಏನಿದೆ?

- ಮಹಿಳೆಯರಿಗೆ ಪ್ರತಿ ತಿಂಗಳು ₹2,500 ನೆರವು, ₹500ಕ್ಕೆ ಎಲ್‌ಪಿಜಿ ಸಿಲಿಂಡರ್
- ಎಲ್ಲ ಮನೆಗಳಿಗೆ 200 ಯೂನಿಟ್ ಉಚಿತ ವಿದ್ಯುತ್
- ರೈತರಿಗೆ ಪ್ರತಿ ವರ್ಷ ₹15 ಸಾವಿರದವರೆಗೆ ನೆರವು, ಕೃಷಿ ಕಾರ್ಮಿಕರಿಗೆ ವರ್ಷಕ್ಕೆ ₹12 ಸಾವಿರ ನೆರವು
- ವೃದ್ಧರಿಗೆ ₹4,000 ಸಾಮಾಜಿಕ ಪಿಂಚಣಿ, ಅರ್ಹರಿಗೆ ₹10 ಲಕ್ಷದವರೆಗಿನ ಆರೋಗ್ಯ ವಿಮೆ
- ವಿದ್ಯಾರ್ಥಿಗಳಿಗೆ ₹5 ಲಕ್ಷದವರೆಗೆ ನೆರವು, ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ವೈಫೈ
- ₹2 ಲಕ್ಷದವರೆಗಿನ ಬೆಳೆ ಸಾಲ ಮನ್ನಾ, ಆಟೊ ರಿಕ್ಷಾ ಚಾಲಕರಿಗೆ ವಾರ್ಷಿಕ ₹12,000

ಸುಧಾ, ಮಯೂರ ಓದಿರಿ

ಎಸ್‌ಸಿ ವರ್ಗೀಕರಣ: ಸುಗ್ರೀವಾಜ್ಞೆಗೆ ಸವಾಲು

ಹೈದರಾಬಾದ್ (ಪಿಟಿಐ): ಪರಿಶಿಷ್ಟ ಜಾತಿಗಳ (ಎಸ್‌ಸಿ) ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸುಗ್ರೀವಾಜ್ಞೆ ಹೊರಡಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲೆಸೆದಿದ್ದಾರೆ.

ಪರಿಶಿಷ್ಟ ಜಾತಿಗೆ ಸೇರಿರುವ ಮಾದಿಗ ಸಮುದಾಯದ ಸಬಲೀಕರಣಕ್ಕೆ ಎಸ್‌ಸಿ ವರ್ಗೀಕರಣ ಸಮಿತಿಯೊಂದನ್ನು ರಚಿಸುವ ಬಗ್ಗೆ ಮೋದಿ ಅವರು ಈಚೆಗೆ ನೀಡಿದ್ದ ಹೇಳಿಕೆಗೆ ಖರ್ಗೆ ಪ್ರತಿಕ್ರಿಯಿಸಿದರು.

'ನೀವು ಅಧಿಕಾರಕ್ಕೆ ಬಂದು ಸರಿಸುಮಾರು 10 ವರ್ಷಗಳಾಗಿವೆ. ಇದನ್ನು ಮಾಡಲು ನಿಮ್ಮನ್ನು ತಡೆದವರು ಯಾರು? ಆದರೆ ನೀವು ಮಾಡಲಿಲ್ಲ. ಈಗ ಸಮಿತಿ ರಚಿಸುವುದಾಗಿ ನೀವು ಹೇಳಿದ್ದೀರಿ. ಲೋಕಸಭೆಯಲ್ಲಿ ನಿಮಗೆ ಮೂರನೆಯ ಎರಡರಷ್ಟು ಬಹುಮತ ಇದೆ. ಸುಗ್ರೀವಾಜ್ಞೆ ತನ್ನಿ' ಎಂದು ಖರ್ಗೆ ಹೇಳಿದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿಯು (ಎಂಆರ್‌ಪಿಎಸ್) ಇಲ್ಲಿ ಈಚೆಗೆ ಆಯೋಜಿಸಿದ್ದ ರ‍್ಯಾಲಿ ಉದ್ದೇಶಿಸಿ ಮಾತನಾಡಿದ್ದ ಮೋದಿ ಅವರು, 'ಕೇಂದ್ರವು ಶೀಘ್ರದಲ್ಲಿಯೇ ಸಮಿತಿಯೊಂದನ್ನು ರಚಿಸಲಿದೆ. ಎಸ್‌ಸಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಮಾದಿಗರ ಸಬಲೀಕರಣಕ್ಕೆ ಸಾಧ್ಯವಿರುವ ಎಲ್ಲವನ್ನೂ ಮಾಡಲಿದೆ' ಎಂದು ಹೇಳಿದ್ದರು.

ಪ್ರತಿ ವ್ಯಕ್ತಿಯ ಖಾತೆಗೆ ₹15 ಲಕ್ಷ ಜಮಾ ಮಾಡಲಾಗುತ್ತದೆ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸಲಾಗುತ್ತದೆ, ರೈತರ ಆದಾಯ ದುಪ್ಪಟ್ಟು ಮಾಡಲಾಗುತ್ತದೆ ಎಂದು ಪ್ರಧಾನಿ ಭರವಸೆ ನೀಡಿದ್ದರು. ಆದರೆ ಅವು ಯಾವುವೂ ಆಗಿಲ್ಲ ಎಂದು ಖರ್ಗೆ ದೂರಿದರು.

'ನಾವು ಈ ದೇಶದ ಸಂವಿಧಾನ ರಚಿಸಿದೆವು, ಎಲ್ಲರಿಗೂ ಸಮಪಾಲು ನೀಡಿದೆವು. ಕೆಸಿಆರ್ ಅಥವಾ ನರೇಂದ್ರ ಮೋದಿ ಅವರು ಇದನ್ನು ನೀಡಿದರೇ? ಇಂತಹ ವ್ಯಕ್ತಿಗಳು ಜನರನ್ನು ಪ್ರಚೋದಿಸಿ, ತಪ್ಪುದಾರಿಗೆ ಎಳೆಯುತ್ತಾರೆ' ಎಂದು ಖರ್ಗೆ ಆರೋಪಿಸಿದರು.



ಗಾಜಾ: ಅಲ್ ಶಿಫಾ ಆಸ್ಪತ್ರೆಯಲ್ಲಿ ಹಮಾಸ್ ಕಮಾಂಡ್ ಕೇಂದ್ರ– ಸುರಂಗ ಮಾರ್ಗ ಪತ್ತೆಗೆ ಮುಂದುವರಿದ ಶೋಧ

ಆಹಾರ, ಇಂಧನ ಪೂರೈಕೆ ಸ್ಥಗಿತ: ಜನ ತತ್ತರ



ದಕ್ಷಿಣ ಗಾಜಾದ ರಫಾ ನಗರದಲ್ಲಿ ಇಸ್ರೇಲ್ ಬಾಂಬ್ ದಾಳಿಯಿಂದ ಕುಸಿದ ಕಟ್ಟಡದಲ್ಲಿ ಸಿಕ್ಕು ಗಾಯಗೊಂಡಿದ್ದ ಬಾಲಕಿಯನ್ನು ವ್ಯಕ್ತಿಯೊಬ್ಬರು ಚಿಕಿತ್ಸೆಗೆ ಒಯ್ದರು —ಎಎಫ್‌ಪಿ ಚಿತ್ರ

ಜೆರುಸಲೇಂ/ಖಾನ್ ಯೂನಿಸ್ (ಎಪಿ): ಗಾಜಾ ಪಟ್ಟಿಯಲ್ಲಿ ಶುಕ್ರವಾರ ಕೂಡ ಇಂಧನ ಪೂರೈಕೆ ಇರಲಿಲ್ಲ. ಇಂಟರ್‌ನೆಟ್ ಮತ್ತು ಮೊಬೈಲ್ ಸಂಪರ್ಕ ಜಾಲವು ಸಂಪೂರ್ಣ ಸ್ಥಗಿತವಾಗಿದೆ. ಇದರಿಂದ ಸಂಹವನ ವ್ಯವಸ್ಥೆ ಹಾಳಾಗಿದ್ದು ಗಡಿಯಾಚೆಯಿಂದ ಬಂದಿರುವ ಮಾನವೀಯ ನೆರವು ವಿತರಣೆ ಅಸಾಧ್ಯವಾಗಿದೆ. ಇದರಿಂದಾಗಿ ಜನರು ಹಸಿವಿನಿಂದ ಸಾಯಬೇಕಾಗುತ್ತದೆ ಎಂದು ಪರಿಹಾರ ವಿತರಣಾ ಸಂಸ್ಥೆಗಳು ಎಚ್ಚರಿಸಿವೆ.

ಹಮಾಸ್ ವಿರುದ್ಧ ಇಸ್ರೇಲ್ ತನ್ನ ಆಕ್ರಮಣಕ್ಕಾಗಿ ಇಂಟರ್‌ನೆಟ್ ಮತ್ತು ಮೊಬೈಲ್ ಸಂಪರ್ಕ ಜಾಲವನ್ನು ದೀರ್ಘಾವಧಿಗೆ ಸ್ಥಗಿತಗೊಳಿಸಿರುವುದನ್ನು ಗಮನಿಸಿದರೆ, ಇಸ್ರೇಲ್ ಮುಂದಿನ ಆಕ್ರಮಣಕ್ಕೆ ಹೆಚ್ಚಿನ ಜನರು ಆಶ್ರಯ ಪಡೆದಿರುವ ಗಾಜಾಪಟ್ಟಿಯ ದಕ್ಷಿಣ ಭಾಗ ಗುರಿಯಾಗಿಸಿಕೊಳ್ಳಬಹುದು ಎಂದು ಪ್ಯಾಲೆಸ್ಟೀನ್‌ನಿಂದ ಮಾನವೀಯ ನೆರವು ನೀಡುತ್ತಿರುವವರು ಆತಂಕ ವ್ಯಕ್ತಪಡಿಸಿದ್ದಾರೆ.

ಈಗ ಪ್ರತಿದಿನ ಗಾಜಾ ಪಟ್ಟಣಕ್ಕೆ ಅಗತ್ಯವಿರುವ ಆಹಾರದಲ್ಲಿ ಶೇ 10ರಷ್ಟು ಮಾತ್ರ ಲಭಿಸುತ್ತಿದೆ. ಇಲ್ಲಿನ ಜನರಲ್ಲಿ ನಿರ್ಜಲೀಕರಣ ಮತ್ತು ಅಪೌಷ್ಟಿಕತೆ ಹೆಚ್ಚುತ್ತಿದೆ. ಸುಮಾರು 23 ಲಕ್ಷ ಜನರಿಗೆ ತಕ್ಷಣ ಆಹಾರದ ಅಗತ್ಯವಿದೆ ಎಂದು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಮಧ್ಯಪ್ರಾಚ್ಯ ಪ್ರಾದೇಶಿಕ ವಕ್ತಾರ ಅಬೀರ್ ಎಟೆಫಾ ಅವರು ಕೈರೊದಲ್ಲಿ ಹೇಳಿದರು.

‘ಸದ್ಯ ಗಾಜಾದಲ್ಲಿರುವ ಆಹಾರ ವ್ಯವಸ್ಥೆಯು ಕುಸಿದುಹೋಗುತ್ತಿದೆ. ಜನರು ಹಸಿವಿನಿಂದ ಬಳಲುತ್ತಿದ್ದಾರೆ. ತಕ್ಷಣ ಅವರಿಗೆ ಆಹಾರ ಅಗತ್ಯವಿದೆ. ಗಾಜಾಕ್ಕೆ ಕೆಲವು ಟ್ರಕ್‌ಗಳು ಹೋಗಿವೆ. ಆದರೆ, ಆಹಾರ ತಲುಪಿಸಲು ಅವುಗಳಿಗೆ ಇಂಧನವಿಲ್ಲದೆ ನಿಂತಲ್ಲೇ ನಿಂತಿವೆ. ಸದ್ಯ, ಜನರ ಹಸಿವು ನೀಗಿಸಲು, ಅಗತ್ಯ ಮಾನವೀಯ ನೆರವು ಪೂರೈಸಲು ಯಾವುದೇ ಮಾರ್ಗವಿಲ್ಲದಾಗಿದೆ’ ಎಂದು ಅವರು ತಿಳಿಸಿದರು.

‘ಈಜಿಪ್ಟ್‌ನಿಂದ ದಕ್ಷಿಣ ಗಾಜಾ ಪ್ರವೇಶಿಸಲು ಶುಕ್ರವಾರದಿಂದ ಸಾಧ್ಯವಿಲ್ಲದಂತಾಗಿದೆ. ಮಾನವೀಯ ನೆರವು ವಿತರಣೆಗೆ ನಿರ್ಣಾಯಕವಾಗಿರುವ ಸಂವಹನ ಜಾಲದ ಸ್ಥಗಿತವು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಲಿದೆ’ ಎಂದು ಪ್ಯಾಲೆಸ್ಟೀನ್ ನಿರಾಶ್ರಿತರಿಗೆ ಇರುವ ವಿಶ್ವಸಂಸ್ಥೆ ಏಜೆನ್ಸಿ ಎಚ್ಚರಿಸಿದೆ.

> ಇಸ್ರೇಲ್ ಮೇಲೆ ಭವಿಷ್ಯದ ದಾಳಿಗಳನ್ನು ತಡೆಯಲು, ಹಮಾಸ್ ನಾಶಪಡಿಸಿ, ಎಂದಿಗೂ ಮತ್ತೆ ತಲೆ ಎತ್ತದಂತೆ ಖಚಿತಪಡಿಸಿಕೊಳ್ಳಲು ಗಾಜಾಪಟ್ಟಿಯಲ್ಲಿ ಆಕ್ರಮಣ ನಡೆದಿದೆ.
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

> ಇಂಧನ, ಆಹಾರ, ನೀರು ಮತ್ತು ಮಾನವೀಯ ನೆರವು ನಿರ್ಬಂಧಿಸಿ ಇದನ್ನು ಯುದ್ಧಾಸ್ತ್ರವಾಗಿ ಬಳಸುತ್ತಿರುವುದು ಅತಿರೇಕ
> **ಜೂಲಿಯೆಟ್ ಟೌಮಾ,** ವಕ್ತಾರೆ, ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿರುವ ವಿಶ್ವಸಂಸ್ಥೆಯ ಏಜೆನ್ಸಿ

ಗಾಜಾದ ಅತಿದೊಡ್ಡ ಆಸ್ಪತ್ರೆ ಶಿಫಾವನ್ನು ಹಮಾಸ್ ಉಗ್ರರು ತಮ್ಮ ಕಾರ್ಯಾಚರಣೆಯ ಕೇಂದ್ರ ಮಾಡಿಕೊಂಡಿದ್ದಾರೆ ಎಂದು ಆರೋಪ ಪುನರುಚ್ಚರಿಸಿರುವ ಇಸ್ರೇಲ್ ಸೇನೆ, ಈ ಬಗೆಗಿನ ಸಾಕ್ಷ್ಯಗಳನ್ನು ಕಲೆಹಾಕಲು ಶುಕ್ರವಾರ ಕೂಡ ಆಸ್ಪತ್ರೆಯ ನೆಲ ಮಾಳಿಗೆಯಲ್ಲಿ ಹಮಾಸ್ ಅಡಗುದಾಣ ಮತ್ತು ಸುರಂಗ ಮಾರ್ಗಗಳ ಪತ್ತೆಗೆ ತೀವ್ರ ಶೋಧ ನಡೆಸುತ್ತಿದೆ.

ಸಾವಿರಾರು ರೋಗಿಗಳಿರುವ ಈ ಆಸ್ಪತ್ರೆಗೆ ಬುಧವಾರ ನಸುಕಿನಲ್ಲಿ ನೂರಾರು ಸಂಖ್ಯೆಯಲ್ಲಿ ಇಸ್ರೇಲ್ ಸೈನಿಕರು ನುಗ್ಗಿ, ಹಿಡಿತಕ್ಕೆ ತೆಗೆದುಕೊಂಡಿದ್ದಾರೆ.

‘ಆಸ್ಪತ್ರೆಯ ಕಟ್ಟಡದಲ್ಲಿ ಸುರಂಗದ ಪ್ರವೇಶದ್ವಾರ ಮತ್ತು ಕಾಂಪೌಂಡ್‌ನೊಳಗೆ ಟ್ರಕ್‌ನಲ್ಲಿ ಶಸ್ತ್ರಾಸ್ತ್ರಗಳು ಸಿಕ್ಕಿವೆ’ ಎಂದು ಹೇಳಿರುವ ಇಸ್ರೇಲ್ ಸೇನೆ, ಇದಕ್ಕೆ ಪೂರಕವಾದ ಚಿತ್ರಗಳನ್ನು ಪ್ರದರ್ಶಿಸಿದೆ. ಆದರೆ, ಇದನ್ನು ತಳ್ಳಿ ಹಾಕಿರುವ ಹಮಾಸ್ ಮತ್ತು ಶಿಫಾ ಆಸ್ಪತ್ರೆ ಸಿಬ್ಬಂದಿ, ಆಸ್ಪತ್ರೆಯ ಕಟ್ಟಡದಲ್ಲಿ ಹಮಾಸ್‌ನ ಕಾರ್ಯಾಚರಣೆಯ ಯಾವುದೇ ಕೇಂದ್ರವಿಲ್ಲ. ಇಸ್ರೇಲ್‌ನ ಈ ಕಾರ್ಯಾಚರಣೆಯಿಂದ ಆಸ್ಪತ್ರೆಗೆ ಭಾರಿ ಹಾನಿಯಾಗಿದೆ ಎಂದು ಹೇಳಿದೆ.

‘ಇಸ್ರೇಲ್ ಪಡೆಗಳು ಉತ್ತರ ಗಾಜಾ ಪಟ್ಟಿಯಲ್ಲಿ ಶುಕ್ರವಾರದವರೆಗೆ ರಾತ್ರಿಯಿಡೀ ಕಾರ್ಯಾಚರಣೆ ಮುಂದುವರೆಸಿದ್ದು, ಈ ಪ್ರದೇಶದ ಮೇಲೆ ತನ್ನ ನಿಯಂತ್ರಣವನ್ನು ಇನ್ನಷ್ಟು ಬಿಗಿಗೊಳಿಸಿವೆ. ಇಲ್ಲಿನ ಹಮಾಸ್ ಸೇನಾ ವ್ಯವಸ್ಥೆ ಹತ್ತಿಕ್ಕುವ ಗುರಿ ಮುಟ್ಟಲು ನಾವು ಇನ್ನಷ್ಟು ಹತ್ತಿರದಲ್ಲಿದ್ದೇವೆ’ ಎಂದು ಸೇನಾ ಸಿಬ್ಬಂದಿ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಹೆರ್ಜ್ಲ್ ಹಲೆವಿ ಹೇಳಿದ್ದಾರೆ.

ಮತ್ತಿಬ್ಬರು ಒತ್ತೆಯಾಳುಗಳ ಹತ್ಯೆ

ಹಮಾಸ್ ಬಂಡುಕೋರರು ಒತ್ತೆ ಇರಿಸಿಕೊಂಡಿದ್ದವರಲ್ಲಿ ಮತ್ತೊಬ್ಬರ ಶವ ಶಿಫಾ ಆಸ್ಪತ್ರೆಯ ಪಕ್ಕದ ಕಟ್ಟಡದಲ್ಲಿ ಶುಕ್ರವಾರ ದೊರೆತಿದೆ. ಮೃತರನ್ನು ಯೋಧೆ ನೋವಾ ಮಾರ್ಸಿಯಾನೋ ಎಂದು ಗುರುತಿಸಲಾಗಿದೆ ಎಂದು ಇಸ್ರೇಲ್ ಸೇನೆಯು ಹೇಳಿದೆ.

65 ವರ್ಷದ ಮಹಿಳೆ ಯೆಹುದಿತ್ ವೈಸ್ ಅವರ ಶವವನ್ನು ಸೇನೆಯು ಗುರುವಾರ ಪತ್ತೆಹಚ್ಚಿತ್ತು. ಇವರನ್ನು ಹಮಾಸ್ ಬಂಡುಕೋರರು ಹತ್ಯೆ ಮಾಡಿದ್ದಾರೆ ಎಂದು ಸೇನೆ ಹೇಳಿದೆ.

ಗಾಜಾದಲ್ಲಿ ಕದನ ತೀವ್ರವಾಗುತ್ತಿರುವಾಗ ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗಾಗಿ ಅವರ ಕುಟುಂಬಗಳು ಮೊರೆ ಇಡುತ್ತಿವೆ.

11,500 ಪ್ಯಾಲೆಸ್ಟೀನಿಯರ ಸಾವು

ರಾಮಲ್ಲಾಹ್ (ವೆಸ್ಟ್‌ಬ್ಯಾಂಕ್), (ಎಪಿ): ಆರು ವಾರಗಳ ಹಿಂದೆ ಇಸ್ರೇಲ್-ಹಮಾಸ್ ನಡುವೆ ಯುದ್ಧ ಪ್ರಾರಂಭವಾದಾಗಿನಿಂದ ಗಾಜಾ ಪಟ್ಟಿಯಲ್ಲಿ ಈವರೆಗೆ 11,500ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಸಾವನ್ನಪ್ಪಿದ್ದಾರೆ ಎಂದು ಪ್ಯಾಲೆಸ್ಟೀನ್ ಸರ್ಕಾರ ಗುರುವಾರ ತಿಳಿಸಿದೆ.

ಇದರಲ್ಲಿ ಬಹುತೇಕರು ಇಸ್ರೇಲ್ ಸೇನೆ ನಡೆಸಿದ ವಾಯು ದಾಳಿಯಿಂದ ಹತರಾಗಿದ್ದಾರೆ. ಮೃತರಲ್ಲಿ 4,707 ಮಕ್ಕಳು ಮತ್ತು 3,155 ಮಹಿಳೆಯರು. ಇನ್ನೂ 2,700 ಮಂದಿ ನಾಪತ್ತೆಯಾಗಿದ್ದು, ಇವರೆಲ್ಲರೂ ಕಟ್ಟಡಗಳ ಅವಶೇಷಗಳಡಿ ಹೂತುಹೋಗಿರುವುದಾಗಿ ನಂಬಲಾಗಿದೆ ಎಂದು ಆರೋಗ್ಯ ಸಚಿವಾಲಯ ವರದಿ ಮಾಡಿದೆ.

ಅವಶೇಷ: ಬರಿಗೈಯಲ್ಲಿ ಬಗೆಯುತ್ತಿರುವ ಜನ

ಇಸ್ರೇಲ್ ಕ್ಷಿಪಣಿ ದಾಳಿಯಲ್ಲಿ ಧ್ವಂಸಗೊಂಡ ಕಟ್ಟಡಗಳ ಅವಶೇಷಗಳಡಿ ಸಿಲುಕಿ ಮೃತಪಟ್ಟಿರುವ ಅಥವಾ ಕಾಣೆಯಾಗಿರುವ ತಮ್ಮ ಮಕ್ಕಳು, ಹೆತ್ತವರು, ಬಂಧುಗಳ ಶವಗಳನ್ನು ಹೊರ ತೆಗೆಯಲು ಪ್ರತಿದಿನ ನೂರಾರು ಜನರು ಸಲಿಕೆಗಳು ಮತ್ತು ಕಬ್ಬಿಣದ ಸರಳುಗಳನ್ನು ಹಿಡಿದು, ಮತ್ತೆ ಕೆಲವರು ತಮ್ಮ ಬರಿಗೈಗಳಿಂದಲೇ ಅವಶೇಷಗಳ ರಾಶಿಗಳನ್ನು ಬಗೆಯುತ್ತಿದ್ದಾರೆ.

ಅವಶೇಷಗಳಡಿಯಿಂದ ದುರ್ವಾಸನೆ ಹೊರಹೊಮ್ಮುತ್ತಿದ್ದು, ಇದು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅವಶೇಷಗಳಡಿ ಇನ್ನೂ ಸಾವಿರಾರು ಜನರ ಶವಗಳು ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

ಜನರ ಸಾವು: ಭಾರತ ಖಂಡನೆ

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳಿಂದಾಗಿ ಜಗತ್ತು ಹೊಸ ಸವಾಲುಗಳನ್ನು ಎದುರಿಸುವಂತಾಗಿದೆ. ಇಸ್ರೇಲ್ ಹಾಗೂ ಹಮಾಸ್ ನಡುವಿನ ಸಂಘರ್ಷದಿಂದ ಉದ್ಭವಿಸಿರುವ ಬಿಕ್ಕಟ್ಟನ್ನು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ಬಗೆಹರಿಸಿಕೊಳ್ಳಬೇಕು ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

‘ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ನಡೆಸಿದ್ದ ಬರ್ಬರ ದಾಳಿಯನ್ನು ಭಾರತ ಖಂಡಿಸಿತ್ತು. ಅದೇ ರೀತಿ, ಈ ಸಂಘರ್ಷದಲ್ಲಿ ನಾಗರಿಕರು ಸಾಯುತ್ತಿರುವುದನ್ನು ಸಹ ಭಾರತ ಬಲವಾಗಿ ಖಂಡಿಸುತ್ತದೆ’ ಎಂದೂ ಹೇಳಿದರು.

ಭೌಗೋಳಿಕವಾಗಿ ದಕ್ಷಿಣದಲ್ಲಿರುವ ದೇಶಗಳ ಶೃಂಗಸಭೆ ‘ವಾಯ್ಸ್ ಆಫ್ ಗ್ಲೋಬಲ್ ಸೌತ್’ನ ಎರಡನೇ ಆವೃತ್ತಿಯನ್ನು ವರ್ಚುವಲ್ ಮೂಲಕ ಉದ್ದೇಶಿಸಿ ಅವರು ಮಾತನಾಡಿದರು.

‘ಇಸ್ರೇಲ್–ಹಮಾಸ್ ಬಿಕ್ಕಟ್ಟು ಸೇರಿದಂತೆ ಜಾಗತಿಕ ವಿದ್ಯಮಾನಗಳ ಕುರಿತು ಹಾಗೂ ವಿಶ್ವದ ಒಳಿತಿಗಾಗಿ ದಕ್ಷಿಣದ ದೇಶಗಳು ಒಂದೇ ಧ್ವನಿಯಲ್ಲಿ ಮಾತನಾಡುವುದು ಅಗತ್ಯ. ಮಾತುಕತೆ–ರಾಜತಾಂತ್ರಿಕ ಮಾರ್ಗವಲ್ಲದೇ, ಇಸ್ರೇಲ್ ಮತ್ತು ಹಮಾಸ್ ಸಂಘರ್ಷದಿಂದಾಗಿ ಉದ್ಭವಿಸಿರುವ ಪರಿಸ್ಥಿತಿಯ ವೇಳೆ ಪ್ರತಿಯೊಬ್ಬರೂ ಸಂಯಮದಿಂದ ವರ್ತಿಸಬೇಕು ಎಂಬುದಾಗಿ ಭಾರತ ಪ್ರತಿಪಾದಿಸುತ್ತಲೇ ಬಂದಿದೆ’ ಎಂದು ವಿವರಿಸಿದರು.

ಪೂಜೆಗೆ ತೆರಳುತ್ತಿದ್ದವರ ಮೇಲೆ ಕಲ್ಲು ತೂರಾಟ

ನುಹ್, ಹರಿಯಾಣ (ಪಿಟಿಐ): ಪೂಜಾ ಕಾರ್ಯಕ್ಕೆ ತೆರಳುತ್ತಿದ್ದ ಮಹಿಳೆಯರ ಮೇಲೆ ಅಪರಿಚಿತರು ಗುರುವಾರ ರಾತ್ರಿ ಕಲ್ಲುಗಳನ್ನು ತೂರಿದ್ದು, ಮೂವರು ಮಹಿಳೆಯರು ಗಾಯಗೊಂಡಿದ್ದಾರೆ.

ಮಸೀದಿಯಿಂದ ಕಲ್ಲು ತೂರಿರುವ ಆರೋಪಗಳಿವೆ. ಆದರೆ, ಈ ಕುರಿತು ದೂರು ಬಂದಿಲ್ಲ. ಆದರೆ, ನಿಯಮಗಳ ಅನುಸಾರ ಕ್ರಮ ಜರುಗಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಮಸೀದಿಯೊಂದರ ಸಮೀಪ ರಾತ್ರಿ 8.20 ಗಂಟೆಗೆ ಕೃತ್ಯ ನಡೆದಿದೆ. ‘ಕುಆನ್ ಪೂಜಾನ್’ ಧಾರ್ಮಿಕ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಮಹಿಳೆಯರ ಗುಂಪಿನ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ.

ಪೊಲೀಸ್ ವರಿಷ್ಠಾಧಿಕಾರಿ ನರೇಂದರ್ ಬಿಜಾರ್ಣಿಯ ನೇತೃತ್ವದಲ್ಲಿ ಹೆಚ್ಚಿನ ಪೊಲೀಸರು ಸ್ಥಳಕ್ಕೆ ಧಾವಿಸಿದರು. ನುಹ್ ಠಾಣೆಯ ಅಧಿಕಾರಿ ಓಂಬೀರ್ ಪ್ರಕಾರ, ಯಾವುದೇ ದೂರು ದಾಖಲಾಗಿಲ್ಲ. ಈ ಘಟನೆ ಹಿನ್ನೆಲೆಯಲ್ಲಿ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಆರು ತಿಂಗಳ ಹಿಂದೆ ಇದೇ ಸ್ಥಳದಲ್ಲಿ ವಿಎಚ್‌ಪಿ ಕೈಗೊಂಡಿದ್ದ ಬ್ರಜ್ ಮಂಡಲ ಯಾತ್ರೆ ವೇಳೆ ಗುಂಪು ದಾಳಿ ನಡೆದಿದ್ದು, ಹಿಂಸೆಗೆ ತಿರುಗಿತ್ತು. ಆಗ ಗೃಹರಕ್ಷಕ ದಳದ ಇಬ್ಬರು ಸಿಬ್ಬಂದಿ, ಮದರಸಾದ ಮೌಲ್ವಿ ಸೇರಿ ಆರು ಜನರು ಸತ್ತಿದ್ದರು.

ಧಾರ್ಮಿಕ ಮತಾಂತರಕ್ಕೆ ಪೂರಕ ಸ್ಥಿತಿ ಸೃಷ್ಟಿ –ವಿಎಚ್‌ಪಿ ಆರೋಪ

ಗುರುಗ್ರಾಮ (ಪಿಟಿಐ): ಧಾರ್ಮಿಕ ಮತಾಂತರಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಲಾಗುತ್ತಿದೆ ಎಂದು ವಿಶ್ವ ಹಿಂದೂ ಪರಿಷತ್ ಆರೋಪಿಸಿದೆ. ಹರಿಯಾಣದ ನುಹ್‌ನಲ್ಲಿ ದಲಿತ ಮಹಿಳೆ ಮೇಲೆ ಕಲ್ಲು ತೂರಾಟದ ಪ್ರಕರಣವನ್ನು ಉಲ್ಲೇಖಿಸಿ ಈ ಮಾತು ಹೇಳಿದೆ.

ವಿಎಚ್‌ಪಿ ರಾಜ್ಯ ಘಟಕದ ಅಧ್ಯಕ್ಷ, ವಿಶ್ರಾಂತ ನ್ಯಾಯಮೂರ್ತಿ ಪವನ್ ಕುಮಾರ್ ಅವರು, ‘ಕೆಲ ಮದರಸಾಗಳ ಮೌಲ್ವಿಗಳು ಅಮಾಯಕ ಮಕ್ಕಳ ಮನಸ್ಸು ಕೆಡಿಸಿದ್ದು, ಆ ಮಕ್ಕಳೇ ಮಹಿಳೆಯರ ಮೇಲೆ ಕಲ್ಲು ತೂರಿದ್ದಾರೆ’ ಎಂದು ಆರೋಪಿಸಿದರು.

‘ಕಲ್ಲು ತೂರಾಟದ ಹಿಂದೆ ವ್ಯವಸ್ಥಿತವಾದ ಪಿತೂರಿ ನಡೆದಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು, ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು. ಇಂತಹ ಕೃತ್ಯಕ್ಕೆ ಬೆಂಬಲ ನೀಡುತ್ತಿರುವ ಮದರಸಾಗಳನ್ನು ಬೀಗಮುದ್ರೆಗೆ ಒಳಪಡಿಸಬೇಕು’ ಎಂದು ಒತ್ತಾಯಿಸಿದರು.

20ಕ್ಕೆ ಭಾರತ–ಆಸ್ಟ್ರೇಲಿಯಾ ಚರ್ಚೆ

ನವದೆಹಲಿ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾದ 2+2 ಸಚಿವರ ಸಭೆ ಸೋಮವಾರ ನಡೆಯಲಿದ್ದು, ಸಭೆಯಲ್ಲಿ ಭಾಗವಹಿಸಲು ಆಸ್ಟ್ರೇಲಿಯಾದ ವಿದೇಶಾಂಗ ಸಚಿವ ಪೆನ್ನಿ ವಾಂಗ್ ಮತ್ತು ರಕ್ಷಣಾ ಸಚಿವ ರಿಚರ್ಡ್ ಮಾರ್ಲ್ಸ್ ಭಾರತದ ಪ್ರವಾಸ ಕೈಗೊಳ್ಳಲಿದ್ದಾರೆ.

ಸೋಮವಾರ 2+2 ಸಚಿವರ ಸಭೆ ವೇಳೆ ಭಾರತದ ನಿಯೋಗದ ನೇತೃತ್ವವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಹಿಸಲಿದ್ದಾರೆ. ಬಳಿಕ ಮಂಗಳವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಭಾಗಿಯಾಗುವ ಸಾಧ್ಯತೆಯಿದೆ.

ಆಸ್ಟ್ರೇಲಿಯಾದ ಇಬ್ಬರೂ ಅಥವಾ ಒಬ್ಬ ನಾಯಕರು ಭಾನುವಾರ ವಿಶ್ವಕಪ್ ಫೈನಲ್ ಪಂದ್ಯ ವೀಕ್ಷಿಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.



ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರ ಮತ್ತು ದಂಡಲಗಾಂವ್ ನಡುವೆ ನಿರ್ಮಿಸಲಾಗುತ್ತಿರುವ ಸುರಂಗ ಕುಸಿದು ಒಳಸಿಲುಕಿರುವ ಕಾರ್ಮಿಕರನ್ನು ರಕ್ಷಿಸುವ ಕಾರ್ಯಾಚರಣೆ ಶುಕ್ರವಾರವೂ ನಡೆಯಿತು – ಪಿಟಿಐ ಚಿತ್ರ

ಕಾರ್ಮಿಕರ ರಕ್ಷಣೆ ಕಾರ್ಯ 7ನೇ ದಿನ ಮುಂದುವರಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ಉತ್ತರಕಾಶಿ: ಉತ್ತರಾಖಂಡದ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೊರೆಯಲಾಗಿರುವ ಸುರಂಗ ಕುಸಿದು ಒಳಗೆ ಸಿಲುಕಿರುವ 40 ಕಾರ್ಮಿಕರನ್ನು ರಕ್ಷಿಸುವ ಕಾರ್ಯಾಚರಣೆ ಆರನೇ ದಿನವಾದ ಶುಕ್ರವಾರವೂ ನಡೆಯಿತು.

‘ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ತರುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕುಸಿದಿರುವ ಸುರಂಗದ ಅವಶೇಷಗಳ ಮೂಲಕ ಈ ವರೆಗೆ 25 ಮೀಟರ್ ಉದ್ದಕ್ಕೆ ಪೈಪ್‌ಗಳನ್ನು ಅಳವಡಿಸಲಾಗಿದೆ’ ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ.

60 ಮೀಟರ್ ಉದ್ದದವರೆಗೆ ಕೊರೆದ ನಂತರ, 80 ಸೆಂ.ಮೀ ಮತ್ತು 90 ಸೆಂ.ಮೀ. ವ್ಯಾಸದ ಪೈಪುಗಳನ್ನು ಅಳವಡಿಸಲಾಗುತ್ತದೆ. ಈ ಪೈಪುಗಳ ಮೂಲಕ ಕಾರ್ಮಿಕರು ತೆವಳುತ್ತಾ ಹೊರಗೆ ಬರಲು ಸಾಧ್ಯವಾಗಲಿದೆ.

ಇನ್ನೊಂದೆಡೆ, ‘ಎಲ್ಲ ಕಾರ್ಮಿಕರು ಸುರಕ್ಷಿತವಾಗಿದ್ದಾರೆ’ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದರೆ, ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರು ತಮ್ಮ ಕುಟುಂಬಸ್ಥರೊಂದಿಗೆ ಮಾತನಾಡಿದ್ದಾಗಿ ಮೂಲಗಳು ಹೇಳಿವೆ.

ಮತ್ತೊಂದು ಯಂತ್ರ: ಅವಶೇಷಗಳನ್ನು ತೆರವು ಮಾಡಿ, ಪೈಪುಗಳನ್ನು ಅಳವಡಿಸುವ ಕಾರ್ಯಕ್ಕಾಗಿ ಈಗಾಗಲೇ ಎರಡು ಬೃಹತ್ ಯಂತ್ರಗಳನ್ನು ದೆಹಲಿಯಿಂದ ತಂದು ಕಾರ್ಯಾಚರಣೆಯಲ್ಲಿ ತೊಡಗಿಸಲಾಗಿದೆ.

‘ಹೆಚ್ಚುವರಿಯಾಗಿ ಇಂದೋರ್‌ನಿಂದ ಮತ್ತೊಂದು ಯಂತ್ರವನ್ನು ತರಿಸಿಕೊಳ್ಳಲಾಗಿದೆ. ರಕ್ಷಣಾ ಕಾರ್ಯಕ್ಕೆ ಚುರುಕು ನೀಡುವುದಕ್ಕಾಗಿ ವಿದೇಶಿ ತಜ್ಞರ ಸಲಹೆಯನ್ನೂ ಪಡೆದುಕೊಳ್ಳಲಾಗುತ್ತಿದೆ’ ಎಂದು ಜಿಲ್ಲಾಡಳಿತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸುರಂಗದಲ್ಲಿ ಸಿಲುಕಿರುವ ಕಾರ್ಮಿಕರಿಗೆ ಆಹಾರ ಒದಗಿಸಲಾಗುತ್ತಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ. ಅವರನ್ನು ಆದಷ್ಟೂ ಶೀಘ್ರ ಹೊರಗೆ ಕರೆತರುವಂತಾಗಲಿ ಎಂಬುದಾಗಿ ದೇವರಲ್ಲಿ ಪ್ರಾರ್ಥಿಸುತ್ತೇವೆ’ ಎಂದು ನವಯುಗ ಎಂಜಿನಿಯರಿಂಗ್ ಕಂಪನಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಜಿ.ಎಲ್.ನಾಥ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಯಂತ್ರ ಸಾಗಣೆ: ಸಿ–17 ವಿಮಾನ ನಿಯೋಜನೆ

ನವದೆಹಲಿ: ಉತ್ತರಾಖಂಡದ ಸಿಕ್ಯಾರ ಬಳಿಯ ಸುರಂಗದಲ್ಲಿ ಸಿಲುಕಿರುವ ಕಾರ್ಮಿಕ ರಕ್ಷಣಾ ಕಾರ್ಯಕ್ಕೆ ಬಳಸಲಾಗುವ 22 ಟನ್ ಭಾರದ ಯಂತ್ರವನ್ನು ಇಂದೋರ್‌ನಿಂದ ಡೆಹ್ರಾಡೂನ್‌ಗೆ ಒಯ್ಯಲಾಗಿದೆ. ಇದಕ್ಕಾಗಿ ವಾಯುಪಡೆ ಸರಕು ಸಾಗಣೆ ಸಿ–17 ವಿಮಾನ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಳಂಬವಾಗಲು ಕಾರಣಗಳು

- ಅವಶೇಷಗಳ ಮೂಲಕ ಗಂಟೆಗೆ 4 ರಿಂದ 5 ಮೀಟರ್ ಉದ್ದಕ್ಕೆ ರಂಧ್ರ ಕೊರೆಯಲಾಗುತ್ತಿದೆ. ಯಂತ್ರಗಳಲ್ಲಿ ಪೈಪುಗಳನ್ನು ಜೋಡಿಸಿ, ವೆಲ್ಡಿಂಗ್ ಮಾಡುವುದಕ್ಕೆ ಸಮಯ ತಗುಲುತ್ತಿದೆ
- ಡೀಸೆಲ್ ಚಾಲಿತ ಯಂತ್ರ ಬಳಸಿ ರಂಧ್ರ ಕೊರೆಯಲಾಗುತ್ತಿದೆ. ಇಂತಹ ಯಂತ್ರಗಳನ್ನು ಬಳಸುವಾಗ ಗಾಳಿ–ಬೆಳಕಿನ ಸಂಚಾರಕ್ಕೆ ಆಗಾಗ ಕಾಮಗಾರಿಯನ್ನು ನಿಲ್ಲಿಸಬೇಕಾಗುತ್ತದೆ
- ಮತ್ತೆ ಭೂಕುಸಿತ ಉಂಟಾಗಿ ಅವಶೇಷಗಳ ರಾಶಿ ಬಿದ್ದಿರುವುದು

ಉಗ್ರರಿಗೆ ನೆರವು: ಆಸ್ತಿ ಜಪ್ತಿ

ಜಮ್ಮು (ಪಿಟಿಐ): ಭಯೋತ್ಪಾದಕರಿಗೆ ಹಣ, ವಸತಿ ಹಾಗೂ ಸರಕು ಸಾರಿಗೆ ಸೇರಿದಂತೆ ಇನ್ನಿತರ ಸೌಲಭ್ಯ ಒದಗಿಸುತ್ತಿದ್ದ ಆರೋಪದ ಮೇಲೆ ಬಂಧಿಸಿರುವ ಮೊಹಮ್ಮದ್ ಯಾಸಿನ್‌ಗೆ ಸೇರಿದ ಸ್ಥಿರಾಸ್ತಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಶುಕ್ರವಾರ ಜಪ್ತಿ ಮಾಡಿದೆ.

ಸೆಪ್ಟೆಂಬರ್ 30ರಂದು ಜಮ್ಮುವಿನಲ್ಲಿರುವ ಎನ್‌ಐಎ ಕೋರ್ಟ್ ಆದೇಶದ ಮೇರೆಗೆ ಬಾಲಾಕೋಟ್ ತಾಲ್ಲೂಕು ವ್ಯಾಪ್ತಿಯಲ್ಲಿರುವ ಧಾಬಿ–ಧಾರಟಿ ಗ್ರಾಮದಲ್ಲಿದ್ದ ಆರೋಪಿಯ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಆರೋಪಿ ಮೊಹಮ್ಮದ್ ಯಾಸೀನ್‌ಗೆ ಸೇರಿದ ಏಳಕ್ಕೂ ಹೆಚ್ಚು ಎಕರೆ ಜಮೀನು ಸೇರಿದಂತೆ ಇನ್ನಿತರ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಯೋತ್ಪಾದಕರಿಗೆ ವಿವಿಧ ಸೌಕರ್ಯಗಳನ್ನು ಒದಗಿಸುತ್ತಿದ್ದ ಈತನನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿ ಬಂಧಿಸಲಾಗಿತ್ತು.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ 'ದೀಪಾವಳಿ ಮಿಲನ' ಕಾರ್ಯಕ್ರಮದಲ್ಲಿ ಮೋದಿ ಕಳವಳ

'ಡೀಪ್ ಫೇಕ್‌ನಿಂದ ದೊಡ್ಡ ಬಿಕ್ಕಟ್ಟು'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತಂತ್ರಜ್ಞಾನದ ದುರುಪಯೋಗದ ಬಗ್ಗೆ ಜಾಗೃತಿ ಮೂಡಿಸಲು ಮಾಧ್ಯಮಗಳಿಗೆ ಮೋದಿ ಸಲಹೆ
- ತಾವು ಗರ್ಬಾ ನೃತ್ಯ ಮಾಡಿರುವ ನಕಲಿ ವಿಡಿಯೊ ಕುರಿತು ಪ್ರಸ್ತಾಪಿಸಿದ ಪ್ರಧಾನಿ

ನವದೆಹಲಿ: 'ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಲ್ಪಟ್ಟ ಡೀಪ್ ಫೇಕ್‌ಗಳು ಸಮಾಜದಲ್ಲಿ ದೊಡ್ಡ ಬಿಕ್ಕಟ್ಟಿಗೆ ಕಾರಣವಾಗಬಹುದು ಮತ್ತು ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡಬಹುದು' ಎಂದು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದರು.



ಬಿಜೆಪಿ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ನಡೆದ 'ದೀಪಾವಳಿ ಮಿಲನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಡೀಪ್ ಫೇಕ್‌ಗಳು ನಮ್ಮಂತಹ ವೈವಿಧ್ಯಮಯ ಸಮಾಜದಲ್ಲಿ ಅಸಮಾಧಾನದ ಕಿಡಿಯನ್ನು ಹೊತ್ತಿಸಬಹುದು. ಇದರ ಬಗ್ಗೆ ಪರಿಶೀಲಿಸಲು ಸಮಾಜದ ಬಹುಪಾಲು ಜನ ಯಾವುದೇ ವ್ಯವಸ್ಥೆಯನ್ನು ಹೊಂದಿಲ್ಲ. ಹಾಗಾಗಿ, ಜನರು ಇಂತಹ ವಿಡಿಯೊಗಳನ್ನು ನಂಬುತ್ತಾರೆ. ತಂತ್ರಜ್ಞಾನದ ದುರುಪಯೋಗದ ಬಗ್ಗೆ ಮಾಧ್ಯಮಗಳು ಜಾಗೃತಿ ಮೂಡಿಸಬೇಕು ಹಾಗೂ ಜನರಿಗೆ ಶಿಕ್ಷಣ ನೀಡಬೇಕು' ಎಂದು ಸಲಹೆ ನೀಡಿದರು.

ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್ ಫೇಕ್ ವಿಡಿಯೊ ಒಂದನ್ನು ಸಾಮಾಜಿಕ ಜಾಲತಾಣಗಳ ಮೂಲಕ ಇತ್ತೀಚೆಗೆ ಹರಿಬಿಡಲಾಯಿತು. ಬಳಿಕ ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರ ಡೀಪ್ ಫೇಕ್ ಚಿತ್ರವೊಂದನ್ನು ಹಂಚಿಕೊಳ್ಳಲಾಯಿತು.

ಈ ಬಗ್ಗೆ ಪ್ರಸ್ತಾಪಿಸಿದ ಮೋದಿ ಅವರು, 'ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಜನರಿಗೆ ಇಂತಹ ಆನ್‌ಲೈನ್ ವಿಷಯಗಳನ್ನು ಪರಿಶೀಲಿಸಲು ಯಾವುದೇ ವಿಧಾನಗಳು ಇರುವುದಿಲ್ಲ' ಎಂದರು.

'ನಾನು ಕೊನೆಯ ಬಾರಿಗೆ ಗರ್ಬಾ ನೃತ್ಯ ಮಾಡಿದ್ದು ಶಾಲಾ ವಿದ್ಯಾರ್ಥಿಯಾಗಿದ್ದಾಗ. ಆದರೆ, ನಾನು ಗರ್ಬಾ ನೃತ್ಯ ಮಾಡುತ್ತಿರುವ ನಕಲಿ ವಿಡಿಯೊ ಇತ್ತೀಚೆಗೆ ಹರಿದಾಡುತ್ತಿದೆ. ಆ ವಿಡಿಯೊದ ಸತ್ಯಾಸತ್ಯತೆ ಅರಿಯದೆ ನನ್ನನ್ನು ಪ್ರೀತಿಸುವವರು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದಾರೆ' ಎಂದು ನಗುತ್ತಾ ಲಘುವಾಗಿ ಹೇಳಿದರು.

'ವಿವಾದಾತ್ಮಕ ಹೇಳಿಕೆಗಳನ್ನು ಒಳಗೊಂಡಿರುವ ಚಿತ್ರಗಳು ಈ ಹಿಂದೆ ಬರುತ್ತಿದ್ದವು ಹಾಗೂ ಹೋಗುತ್ತಿದ್ದವು. ಆದರೆ, ದೊಡ್ಡ ವಿಷಯಗಳು ಆಗುತ್ತಿರಲಿಲ್ಲ. ಆದರೆ, ಈಗ ಅದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಇಂತಹ ಚಿತ್ರಗಳ ನಿರ್ಮಾಣಕ್ಕೆ ಅಪಾರ ಪ್ರಮಾಣದ ಹಣ ವ್ಯಯಿಸಿದರೂ ಕೂಡ ಸಮಾಜದ ಕೆಲವು ವರ್ಗಕ್ಕೆ ಅಗೌರವ ತೋರಿದ ಕಾರಣಕ್ಕೆ ಪ್ರದರ್ಶನ ಕಷ್ಟವಾಗುತ್ತಿದೆ' ಎಂದು ಅವರು ಹೇಳಿದರು.

'ಚಾಟ್‌ಜಿಪಿಟಿ ಸಂಸ್ಥಾಪಕರು ಇತ್ತೀಚೆಗೆ ನನ್ನನ್ನು ಭೇಟಿಯಾದಾಗ ತಂತ್ರಜ್ಞಾನ ಕೂಡ ಕೆಡುಕನ್ನು ಉಂಟುಮಾಡಬಲ್ಲುದು ಎಂದಿದ್ದೆ. ಅದನ್ನು ಅವರೂ ಒಪ್ಪಿಕೊಂಡಿದ್ದರು' ಎಂದು ಪ್ರಧಾನಿ ಹೇಳಿದರು.

2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನಾಗಿ ಮಾಡುವ ತಮ್ಮ ಸಂಕಲ್ಪದ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ, 'ಇದು ಕೇವಲ ಪದವಲ್ಲ. ಇದು ನೆಲ ಕಾಣಲಿರುವ ವಾಸ್ತವ' ಎಂದರು.

ದೀಪಾವಳಿಯ ವಾರವೊಂದರಲ್ಲಿ ಸುಮಾರು ₹4.5 ಲಕ್ಷ ಕೋಟಿ ವ್ಯವಹಾರ ನಡೆದಿರುವುದನ್ನು ಉಲ್ಲೇಖಿಸಿದ ಅವರು, 'ಸ್ಥಳೀಯರ ಧ್ವನಿ ಅಭಿಯಾನಕ್ಕೆ ಜನಬೆಂಬಲ ಸಿಕ್ಕಿದೆ' ಎಂದರು.

ಮುನ್ನಾಭಾಯ್ ಎಂಬಿಬಿಎಸ್ ನೆನಪಿಸಿದ ಕೋರ್ಟ್

ಮುಂಬೈ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪರೀಕ್ಷೆಗಳಲ್ಲಿ ಹಲವು ಅಭ್ಯರ್ಥಿಗಳು ಅಕ್ರಮ ನಡೆಸುತ್ತಾರೆ. ಇದು 'ಮುನ್ನಾಭಾಯ್ ಎಂಬಿಬಿಎಸ್' ಸಿನಿಮಾವನ್ನು ನೆನಪಿಸುವಂತಿದೆ ಎಂದು ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠ ಹೇಳಿದೆ.

ಅಗತ್ಯ ದಾಖಲೆಪತ್ರ ಇಲ್ಲದಿದ್ದ ಕಾರಣಕ್ಕೆ ನೀಟ್ ಪರೀಕ್ಷೆಗೆ ಹಾಜರಾಗಲು ಅವಕಾಶ ಸಿಗದಿದ್ದ ಶ್ಯಾಮ ಸುಂದರ ಪಾಟೀಲ್ ಎನ್ನುವವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ಕೋರ್ಟ್ ಈಚೆಗೆ ಈ ಮಾತು ಹೇಳಿದೆ.

ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗೆ ಪ್ರವೇಶಕ್ಕೆ ತಮಗೆ ನೀಟ್ ಪರೀಕ್ಷೆ ನಡೆಸುವಂತೆ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ಆದೇಶಿಸಬೇಕು ಎಂದು ಪಾಟೀಲ್ ಅವರು ಕೋರಿದ್ದರು. ಅವರ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಆರ್. ವಿ. ಘುಗೆ ಮತ್ತು ವೈ.ಜಿ. ಖೊಬ್ರಗಡೆ ಅವರಿದ್ದ ಪೀಠ ನಡೆಸಿತ್ತು.

ಜಮ್ಮು–ಕಾಶ್ಮೀರ: ಕುಲ್ಗಾಂ, ರಜೌರಿ ಜಿಲ್ಲೆಯಲ್ಲಿ ಪ್ರತ್ಯೇಕ ಎನ್‌ಕೌಂಟರ್

ಎಲ್‌ಇಟಿಯ ಆರು ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ(ಜಮ್ಮು–ಕಾಶ್ಮೀರ): ಜಮ್ಮು–ಕಾಶ್ಮೀರದಲ್ಲಿ ಶುಕ್ರವಾರ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ಆರು ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ.

ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಈ ವರ್ಷ ನಡೆಸಿರುವ ಅತಿದೊಡ್ಡ ಉಗ್ರ ನಿಗ್ರಹ ಕಾರ್ಯಾಚರಣೆಯಲ್ಲಿ ಐವರು ಉಗ್ರರನ್ನು ಹತ್ಯೆ ಮಾಡಲಾಗಿದೆ.

ರಜೌರಿ ಜಿಲ್ಲೆಯ ಬೆಹರೋತ್ ಪ್ರದೇಶದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಉಗ್ರನೊಬ್ಬನನ್ನು ಹತ್ಯೆ ಮಾಡಲಾಗಿದ್ದು, ಗುರುತು ಪತ್ತೆಯಾಗಿಲ್ಲ ಎಂದು ಭದ್ರತಾ ಪಡೆಗಳು ತಿಳಿಸಿವೆ.

'ಕುಲ್ಗಾಂ ಪೊಲೀಸರು, ಸೇನೆ ಹಾಗೂ ಸಿಆರ್‌ಪಿಎಫ್ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಐವರು ಉಗ್ರರನ್ನು ಹತ್ಯೆಗೈದು, ಎಲ್‌ಇಟಿಗೆ ಸಂಬಂಧಿಸಿದ ಹಲವು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಕಾಶ್ಮೀರ ವಲಯ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕುಲ್ಗಾಂ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹತರಾದ ಉಗ್ರರನ್ನು, ಪಿಎಎಫ್‌ಎಫ್‌ನ ಸಮೀರ್ ಅಹ್ಮದ್ ಶೇಖ್, ಟಿಆರ್‌ಎಫ್ ಸೇರಿದ ಯಾಸಿರ್ ಬಿಲಾಲ್ ಭಟ್, ಡ್ಯಾನಿಷ್ ಅಹ್ಮದ್ ಥೋಕರ್, ಹನ್ಜುಲ್ಲಾ ಯಾಕೂಬ್ ಶಾ ಹಾಗೂ ಉಬೇದ್ ಅಹ್ಮದ್ ಪದ್ದರ್ ಎಂದು ಗುರುತಿಸಲಾಗಿದೆ.


ಜಮ್ಮು–ಕಾಶ್ಮೀರದ ಕುಲ್ಗಾಂ ಜಿಲ್ಲೆಯ ನೇಹಾಮಾ ಗ್ರಾಮದ ಬಳಿ ಉಗ್ರರು ಅಡಗಿದ್ದ ಸ್ಥಳವನ್ನು ಭಾರತೀಯ ಸೇನೆಯ ಯೋಧರು ಸುತ್ತುವರಿದಿದ್ದರು –ಪಿಟಿಐ ಚಿತ್ರ

ಪಿಎಎಫ್‌ಎಫ್ ಹಾಗೂ ಟಿಆರ್‌ಎಫ್, ಲಷ್ಕರ್–ಎ–ತಯಬಾದ ಘಟಕಗಳಾಗಿವೆ ಎಂದು ಭದ್ರತಾ ಪಡೆಗಳ ಅಧಿಕಾರಿಗಳು ತಿಳಿಸಿದ್ದಾರೆ.

'18 ಗಂಟೆಗಳ ಕಾಲ ಎನ್‌ಕೌಂಟರ್ ನಡೆದಿದೆ. ಉಗ್ರರ ಶವಗಳನ್ನು ಡ್ರೋನ್ ನೆರವಿನಿಂದ ಪತ್ತೆ ಹಚ್ಚಿ, ವಶಕ್ಕೆ ತೆಗೆದುಕೊಳ್ಳಲಾಯಿತು' ಎಂದು ಐಜಿಪಿ (ಕಾಶ್ಮೀರ ವಲಯ) ವಿ.ಕೆ.ಬಿರ್ದಿ ಹೇಳಿದ್ದಾರೆ.

'ನೇಹಾಮಾ ಗ್ರಾಮದಲ್ಲಿ ಉಗ್ರರು ಅಡಗಿದ್ದ ಬಗ್ಗೆ ಮಾಹಿತಿ ದೊರೆತ ಬೆನ್ನಲ್ಲೇ, ಶೋಧ ಕಾರ್ಯಾಚರಣೆ ಆರಂಭಿಸಿ, ಉಗ್ರರು ಅವಿತಿದ್ದ ಸ್ಥಳವನ್ನು ಸುತ್ತುವರಿಯಲಾಯಿತು. ಉಗ್ರರು ಯೋಧರತ್ತ ಗುಂಡು ಹಾರಿಸಿದಾಗ, ಪ್ರತಿಯಾಗಿ ಭದ್ರತಾ ಪಡೆಗಳು ಗುಂಡು ಹಾರಿಸಿದವು' ಎಂದು ಅವರು ಹೇಳಿದ್ದಾರೆ.

ಮಣಿಪುರ: ₹10 ಲಕ್ಷ ಪರಿಹಾರಕ್ಕೆ ಸೂಚನೆ

ಗುವಾಹಟಿ (ಪಿಟಿಐ): ಮಣಿಪುರದ ಜನಾಂಗೀಯ ಘರ್ಷಣೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ 4 ವಾರದಲ್ಲಿ ₹ 10 ಲಕ್ಷ ಪರಿಹಾರ ನೀಡಲು ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ತಿಳಿಸಿದೆ.

ಘರ್ಷಣೆ ಸಂಬಂಧಿತ ಪ್ರಕರಣಗಳನ್ನು ಆಲಿಸಲು ಎನ್‌ಎಚ್‌ಆರ್‌ಸಿ ಎರಡು ದಿನದ ಶಿಬಿರ ನಡೆಸಿತು. ಅಲ್ಲದೆ, ಹಿಂಸಾಕೃತ್ಯದಿಂದ ಹಾನಿಗೊಂಡ ಮನೆಗಳ ವಸ್ತುಸ್ಥಿತಿ ಅವಲೋಕಿಸಿ, ನೊಂದವರಿಗೆ 6 ವಾರದಲ್ಲಿ ನಿಯಮಾನುಸಾರ ಪರಿಹಾರ ವಿತರಿಸಲು ಸೂಚಿಸಿತು.

ಮಣಿಪುರ ರಾಜ್ಯದ ಮೂಲಕ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 2 ಮತ್ತು 37ರಲ್ಲಿ ಈಗ ನಡೆಯುತ್ತಿರುವ ರಸ್ತೆ ತಡೆ ಪ್ರತಿಭಟನೆಯನ್ನು ತೆರವುಗೊಳಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಇದೇ ಸಂದರ್ಭದಲ್ಲಿ ಆಯೋಗ ಆದೇಶಿಸಿತು.

93 ಪ್ರಕರಣಗಳಲ್ಲಿ ಮೃತರ ಹತ್ತಿರದ ಸಂಬಂಧಿಗೆ ತಲಾ ₹ 10 ಲಕ್ಷ ಪರಿಹಾರ ನೀಡಲು ಸೂಚಿಸಲಾಗಿದೆ. ಮೇ ತಿಂಗಳಿನಿಂದ ಇದುವರೆಗೂ 180 ಜನರು ಮೃತಪಟ್ಟಿದ್ದಾರೆ ಎಂದೂ ಆಯೋಗಕ್ಕೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದೆ.

'ಮೃತರ ಸಂಬಂಧಿಕರಿಗೆ ಪರಿಹಾರ ವಿತರಿಸುವ ಪ್ರಕ್ರಿಯೆಯನ್ನು ನಾಲ್ಕು ವಾರಗಳಲ್ಲಿ ಪೂರ್ಣಗೊಳಿಸಿ, ವರದಿ ಸಲ್ಲಿಸಲು ಸರ್ಕಾರಕ್ಕೆ ಸೂಚಿಸಲಾಗಿದೆ' ಎಂದು ಎನ್‌ಎಚ್‌ಆರ್‌ಸಿ ಅಧ್ಯಕ್ಷ, ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಾನಿಗೊಂಡ ಮನೆಗಳಿಗೆ ಸಂಬಂಧಿಸಿದಂತೆ ನಷ್ಟದ ಅಂದಾಜು ಪ್ರಕ್ರಿಯೆಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಿ, ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳಂತೆ ಪರಿಹಾರ ವಿತರಿಸಬೇಕು ಎಂದು ಸೂಚಿಸಲಾಗಿದೆ ಎಂದು ತಿಳಿಸಿದರು. ಮನೆಗಳನ್ನು ಮರುನಿರ್ಮಿಸಲು ₹ 10 ಲಕ್ಷ ಪರಿಹಾರ ನೀಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಆದಷ್ಟು ಶೀಘ್ರದಲ್ಲಿ ಮನೆಗಳ ಮರು ನಿರ್ಮಾಣ ಕಾರ್ಯ ಆರಂಭವಾಗುವಂತೆ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಆದೇಶಿಸಲಾಗಿದೆ ಎಂದರು.

ಮಣಿಪುರದ ಕೆಲವೆಡೆ ಈಗಲೂ ಹಿಂಸಾಚಾರ ನಡೆದಿದೆ ಎಂಬುದನ್ನು ಗಮನಿಸಿದ ಅವರು, ಪರಿಸ್ಥಿತಿ ಶಮನಗೊಳಿಸಲು ಅಗತ್ಯ ಕಾರ್ಯಕ್ರಮ ರೂಪಿಸಬೇಕು ಎಂದು ಸರ್ಕಾರಕ್ಕೆ ಆದೇಶಿಸಿದರು.

ಜ್ಞಾನವಾಪಿ: ವರದಿ ಸಲ್ಲಿಕೆಗೆ ಮತ್ತೆ ಎರಡು ವಾರ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ವಾರಾಣಸಿ: ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ನಡೆಸಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ), ವರದಿ ಸಲ್ಲಿಸಲು ಇನ್ನೂ 15 ದಿನಗಳ ಕಾಲಾವಕಾಶ ನೀಡುವಂತೆ ಕೋರಿ ಶುಕ್ರವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

ಈ ಕುರಿತ ವರದಿಯನ್ನು ಶುಕ್ರವಾರ ಸಲ್ಲಿಸುವಂತೆ ವಾರಾಣಸಿಯಲ್ಲಿರುವ ಜಿಲ್ಲಾ ನ್ಯಾಯಾಲಯವು ಎಎಸ್‌ಐಗೆ ಸೂಚಿಸಿತ್ತು. ಆದರೆ, ಮತ್ತೆ ಎರಡು ವಾರ ಕಾಲಾವಕಾಶ ನೀಡುವಂತೆ ಎಎಸ್‌ಐ ಕೋರಿದ್ದು ಈ ಕುರಿತು ನ್ಯಾಯಾಲಯವು ಶನಿವಾರ ವಿಚಾರಣೆ ನಡೆಸಲಿದೆ ಎಂದು ಈ ಪ್ರಕರಣದ ವಕೀಲರು ತಿಳಿಸಿದ್ದಾರೆ.

ಮಸೀದಿ ಸಂಕೀರ್ಣದ ಸಮೀಕ್ಷೆಯು ಪೂರ್ಣಗೊಂಡಿದ್ದು, ತಾಂತ್ರಿಕ ವರದಿಗಳು ಇನ್ನಷ್ಟೇ ಬರಬೇಕಿದೆ. ಈ ಹಿನ್ನೆಲೆಯಲ್ಲಿ ವರದಿ ಸಲ್ಲಿಸಲು ಹೆಚ್ಚುವರಿ ಸಮಯಾವಕಾಶ ನೀಡಲು ಕೋರಿ ವಾರಾಣಸಿ ಜಿಲ್ಲಾ ನ್ಯಾಯಾಲಯದಲ್ಲಿ ಎಎಸ್‌ಐ ಅರ್ಜಿ ಸಲ್ಲಿಸಿದೆ ಎಂದು ಕೇಂದ್ರ ಸರ್ಕಾರದ ಪರ ವಕೀಲ ಅಮಿತ್ ಶ್ರೀವಾಸ್ತವ ತಿಳಿಸಿದ್ದಾರೆ.

'ಮಿಧಿಲಿ': ಸಮುದ್ರಕ್ಕಿಳಿಯದಂತೆ ಮೀನುಗಾರರಿಗೆ ಸಲಹೆ

ಈಶಾನ್ಯ ರಾಜ್ಯಗಳಲ್ಲಿ ಭಾರಿ ಮಳೆ

ಭುವನೇಶ್ವರ/ ಕೋಲ್ಕತ್ತ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಶುಕ್ರವಾರ ಉಂಟಾಗಿರುವ ತೀವ್ರ ವಾಯುಭಾರ ಕುಸಿತದ ಪರಿಣಾಮ ಪ್ರಬಲ 'ಮಿಧಿಲಿ' ಚಂಡಮಾರುತ ರೂಪುಗೊಂಡಿದೆ.



ಇದರ ಬೆನ್ನಲ್ಲೇ, ಈಶಾನ್ಯ ರಾಜ್ಯಗಳಾದ ಮಿಜೋರಾಂ, ಮೇಘಾಲಯ, ತ್ರಿಪುರಾ ಹಾಗೂ ಅಸ್ಸಾಂಗಳಲ್ಲಿ ಸಾಧಾರಣದಿಂದ ಭಾರಿ ಮಳೆಯಾಗಿದೆ. ಜೋರಾದ ಗಾಳಿಯೊಂದಿಗೆ ಬೀಳುತ್ತಿರುವ ಮಳೆ ಶನಿವಾರವೂ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ನೆಚ್ಚರಿಕೆ ನೀಡಿದೆ.

ಮೂರು ದಿನಗಳ ಕಾಲ ನಡೆಯುವ, ಮೇಘಾಲಯದ ಪ್ರಸಿದ್ಧ 'ಚೆರ್ರಿ ಬ್ಲಾಸಮ್ ಫೆಸ್ಟಿವಲ್'ನ ಮೊದಲ ದಿನದ ಕಾರ್ಯಕ್ರಮವನ್ನು ರದ್ದುಪಡಿಸಿದ್ದಾಗಿ ಸಂಘಟಕರು ತಿಳಿಸಿದ್ದಾರೆ.

ಮಿಜೋರಾಂ ರಾಜಧಾನಿ ಐಜ್ವಾಲ್‌ನಲ್ಲಿಯೂ ಭಾರಿ ಮಳೆಯಾಗಿದೆ. ರಾಜ್ಯದ ಚಂಫೈ, ಕೋಲಾಸಿಬ್, ಲಾಂಗ್ತ್ಲೈ ಮತ್ತು ಮಾಮಿಟ್ ಜಿಲ್ಲೆಗಳಲ್ಲಿ ಶನಿವಾರ ಜೋರು ಮಳೆ ಬೀಳಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ಗುರುವಾರ ಸಂಜೆಯಿಂದಲೂ ಮಳೆ ಬೀಳುತ್ತಿದ್ದು, 8.7 ಸೆಂ.ಮೀ.ನಷ್ಟು ಮಳೆಯಾಗಿದೆ.

ಪ್ರತಿ ಗಂಟೆಗೆ 80 ಕಿ.ಮೀ ವೇಗವಾಗಿ ಚಲಿಸುತ್ತಿರುವ ಈ ಚಂಡಮಾರುತವು ಶುಕ್ರವಾರ ರಾತ್ರಿ ಅಥವಾ ಶನಿವಾರ ಬೆಳಿಗ್ಗೆ ಬಾಂಗ್ಲಾದೇಶದ ಕರಾವಳಿಗೆ ಅಪ್ಪಳಿಸಲಿದೆ ಎಂದು ಐಎಂಡಿ ತಿಳಿಸಿದೆ.

ಬಂಗಾಳ ಕೊಲ್ಲಿಯ ಉತ್ತರ ಭಾಗ ಮತ್ತು ಪಶ್ಚಿಮ ಬಂಗಾಳದ ಕರಾವಳಿ ತೀರದ ಮೀನುಗಾರರು ಯಾವುದೇ ಕಾರಣಕ್ಕೂ ಶನಿವಾರದವರೆಗೆ ಸಮುದ್ರಕ್ಕೆ ಇಳಿಯಬಾರದು ಎಂದು ಐಎಂಡಿ ಎಚ್ಚರಿಕೆ ರೂಪದ ಸಂದೇಶ ನೀಡಿದೆ.

ಒಡಿಶಾದ ಕರಾವಳಿ ಭಾಗದಿಂದ 150 ಕಿ.ಮೀ ವೇಗದಲ್ಲಿ ಹಾದುಹೋಗುವ ಈ ಚಂಡಮಾರುತದಿಂದ ರಾಜ್ಯದ ಮೇಲೆ ಯಾವುದೇ ಗಂಭೀರ ಪರಿಣಾಮ ಆಗುವುದಿಲ್ಲ ಎಂದು ಐಎಂಡಿ ವಿಜ್ಞಾನಿ ಉಮಾಶಂಕರ್ ದಾಸ್ ತಿಳಿಸಿದ್ದಾರೆ.

ಮಾಲ್ಡೀವ್ಸ್, ಈ ಚಂಡಮಾರುತಕ್ಕೆ ಮಿಧಿಲಿ ಎಂದು ಹೆಸರಿಸಿದ್ದು, ಇದರ ಅರ್ಥ ದೊಡ್ಡ ಅಥವಾ ಬೃಹತ್ ಮರ ಎಂದಾಗುತ್ತದೆ. ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ಉಂಟಾಗುವ ಚಂಡಮಾರುತಗಳಿಂದ ಪರಿಣಾಮ ಎದುರಿಸುವ ರಾಷ್ಟ್ರಗಳು ಸರದಿ ಪ್ರಕಾರವಾಗಿ ಚಂಡಮಾರುತಗಳಿಗೆ ಹೆಸರು ನೀಡುತ್ತವೆ.

ಉತ್ತರಾಖಂಡ: ಕಮರಿಗೆ ಉರುಳಿದ ವಾಹನ– 9 ಸಾವು

ನೈನಿತಾಲ್ (ಉತ್ತರಾಖಂಡ) (ಪಿಟಿಐ): 'ಉತ್ತರಾಖಂಡದ ನೈನಿತಾಲ್ ಜಿಲ್ಲೆಯಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ವಾಹನವೊಂದು ಛೇಡಖಾನ್– ಮಿದರ್ ರಸ್ತೆಯಲ್ಲಿನ ಕಮರಿಗೆ ಶುಕ್ರವಾರ ಬೆಳಿಗ್ಗೆ ಉರುಳಿದ ಪರಿಣಾಮ ಒಂಬತ್ತು ಮಂದಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಬೆಳಿಗ್ಗೆ 8 ಗಂಟೆ ಸುಮಾರಿಗೆ ಪಟ್ಲೋಟ್ ಗ್ರಾಮದಿಂದ ಅಮ್ಜದ್ ಗ್ರಾಮಕ್ಕೆ ವಾಹನ ತೆರಳುತ್ತಿತ್ತು. ಈ ವೇಳೆ ರಸ್ತೆಯಲ್ಲಿ ಎದುರಿನಿಂದ ಬಂದ ಮೋಟರ್ ಸೈಕಲ್‌ಗೆ ಡಿಕ್ಕಿ ಹೊಡೆಯುವುದುನ್ನು ತಪ್ಪಿಸಲು ಯತ್ನಿಸಿದಾಗ ಈ ಘಟನೆ' ಎಂದು ನೈನಿತಾಲ್ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಹ್ಲಾದ್ ನಾರಾಯಣ್ ಮೀನಾ ತಿಳಿಸಿದರು.

'ಅಪಘಾತ ಸಂಭವಿಸಿದ ಸ್ಥಳದಲ್ಲೇ ಆರು ಮಂದಿ ಮೃತಪಟ್ಟಿದ್ದಾರೆ. ಉಳಿದ ಮೂವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದರು.

ಯಮನ್ ಅಧ್ಯಕ್ಷರ ಕೈಯಲ್ಲಿ ಕೇರಳದ ನರ್ಸ್ ಭವಿಷ್ಯ

ಕ್ಷಮಾಪಣಾ ಅರ್ಜಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 2017ರಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವ ಕೇರಳ ಮೂಲದ ಶುಶ್ರೂಷಕಿ ನಿಮಿಷಾ ಪ್ರಿಯಾ ಅವರು ಸಲ್ಲಿಸಿದ್ದ ಕ್ಷಮಾಪಣಾ ಅರ್ಜಿಯನ್ನು ಯಮೆನ್‌ನ ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ನಿಮಿಷಾ ಪ್ರಿಯಾ ಅವರು ಸಲ್ಲಿಸಿದ್ದ ಕ್ಷಮಾಪಣಾ ಅರ್ಜಿ ತಿರಸ್ಕರಿಸಿರುವ ವಿಷಯವನ್ನು, ದೆಹಲಿ ಹೈಕೋರ್ಟ್ ಗುರುವಾರ ನಡೆಸಿದ ವಿಚಾರಣೆ ವೇಳೆ ಕೇಂದ್ರ ಸರ್ಕಾರ ಖಚಿತಪಡಿಸಿದೆ. ಹೀಗಾಗಿ ಅವರ ಭವಿಷ್ಯವು ಈಗ ಯಮನ್ ಅಧ್ಯಕ್ಷರ ಕೈಯಲ್ಲಿದೆ ಎಂದು ಹೇಳಿದೆ.

ಏನಿದು ಪ್ರಕರಣ: ಪಾಲಕ್ಕಾಡ್ ಮೂಲದ ನಿಮಿಷಾ ಅವರು ಯಮನ್‌ನಲ್ಲಿ ಶುಶ್ರೂಷಕಿಯಾಗಿದ್ದು, 2017ರಲ್ಲಿ ನಡೆದ ತಲಾಲ್ ಅಬ್ದಿ ಮಹದಿ ಎಂಬುವರ ಕೊಲೆ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾಗಿದೆ. ಹೀಗಾಗಿ ಅವರಿಗೆ 2018ರಲ್ಲಿ ನ್ಯಾಯಾಲಯವೊಂದು ಮರಣದಂಡನೆ ಶಿಕ್ಷೆ ವಿಧಿಸಿತ್ತು.

ತನ್ನ ಮಗಳನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಸಂತ್ರಸ್ತರ ಕುಟುಂಬದೊಂದಿಗೆ ಸಂಧಾನ ಮಾತುಕತೆ ನಡೆಸಲು ಯಮನ್‌ಗೆ ತೆರಳಲು ಅವಕಾಶ ನೀಡಬೇಕು ಎಂದು ಕೋರಿ ಭಾರತದಲ್ಲಿರುವ ನಿಮಿಷಾ ಅವರ ತಾಯಿ ಪ್ರೇಮಾ ಕುಮಾರಿ ದೆಹಲಿ ನ್ಯಾಯಾಲಯದ ಮೊರೆ ಹೋಗಿದ್ದರು.

ದಕ್ಷಿಣ ಕೊರಿಯಾ: ನಾಯಿ ಮಾಂಸ ತಿನ್ನುವುದು ನಿಷೇಧ?


ಸೋಲ್(ರಾಯಿಟರ್ಸ್): 'ದಕ್ಷಿಣ ಕೊರಿಯಾದಲ್ಲಿ ನಾಯಿ ಮಾಂಸ ತಿನ್ನುವುದಕ್ಕೆ ನಿಷೇಧ ಹೇರಲು ಚಿಂತನೆ ನಡೆಸಿದ್ದು, ಈ ಮೂಲಕ ವಿವಾದಾತ್ಮಕ ಪುರಾತನ ಪದ್ಧತಿಗೆ ಅಂತ್ಯ ಹಾಡಲಾಗುವುದು' ಎಂದು ಆಡಳಿತಾರೂಢ ಪೀಪಲ್ ಪವರ್ ಪಕ್ಷದ ನೀತಿ ನಿರೂಪಣೆ ವಿಭಾಗದ ಮುಖ್ಯಸ್ಥ ಯು ಇಯು-ಡಾಂಗ್ ಶುಕ್ರವಾರ ತಿಳಿಸಿದ್ದಾರೆ.

'ನಾಯಿ ಮಾಂಸ ತಿನ್ನುವುದರ ಕುರಿತ ಎಲ್ಲಾ ವಿವಾದಗಳಿಗೆ ತೆರೆ ಎಳೆಯುವ ಸಮಯ ಸನ್ನಿಹಿತವಾಗಿದೆ. ಸರ್ಕಾರ ಮತ್ತು ಆಡಳಿತಾರೂಢ ಪಕ್ಷವು ಈ ಕುರಿತ ಮಸೂದೆಯನ್ನು ಈ ವರ್ಷ ಮಂಡಿಸಲಿದೆ' ಎಂದು ಅವರು ಸರ್ಕಾರಿ ಅಧಿಕಾರಿಗಳ ಮತ್ತು ಪ್ರಾಣಿ ಹಕ್ಕುಗಳ ಕಾರ್ಯಕರ್ತರ ಸಭೆಯಲ್ಲಿ ಹೇಳಿದ್ದಾರೆ.

ವೆಸ್ಟ್ ಇಂಡೀಸ್ ಕ್ರಿಕೆಟ್ ದಿಗ್ಗಜ ವಿವಿಯನ್ ರಿಚರ್ಡ್ಸ್ ಮನದಾಳದ ಮಾತು

‘ಶಮಿಯಂತಹ ಬೌಲರ್ ಮತ್ತೊಬ್ಬರಿಲ್ಲ’

• ಗಿರೀಶ ದೊಡ್ಡಮನಿ



ವೆಸ್ಟ್ ಇಂಡೀಸ್ ಮಾಜಿ ಕ್ರಿಕೆಟಿಗ ವಿವಿಯನ್ ರಿಚರ್ಡ್ಸ್ –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ‘ಮೊಹಮ್ಮದ್ ಶಮಿ ಅದ್ಭುತ ಬೌಲರ್ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ನ್ಯೂಜಿಲೆಂಡ್ ಎದುರು ಅವರು ಏಳು ವಿಕೆಟ್ ಪಡೆದ ಇನಿಂಗ್ಸ್ ಅಂತೂ ಅತ್ಯದ್ಭುತ. ಅದನ್ನು ನಾನು ಕಣ್ಣಾರೆ ಕಂಡು ಚಕಿತನಾದೆ. ಅವರಷ್ಟು ಚೆನ್ನಾಗಿ ಚೆಂಡಿನ ಸೀಮ್ ಅನ್ನು ಪ್ರಯೋಗಿಸುವ ಮತ್ತೊಬ್ಬ ಬೌಲರ್ ಇಲ್ಲ. ಭಾರತ ತಂಡದ ವೇಗದ ಬೌಲಿಂಗ್‌ನ ಪ್ರಮುಖ ಶಕ್ತಿ ಅವರು....’

– ವೆಸ್ಟ್ ಇಂಡೀಸ್ ಕ್ರಿಕೆಟ್ ದಿಗ್ಗಜ ವಿವಿಯನ್ ರಿಚರ್ಡ್ಸ್ ಅವರು ಭಾರತ ಕ್ರಿಕೆಟ್ ತಂಡದ ವೇಗಿ ಶಮಿಯ ಬಗ್ಗೆ ಆಡಿದ ಮೆಚ್ಚುಗೆಯ ಮಾತುಗಳಿವು. ಮುಂಬೈನಲ್ಲಿ ಈಚೆಗೆ ನಡೆದ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಪಂದ್ಯವನ್ನು ವೀಕ್ಷಿಸಿದ 71 ವರ್ಷದ ರಿಚರ್ಡ್ಸ್ ಶುಕ್ರವಾರ ಬೆಂಗಳೂರಿಗೆ ಬಂದಿದ್ದರು. ವರ್ಚಸ್ ಸ್ಪಿರಿಟ್ಸ್ ಪ್ರಚಾರ ರಾಯಭಾರಿಯಾಗಿ ನೇಮಕವಾಗಿರುವ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ ನಂತರ ನೀಡಿದ ಸಂದರ್ಶನದ ಸಾರಾಂಶ ಇಲ್ಲಿದೆ.

‘ವಿರಾಟ್ ಕೊಹ್ಲಿ ಐವತ್ತನೇ ಶತಕ ಅಮೋಘ ಸಾಧನೆ. ಅವರ ಆಟದ ವೈಖರಿ ಮತ್ತು ವ್ಯಕ್ತಿತ್ವ ವಿಶೇಷವಾದದ್ದು. ಅವರೊಬ್ಬ ಬೇರೆಯೇ ಲೋಕದಿಂದ ಇಳಿದು ಬಂದಿರುವ ಆಟಗಾರ. ಕೆಲಕಾಲದ ಹಿಂದೆ ಅವರು ಫಾರ್ಮ್ ಕಳೆದುಕೊಂಡು ಪರದಾಡುತ್ತಿದ್ದರು. ಹಲವಾರು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಒತ್ತಡದಲ್ಲಿದ್ದರು. ತಂಡದಿಂದ ಸ್ಥಾನ ಕಳೆದುಕೊಳ್ಳುವ ಆತಂಕವೂ ಇತ್ತು. ಆದರೆ ಆ ಸಂದರ್ಭದಲ್ಲಿ ನಾಯಕ ರೋಹಿತ್ ಶರ್ಮಾ, ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನೆರವು ಸಿಬ್ಬಂದಿ ಅವರಿಗೆ ಬೆಂಬಲವಾಗಿ ನಿಂತರು. ಅವರ ಸಾಮರ್ಥ್ಯದಲ್ಲಿ ವಿಶ್ವಾಸವಿಟ್ಟರು. ಈಗ ಅದರ ಫಲ ತಂಡಕ್ಕೆ ದೊರೆಯುತ್ತಿದೆ. ಇನ್ನೂ ದೊಡ್ಡ ಸಾಧನೆ ಮಾಡುವ ಸಾಮರ್ಥ್ಯ ಅವರಿಗೆ ಇದೆ’ ಎಂದರು.

‘ಭಾರತವು ಅದೃಷ್ಟಶಾಲಿಯಾಗಿದೆ. ಏಕಕಾಲಕ್ಕೆ ಎರಡು ಕ್ರಿಕೆಟ್ ತಂಡಗಳನ್ನು ಆಡಿಸುವಷ್ಟು ಆಟಗಾರರು ಇಲ್ಲಿದ್ದಾರೆ. ಆದರೆ ಇಲ್ಲಿಯ ಆಟಗಾರರನ್ನು ಪರಸ್ಪರ ಹೋಲಿಕೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಎಲ್ಲರೂ ಅವರವರ ಮಟ್ಟಿಗೆ ಶ್ರೇಷ್ಠರು. ನಾನು ಆಡುವ ಸಂದರ್ಭದಲ್ಲಿ ಸುನಿಲ್ ಗಾವಸ್ಕರ್ ಇದ್ದರು. ಅವರು ಭಾರತದ ಬ್ಯಾಟಿಂಗ್ ಪರಂಪರೆಯ ಗಾಡ್‌ಫಾದರ್ ಎನ್ನಬಲ್ಲೆ. ಅವರ ನಂತರ ಸಚಿನ್ ತೆಂಡೂಲ್ಕರ್ ಮತ್ತು ಈಗ ಕೊಹ್ಲಿ ಇದ್ದಾರೆ’ ಎಂದರು.

‘ನಾಯಕತ್ವಕ್ಕೆ ರೋಹಿತ್ ಶರ್ಮಾ ಹೊಸ ವ್ಯಾಖ್ಯಾನ ಬರೆದಿದ್ದಾರೆ. ತಾವೇ ಮುಂದೆ ನಿಂತು ತಂಡವನ್ನು ಗೆಲುವಿನತ್ತ ಮುನ್ನಡೆಸುತ್ತಿದ್ದಾರೆ. ಉತ್ತಮ ಆರಂಭ ನೀಡುತ್ತಿದ್ದಾರೆ. ತಾವು ಚೆನ್ನಾಗಿ ಆಡಿ ಉಳಿದ ಆಟಗಾರರಲ್ಲಿ ವಿಶ್ವಾಸ ತುಂಬುತ್ತಿದ್ದಾರೆ. ಅದಕ್ಕೆ ದೊಡ್ಡ ಮೊತ್ತ ಸಾಧ್ಯವಾಗುತ್ತಿದೆ’ ಎಂದು ಶ್ಲಾಘಿಸಿದರು.

‘ಏಕದಿನ ಕ್ರಿಕೆಟ್ ಮಾದರಿ ನಶಿಸುವುದಿಲ್ಲ. ಟಿ20 ಮಾದರಿಯಲ್ಲಿ ಇರದ ಹತ್ತಾರು ಗುಣಗಳು ಈ ಮಾದರಿಯಲ್ಲಿವೆ. ಇದು ಆಟಗಾರರ ಸಾಮರ್ಥ್ಯವನ್ನು ಬೆಳೆಸಲು ಸಹಕಾರಿ ಯಾಗಿದೆ. ಆಟಗಾರರ ಮತ್ತು ಬೆಳವ ಣಿಗೆಗೆ ಏಕದಿನ ಮಾದರಿ ಅವಶ್ಯ. ಟೆಸ್ಟ್ ಮಾದರಿಯ ದಿನಗಳನ್ನು ಕಡಿತ ಗೊಳಿಸುವ ಬಗ್ಗೆ ನಾನು ಯಾವುದೇ ಸಲಹೆ ಕೊಡುವುದಿಲ್ಲ. ಅದನ್ನು ಐಸಿಸಿ ನಿರ್ಧರಿಸುತ್ತದೆ’ ಎಂದರು.

‘ಮುಂದಿನ ವರ್ಷ ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ಟಿ20 ವಿಶ್ವಕಪ್ ನಡೆಯಲಿರುವುದು ಸ್ವಾಗತಾರ್ಹ. ಸದ್ಯದ ಏಕದಿನ ವಿಶ್ವಕಪ್ ಟೂರ್ನಿಯ ವಿಜೃಂಭ ಣೆಯನ್ನು ನೋಡಿ ವಿಂಡೀಸ್‌ನಲ್ಲಿ ಅಸೂಯೆ ಹುಟ್ಟಬಹುದು. ಆದ್ದರಿಂದ ಮುಂದಿನ ಬಾರಿ ಭಾರತಕ್ಕೆ ಪೈಪೋಟಿ ನೀಡಿ ಉತ್ತಮವಾಗಿ ಆಯೋಜಿಸುವ ನಿರೀಕ್ಷೆ ಇದೆ. ಅಲ್ಲದೇ ವಿಂಡೀಸ್ ಬೆಳವಣಿಗೆಗೂ ಇದು ಮುನ್ನುಡಿಯಾಗಬಹುದು’ ಎಂದರು.

ಈ ಬಾರಿಯ ವಿಶ್ವಕಪ್ ಟೂರ್ನಿಗೆ ವಿಂಡೀಸ್ ಅರ್ಹತೆ ಗಿಟ್ಟಿಸದೇ ಇರುವುದಕ್ಕೆ ಬೇಸರವೂ ಅವರ ಮಾತುಗಳಲ್ಲಿ ವ್ಯಕ್ತವಾಯಿತು.

ಭಾನುವಾರ ನಡೆಯಲಿರುವ ವಿಶ್ವಕಪ್ ಫೈನಲ್‌ನಲ್ಲಿ ಭಾರತದ ಜಯದ ಸಾಧ್ಯತೆ ಹೆಚ್ಚಿದೆ ಎಂದೂ ಅವರು ಅಭಿಪ್ರಾಯಪಟ್ಟರು.



ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ವಿಶ್ವಕಪ್ ಫೈನಲ್ ಪಂದ್ಯಕ್ಕೂ ಮುನ್ನ ಭಾರತೀಯ ವಾಯುಪಡೆಯ ಸೂರ್ಯಕಿರಣ್ ತಂಡವು ವಿಶೇಷ ವೈಮಾನಿಕ ಪ್ರದರ್ಶನ ನೀಡಲಿದ್ದು, ಶುಕ್ರವಾರ ಪೂರ್ವಾಭ್ಯಾಸ ನಡೆಯಿತು –ಪಿಟಿಐ ಚಿತ್ರ

ಫೈನಲ್: ಹೋಟೆಲ್ ಕೊಠಡಿ ದರ ಗಗನಕ್ಕೆ

ಕ್ರಿಕೆಟ್ ವಿಶ್ವಕಪ್ ಭಾರತ 2023

ಅಹಮದಾಬಾದ್ (ಪಿಟಿಐ): ಭಾರತ–ಆಸ್ಟ್ರೇಲಿಯಾ ನಡುವಣ ವಿಶ್ವಕಪ್ ಫೈನಲ್ ಪಂದ್ಯ ವೀಕ್ಷಿಸಲು ದೇಶದ ವಿವಿಧ ಭಾಗಗಳು ಮಾತ್ರವಲ್ಲದೆ, ವಿದೇಶದಿಂದಲೂ ಕ್ರಿಕೆಟ್ ಪ್ರೇಮಿಗಳು ಅಹಮದಾಬಾದ್‌ಗೆ ಬಂದಿಳಿಯುತ್ತಿದ್ದಾರೆ. ಇದರಿಂದ ಇಲ್ಲಿನ ಹೋಟೆಲ್ ಕೊಠಡಿಗಳ ಬೆಲೆ ಗಗನಕ್ಕೇರಿದೆ. ಅಹಮದಾಬಾದ್‌ಗೆ ಬರುವ ವಿಮಾನಗಳ ಟಿಕೆಟ್ ದರವೂ ಭಾರಿ ಏರಿಕೆಯಾಗಿದೆ.

ಪಂದ್ಯದ ದಿನ (ಭಾನುವಾರ) ವಾಸ್ತವ್ಯ ಹೂಡಲು ಕೆಲವರು ಲಕ್ಷ ರೂಪಾಯಿಗೂ ಅಧಿಕ ಮೊತ್ತ ಪಾವತಿಸಿ ಹೋಟೆಲ್ ಕೊಠಡಿಗಳನ್ನು ಮುಂಗಡವಾಗಿ ಕಾಯ್ದಿರಿಸಿದ್ದಾರೆ. ಪಂಚತಾರಾ ಹೋಟೆಲ್‌ಗಳಲ್ಲಿ ಒಂದು ಕೊಠಡಿಯ ಬೆಲೆ (ಒಂದು ರಾತ್ರಿಗೆ) ಗರಿಷ್ಠ ₹ 2 ಲಕ್ಷ ತಲುಪಿದೆ. ಇತರ ಹೋಟೆಲ್‌ಗಳ ಕೊಠಡಿಯ ಬೆಲೆಯಲ್ಲಿ ಐದರಿಂದ ಏಳು ಪಟ್ಟು ಹೆಚ್ಚಳವಾಗಿದೆ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯವನ್ನು 1.30 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಿಸಲಿದ್ದಾರೆ. ಇದರಲ್ಲಿ ಸುಮಾರು 40 ಸಾವಿರ ಮಂದಿ ಹೊರಗಿನಿಂದ (ಬೇರೆ ರಾಜ್ಯಗಳು ಮತ್ತು ವಿದೇಶ) ಬರುವವರು ಎಂದು ಅಂದಾಜಿಸಲಾಗಿದೆ.

‘ಕೆಲವರು ₹ 50 ಸಾವಿರದಿಂದ ₹ 1.25 ಲಕ್ಷ ಪಾವತಿಸಿ ಐಷಾರಾಮಿ ಹೋಟೆಲ್‌ಗಳ ಕೊಠಡಿ ಬುಕ್ ಮಾಡಿದ್ದಾರೆ. ಇತರೆ ದಿನಗಳಲ್ಲಿ ಒಂದು ರಾತ್ರಿಗೆ ₹ 3 ಸಾವಿರದಿಂದ ₹ 4 ಸಾವಿರ ದರ ವಿಧಿಸುತ್ತಿದ್ದ ಹೋಟೆಲ್‌ಗಳು ಬೆಲೆಯನ್ನು ₹ 20 ಸಾವಿರದವರೆಗೆ ಹೆಚ್ಚಿಸಿವೆ’ ಎಂದು ಗುಜರಾತ್ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಅಧ್ಯಕ್ಷ ನರೇಂದ್ರ ಸೊಮಾನಿ ಹೇಳಿದ್ದಾರೆ.

ವಿಮಾನ ಟಿಕೆಟ್‌ಗಳ ಬೆಲೆಯಲ್ಲೂ ಏರಿಕೆ ಕಂಡಿದೆ. ಇತರೆ ದಿನಗಳಲ್ಲಿ ಚೆನ್ನೈ–ಅಹಮದಾಬಾದ್ ವಿಮಾನ ಟಿಕೆಟ್ ದರ ₹ 5,000 ಇದ್ದರೆ, ಈಗ ₹ 16 ಸಾವಿರದಿಂದ ₹ 25 ಸಾವಿರದವರೆಗೆ ಏರಿಕೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಅರ್ಜೆಂಟೀನಾಕ್ಕೆ ಉರುಗ್ವೆ ಆಘಾತ

ಮಾಂಟೆವಿಡಿಯೊ (ಎಎಫ್‌ಪಿ): ವಿಶ್ವ ಚಾಂಪಿಯನ್ ಅರ್ಜೆಂಟೀನಾ ತಂಡಕ್ಕೆ ಫುಟ್‌ಬಾಲ್ ವಿಶ್ವಕಪ್ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ಉರುಗ್ವೆ ತಂಡ ಆಘಾತ ನೀಡಿತು. ಮತ್ತೊಂದು ಪಂದ್ಯದಲ್ಲಿ ಕೊಲಂಬಿಯಾ, ಪ್ರಬಲ ಬ್ರೆಜಿಲ್ ವಿರುದ್ಧ ಅಚ್ಚರಿಯ ಗೆಲುವು ಸಾಧಿಸಿತು.

ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿರುವ ಬೊಂಬೊನೆರಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಉರುಗ್ವೆ 2– 0 ಯಿಂದ ಗೆಲುವು ಸಾಧಿಸಿತು. ಈ ಮೂಲಕ ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡದ ಸತತ 14 ಪಂದ್ಯಗಳ ಗೆಲುವಿನ ಅಭಿಯಾನಕ್ಕೆ ತೆರೆಬಿತ್ತು.

ಮತ್ತೊಂದು ಪಂದ್ಯದಲ್ಲಿ ಕೊಲಂಬಿಯಾ ತಂಡವು 2–1ಯಿಂದ ಬ್ರೆಜಿಲ್ ತಂಡವನ್ನು ಮಣಿಸಿತು.

ಟೆನಿಸ್: ಸೆಮಿಗೆ ಬೋಪಣ್ಣ– ಎಬ್ಡೆನ್

ಟುರಿನ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರು ಎಟಿಪಿ ಟೆನಿಸ್ ಫೈನಲ್ಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಬೋಪಣ್ಣ–ಎಬ್ಡೆನ್ ಜೋಡಿ 6–4, 7–6 ರಿಂದ ನೆದರ್ಲೆಂಡ್ಸ್‌ನ ವೆಸ್ಲಿ ಕೂಲ್‌ಹೊಫ್– ಬ್ರಿಟನ್‌ನ ನೀಲ್ ಸ್ಕುಪ್‌ಸ್ಕಿ ಅವರನ್ನು ಮಣಿಸಿತು.

43 ವರ್ಷದ ಬೋಪಣ್ಣ ಅವರು ಎಟಿಪಿ ಫೈನಲ್ಸ್ ಟೂರ್ನಿಯ ಪಂದ್ಯ ಗೆದ್ದ ಅತಿಹಿರಿಯ ಆಟಗಾರ ಎನಿಸಿಕೊಂಡಿದ್ದಾರೆ. ಭಾರತ– ಆಸ್ಟ್ರೇಲಿಯಾ ಜೋಡಿ ಈ ಟೂರ್ನಿಯ ಫೈನಲ್ ಪ್ರವೇಶಿಸಿದರೆ, ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದೊಂದಿಗೆ ಋತುವನ್ನು ಕೊನೆಗೊಳಿಸಲಿದೆ.

ಇಂಡಿಪೆಂಡೆಂಟ್ಸ್ ತಂಡಕ್ಕೆ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಕ್ರಿಕೆಟ್: ಕ್ವಾರ್ಟರ್‌ಗೆ ಕರ್ನಾಟಕ

ಬೆಂಗಳೂರು: ಅನೀಶ್ವರ್ ಗೌತಮ್ ಮತ್ತು ಕೆ.ವಿ. ಅನೀಶ್ ಅವರ ಶತಕದ ಬಲದಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಪುರುಷರ ಏಕದಿನ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹರಿಯಾಣ ತಂಡವನ್ನು ಮಣಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ದೆಹಲಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 50 ಓವರ್‌ಗಳಲ್ಲಿ ಐದು ವಿಕೆಟ್‌ಗೆ 343 ರನ್ ಗಳಿಸಿತು. ಅನೀಶ್ 107 (101ಎ, 7x4, 4x6), ಅನೀಶ್ವರ್ ಔಟಾಗದೆ 125 (109ಎ, 8x4, 5x6) ಗಳಿಸಿ ತಂಡಕ್ಕೆ ಆಸರೆಯಾದರು.

ಸವಾಲಿನ ಗುರಿಯನ್ನು ಬೆನ್ನಟ್ಟಿದ ಹರಿಯಾಣ ತಂಡ 46 ಓವರ್‌ಗಳಲ್ಲಿ 264 ರನ್‌ಗೆ ಆಲೌಟಾಯಿತು. ಯುವರಾಜ್ ಸಿಂಗ್ 101 (97ಎ, 8x4, 1x6) ಏಕಾಂಗಿ ಹೋರಾಟ ನಡೆಸಿದರು. 79 ರನ್‌ಗಳಿಂದ ಕರ್ನಾಟಕ ತಂಡ ಗೆಲುವು ಸಾಧಿಸಿತು. ಇದೇ 19ರಂದು ನವದೆಹಲಿಯಲ್ಲಿ ನಡೆಯುವ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡವು ಮುಂಬೈ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 5 ವಿಕೆಟ್‌ಗೆ 343 (ಮ್ಯಾಕ್ನಿಲ್ ಹ್ಯಾಡ್ಲಿ ನೊರೊನ್ಹಾ 46, ಅನೀಶ್ ಕೆ.ವಿ. 107, ಅನೀಶ್ವರ್ ಗೌತಮ್ ಔಟಾಗದೆ 125, ಆರ್. ಸ್ಮರಣ್ 42; ಸಮಂತ್ ಜಖರ್ 78ಕ್ಕೆ 3, ನಿಶಾಂತ್ ಸಿಂಧು 61ಕ್ಕೆ 2): ಹರಿಯಾಣ: 46 ಓವರ್‌ಗಳಲ್ಲಿ 264 (ಯುವರಾಜ್ ಸಿಂಗ್ 101, ಮಯಾಂಕ್ ಶಾಂಡಿಲ್ಯ 45, ಸರ್ವೇಶ್ ರೋಹಿಲ್ಲಾ; ಯಶೋವರ್ಧನ್ ಪರಂತಾಪ್ 24ಕ್ಕೆ 2, ಎ.ಸಿ. ರೋಹಿತ್ ಕುಮಾರ್ 54ಕ್ಕೆ 3). ಫಲಿತಾಂಶ: ಕರ್ನಾಟಕ ತಂಡಕ್ಕೆ 79 ರನ್ ಜಯ

ಪಿಸಿಬಿ ಆಯ್ಕೆ ಸಮಿತಿ ವಹಾಬ್ ಮುಖ್ಯಸ್ಥ

ಲಾಹೋರ್: ಮಾಜಿ ವೇಗದ ಬೌಲರ್ ವಹಾಬ್ ರಿಯಾಜ್ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ರಾಷ್ಟ್ರೀಯ ಆಯ್ಕೆ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ.

ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದ ಇಂಜಮಮ್ ಉಲ್ ಹಕ್ ಅವರು ಅ.30ರಂದು ರಾಜೀನಾಮೆ ನೀಡಿದ್ದರು.

ವಹಾಬ್ ಅವರು 27 ಟೆಸ್ಟ್, 91 ಏಕದಿನ, 36 ಟಿ20 ಪಂದ್ಯಗಳನ್ನು ಆಡಿದ್ದಾರೆ.

ರಾಷ್ಟ್ರೀಯ ಬೆಂಚ್‌ಪ್ರೆಸ್ ಸ್ಪರ್ಧೆ 22ರಿಂದ


ಬೆಂಗಳೂರು: ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮತ್ತು ಬೆಂಗಳೂರು ಪವರ್‌ಲಿಫ್ಟಿಂಗ್ ಅಸೋಸಿಯೇಷನ್ ಜಂಟಿ ಆಶ್ರಯದಲ್ಲಿ ಇದೇ 22 ರಿಂದ 26ರವರೆಗೆ ನಗರದ ಕೆಇಬಿ ಎಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ 28ನೇ ರಾಷ್ಟ್ರೀಯ ಪುರುಷರ ಹಾಗೂ ಮಹಿಳೆಯರ ಬೆಂಚ್‌ಪ್ರೆಸ್ ಸ್ಪರ್ಧೆಗಳು ನಡೆಯಲಿವೆ.

ಈ ಚಾಂಪಿಯನ್‌ಷಿಪ್‌ನಲ್ಲಿ ಸುಮಾರು 1,500 ಮಂದಿ ಸ್ಪರ್ಧಿಗಳು, 150 ಮಂದಿ ತೀರ್ಪುಗಾರರು, ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಪವರ್‌ಲಿಫ್ಟಿಂಗ್ ಇಂಡಿಯಾ ಅಧ್ಯಕ್ಷ ಸತೀಶ್ ಕುಮಾರ್ ಕುದ್ರೋಳಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ವಿಶ್ವ ಹಾಗೂ ಏಷ್ಯನ್ ದಾಖಲೆ ಸ್ಥಾಪಿಸಿರುವ ಸ್ಪರ್ಧಿಗಳೂ ಭಾಗವಹಿಸುವವರಲ್ಲಿ ಒಳಗೊಂಡಿದ್ದಾರೆ ಎಂದರು. ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ನಡೆದಿದ್ದ ಈ ಹಿಂದಿನ ಕೂಟದಲ್ಲಿ ಕರ್ನಾಟಕ ಚಾಂಪಿಯನ್ ಆಗಿತ್ತು ಎಂದು ಹೇಳಿದರು.

ಷೇರುಪೇಟೆ ವಹಿವಾಟು

188



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,765
ಇಂದಿನ ಅಂತ್ಯ	19,732
▼	33
ದಿನದ ಕನಿಷ್ಠ	19,667

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1580 (1580)
ಸೋಯಾ (ರಿಫೈಂಡ್)	₹960 (970)
ಸೂರ್ಯಕಾಂತಿ (ರಿಫೈಂಡ್)	₹970 (975)
ಪಾಮೋಲಿನ್	₹840 (852)

ವಿನಿಮಯ ದರ

$ ಡಾಲರ್	83.26
£ ಪೌಂಡ್	103.20
€ ಯುರೊ	90.36
¥ ಯೆನ್ (100ಕ್ಕೆ)	55

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹4500-5200
ಮಧ್ಯಮ	₹3500-4200
ಸಣ್ಣ	₹2500-3500

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-8240
ಪುತ್ತೂರು	₹4500-7300
ತಿಪಟೂರು	₹7500-8308

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹132

ತಗ್ಗಿದ ಭತ್ತದ ಇಳುವರಿ; ಬೆಲೆ ಏರಿಕೆ ● ಆರ್‌ಎನ್‌ಆರ್ ಭತ್ತಕ್ಕೆ ₹2,100 ಬೆಲೆ

ಕಟಾವಿಗೆ ಮುನ್ನವೇ ಭತ್ತಕ್ಕೆ ಉತ್ತಮ ಬೇಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತುಂಗಭದ್ರಾ ಜಲಾಶಯದಲ್ಲಿ ತಗ್ಗಿದ ನೀರಿನ ಸಂಗ್ರಹ
- ಕಮರಿದ ಹಿಂಗಾರಿನಲ್ಲಿ ಭತ್ತ ಬೆಳೆಯುವ ಆಸೆ

ಸಿಂಧನೂರು/ರಾಯಚೂರು: ಮಳೆಯ ಅಭಾವದ ನಡುವೆಯೂ ರೈತರು ಪ್ರಯಾಸಪಟ್ಟು ಬೆಳೆದ ಭತ್ತಕ್ಕೆ ಕಟಾವಿಗೆ ಮುನ್ನವೇ ಉತ್ತಮ ಬೇಡಿಕೆ ಬಂದಿದೆ. ವಿವಿಧ ತಳಿಯ 75 ಕೆ.ಜಿ. ಭತ್ತದ ದರ ₹ 1900ದಿಂದ ₹ 2,100ರವರೆಗೂ ತಲುಪಿದೆ. ಕಳೆದ ವರ್ಷ ಗರಿಷ್ಠ ₹1,750 ಇತ್ತು.

ಮುಂಗಾರು ಹಂಗಾಮಿನಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ 56,413 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ತುಂಗಭದ್ರಾ ಕಾಲುವೆಯ ಮೇಲ್ಭಾಗದಲ್ಲಿ ಈಗಾಗಲೇ ಭತ್ತದ ಕಟಾವು ಪ್ರಾರಂಭವಾಗಿದೆ. ಆದರೆ, ಮಧ್ಯ ಹಾಗೂ ಕೆಳ ಭಾಗದಲ್ಲಿ ತೆನೆ ಕೆಂಪಗಾಗಿದ್ದು, ತಿಂಗಳಲ್ಲಿ ಕಟಾವು ಶುರುವಾಗಲಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಕಳೆದ ವರ್ಷ ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಭತ್ತ ಬೆಳೆಯ ಇಳುವರಿ ಚೆನ್ನಾಗಿತ್ತು. ಭತ್ತ ಅಧಿಕ ಪ್ರಮಾಣದಲ್ಲಿ ಮಾರುಕಟ್ಟೆಗೆ ಬಂದ ಕಾರಣ ಬೇಡಿಕೆ ಕಡಿಮೆ ಇತ್ತು. ಈ ಬಾರಿ ಬರ ಇರುವ ಕಾರಣ ಭತ್ತದ ಇಳುವರಿಯೂ ಕಡಿಮೆಯಾಗಿದೆ. ಕಳೆದ ವರ್ಷ 75 ಕೆಜಿ ಭತ್ತ ₹1750ರವರೆಗೆ ಮಾರಾಟವಾಗಿದೆ. ಕಳೆದ ವರ್ಷ ಸೋಮಾಮಸೂರಿ ಭತ್ತದ ಬೆಲೆ ₹1,520 ರಿಂದ ₹1,610 ಇತ್ತು. ಈ ಬಾರಿ ₹ 1900ಕ್ಕೆ ಏರಿಕೆ ಆಗಿದೆ. ಆರ್‌ಎನ್‌ಆರ್ ಭತ್ತದ ಬೆಲೆಯು ಕಳೆದ ವರ್ಷ ₹1,750 ರಿಂದ ₹1,800ರವರೆಗೆ ಇದ್ದಿದ್ದು ಈ ಬಾರಿ ₹2,100ಕ್ಕೆ ಏರಿಕೆ ಕಂಡಿದೆ’ ಎಂದು ಸಿಂಧನೂರಿನ ವರ್ತಕರ ಸಂಘದ ಅಧ್ಯಕ್ಷ ಮಲ್ಲನಗೌಡ ಕಾನಿಹಾಳ ವಿವರಿಸುತ್ತಾರೆ.

ಬೆಲೆ ಇನ್ನಷ್ಟು ಏರುವ ಸಂಭವ: ‘ನೀರಿನ ಅಭಾವದಿಂದ ಹಿಂಗಾರಿನಲ್ಲಿ ಭತ್ತ ಬಿತ್ತನೆಗೆ ರೈತರು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಸಹಜವಾಗಿಯೇ ಡಿಸೆಂಬರ್ ವೇಳೆಗೆ ಭತ್ತದ ಬೆಲೆ ಗಗನಕ್ಕೆ ಏರಿದರೂ ಅಚ್ಚರಿ ಇಲ್ಲ’ ಎಂದು ವರ್ತಕರು ಹೇಳುತ್ತಾರೆ.

‘ಈ ಬಾರಿ ಹಿಂಗಾರು ಭತ್ತ ಬಿತ್ತನೆ ಮಾಡುತ್ತಿಲ್ಲ. ರೈತರು ಬೆಳೆದ ಭತ್ತಕ್ಕೆ ಒಳ್ಳೆಯ ಬೆಲೆ ಇದೆ. ಈಗಲೇ ಮಾರಾಟ ಮಾಡಿದರೆ ಹೆಚ್ಚು ಲಾಭ ಸಿಗದು. ವರ್ತಕರು ಭತ್ತ ಸಂಗ್ರಹ ಮಾಡಿಕೊಂಡು ಹೆಚ್ಚಿನ ಲಾಭ ಪಡೆಯಲಿದ್ದಾರೆ’ ಎನ್ನುತ್ತಾರೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಶರಣಪ್ಪ ಮರಳಿ.

‘ಮುಂಗಾರು ಹಂಗಾಮಿನಲ್ಲಿ ಮಳೆ ಕೈಕೊಟ್ಟಿದೆ. ಜಲಾಶಯದಲ್ಲಿ ನೀರಿಲ್ಲದೆ ಎರಡನೇ ಬೆಳೆ ಬೆಳೆಸಲು ಸಾಧ್ಯವಾಗುತ್ತಿಲ್ಲ. ಅಕಾಲಿಕ ಮಳೆಯಿಂದ ಕೈಗೆ ಬಂದ ಭತ್ತವೂ ಕೆಲವೆಡೆ ನೆಲಕ್ಕುರುಳಿದೆ. ಇದರಿಂದ ರೈತರು ಸಾಲದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂಥ ಸಂದರ್ಭದಲ್ಲಿ ಭತ್ತಕ್ಕೆ ಅಧಿಕ ಬೆಲೆ ಸಿಕ್ಕರೆ ಅನುಕೂಲವಾಗಲಿದೆ’ ಎಂದು ಮಲ್ಲಮ್ಮ ಚಿರತ್ನಾಳ ತಿಳಿಸುತ್ತಾರೆ.

ಹಿಂಗಾರು ಗೋಧಿ ಬಿತ್ತನೆ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಿಂಗಾರು ಹಂಗಾಮು ಅವಧಿಯಲ್ಲಿ ನವೆಂಬರ್ 17ರವರೆಗೆ ಗೋಧಿ ಬಿತ್ತನೆಯು ಶೇ 5ರಷ್ಟು ಇಳಿಕೆ ಕಂಡಿದ್ದು 86.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 91.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗೋಧಿ ಬಿತ್ತನೆ ಕಾರ್ಯ ನಡೆದಿತ್ತು.

ಉತ್ತರ ಪ್ರದೇಶ, ಪಂಜಾಬ್, ಹರಿಯಾಣ ಮತ್ತು ಗುಜರಾತ್‌ನಲ್ಲಿ ಕಡಿಮೆ ಪ್ರದೇಶದಲ್ಲಿ ಗೋಧಿ ಬಿತ್ತನೆ ಆಗಿದೆ ಎಂದು ಹೇಳಿದೆ. ಭತ್ತ ಬಿತ್ತನೆ ಪ್ರದೇಶವೂ 8.05 ಲಕ್ಷ ಹೆಕ್ಟೇರ್‌ನಿಂದ 7.65 ಲಕ್ಷ ಹೆಕ್ಟೇರ್‌ಗೆ ಇಳಿಕೆ ಕಂಡಿದೆ. ಬೇಳೆಕಾಳು ಬಿತ್ತನೆ 69.37 ಲಕ್ಷ ಹೆಕ್ಟೇರ್‌ನಿಂದ 65.16 ಲಕ್ಷ ಹೆಕ್ಟೇರ್‌ಗೆ ಇಳಿಕೆ ಆಗಿದೆ.

ಹಿಂಗಾರು ಅವಧಿಯಲ್ಲಿ ಆಹಾರ ಧಾನ್ಯಗಳ ಒಟ್ಟು ಬಿತ್ತನೆಯು 257.56 ಲಕ್ಷ ಹೆಕ್ಟೇರ್‌ನಿಂದ 248.59 ಲಕ್ಷ ಹೆಕ್ಟೇರ್‌ಗೆ ಇಳಿಕೆ ಆಗಿದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

17-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	935 (950)
ಪಾಮ್ ವಾರದ ಡೆಲಿವರಿ	838 (850)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

60,950 (60,350)

ಬೆಳ್ಳಿ ಕೆ.ಜಿ 73,800 (73,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹295-498
ದ್ವಿತಳಿ (ಬಿ.ವಿ)	₹222-617

ಜೆಎಸ್‌ಡಬ್ಲ್ಯುಗೆ ಕೇಣಿ ಬಂದರು ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಜೆಎಸ್‌ಡಬ್ಲ್ಯು ಇನ್ಫ್ರಾಸ್ಟ್ರಕ್ಚರ್ ಕಂಪನಿಯು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಕೇಣಿ ಬಂದರು ಅಭಿವೃದ್ಧಿಗೆ ಮುಂದಾಗಿದೆ. ಅಂದಾಜು ₹4,119 ಕೋಟಿ ವೆಚ್ಚದ ಯೋಜನೆ ಇದಾಗಿದೆ. ಈ ಸಂಬಂಧ ಕಂಪನಿಗೆ ರಾಜ್ಯ ಸರ್ಕಾರದ ಜಲಸಾರಿಗೆ ಮಂಡಳಿಯು ಒಪ್ಪಿಗೆ ನೀಡಿದೆ.

ಸಾಗರ ಮೂಲಸೌಕರ್ಯಗಳ ವಿಸ್ತರಣೆ ಮತ್ತು ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿ, ರಿಯಾಯಿತಿ ಒಪ್ಪಂದಕ್ಕೆ ಸಹಿ ಹಾಕಿದ ನಂತರ ರಾಜ್ಯದ ಕಡಲ ಮೂಲಸೌಕರ್ಯ ಮತ್ತು ವ್ಯಾಪಾರ ಗೇಟ್‌ವೇ ಭಾಗವಾಗಿ ಕೇಣಿ ಬಂದರನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿ ಬಂದರಿನ ಸಾಮರ್ಥ್ಯವು ವಾರ್ಷಿಕ 3 ಕೋಟಿ ಟನ್ ಆಗಿರಲಿದೆ. ಡೀಪ್– ವಾಟರ್ ಗ್ರೀನ್‌ಫೀಲ್ಡ್ ಬಂದರು ಆಗಿ ಪರಿವರ್ತನೆಯಾದ ಮೇಲೆ ಆಮದು ಮತ್ತು ರಫ್ತು ವಹಿವಾಟಿಗೆ ಹೆಚ್ಚು ವೇಗ ಸಿಗುವ ಭರವಸೆ ಇದೆ. ಸ್ಥಳೀಯ ಆರ್ಥಿಕತೆಯೂ ವೃದ್ಧಿಸಲಿದೆ’ ಎಂದು ಜೆಎಸ್‌ಡಬ್ಲ್ಯು ಇನ್ಫ್ರಾಸ್ಟ್ರಕ್ಚರ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅರುಣ್ ಮಹೇಶ್ವರಿ ಹೇಳಿದ್ದಾರೆ.

ಪ್ರಸ್ತಾವಿತ ಯೋಜನೆಗೆ ಒಟ್ಟು 8 ಕಿ.ಮೀ. ಉದ್ದದಲ್ಲಿ ರೈಲ್ವೆ ಮಾರ್ಗ ಅಭಿವೃದ್ಧಿಪಡಿಸಲಾಗುವುದು. ಕೇಣಿ ಬಂದರು ಅಭಿವೃದ್ಧಿಯಿಂದ ಬಳ್ಳಾರಿ, ಹೊಸಪೇಟೆ, ಹುಬ್ಬಳ್ಳಿ, ಕಲಬುರಗಿ ಮತ್ತಿತರ ಪ್ರದೇಶಗಳ ಕೈಗಾರಿಕೆಗಳಿಗೆ ಪುಷ್ಟಿ ಸಿಗುತ್ತದೆ. ಕರ್ನಾಟಕ ಜಲಸಾರಿಗೆಯು ನೀಡುವ ಮಾಹಿತಿ ಪ್ರಕಾರ, ಕರ್ನಾಟಕವು ಪ್ರಸ್ತುತ ವಾರ್ಷಿಕ 4.4 ಕೋಟಿ ಟನ್‌ನಷ್ಟು ಸರಕುಗಳ ಒಳನಾಡು ಸಾಮರ್ಥ್ಯವನ್ನು ಹೊಂದಿದೆ ಮತ್ತು 2035ರ ವೇಳೆಗೆ ವಾರ್ಷಿಕ ಸಾಮರ್ಥ್ಯವು 11.7 ಕೋಟಿ ಟನ್‌ಗಳಿಗೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

‘ಬ್ಯಾಂಕ್‌ಗಳಿಗೆ ಹೆಚ್ಚುವರಿಯಾಗಿ ₹84 ಸಾವಿರ ಕೋಟಿ ಬೇಕು’

ಮುಂಬೈ (ಪಿಟಿಐ): ಅಡಮಾನರಹಿತ ವೈಯಕ್ತಿಕ ಸಾಲ ನೀಡುವ ನಿಯಮದಲ್ಲಿ ಬದಲಾವಣೆ ಮಾಡಿರುವುದರಿಂದ ಬ್ಯಾಂಕಿಂಗ್ ವ್ಯವಸ್ಥೆಗೆ ಹೆಚ್ಚುವರಿಯಾಗಿ ₹84 ಸಾವಿರ ಕೋಟಿ ಬಂಡವಾಳದ ಅಗತ್ಯ ಬೀಳಲಿದೆ ಎಂದು ಎಸ್‌ಬಿಐನ ಆರ್ಥಿಕ ತಜ್ಞರು ಸಿದ್ಧಪಡಿಸಿರುವ ವರದಿ ತಿಳಿಸಿದೆ.

ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಬ್ಯಾಂಕ್‌ಗಳಿಗೆ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಈಗಿರುವ ಶೇ 100ರಿಂದ ಶೇ 125ಕ್ಕೆ ಆರ್‌ಬಿಐ ಹೆಚ್ಚಿಸಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಆರ್ಥಿಕ ಸ್ಥಿರತೆಗೆ ಆಗಬಹುದಾದ ಅಪಾಯವನ್ನು ತಡೆಯುವ ಪರಿಹಾರ ಮಾರ್ಗವಾಗಿ ಆರ್‌ಬಿಐ ಈ ನಿರ್ಧಾರ ತೆಗೆದುಕೊಂಡಿದೆ ಎಂದು ವರದಿ ಹೇಳಿದೆ.

ರೆಪೊ ದರವು ಗರಿಷ್ಠ ಮಟ್ಟದಲ್ಲಿ ಇದೆ. ಹೀಗಾಗಿ, ಆರ್ಥಿಕ ಸ್ಥಿರತೆ ಮೂಡಿಸುವುದು ಮತ್ತು ನಗದು ಲಭ್ಯತೆಯನ್ನು ನಿಯಂತ್ರಿಸುವ ಮೂಲಕ ಹಣದುಬ್ಬರ ಮತ್ತು ಆರ್ಥಿಕ ಬೆಳವಣಿಗೆಯ ಗುರಿ ಸಾಧಿಸಲು ಆರ್‌ಬಿಐ ಮುಂದಾಗಿದೆ ಎಂದೂ ವರದಿಯು ಅಭಿಪ್ರಾಯಪಟ್ಟಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	600
ಚಿತ್ರದುರ್ಗ	
ಅಪಿ	45600-46000
ಬೆಟ್ಟೆ	35600-36000
ಕೆಂಪುಗೋಟು	29500-29900
ರಾಶಿ	45100-45500
ಹೊನ್ನಾವರ	
ಹಳೆಚಾಲಿ	36000-39000
ಹೊಸನಗರ	
ಕೆಂಪುಗೋಟು	32599-34200
ರಾಶಿ	40899-47770

ಶಿವಮೊಗ್ಗ	
ಬೆಟ್ಟೆ	45559-52899
ಗೊರಬಾಲು	19079-37469
ಹೊಸತು	45359-46709
ರಾಶಿ	40109-47169
ಸರಕು	50069-83696
ಸಿದ್ದಾಪುರ	
ಬಿಳಿಗೋಟು	31399-34009
ಚಾಲಿ	37369-40009
ಕೋಕ	29269-32909
ಕೆಂಪುಗೋಟು	30012-35089
ರಾಶಿ	42509-46569
ತಟ್ಟಿಬೆಟ್ಟೆ	38109-42109

ಶಿರಸಿ	
ಬೆಟ್ಟೆ	32199-45269
ಬಿಳಿಗೋಟು	27269-35795
ಚಾಲಿ	37599-41018
ಕೆಂಪುಗೋಟು	30699-34629
ರಾಶಿ	44000-47899
ಯಲ್ಲಾಪುರ	
ಬಿಳಿಗೋಟು	25019-36099
ಚಾಲಿ	36590-40599
ಕೋಕ	18899-32270
ಕೆಂಪುಗೋಟು	27210-36109
ರಾಶಿ	45201-54809
ತಟ್ಟಿಬೆಟ್ಟೆ	38390-44719


ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11800	11500	-	180.80 ಸೆಂಟ್ಸ್
ಎಸಿ	6480	6500	-	
ಆರ್‌ಪಿ	9800	10000	-	ಲಂಡನ್
ಆರ್‌ಸಿ	6075	244 on OT	-	2566 ಡಾಲರ್ಸ್

ವೈಯಕ್ತಿಕ ಸಾಲದ ನಿಯಮ ಬಿಗಿ; ಷೇರುಪೇಟೆಯಲ್ಲಿ ಮಾರಾಟದ ಒತ್ತಡ

ತಗ್ಗಿದ ಬ್ಯಾಂಕಿಂಗ್ ಷೇರುಗಳ ಮೌಲ್ಯ

ಮುಂಬೈ (ಪಿಟಿಐ): ಅಡಮಾನರಹಿತ ವೈಯಕ್ತಿಕ ಸಾಲ ನೀಡಲು ಇರುವ ನಿಯಮಗಳನ್ನು ಆರ್‌ಬಿಐ ಇನ್ನಷ್ಟು ಬಿಗಿಗೊಳಿಸಿದೆ. ಇದು ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ನಕಾರಾತ್ಮಕ ಪರಿಣಾಮ ಬೀರಿತು. ಬ್ಯಾಂಕಿಂಗ್, ಹಣಕಾಸು ಮತ್ತು ಇಂಧನ ವಲಯದ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದ್ದರಿಂದ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.



ಸೆನ್ಸೆಕ್ಸ್‌ನಲ್ಲಿ ಎಸ್‌ಬಿಐ ಷೇರು ಮೌಲ್ಯ ಶೇ 3.64 ಮತ್ತು ಎಕ್ಸಿಸ್ ಬ್ಯಾಂಕ್ ಷೇರು ಮೌಲ್ಯ ಶೇ 3.03ರಷ್ಟು ಇಳಿಕೆ ಕಂಡಿತು. ಬಜಾಜ್ ಫೈನಾನ್ಸ್, ಐಸಿಐಸಿಐ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಇಂಡಸ್‌ಇಂಡ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್ ಷೇರುಗಳ ಮೌಲ್ಯವೂ ಇಳಿಕೆ ಕಂಡಿದೆ.

ಕಚ್ಚಾ ತೈಲ ದರ ಇಳಿಕೆ, ವಿದೇಶಿ ಬಂಡವಾಳ ಒಳಹರಿವು ಸೂಚ್ಯಂಕ ಹೆಚ್ಚಿನ ನಷ್ಟ ಕಾಣುವುದನ್ನು ತಡೆಯಿತು ಎಂದು ವರ್ತಕರು ಹೇಳಿದ್ದಾರೆ.

ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳ ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆ ಹೆಚ್ಚಾಗುತ್ತಿದೆ. ಇದನ್ನು ನಿಯಂತ್ರಿಸಲು ಆರ್‌ಬಿಐ ನಿಯಮವನ್ನು ಇನ್ನಷ್ಟು ಬಿಗಿಗೊಳಿಸಿದೆ. ಅದರಂತೆ, ಸಾಲ ನೀಡುವುದರಿಂದ ಬ್ಯಾಂಕ್‌ಗಳಿಗೆ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಈಗಿರುವ ಶೇ 100ರಿಂದ ಶೇ 125ಕ್ಕೆ ಹೆಚ್ಚಿಸಲಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 187 ಅಂಶ ಇಳಿಕೆ ಕಂಡರೆ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 33 ಅಂಶ ಇಳಿಕೆ ಆಗಿದೆ.

ಆರ್‌ಬಿಐನ ನಿರ್ಧಾರವು ಬ್ಯಾಂಕಿಂಗ್ ಷೇರುಗಳ ಮೌಲ್ಯ ಇಳಿಕೆಗೆ ಕಾರಣ ಆಯಿತು. ಆ ಮೂಲಕ ಷೇರುಪೇಟೆಯಲ್ಲಿ ಸೂಚ್ಯಂಕದ ಓಟಕ್ಕೆ ತಾತ್ಕಾಲಿಕ ಅಡ್ಡಿ ಉಂಟಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ ಸೋಲ್, ಹಾಂಗ್ ಕಾಂಗ್ ವಹಿವಾಟು ಇಳಿಕೆ ಕಂಡರೆ, ಟೋಕಿಯೊ ಮತ್ತು ಶಾಂಘೈ ವಹಿವಾಟು ಏರಿಕೆ ಕಂಡಿತು. ಯುರೋಪ್‌ನಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಬ್ರೆಂಟ್ ಕಚ್ಚಾ ತೈಲ ದರ ಬ್ಯಾರಲ್‌ಗೆ ಶೇ 0.77ರಷ್ಟು ಇಳಿಕೆ ಕಂಡು 78.02 ಡಾಲರ್‌ಗೆ ತಲುಪಿತು.

ಐಪಿಒ ಮೇಲೆ ಪರಿಣಾಮವಿಲ್ಲ: ಫೆಡ್‌ಫಿನ್

ಆರ್‌ಬಿಐನ ನಿರ್ಧಾರವು ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಫೆಡ್‌ಬ್ಯಾಂಕ್ ಫೈನಾನ್ಶಿಯಲ್ ಸರ್ವಿಸಸ್ (ಫೆಡ್‌ಫಿನ್) ಶುಕ್ರವಾರ ಹೇಳಿದೆ.

ಕಂಪನಿಯು ಐಪಿಒ ಮೂಲಕ ₹1,092 ಕೋಟಿ ಬಂಡವಾಳ ಸಂಗ್ರಹಿಸಲು ಉದ್ದೇಶಿಸಿದೆ. ನವೆಂಬರ್ 22 ರಿಂದ ಮೂರು ದಿನಗಳವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

ಕಂಪನಿಯು ಪ್ರತಿ ಷೇರಿಗೆ ₹133–140 ದರ ನಿಗದಿ ಮಾಡಿದೆ.

‘ದೇಶದಲ್ಲಿ ಹೆಚ್ಚಲಿದೆ ವಿದ್ಯುತ್ ಬೇಡಿಕೆ’

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಬೇಡಿಕೆಯು 2023-24ರಲ್ಲಿ ಶೇ 7ರಷ್ಟು ಏರಿಕೆಯಾಗುವ ನಿರೀಕ್ಷೆ ಮಾಡಲಾಗಿದೆ ಎಂದು ಫಿಚ್ ರೇಟಿಂಗ್ಸ್ ಸಂಸ್ಥೆ ಹೇಳಿದೆ.

ಕೈಗಾರಿಕಾ ಚಟುವಟಿಕೆಗಳು ವೇಗ ಪಡೆದುಕೊಂಡಿವೆ. ಹೀಗಾಗಿ 2023-24ರ ಮೊದಲಾರ್ಧದಲ್ಲಿ ವಿದ್ಯುತ್ ಬೇಡಿಕೆಯು ಶೇ 7.1ರಷ್ಟು ಹೆಚ್ಚಾಗಿತ್ತು. ಇದನ್ನು ಗಮನಿಸಿದರೆ 2023-24ರಲ್ಲಿ ಒಟ್ಟಾರೆ ಬೇಡಿಕೆಯು ಶೇ 7ರಷ್ಟು ಏರಿಕೆ ಕಾಣಲಿದೆ. 2022-23ರಲ್ಲಿ ಶೇ 9.5ರಷ್ಟು ಏರಿಕೆ ಕಂಡಿತ್ತು ಎಂದು ವರದಿಯಲ್ಲಿ ತಿಳಿಸಿದೆ.

ಚಿನ್ನದ ದರ ₹540, ಬೆಳ್ಳಿ ₹1200 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂ ಗೆ ₹540 ಏರಿಕೆಯಾಗಿ, ₹61,750ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹1,200 ಹೆಚ್ಚಳವಾಗಿ ₹76,500 ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹೆಚ್ಚಳ ಆಗಿದ್ದರಿಂದ ದೇಶಿ ಮಾರುಕಟ್ಟೆಯಲ್ಲೂ ಬೆಲೆ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.


ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
LG
India ka Celebration
88 (223) CMS OLED TV
The Zenith of LG OLED TV* Z-Series 8K
SIGNATURE OLED 8K
SELF-LIT OLED
120Hz Refresh Rate
Eye Comfort
webOS
EMI STARTS ₹6,999/-
LG
Wide Range of LG Products
Unmatched. Unequalled. Unbeatable !
OLED evo THE ONE AND ONLY
Available Sizes : 83 (210cm) / 77 (195cm) / 65 (164cm) 55 (139cm) / 48 (121cm) / 42 (106cm)
C Series | Our Most Celebrated OLED TV*
OLED
Multi-View 2-in-1 TV
G-SYNC
FreeSync Premium
0.1ms Response Time
EMI STARTS ₹4,999/-
75 (223) CMS UHD/4K
AI ThinQ
LG UHD AI ThinQ
• 4K Display / a5 AI Processor 4K Gen6 • Built-in Alexa / Apple Airplay & Homekit / Works with Hey Google • 60 Hz
FREE* LG SMART CAM Worth ₹9990
EMI STARTS ₹4,999/-
65 (164) CMS UHD/4K
AI ThinQ
LG UHD AI ThinQ
• 4K Display / a5 AI Processor 4K Gen6 • Built-in Alexa / Apple Airplay & Homekit / Works with Hey Google • 60 Hz
FREE* LG SMART CAM Worth ₹9990
EMI STARTS ₹3,999/-
FESTIVE EXCLUSIVE OFFERS
WIN LG DREAM HOME PACKAGE Every Day*
GRAND PRIZE AUDI Q3*
To participate in these offers, send an SMS <"First Name" "Last Name" GTM Code> to 7835073507
HOME APPLIANCES OFFERS
FREE* GLASS BOWL KIT (On Select Models of Microwave Oven)
FREE* Maintenance worth ₹4200* (Part of 1st Year Package) (On Select Models of Water Purifier)
HOME ENTERTAINMENT OFFERS
3 YEAR* WARRANTY (With Select LG TVs)
FREE* LG SMART CAM Worth ₹9990 (With Select LG TVs)
Up to 26%* CASHBACK Max ₹26000* ON SELECT CREDIT / DEBIT CARDS
OLED CIRCLE An exclusive alliance Get benefits up to ₹50000*
UP TO 30% OFF ON LG SOUNDBAR* (With Select LG TVs)
FIXED EMI Starting from ₹2999*
INTRODUCING THE ALL-NEW RANGE OF LG REFRIGERATORS STUNNINGLY STYLISH
AND GET UP TO 20%* CASHBACK ON PURCHASE OF LG REFRIGERATOR
LG Side by Side Refrigerator GL-L257CMCX
• AI ThinQ • Door Cooling • Stylish Design • Hygiene Fresh • Multi-Air Flow • Water Dispenser • Ice Dispenser • Colour : Matt Black
Capacity : 655 Ltrs.
EMI STARTS ₹4,999/-
Wi-Fi Convertible
LG Side by Side Refrigerator GL-B257EPZ3
FREE LG DOUBLE DOOR REFRIGERATOR WORTH ₹29,499/-
Capacity : 655 Ltrs.
EMI STARTS ₹4,999/-
LG Side by Side Refrigerator GL-B257DBMX
• Door Cooling • Premium Glass Door • Compressor Hygiene Fresh • Multi-Air Flow • Smart Diagnosis • Colour : Black Mirror Finish
Capacity : 655 Ltrs.
EMI STARTS ₹4,999/-
LG Premium Frost Free Refrigerator GN-H602HLHM
• AI ThinQ • Door Cooling • Stylish Design • Hygiene Fresh • Multi-Air Flow • Inverter Linear Compressor • Smart Diagnosis • Fresh O zone • Colour : Shiny Steel
Capacity : 516 Ltrs.
EMI STARTS ₹2,999/-
LG Frost Free Refrigerator GL-T502APZR
• Door Cooling • Stylish Design • Hygiene Fresh • Auto Smart Connect • Smart Inverter Compressor • Convertible • Toughened Glass Shelves • Colour : Shiny Steel
Capacity : 446 Ltrs.
EMI STARTS ₹2,999/-
Go Easy Intelligent! with AI DD™ MORE CONVENIENCE & MORE FABRIC CARE
AND GET UP TO 20%* CASHBACK ON PURCHASE OF LG WASHING MACHINE
11 Kg FHP1411Z9P Front Load Washig Machine LG
• AI DD • 6 Motion DD • TurboWash 360 • Steam+ • LG ThinQ (Wi-Fi) • Smart Diagnosis • 10-year Warranty* • RPM : Max. 1400 • Colour : Platinum Silver
EMI STARTS ₹4,999/-
10 Kg FHP1410Z5M Front Load Washig Machine LG
• Inverter Direct Drive • AI Direct Drive • 6 Motion Direct Drive • Steam+ • LG ThinQ (Wi-Fi) • Smart Diagnosis • 10-year Warranty* • Colour : Middle Black
EMI STARTS ₹3,999/-
9/5 Kg FHD0905STB Front Load Washer Dryer LG
• Turbo Wash • AI Direct Drive • 6 Motion Direct Drive • Steam+ • LG ThinQ • Smart Diagnosis • 10-year Warranty* • Colour : Middle Black
EMI STARTS ₹4,590/-
14 Place Settings Dish Washer DFB532FP LG
Wi-Fi
• True Steam • Quad Wash • Inverter Direct Drive • Easy Rack Plus • LG ThinQ • 14 Place Setting • Colour : Shiny Steel
EMI STARTS ₹2,999/-
9 Kg THD09SWM Top Load Washig Machine LG
• AI Intelligent Care • 6 Motion Drive • In-built Heater with steam • Allergy Removal • LG ThinQ • Turbo Drum • Turbo Wash • Colour : Middle Black
EMI STARTS ₹2,490/-
ಬೆಂಗಳೂರು
ನೂತನ ಬಾಗಲೂರು Ph : 080-35712968 /35712969 9731306702
ಅಕ್ಷಯನಗರ Ph :9731307230
ನೆಲಮಂಗಲ Ph 9731306692 / 9686680755
ಬಿಡದಿ 7702203254
ಕೋಣನಕುಂಟೆ Ph :9731306531
ಬೇಗೂರು 080-41499467/9731306604
ಆರ್.ಟಿ. ನಗರ 9731307264 080-23559977
ಹೊಸಕೋಟೆ 9731306767
ಹೆಣ್ಣೂರು ಮುಖ್ಯ ರಸ್ತೆ 080-48651500/48505043 9731306596
ಮಹದೇವಪುರ 080-48148975, 9148151731
ಉತ್ತರಹಳ್ಳಿ 9731306547 49587474, 49537575
ವೈಟ್ ಫೀಲ್ಡ್ 080-40984677 9513499851
ಯಲಹಂಕ 9731306702
ಹೆಬ್ಬಗೋಡಿ 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ 41610910, 9731306537
ತನಿಸಂದ್ರ 9731306763/32521747
ವಿಜಯನಗರ 9731306631
ಪೀಣ್ಯ II-ದಾಸರಹಳ್ಳಿ 9731306684 28393199/4199
ಮತ್ತಿಕೆರೆ 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ Ph :9731306550
ಬನಶಂಕರಿ Ph :9731306572 080-26691262/63
ಜಯನಗರ 26541050/51 9731306606
ಚಂದ್ರ ಲೇಔಟ್ 9731306558, 080 41503359
ನಾಗರಭಾವಿ 9731306616
ಮಾರತಹಳ್ಳಿ 080-42200050 9731306703
ಕೆಂಗೇರಿ 9731306634
ಚನ್ನಸಂದ್ರ 28613065/9731306766
ಸುಂಕದಕಟ್ಟೆ 9686680764 23288940/942
ರಾಜಾಜಿನಗರ Ph :9686446886 080-23134692
ವಿದ್ಯಾರಣ್ಯಪುರ 41721897/1861 9731306614
ಹೆಗ್ಗನಹಳ್ಳಿ 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ 41687449, 9731306571 25450871
ರಾಮಮೂರ್ತಿನಗರ 41638612/13 8861007307
ಪುಟ್ಟೇನಹಳ್ಳಿ 9591997265 080-40954615/16
ಹುಳಿಮಾವು 080-26483425 9591997254
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
MISSED
Deepavali Shopping?
DON'T WORRY
SHOP & WIN
5.68 CRORES
WORTH PRIZES
GET
LUCKY DRAW COUPON
ON PURCHASE OF
₹3,500/- & ABOVE
BUMPER PRIZE
1 Kg GOLD
Worth ₹ 51 Lakhs
1st PRIZE
10 CARS
MARUTHI S-PRESSO CAR
Worth ₹ 4.25 Lakhs
10 WINNERS
ದೀಪಾವಳಿ ಸೇಲ್
2nd PRIZE
100 BIKES
HONDA BIKE
Worth ₹ 75,000/-
100 WINNERS
3rd PRIZE
1000 LED TV'S
40" HD LED TV
Worth ₹ 29,990/-
1000 WINNERS
4th PRIZE
10000 SURPRIZE Gifts
Worth ₹ 999/-
10000 WINNERS
SONY
LG
Haier
SAMSUNG
IFB
Whirlpool
ಕೊನೆಯ 2 ದಿನಗಳು ಮಾತ್ರ
Godrej
Panasonic
BPL
Prestige
Preethi
Pigeon
Its Time to Scream & Shout for World Cup Final Match
Big Screen - Bigger Excitement
UPTO
₹25,000/-
INSTANT
CASH BACK
ON CREDIT CARD & DEBIT CARD EMI
GET
CASH VOUCHER
UPTO
₹12,500/-
ON BAJAJ FINSERV
FINANCE PURCHASE*
Festival Exciting Finance Offers
1 EMI FREE*
UPTO ₹20,000/-
ON PAPER FINANCE
LG SONY SAMSUNG Haier
LOW DOWNPAYMENT
LOWEST EMI
LONG TENURE EMI
0% INTEREST FREE FINANCE
BAJAJ FINSERV
IDFC FIRST Bank
HDB FINANCIAL SERVICES
HDFC BANK
JUST SHOW
AADHAAR CARD
For easy Finance offers & take home your favourite products
EMI CARD
EASY FINANCE
BAJAJ FINSERV
IDFC FIRST Bank
• Pre-approved Loan up to 4 Lakhs
• Repay easily • No documentation • Pre-approved offers
• Nil foreclosure charges
BAJAJ FINSERV
IDFC FIRST Bank
HDFC BANK We understand your world
kotak Kotak Mahindra Bank
HDB FINANCIAL SERVICES
LG JUST PAY ₹499/- TAKE HOME YOUR FAVOURITE LED TV, REFRIGERATOR & WASHING MACHINE PAY BALANCE IN EASY EMI
SONY JUST PAY ₹999/- TAKE HOME YOUR FAVOURITE LED TV, & SOUND BAR PAY BALANCE IN EASY EMI
Haier JUST PAY ₹499/- TAKE HOME YOUR FAVOURITE LED TV, REFRIGERATOR & WASHING MACHINE PAY BALANCE IN EASY EMI
SAMSUNG JUST PAY ₹999/- TAKE HOME YOUR FAVOURITE LED TV, REFRIGERATOR & WASHING MACHINE PAY BALANCE IN EASY EMI
Whirlpool JUST PAY ₹699/- TAKE HOME YOUR FAVOURITE REFRIGERATOR & WASHING MACHINE PAY BALANCE IN EASY EMI
IFB JUST PAY ₹799/- TAKE HOME YOUR FAVOURITE WASHING MACHINE PAY BALANCE IN EASY EMI
Panasonic AVAIL UPTO 18 MONTHS EMI TAKE HOME YOUR FAVOURITE LED TV
BPL AVAIL UPTO 12 MONTHS EMI TAKE HOME YOUR FAVOURITE LED TV
Godrej AVAIL UPTO 18 MONTHS EMI
LIEBHERR BOSCH AVAIL UPTO 12 MONTHS EMI
ಚನ್ನಪಟ್ಟಣ
ಶಿರಸಿ
ಕೋಲಾರ
ಬೆಳಗಾವಿ
ಬಳ್ಳಾರಿ
ಚಿತ್ರದುರ್ಗ
ದಾವಣಗೆರೆ
ಶಿವಮೊಗ್ಗ
ತಿಪಟೂರು
ತುಮಕೂರು
ಕುಣಿಗಲ್
ಯಾದಗಿರಿ
ಮಂಡ್ಯ
ಗೋಣಿಕೊಪ್ಪ
ಕೊಪ್ಪಳ
ಬೀದರ್
ಕಲಬುರ್ಗಿ
ಕೆ.ಆರ್. ನಗರ
ಚನ್ನರಾಯಪಟ್ಟಣ
ವಿರಾಜಪೇಟೆ
ವಿಜಯಪುರ
ಸಿಂಧನೂರ್
ಕುಶಾಲನಗರ
ಚಿಕ್ಕಮಗಳೂರು
ಶಹಾಪೂರ
ಗೋಕಾಕ್
ಮೈಸೂರು 5 ಸ್ಟೋರ್ಸ್
ಕುವೆಂಪುನಗರ
ಹಿನಕಲ್
ಉದಯಗಿರಿ
ಜೆ.ಪಿ ನಗರ
ಡಾ. ರಾಜ್‌ಕುಮಾರ್ ರಸ್ತೆ
Free Gifts depends on Brands & Selective Models • Products shown here are only indicative • Exchange Rates
Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com
STREAMLINE

ಏಕದಿನ ಕ್ರಿಕೆಟ್ ವಿಶ್ವಕಪ್ – 2023



ಫೈನಲ್‌ನಲ್ಲಿ ನಾಳೆ ಆಸ್ಟ್ರೇಲಿಯಾ ವಿರುದ್ಧ ಸೆಣಸು • ಅಭಿಮಾನಿಗಳಲ್ಲಿ ಗರಿಗೆದರಿದ ಕುತೂಹಲ

ಅಜೇಯ ಭಾರತಕ್ಕೆ ಅಂತಿಮ ಪರೀಕ್ಷೆ

ಅಹಮದಾಬಾದ್ (ಎಎಫ್‌ಪಿ): ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 1.30 ಲಕ್ಷಕ್ಕೂ ಅಧಿಕ ಪ್ರೇಕ್ಷಕರ ಮುಂದೆ ಭಾನುವಾರ ನಡೆಯಲಿರುವ ಭಾರತ– ಆಸ್ಟ್ರೇಲಿಯಾ ನಡುವಣ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ರೋಚಕ ಹಣಾಹಣಿ ನಿರೀಕ್ಷಿಸಲಾಗಿದೆ.

ಟೂರ್ನಿಯ ಎಲ್ಲ 10 ಪಂದ್ಯಗಳನ್ನು ಗೆದ್ದು ಅಜೇಯವಾಗಿರುವ ಆತಿಥೇಯ ಭಾರತ, ಮೂರನೇ ಕಿರೀಟದ ಮೇಲೆ ಕಣ್ಣಿಟ್ಟು ಕಣಕ್ಕಿಳಿಯಲಿದೆ. ಮತ್ತೊಂದೆಡೆ ಆಸ್ಟ್ರೇಲಿಯಾ ತಂಡ ದಾಖಲೆಯ ಆರನೇ ಟ್ರೋಫಿಯತ್ತ ಚಿತ್ತ ನೆಟ್ಟಿದೆ.

ಫೈನಲ್‌ನಲ್ಲಿ ಉಭಯ ತಂಡಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಟವಾಡಿದರೆ, ಈ ಪಂದ್ಯವು ಕ್ರಿಕೆಟ್ ಪ್ರೇಮಿಗಳಿಗೆ ರೋಚಕ ರಸದೌತಣ ಉಣಬಡಿಸುವುದರಲ್ಲಿ ಎರಡು ಮಾತಿಲ್ಲ.

ನಾಯಕ ರೋಹಿತ್ ಶರ್ಮಾ ಅವರು ಬಿರುಸಿನ ಬ್ಯಾಟಿಂಗ್ ಮೂಲಕ ತಂಡಕ್ಕೆ ಉತ್ತಮ ಆರಂಭ ನೀಡುವ ಜತೆಯಲ್ಲೇ ಸಹ ಆಟಗಾರರಲ್ಲಿ ಆಕ್ರಮಣಕಾರಿ ಮನೋಭಾವ ಹುಟ್ಟುಹಾಕಿದ್ದಾರೆ.

ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಅವರು ನ್ಯೂಜಿಲೆಂಡ್ ವಿರುದ್ಧದ ಸೆಮಿಫೈನಲ್‌ನಲ್ಲಿ ಶತಕ ಗಳಿಸಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ನಿಜ. ಆದರೆ ಅದಕ್ಕೂ ಮುನ್ನ ರೋಹಿತ್ ಅವರು 29 ಎಸೆತಗಳಲ್ಲಿ 47 ರನ್ ಹೊಡೆದು ಕಿವೀಸ್ ವೇಗಿಗಳಾದ ಟ್ರೆಂಟ್ ಬೌಲ್ಟ್ ಹಾಗೂ ಟಿಮ್ ಸೌಥಿ ಅವರ ಆತ್ಮಸ್ಥೈರ್ಯ ಕುಗ್ಗಿಸಿದ್ದರು.

ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್‌ಗಳು ಭಾರತದ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಿಗೆ ವಿಕೆಟ್ ಬಿಟ್ಟುಕೊಡದಿದ್ದರೆ, ಆ ಬಳಿಕ ಮೊಹಮ್ಮದ್ ಶಮಿ ಅವರನ್ನು ಎದುರಿಸಬೇಕಾಗುತ್ತದೆ.

ಆರು ಪಂದ್ಯಗಳಿಂದ 23 ವಿಕೆಟ್ ಪಡೆದಿರುವ ಶಮಿ, ಟೂರ್ನಿಯಲ್ಲಿ ಅತ್ಯಧಿಕ ವಿಕೆಟ್ ಪಡೆದ ಬೌಲರ್ ಆಗಿದ್ದಾರೆ. ಸೆಮಿಯಲ್ಲಿ 57 ರನ್‌ಗಳಿಗೆ 7 ವಿಕೆಟ್ ಪಡೆದು ಕಿವೀಸ್ ಪತನಕ್ಕೆ ಕಾರಣರಾಗಿದ್ದರು.

ಪ್ಯಾಟ್ ಕಮಿನ್ಸ್ ಬಳಗದ ಆರಂಭಿಕ ಬ್ಯಾಟರ್‌ಗಳು ಮತ್ತು ಹೊಸ ಚೆಂಡಿನೊಂದಿಗೆ ದಾಳಿ ನಡೆಸುವ ಬೌಲರ್‌ಗಳು ಸೂಕ್ತ ಸಮಯಕ್ಕೆ ಫಾರ್ಮ್ ಕಂಡುಕೊಂಡಿದ್ದಾರೆ. ಜೋಶ್ ಹ್ಯಾಜಲ್‌ವುಡ್ ಹಾಗೂ ಮಿಚೆಲ್ ಸ್ಟಾರ್ಕ್ ಅವರು ಗುರುವಾರ ನಡೆದಿದ್ದ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ ಆರಂಭಿಕ ಆಘಾತ ನೀಡಿದ್ದರು. ತೆಂಬಾ ಬವುಮಾ ಬಳಗ 24 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು.

ಸಾಧಾರಣ ಗುರಿ ಮುಂದಿದ್ದರೂ ಡೇವಿಡ್ ವಾರ್ನರ್ ಮತ್ತು ಟ್ರಾವಿಸ್ ಹೆಡ್ ಅವರು ಆಸ್ಟ್ರೇಲಿಯಾ ತಂಡಕ್ಕೆ ಬಿರುಸಿನ ಆರಂಭ ನೀಡಿದ್ದರು. 37 ವರ್ಷದ ವಾರ್ನರ್ ಟೂರ್ನಿಯಲ್ಲಿ 528 ರನ್ ಕಲೆಹಾಕಿದ್ದಾರೆ.

ಸೋಲಿನ ಸುಳಿಯಿಂದ ಅಮೋಘ ರೀತಿಯಲ್ಲಿ ಪುಟಿದೆದ್ದು ನಿಲ್ಲುವ ಛಲ ಆಸ್ಟ್ರೇಲಿಯಾ ತಂಡಕ್ಕಿದೆ. ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ 292 ರನ್‌ಗಳ ಗುರಿ ಬೆನ್ನಟ್ಟುವ ವೇಳೆ 91 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಾಗ ಕಮಿನ್ಸ್ ಬಳಗಕ್ಕೆ ಸೋಲೇ ಗತಿ ಎಂದು ಭಾವಿಸಲಾಗಿತ್ತು. ಆದರೆ ಗ್ಲೆನ್ ಮ್ಯಾಕ್ಸ್‌ವೆಲ್ ಅಜೇಯ 201 ರನ್ ಗಳಿಸಿ ತಂಡವನ್ನು ಜಯದತ್ತ ಕೊಂಡೊಯ್ದಿದ್ದರು.

ದಕ್ಷಿಣ ಆಫ್ರಿಕಾ ಎದುರಿನ ನಾಲ್ಕ-ರಘಟ್ಟದ ಪಂದ್ಯದಲ್ಲೂ ಕೊನೆಯ ಕ್ರಮಾಂಕದ ಬ್ಯಾಟರ್‌ಗಳು ಒತ್ತಡವನ್ನು ಸಮರ್ಥವಾಗಿ ಮೆಟ್ಟಿನಿಂತಿದ್ದರು.

ಕೋಟ್ಯಂತರ ಅಭಿಮಾನಿಗಳು ತಮ್ಮ ಮೇಲಿಟ್ಟಿರುವ ನಿರೀಕ್ಷೆಯ ಭಾರವನ್ನು ಭಾರತ ತಂಡವು ಇದುವರೆಗೆ ಚೆನ್ನಾಗಿ ನಿಭಾಯಿಸಿದೆ. ಮಾತ್ರವಲ್ಲ, ಅ.8 ರಂದು ಚೆನ್ನೈನಲ್ಲಿ ನಡೆದಿದ್ದ ಲೀಗ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿದೆ.

ಆದರೆ, 2013ರ ಚಾಂಪಿಯನ್ಸ್ ಟ್ರೋಫಿ ಬಳಿಕ ಭಾರತ ತಂಡ ಯಾವುದೇ ಐಸಿಸಿ ಟೂರ್ನಿ ಜಯಿಸಿಲ್ಲ. ರೋಹಿತ್ ಬಳಗದ ಯಶಸ್ಸಿನ ಓಟ ಇನ್ನೊಂದು ಪಂದ್ಯಕ್ಕೆ ವಿಸ್ತರಿಸುವುದೇ ಎಂಬುದು ಅಭಿಮಾನಿಗಳನ್ನು ಕಾಡುತ್ತಿರುವ ಪ್ರಶ್ನೆ.



ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ಅಭ್ಯಾಸದ ವೇಳೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್, ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ, ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಅವರೊಂದಿಗೆ ಚರ್ಚೆ ನಡೆಸಿದರು –ಪಿಟಿಐ ಚಿತ್ರ

ಫೈನಲ್‌ಗೆ ಅಂಪೈರ್‌ಗಳಾಗಿ ಇಲಿಂಗ್‌ವರ್ತ್, ಕೆಟೆಲ್‌ಬರೊ

ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್‌ನ ರಿಚರ್ಡ್ ಇಲಿಂಗ್‌ವರ್ತ್ ಮತ್ತು ರಿಚರ್ಡ್ ಕೆಟೆಲ್‌ಬರೊ ಅವರು ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಭಾನುವಾರ ಇಲ್ಲಿ ನಡೆಯಲಿರುವ ವಿಶ್ವಕಪ್ ಫೈನಲ್ ಪಂದ್ಯಕ್ಕೆ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಲಿದ್ದಾರೆ.

ಕೆಟೆಲ್‌ಬರೊ ಅವರಿಗೆ ಇದು ಎರಡನೇ ವಿಶ್ವಕಪ್ ಫೈನಲ್ ಆಗಿದೆ. 2015ರಲ್ಲೂ ಅವರು ಫೈನಲ್‌ಗೆ ಅಂಪೈರ್ ಆಗಿದ್ದರು. ಆಗ ಅವರ ಜೊತೆ ಕುಮಾರ ಧರ್ಮಸೇನ (ಶ್ರೀಲಂಕಾ) ಆನ್‌ಫೀಲ್ಡ್ ಅಂಪೈರ್ ಆಗಿದ್ದರು.

ಇಲಿಂಗ್‌ವರ್ತ್ 1992ರ ವಿಶ್ವಕಪ್ ಫೈನಲ್‌ನಲ್ಲಿ ಆಡಿದ್ದ ಇಂಗ್ಲೆಂಡ್ ತಂಡದಲ್ಲಿ ಆಟಗಾರನಾಗಿದ್ದರು ಎಂಬುದು ವಿಶೇಷ.

ಟ್ರಿನಿಡಾಡ್ ಮತ್ತು ಟೊಬ್ಯಾಗೊದ ಜೋಯೆಲ್ ವಿಲ್ಸನ್ ಅವರು ಮೂರನೇ ಅಂಪೈರ್ ಮತ್ತು ನ್ಯೂಜಿಲೆಂಡ್‌ನ ಕ್ರಿಸ್ ಗಫಾನಿ ಅವರು ನಾಲ್ಕನೇ ಅಂಪೈರ್ ಆಗಿದ್ದಾರೆ. ಸೆಮಿಫೈನಲ್‌ಗೂ ಇವರೇ ಕಾರ್ಯನಿರ್ವಹಿಸಿದ್ದರು.

ಪಂದ್ಯ ವೀಕ್ಷಿಸಲಿರುವ ಮೋದಿ

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾದ ಉಪ ಪ್ರಧಾನಿ ರಿಚರ್ಡ್ ಮಾರ್ಲೆಸ್ ಅವರು ಫೈನಲ್ ವೀಕ್ಷಿಸಲಿದ್ದಾರೆ.

‘ಮೊಟೇರಾದ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯಕ್ಕೆ ಒದಗಿಸಿರುವ ಭದ್ರತೆ ಮತ್ತು ಇತರ ವ್ಯವಸ್ಥೆಗಳ ಮೇಲ್ವಿಚಾರಣೆಗಾಗಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಶುಕ್ರವಾರ ಗಾಂಧಿನಗರದಲ್ಲಿ ಉನ್ನತಮಟ್ಟದ ಸಭೆ ನಡೆಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಹಲವು ಗಣ್ಯರು ಪಂದ್ಯ ವೀಕ್ಷಿಸಲಿರುವುದರಿಂದ ಪಟೇಲ್ ಅವರು ಭದ್ರತೆ ಮತ್ತು ಇತರ ವ್ಯವಸ್ಥೆಗಳ ಬಗ್ಗೆ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು’ ಎಂದು ಮೂಲಗಳು ತಿಳಿಸಿವೆ.

ಫೈನಲ್‌ಗೆಂದು ಭಿನ್ನ ತಂತ್ರದ ಅಗತ್ಯವಿಲ್ಲ: ಶಾಸ್ತ್ರಿ

ಚೆನ್ನೈ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ವಿಶ್ವಕಪ್ ಫೈನಲ್‌ನಲ್ಲಿ ಭಾರತವೇ ಗೆಲ್ಲುವ ನೆಚ್ಚಿನ ತಂಡವಾಗಿದೆ. ಆದರೆ ತಂಡ ಇದುವರೆಗಿನ ಕಾರ್ಯತಂತ್ರಗಳಿಗೇ ಅಂಟಿಕೊಳ್ಳಬೇಕು ಎಂದು ತಂಡದ ಮಾಜಿ ತರಬೇತುದಾರ ರವಿ ಶಾಸ್ತ್ರಿ ಸಲಹೆ ನೀಡಿದರು.

ಇಲ್ಲಿ ಸಮಾರಂಭವೊಂದಕ್ಕೆ ಬಂದಿದ್ದ ಸಂದರ್ಭದಲ್ಲಿ ಅವರು ಮಾಧ್ಯಮದವರ ಜೊತೆ ಮಾತನಾಡಿದರು. ಫೈನಲ್‌ಗೆ ಭಾರತ ತಂಡದ ರಣತಂತ್ರ ಹೇಗಿರಬೇಕೆಂಬ ಪ್ರಶ್ನೆಗೆ ‘ಅವರು ವಿಶೇಷವಾದುದೇನನ್ನೂ ಮಾಡುವ ಅಗತ್ಯವಿಲ್ಲ. ಆಟಗಾರರು ಈಗ ವಿಶ್ರಾಂತಿಯ ಮೂಡ್‌ನಲ್ಲಿರಬಹುದು. ಅವರು ತವರಿನಲ್ಲಿ ಆಡುತ್ತಿದ್ದಾರೆ. ಇದು ಅನುಭವಿ ತಂಡ ಕೂಡ. ಈ ಹಂತದಲ್ಲಿ ಭಿನ್ನವಾದುದೇನನ್ನೂ ಮಾಡುವ ಅವಶ್ಯಕತೆಯಿಲ್ಲ’ ಎಂದು ಶಾಸ್ತ್ರಿ ಉತ್ತರಿಸಿದರು.

ಮೊಹಮ್ಮದ್ ಶಮಿ ಅವರ ಅಮೋಘ ಬೌಲಿಂಗ್ ಪ್ರದರ್ಶನವನ್ನು ಶ್ಲಾಘಿಸಿದ ಮಾಜಿ ಆಲ್‌ರೌಂಡರ್, ‘ಭಾನುವಾರ ನಡೆಯುವ ಫೈನಲ್‌ನಲ್ಲೂ ಅವರಿಗೆ ಮಹತ್ವದ ಪಾತ್ರವಿರಲಿದೆ’ ಎಂದರು.

ರಾಹುಲ್... ಅಬ್ಬರವಿಲ್ಲದ ಸಾಧನೆ

ಬದಲಾದ ಬ್ಯಾಟಿಂಗ್ ಕ್ರಮಾಂಕದಲ್ಲೂ ಉಪಯುಕ್ತ ಕಾಣಿಕೆ

ಪ್ರಜಾವಾಣಿ ವಾರ್ತೆ


ಮುಂಬೈ: ಹಾಲಿ ವಿಶ್ವಕಪ್‌ನಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಶ್ರೇಯಸ್ ಅಯ್ಯರ್ ಅವರ ಅಬ್ಬರದ ಆಟದ ನಡುವೆಯೂ, ತಮಗೆ ಅವಕಾಶ ದೊರೆತಾಗ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಆಟಗಾರ ಎಂದರೆ ಅದು ವಿಕೆಟ್ ಕೀಪರ್ ಕೆ.ಎಲ್.ರಾಹುಲ್.

ಬೆಂಗಳೂರಿನ ಈ ಕೀಪರ್–ಬ್ಯಾಟರ್ 71 ಏಕದಿನ ಪಂದ್ಯಗಳಲ್ಲಿ 50.50 ಸರಾಸರಿಯಲ್ಲಿ ರನ್‌ಗಳನ್ನು ಗಳಿಸಿದ್ದರೂ ಅವರನ್ನು ವಿಕೆಟ್ ಕೀಪರ್ ಪಾತ್ರದಲ್ಲಿ ಕಾಣುವವರೇ ಹೆಚ್ಚು. ತಂಡಕ್ಕೆ ಪದಾರ್ಪಣೆ ಮಾಡಿದ ದಿನದಿಂದ ಅವರು ನಿಭಾಯಿಸಿದ ಪಾತ್ರಗಳು ಹಲವು. ಸುಮಾರು ಒಂದು ದಶಕದ ಅವಧಿಯಲ್ಲಿ ಅವರ ಬ್ಯಾಟಿಂಗ್ ಕ್ರಮಾಂಕ ಹಲವು ಬಾರಿ ಬದಲಾಗಿದೆ. ಅದಕ್ಕೆ ತಕ್ಕಂತೆ ಮನಃಸ್ಥಿತಿ ಹೊಂದಿಸಿಕೊಂಡು ಆಟವಾಡುವ ಸವಾಲೂ ಅವರೆದುರಿಗಿದ್ದು, ಅದರಲ್ಲಿ ಅವರು ಯಶಸ್ವಿ ಆಗಿದ್ದಾರೆ.

ರೋಹಿತ್ ಶರ್ಮಾ ಅವರು ನೀಡುವ ಬಿರುಸಿನ ಆರಂಭ, ಮೂರನೇ ಕ್ರಮಾಂಕದಲ್ಲಿ ಕೊಹ್ಲಿ ಅವರ ಆಕರ್ಷಕ ಇನಿಂಗ್ಸ್, ಮೊಹಮ್ಮದ್ ಶಮಿ ಅವರ ಅಮೋಘ ಬೌಲಿಂಗ್ ಮಧ್ಯೆ ರಾಹುಲ್ ಅವರ ಕೊಡುಗೆ ಅಷ್ಟಾಗಿ ಎದ್ದು ಕಂಡಿಲ್ಲ. ಆದರೆ ಅವರು 77ರ ಸರಾಸರಿಯಲ್ಲಿ 386 ರನ್‌ಗಳನ್ನು (ಹೆಚ್ಚುಕಮ್ಮಿ 99ರ ಸ್ಟ್ರೈಕ್‌ರೇಟ್) ಗಳಿಸಿದ್ದು ತಂಡಕ್ಕೆ ಹೆಚ್ಚು ಅಗತ್ಯ ಬಿದ್ದಾಗಲೇ.

ಹಾಲಿ ವಿಶ್ವಕಪ್ ಅಭಿಯಾನದಲ್ಲಿ ಭಾರತದ ಇದುವರೆಗಿನ ದಂಡಯಾತ್ರೆಯಲ್ಲಿ ಅವರ ಕೊಡುಗೆ ಗಮನಾರ್ಹವಾದುದೇ. ಐದನೇ ಕ್ರಮಾಂಕದಲ್ಲೂ ಅವರು ಗಮನ ಸೆಳೆದಿದ್ದಾರೆ. ಚೆನ್ನೈನಲ್ಲಿ ಭಾರತದ ಮೊದಲ ಮೂವರು ಆಟಗಾರರು ಅಲ್ಪಮೊತ್ತಕ್ಕೆ ನಿರ್ಗಮಿಸಿದಾಗ ಹೊಣೆಯರಿತು ಆಡಿದ ಅಜೇಯ 97 ರನ್‌ಗಳ ಇನಿಂಗ್ಸ್ ಬೆಲೆಕಟ್ಟಲಾಗದ್ದು. ನ್ಯೂಜಿಲೆಂಡ್ ಎದುರು ಕೊನೆಯ ಹಂತದಲ್ಲಿ ಬಿರುಸಿನ ಆಟವಾಡಿ 20 ಎಸೆತಗಳಲ್ಲಿ 39 ರನ್ ಹೊಡೆದರು. ಇದು ಇನಿಂಗ್ಸ್‌ಗೆ ವೇಗ ನೀಡಿತು. ಸಾಮಾನ್ಯವಾಗಿ ಆರಂಭದಲ್ಲಿ ಅವರ ಆಟ ನಿಧಾನ ಎನಿಸಿದರೂ ಬೇರೂರಿದ ಮೇಲೆ ಅವರ ಆಕರ್ಷಕ ಇನಿಂಗ್ಸ್ ಕಟ್ಟಬಲ್ಲ ಪ್ರತಿಭಾನ್ವಿತ.

ಕೀಪಿಂಗ್‌ನಲ್ಲೂ ಅವರು ಉತ್ತಮ ಕ್ಯಾಚ್‌ಗಳನ್ನು ಪಡೆದಿದ್ದಾರೆ. ಸೆಮಿಫೈನಲ್‌ನಲ್ಲಿ ಡೆವಾನ್ ಕಾನ್ವೆ ಅವರ ಕ್ಯಾಚ್ ಪಡೆದ ರೀತಿ ಇದಕ್ಕೊಂದು ನಿದರ್ಶನ. ಬಾಂಗ್ಲಾದೇಶ ವಿರುದ್ಧ ಪಂದ್ಯದಲ್ಲಿ ಸಿರಾಜ್ ಬೌಲಿಂಗ್‌ನಲ್ಲಿ ಮೆಹಿದಿ ಹಸನ್ ಮಿರಾಜ್ ಅವರ ಕ್ಯಾಚ್‌ಅನ್ನು ಎಡಕ್ಕೆ ಡೈವ್ ಮಾಡಿದ ಪಡೆದ ರೀತಿ ಅದ್ಭುತವಾಗಿತ್ತು. 10 ಪಂದ್ಯಗಳಲ್ಲಿ 15 ಕ್ಯಾಚ್ ಮತ್ತು ಒಂದು ಸ್ಟಂಪಿಂಗ್ ವಿಕೆಟ್ ಹಿಂದುಗಡೆ ಅವರ ಸಾಧನೆ. ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಬಿಟ್ಟರೆ ಹೆಚ್ಚಿನ ಕ್ಯಾಚ್ ಪಡೆದ ವಿಕೆಟ್ ಕೀಪರ್ ಅವರು. ಈ ವಿಶ್ವಕಪ್ ಅಭಿಯಾನದಲ್ಲಿ ಅವರು ಬೌಲರ್‌ಗಳು ಕನಿಷ್ಠ ಐದು ಬಾರಿ ಡಿಆರ್‌ಎಸ್ ತೆಗೆದುಕೊಳ್ಳುವುದನ್ನು ತಡೆದಿದ್ದಾರೆ. ಬೌಲರ್‌ಗಳ ಮತ್ತು ನಾಯಕನ ಒತ್ತಡವವನ್ನು ಕಡಿಮೆ ಮಾಡಿದ್ದಾರೆ. ಅವರ ನಿರ್ಧಾರಗಳು ಸರಿ ಎನಿಸಿದ್ದವು.



ಕೆ.ಎಲ್‌. ರಾಹುಲ್



ಭಾರತ– ಆಸ್ಟ್ರೇಲಿಯಾ ನಡುವೆ 6 ಸ್ಮರಣೀಯ ಪಂದ್ಯಗಳು

‘ಡಸರ್ಟ್ ಸ್ಟಾರ್ಮ್’ನಿಂದ ಸ್ಮಿತ್ ಮುಯ್ಯಿಯವರೆಗೆ...

ಅಹಮದಾಬಾದ್ (ಎಎಫ್‌ಪಿ): ಅಜೇಯ ಭಾರತ ಹಾಗೂ ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡಗಳು ವಿಶ್ವಕಪ್ ಫೈನಲ್ ತಲುಪಿದ್ದು ಅಹಮದಾಬಾದ್‌ನಲ್ಲಿ ಭಾನುವಾರ ಮುಖಾಮುಖಿಯಾಗಲಿವೆ. ಈ ಎರಡು ಪ್ರಬಲ ತಂಡಗಳು ಏಕದಿನ ಮಾದರಿಯಲ್ಲಿ ಕೆಲವು ಸ್ಮರಣೀಯ ಪಂದ್ಯಗಳನ್ನೂ ಆಡಿವೆ.

ಅಂಥ ಆರು ಅವಿಸ್ಮರಣೀಯ ಪಂದ್ಯಗಳನ್ನು ಇಲ್ಲಿ ದಾಖಲಿಸಲಾಗಿದೆ.

ಸಚಿನ್ ಮಾಂತ್ರಿಕ ಆಟ: 1998: ಶಾರ್ಜಾದಲ್ಲಿ ನಡೆದಿದ್ದ ಮೂರು ರಾಷ್ಟ್ರಗಳ ಕೋಕಾ ಕೋಲಾ ಕಪ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಸಚಿನ್ ತೆಂಡೂಲ್ಕರ್ ಅವರ ಅಮೋಘ ಶತಕದ ಇನಿಂಗ್ಸ್ ದೀರ್ಘಕಾಲ ನೆನಪಿನಲ್ಲಿ ಉಳಿಯುವಂಥದ್ದು. ಡೇಮಿಯನ್ ಫ್ಲೆಮಿಂಗ್, ಮೈಕೆಲ್ ಕ್ಯಾಸ್ಪ್ರೊವಿಚ್ ಮತ್ತು ಸ್ಪಿನ್ ದಿಗ್ಗಜ ಶೇನ್ ವಾರ್ನ್ ಅವರನ್ನು ಒಳಗೊಂಡ ಆಸ್ಟ್ರೇಲಿಯಾ ದಾಳಿಯನ್ನು ಪುಡಿಗಟ್ಟಿದ ಸಚಿನ್ 131 ಎಸೆತಗಳಲ್ಲಿ 143 ರನ್ ಹೊಡೆದಿದ್ದರು.

ಮರಳುಗಾಡಿನಲ್ಲಿ ಬೀಸಿದ ಬಿರುಗಾಳಿಯ ಪರಿಣಾಮ ಅರ್ಧಗಂಟೆ ಕಾಲ ಪಂದ್ಯಕ್ಕೆ ಅಡ್ಡಿಯಾಗಿತ್ತು. ಭಾರತದ ಗುರಿಯನ್ನು 276 ರನ್‌ಗಳಿಂದ 235ಕ್ಕೆ ಇಳಿಸಲಾಯಿತು. ಆ ಹಂತದಲ್ಲಿ ಭಾರತ ಗುರಿಗಿಂತ ಬಹಳ ಹಿಂದೆಯಿತ್ತು. ಆದರೆ ಸಚಿನ್ ಅವರ ಬಿರುಗಾಳಿಯ ಆಟದಿಂದ ಭಾರತ ಹೋರಾಟ ತೋರಿತು. ಗುರಿ ತಲುಪಲು ಆಗದಿದ್ದರೂ ‘ನಿವ್ವಳ ರನ್ ದರ’ದ ಆಧಾರದಲ್ಲಿ ಇನ್ನೊಂದು ತಂಡ ನ್ಯೂಜಿಲೆಂಡನ್ನು ಹಿಂದೆ ಹಾಕಿ ಭಾರತ ಫೈನಲ್ ತಲುಪಿತು. ಫೈನಲ್‌ನಲ್ಲಿ ಸಚಿನ್ ಮತ್ತೊಂದು ಶತಕ ಹೊಡೆದು ಆಸ್ಟ್ರೇಲಿಯಾ ವಿರುದ್ಧ ತಂಡ ಗೆಲ್ಲಲು ನೆರವಾದರು.

ಪಂಟರ್ ಪಾಂಟಿಂಗ್: ಜೊಹಾನೆಸ್ ಬರ್ಗ್ ನಲ್ಲಿ ನಡೆದ 2003ರ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವು ನಾಯಕ ರಿಕಿ ಪಾಟಿಂಗ್ ಅವರ ಭರ್ಜರಿ ಶತಕದ ನೆರವಿನಿಂದ ಭಾರತ ತಂಡವನ್ನು 125 ರನ್‌ಗಳಿಂದ ಸೋಲಿಸಿ ಮೂರನೇ ಬಾರಿ ಚಾಂಪಿಯನ್ ಆಗಿತ್ತು. ಪಾಂಟಿಂಗ್ ಅಜೇಯ 140 ರನ್ ಹೊಡೆದು, ಆಸ್ಟ್ರೇಲಿಯಾ ತಂಡ 2 ವಿಕೆಟ್‌ಗೆ 359 ರನ್‌ಗಳ ಭಾರಿ ಮೊತ್ತ ಗಳಿಸಲು ಕಾರಣರಾಗಿದ್ದರು. ಭಾರತ ಹೋರಾಟ ತೋರದೇ 39.2 ಓವರುಗಳಲ್ಲಿ 234 ರನ್‌ಗಳಿಗೆ ಕುಸಿದಿತ್ತು.

ಸಚಿನ್ ಸಾಹಸ (2009 ನವೆಂಬರ್): ಹೈದರಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ 175 ರನ್ (141 ಎಸೆತ) ಸಿಡಿಸಿದರೂ, ಭಾರತ ತಂಡ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾಕ್ಕೆ ಶರಣಾಗಿತ್ತು. ಪಾಂಟಿಂಗ್ ನೇತೃತ್ವದ ಆಸ್ಟ್ರೇಲಿಯಾ ತಂಡ 4 ವಿಕೆಟ್‌ಗೆ 350 ರನ್ ಹೊಡೆದಿತ್ತು. ಶಾನ್ ಮಾರ್ಷ್ 112, ಶೇನ್ ವ್ಯಾಟ್ಸನ್ 93 ರನ್ ಹೊಡೆದಿದ್ದರು.

ಆದರೆ ತೆಂಡೂಲ್ಕರ್ ಆಕ್ರಮಣಕಾರಿ ಆಟದೆದುರು ಆಸ್ಟ್ರೇಲಿಯಾ ಬೌಲರ್‌ಗಳು ಬಸವಳಿದರು. ಭಾರತ ಹೋರಾಟ ತೋರಿದರೂ ಮೂರು ರನ್‌ಗಳಿಂದ ಸೋಲನುಭವಿಸಬೇಕಾಯಿತು.


2011ರ ವಿಶ್ವಕಪ್: ವಿಶ್ವಕಪ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪಾಂಟಿಂಗ್ ಅವರ ಶತಕದ (104) ಹೊರತಾಗಿಯೂ ಭಾರತ ಜಯಗಳಿಸಿತ್ತು. ಆ ಹುರುಪಿನಲ್ಲೆ ಮತ್ತೆ ಎರಡು ಪಂದ್ಯಗಳನ್ನು ಗೆದ್ದು ವಿಶ್ವಕಪ್ ಎತ್ತಿಹಿಡಿದಿತ್ತು.

ಗೆಲುವಿಗೆ 261 ರನ್‌ಗಳ ಸವಾಲು ಎದುರಿಸಿದ್ದ ಭಾರತ ತಂಡವು, ತೆಂಡೂಲ್ಕರ್ ಮತ್ತು ಗೌತಮ್ ಗಂಭೀರ್ ಅವರ ಅರ್ಧ ಶತಕಗಳ ನೆರವಿನಿಂದ ಗೆಲುವಿನತ್ತ ಸಾಗಿತು. ಯುವರಾಜ್ ಸಿಂಗ್ ಅಜೇಯ 57 ರನ್ ಹೊಡೆದು ಗೆಲುವು ಪೂರೈಸಲು ನೆರವಾದರು.

ಮಿಂಚಿದ ಕೊಹ್ಲಿ: ಜೈಪುರದ ಸವಾಯಿ ಮಾನ್‌ಸಿಂಗ್ ಕ್ರಿಡಾಂಗಣದಲ್ಲಿ 2013ರ ಅಕ್ಟೋಬರ್‌ನಲ್ಲಿ ನಡೆದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಕೇವಲ 52 ಎಸೆತಗಳಲ್ಲಿ ಅಜೇಯ 100 ರನ್ (8 ಬೌಂಡರ, 7 ಸಿಕ್ಸರ್) ಹೊಡೆದು ಕಾಂಗರೂಗಳ ವಿರುದ್ಧ ಗೆಲುವಿನಲ್ಲಿ ಗಮನ ಸೆಳೆದಿದ್ದರು.

ಭಾರತದ ಪರ ರೋಹಿತ್ ಶರ್ಮಾ ಅಜೇಯ 141 ರನ್ ಹೊಡೆದು ಅತ್ಯಧಿಕ ಕಾಣಿಕೆ ನೀಡಿದರೆ, ಶಿಖರ್ ಧವನ್ (95) ಅವರೂ ರನ್ ಸುಗ್ಗಿಯ ಭಾಗವಾಗಿದ್ದರು. ಭಾರತ 360 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ತಲುಪಿತ್ತು. ನಾಯಕ ಜಾರ್ಜ್ ಬೇಲಿ (ಈಗ ಮುಖ್ಯ ಆಯ್ಕೆಗಾರ) ಅವರು ಭಾರತದ ಬಲಾಢ್ಯ ಬ್ಯಾಟಿಂಗ್ ಸರದಿಯನ್ನು ಶ್ಲಾಘಿಸಿದ್ದರು. ಬೇಲಿ ಆ ಪಂದ್ಯದಲ್ಲಿ ಅಜೇಯ 92 ರನ್ ಹೊಡೆದಿದ್ದರು.

ಸೋಲಿಗೆ ಸೇಡು: ಆಸ್ಟ್ರೇಲಿಯಾ 2011ರ ವಿಶ್ವಕಪ್ ಸೋಲಿಗೆ ನಾಲ್ಕು ವರ್ಷಗಳ ನಂತರ ಸೇಡು ತೀರಿಸಿಕೊಂಡಿತು. 2015ರ ವಿಶ್ವಕಪ್‌ನಲ್ಲಿ ಸ್ಟೀವ್ ಸ್ಮಿತ್ ಅವರ ಶತಕದ ನೆರವಿನಿಂದ ಆಸ್ಟ್ರೇಲಿಯಾ ಸೆಮಿಫೈನಲ್‌ನಲ್ಲಿ 95 ರನ್‌ಗಳಿಂದ ಧೋನಿ ಬಳಗವನ್ನು ಸೋಲಿಸಿತ್ತು. ಸ್ಮಿತ್ 93 ಎಸೆತಗಳಲ್ಲಿ 105 ರನ್ ಗಳಿಸಿದ್ದು, ಆಸ್ಟ್ರೇಲಿಯಾ 7 ವಿಕೆಟ್‌ಗೆ 328 ರನ್‌ಗಳ ಸವಾಲಿನ ಮೊತ್ತ ಗಳಿ ಸಿತ್ತು. ಧೋನಿ ಅವರ 65 ರನ್‌ಗಳ ಹೊರತಾಗಿಯೂ ಭಾರತ 233 ರನ್‌ಗಳಿಗೆ ಆಲೌಟ್ ಆಗಿತ್ತು. ಜೇಮ್ಸ್ ಫಾಕ್ನರ್ ಮೂರು ವಿಕೆಟ್ ಗಳಿಸಿದ್ದರು. ಆಸ್ಟ್ರೇಲಿಯಾ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿ ಐದನೇ ಸಲ ಚಾಂಪಿಯನ್ ಆಗಿತ್ತು.



ಸಚಿನ್ ತೆಂಡೂಲ್ಕರ್

ಇನ್ನಷ್ಟು ಕ್ರೀಡಾ ಸುದ್ದಿಗಳು 13



